START

START

START

MICRO FILMED

By

KARNATAKA STATE ARCHIVES

File No.: AUM 6 APP 90.

CAMP:-

MYSORE

DATE

10th July-1991

VIDYA DAYINI

Continued from page 831 of 1011

ವಾಗಿ ಮೂರ್ತೀಭವಿಸಿದೆ ಆ ದೇಶಭಾಷೆಯಲ್ಲಿ ಪರೀಕ್ಷೆ ಮೊದಲಾದವುಗಳೆಲ್ಲಾ ಏರ್ಪಡಿ
ಸಲ್ಪಟ್ಟಿವೆ. ಅನೇಕರು ಪರೀಕ್ಷೆಗಳನ್ನು ಕೊಟ್ಟು ಪಾಠಕರಾಗಿಯೂ ಸರ್ಕಾರದ ನೌ
ಕರಾಗಿಯೂ ನಿಯಮಿಸಲ್ಪಟ್ಟಿದಾರೆ ಇವರು ಬರ್ಮಾ ದೇಶಕ್ಕೆ ಹೋಗುವದಕೆ
ನೊದಲು ಅಲ್ಲಿನ ಜನರು ನಿರಕ್ಷರಕುಕ್ಷಿಗಳಾಗಿಯೂ ಅನೇಕ ದುರಭಿಮಾನ ಪ್ರತಿನಿ
ಷ್ಟರಾಗಿಯೂ ಲೋಕವ್ಯವಹಾರ ವಿಚಕ್ಷಣೆ ಇಲ್ಲದವರಾಗಿಯೂ ಇದ್ದರು. ಈಗ ಅ
ನೇಕ ಲಕ್ಷೆಜನರು ಇವರ ವಿದ್ಯಾಭ್ಯಾಸದ ಏರ್ಪಾಡಿನಿಂದ ವಿದ್ಯಾವಂತರಾಗಿಯೂ ಸ
ಚಾರಪರರಾಗಿಯೂ ಆಗುತ್ತಲಿದಾರ ಬರ್ಮಾದೇಶಕ್ಕೆ ಒಂದು ಯೂನಿವರ್ಸಿಟಿಯನು
ನೊಡಿಸಬೇಕೆಂಬು ಇವರು ಪ್ರಯತ್ನವೂಡಿದರು. ಆದರೆ ಇಂಡಿಯಾ ಗೌರ್ನಮೆಂಟಿ
ನವರು ಇನ್ನೂ ಕೆಲವು ದಿವಸಗಳು ನಿರೀಕ್ಷಿಸಿ ಅನಂತರ ಈ ಕೆಲಸವನ್ನು ಮೂಡಬಹ
ನೆಂದು ತಾತ್ಪರ್ಯಪಟ್ಟು ಇದಾರೆ. ಬರ್ಮಾದೇಶದ ಭಾಷೆಯೂದ ಪಾಳೀ ಭಾಷೆಯು ಪೂ
ರ್ವಕಾಲದಲ್ಲಿ ಅತ್ಯಂತವಾಗಿ ಸಂಸ್ಕರಿಸಲ್ಪಟ್ಟ ಭಾಷೆಯೂಗಿತ್ತು. ಈ ಭಾಷೆಯಲ್ಲಿ
ಬೌದ್ಧಮತಕ್ಕೆ ಸಂಬಂಧಪಟ್ಟ ವೇದಾಂತ ಗ್ರಂಥಗಳು ಅನೇಕವಾಗಿರುತ್ತವೆ ಇತ
ರೆಲ್ಲಾ ವಿಷಯಗಳಲ್ಲೂ ಕೂಡ ಈ ಭಾಷಾಗ್ರಂಥಗಳು ಸಂಸ್ಕೃತದಲ್ಲಿರತಕ್ಕ ಗ್ರಂ
ಥಗಳಿಗೆ ಸಮವಾದವುಗಳೆಂದು ಹೆಸರುವಾಸೆಯನ್ನು ಪಡೆದು ಇವೆ. ಆದರೆ ಈ ಗ್ರಂ
ಥಗಳೆಲ್ಲಾ ಅವಲೋಕನವೂಡತಕ್ಕವರಿಲ್ಲದೆ ಶೈಥಿಲ್ಯವನ್ನು ಹೊಂದುತ್ತಲಿವೆ. ಅವು
ಗಳನ್ನೆಲ್ಲಾ ಜೀರ್ಣೋದ್ಧಾರ ಮೂಡಬೇಕೆಂದು ಇಂಡಿಯಾ ಗೌರ್ನಮೆಂಟಿಗೆ ಬರೆದು ಕ
ಳಿಂದ ಸ್ಯಾಂಗ್ಷನ್ ಪಡೆದು ಈ ಭಾಷೆಯಲ್ಲಿ ಪರೀಕ್ಷೆ ಕೊಟ್ಟವರಿಗೆ ಬಹುಮಾನಾ
ದಿಗಳನ್ನು ಏರ್ಪಡಿಸಿದರು. 1895ನೇ ಇಸವಿಯಲ್ಲಿ ಈ ವಿಧವಾದ ಮೊದಲನೇ ಪರೀ
ಕ್ಷೆಯು ನಡೆಯಿತು. ಅನೇಕ ಸನ್ಯಾಸಿಗಳು ಗೃಹಸ್ಥರು ಈ ಪರೀಕ್ಷೆಗೆ ಬಂದಿದ್ದರು. ಇ
ಲ್ಲದೆ 25 ಜನ ಸ್ತ್ರೀಯರು ಈ ಪರೀಕ್ಷೆಗೆ ಬಂದಿದ್ದರು ಇನ್ನು ಕೆಲವು ದಿವಸಗಳೊ
ಳಾಗಿ ಈ ಪಾಳೀ ಭಾಷೆಗೆ ಉಂಟಾಗಿದ್ದ ನ್ಯೂನತೆಯು ಸಂಪೂರ್ಣವಾಗಿ ಹೋಗುವ
ಲ್ಲದೆ ಗೆಜ್ಜಲು ಪಾಲಾಗುತ್ತಿದ್ದ ಉತ್ಕೃಷ್ಟಗ್ರಂಥಗಳೆಲ್ಲಾ ಮುದ್ರಿಸಲ್ಪಟ್ಟು ಪ್ರಚಾರವಾ
ಗುವೆದರಲ್ಲಿ ಯಾವ ಸಂದೇಹವೂ ತೋರುವದಿಲ್ಲ ಮೆ॥ ಫ್ರೋಪ್ ರವರು ವಿದ್ಯಾ
ಭ್ಯಾಸಕ್ಕೆ ಪ್ರೋತ್ಸಾಹವನ್ನುಂಟುಮಾಡಿದ್ದಲ್ಲದೆ ಕಸಬುಗಳನ್ನೂ ಕೂಡ ಅಭಿವೃದ್ಧಿ
ಪಡಿಸಬೇಕೆಂದು ಒಂದು ಇಂಜನೀರಿಂಗ್ ಪಾಠಶಾಲೆಯನ್ನು ಸ್ಥಾಪಿಸಿದರು. ಈಚೆ
ಗೆ ಒಂದು ವೈದ್ಯ ವಿದ್ಯಾಭ್ಯಾಸದ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸು

ಲಿದಾರೆ. ಇವರು ಪಾಠಕರ ಸಭೆಯನ್ನು ಏರ್ಪಡಿಸಿ ಅವರು ಆಗಾಗ್ಗೆ ಸೇರಿ ವಿದ್ಯಾಭ್ಯಾಸದ ಏರ್ಪಾಡುಗಳ ನ್ಯೂನತೆಯನ್ನು ಚರ್ಚಿಸಿ ಅವುಗಳ ಪರಿಹಾರೋಪಾಯಗಳನ್ನು ಮಾಡುವಂತೆ ಏರ್ಪಾಡು ಮಾಡಿದಾರೆ ಕಳೆದ 10 ವರುಷಗಳಿಂದ ಬರ್ಮಾದೇಶದಲ್ಲಿ ವಿದ್ಯಾಭ್ಯಾಸದ ಇಲಾಖೆಯು ಅಭಿವೃದ್ಧಿಗೆ ಬಂದಷ್ಟು ಇನ್ನಾವ ಇಲಾಖೆಯೂ ಅಭಿವೃದ್ಧಿಗೆ ಬಂದಿಲ್ಲ ಈ ಅಭಿವೃದ್ಧಿಯು ಸಂಪೂರ್ಣವಾಗಿ ಮೆ॥ ವ್ಯಾಸಾಮಿರ್ಕ್ ಪೋಪ್ ರವರ ಮೆಹನತ್ತಿಗೂ ಸಾಹಸಕ್ಕೂ ಶಕ್ತಿಗೂ ವೈಶುಷ್ಯಕ್ಕೂ ಆರೋಪಣೀಯವಾಗಿರುತ್ತದೆ. ಬರ್ಮಾ ದೇಶಕ್ಕೆ ಇವರು ಡೈರೆಕ್ಟರಾಗಿ ದಯಮಾಡಿಸಿ 10 ವರುಷಗಳಾದವು. ಆಕಾಲ ಒಂದು ಸ್ಕೂಲೂ ಇರಲಿಲ್ಲ. ಈಗ ಬರ್ಮಾದೇಶದಲ್ಲಿ 14371 ಪಾಠಶಾಲೆಗಳಲ್ಲಿ ಪಾಠಪ್ರವಚನಗಳು ನಡೆಯುತ್ತಲಿವೆ. ಒಂದೊಂದು ಪಾಠಶಾಲೆಯಲ್ಲಿ ನೂರಾರುಮಂದಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಲಿದಾರೆ. ಅನೇಕ ಪಾಠಕರು ಪಾಠ ಹೇಳುವ ವೃತ್ತಿಯಿಂದ ಜೀವಿಸುತ್ತಲೂ ವಿದ್ಯಾಭಿವೃದ್ಧಿಯನ್ನು ಮಾಡುತ್ತಲೂ ಇದಾರೆ. ಲೋಕದಲ್ಲಿ ಮರ ಹುಟ್ಟಿ ಮರ ಬಿದ್ದಂತೆ ಅನೇಕರು ಹುಟ್ಟಿ ಸಾಯುವರು. ಮೆ॥ ಪೋಪ್‌ರವರಂತೆ ತಮ್ಮ ಬುದ್ಧಿಯನ್ನೂ ಶಕ್ತಿಯನ್ನೂ ಸದ್ವಿನಿಯೋಗಮಾಡತಕ್ಕವರ ಜನ್ಮವು ಸಾರ್ಥಕವಾಯಿತು

ಬರವಣಿಗೆ.

ಈಗಿನ ಬರಹಗಳಲ್ಲಿ ಜನರು ಬಹಳವಾಗಿ ತಪ್ಪುಗಳನ್ನು ಮಾಡುತ್ತಿರುವರು ಹೀಗೆ ಆಗಲು ಬಾಲವಿದ್ಯಾಭ್ಯಾಸದಲ್ಲಿ ಉಕ್ತಲೇಖನ ಕ್ರಮವು ನೆಟ್ಟಗಿಲ್ಲದೆ ಹೋದುದೇ ಮುಖ್ಯಕಾರಣವಾಗಿ ತೋರುವುದು. ಸ್ಕೂಲುಗಳಲ್ಲಿ ವಿದ್ಯಾರ್ಥಿಗಳು ಬರೆಯುವಾಗ ಇವುಗಳನ್ನು ತಿದ್ದಿದಲ್ಲಿ ಅವರು ದೊಡ್ಡವರಾದಮೇಲೆಯೂ ತಪ್ಪಿಲ್ಲದೆ ಬರೆಯಬಹುದು. ಇವು ಸಾಮಾನ್ಯವಾಗಿ ದೋಷದವುಗಳಲ್ಲವೆಂದು ಬಹುಮಂದಿ ಅಲಕ್ಷ್ಯಮಾಡುತ್ತಾರೆ. ಮಕ್ಕಳ ತರಗತಿಯಿಂದಲೂ ಇಂಥಾ ತಪ್ಪುಗಳು ಬೀಳದಂತೆ

10 ಸ್ವರಸಹಿತವಾದ ವ್ಯಂಜನಗಳೆರಡರ ಮಧ್ಯ	ಅಗ್ಸ	ಅಗಸ
ಸ್ವರವನ್ನು ಲೋಪಿಸಿ ದ್ವಿತ್ವಮಾಡಿ ಬರೆಯುವ ರೂಢಿ	ಮೆಣ್ಸು	ಮೆಣಸು
ಹೆಚ್ಚು ಇದು ಸರಿಯಲ್ಲ.		ಇತ್ಯಾದಿ
11 ಒ, ಹೊ, ಇವುಗಳಿಗೆ ಬದಲಾಗಿ ವಕಾರವ	ವಕ್ಕಲು	ಒಕ್ಕಲು
ನ್ನೂ, ಎ, ಹೆ ಇವುಗಳಿಗೆ ಪ್ರತಿಯಾಗಿ ಯ ಕಾರವನ್ನೂ	ವಸದು	ಹೊಸದು
ಉಪಯೋಗಿಸುವ ಪದ್ಧತಿ ಚೆನ್ನಾಗಿಲ್ಲ.	ಯಮ್ಮೆ	ಎಮ್ಮೆ
	ಯಣ	ಹಣ ಇತ್ಯಾ
12 ಸಂಯುಕ್ತಾಕ್ಷರಗಳಲ್ಲಿ ಕೆಳಗ ಬರಯುವ ವ್ಯಂ	ಇಪ್ಪು	ಇಪ್ಪು
ಜನಕ್ಕೆ ಕಾಗುಣಿತ ರೂಪವನ್ನು ಕೊಡುತ್ತಿರುವರು. ಇದ	ಉಪ್ಪು	ಉಪ್ಪು
ನ್ನು ತಿದ್ದಬೇಕಾಗಿದೆ.		ಇತ್ಯಾದಿ
13 ಸಾವೂನ್ಯವಾಗಿ ಕಾಗುಣಿತ ರೂಪಗಳಲ್ಲಿ ದೀ	ನೊಣಿ	ದೂಣಿ
ರ್ಘಗಳನ್ನು ಲೋಪಿಸುವರು. ಅರ್ಥಭೇದ ತೋರುವ	ಬಿಟೆ	ಬೇಟೆ
ದರಿಂದ ಹೀಗೆ ಬರೆಯಬಾರದು.	ಮುರ	ನೂರು
		ಇತ್ಯಾದಿ
14 ಅರ್ಧರೇಫವನ್ನು ವ್ಯಂಜನದ ಮುಂದುಗಡ	ರ್ವಗ	ವರ್ಗ
ಯಲ್ಲಿ ಕೊಡದೆ ಹಿಂದೆ ಬರೆಯುತ್ತಾರೆ. ಇದು ಅನುಚಿತ.	ರ್ಪಣ	ರ್ಪಣ ಇತ್ಯಾ
15 ದ್ವಿತ್ವಗಳಲ್ಲಿ ಳ ಕಾರಕ್ಕೆ ಲ ಕಾರವನ್ನೂ, ಣ	ಕಳ್ಳ	ಕ್ಷೆ
ಕಾರಕ್ಕೆ ನ ಕಾರವನ್ನೂ ಉಪಯೋಗಿಸುವರು. ಇದು	ಬಣ	ಬಣ್ಣ
ಸರಿಯಲ್ಲ.		ಇತ್ಯಾದಿ

ವಿದ್ಯಾರ್ಥಿಗಳ ಮತ್ತು ಇತರರ ಬರಹಗಳಲ್ಲಿ ತೋರುವ ಸಾಮಾನ್ಯವಾ ಅಶುದ್ಧಗಳನ್ನು ನೋಡಿ ಈ ಸೂಚನೆಗಳನ್ನು ಬರೆದಿದೇನೆ. ಇನ್ನೂ ಹೆಚ್ಚಾದ ಕೊ ತೆಗಳಿರಬಹುದು. ಅವುಗಳನ್ನು ಪ್ರಕಟಿಸಿ, ತಪ್ಪುಗಳನ್ನು ತಿದ್ದಲು ಅನುಕೂಲ ಪ ಸುವುದು ಹಾಸ್ಯಾಸ್ಪದವಲ್ಲವಷ್ಟೆ?

ಕೆ. ರಾಮಸ್ವಾಮೈಯ್ಯಂಗಾರ್.

ಆರ್ಯವೈದ್ಯಶಾಲಸ್ತ್ರ.

ಆರ್ಯ ವೈದ್ಯಶಾಸ್ತ್ರದ ವಿಷಯವಾಗಿ ಗಾಂಧಾರ್ ದೇಶದ ಪಾಕೂರ್ ಸಾಹೇಬ ರು, ಸರ್, ಭಗವತ್‌ಸಿಂಗ್ ಜಿಯವರು ಬರೆದ ಉಪನ್ಯಾಸವು ತುಂಬಾ ಪ್ರಸಿದ್ಧಿಗೆ ಬ

ದಿರುವದು ಈ ಮಹನೀಯರು ತಮ್ಮ ಚಿಕ್ಕಂದಿನಲ್ಲಿಯೇ ಇಂಗ್ಲೆಂಡ್ ದೇಶಕ್ಕೆ ಹೋಗಿ ಓದಿ ಅಲ್ಲಿ ಅನೇಕವಾದ ಪಾಂಡಿತ್ಯದ ಬಿರುದುಗಳನ್ನು ಪಡೆದು, ತಿರಿಗಿ ತಮ್ಮ ರಾಜ್ಯಕ್ಕೆ ದಯವಾಡಿ ರಾಜ್ಯಭಾರವನ್ನು ವಹಿಸಿಕೊಂಡು ಪ್ರಜಾಪರಿಪಾಲನೆಯನ್ನು ಮಾಡುತ್ತಿರುವರು. ಕಳೆದ 1896ನೇ ಸಂವತ್ಸರದಲ್ಲಿ ಈ ಮಹಾರಾಜರು ಆರ್ಯರ ವೈದ್ಯ ಶಾಸ್ತ್ರ ವಿಷಯವಾಗಿ ಇಂಗ್ಲೀಷಿನಲ್ಲಿ ಒಂದು ಪುಸ್ತಕವನ್ನು 12 ಅಧ್ಯಾಯವಾಗಿ ಬರೆದು ಇಂಗ್ಲೆಂಡ್ ಸೀಮೆಯಲ್ಲಿ ಪ್ರಸಿದ್ಧಿಗೆ ತಂದರು. ಇಂಗ್ಲೀಷ್ ಓದಿರತಕ್ಕವರೆಲ್ಲರೂ ಈ ಇಂಗ್ಲೀಷ್ ಪುಸ್ತಕವನ್ನು ಓದಿದಲ್ಲಿ ನಮ್ಮ ಆರ್ಯರು ವೈದ್ಯಶಾಸ್ತ್ರದಲ್ಲಿ ಬಹು ದಿನಕ್ಕೆ ಮುಂಚೆಯೇ ಪಡೆದಿದ್ದ ಉನ್ನತ ಸ್ಥಿತಿಯು ಗೊತ್ತಾಗುವದು. ಆದರೆ ಇಂಗ್ಲೀಷ್ ಭಾಷಾಪರಿಶ್ರಮವಿಲ್ಲದ ಕರ್ಣಾಟಕರಿಗೆ ಮೇಲೆ ಹೇಳಿದ ಉಪನ್ಯಾಸದ ಯೋಗ್ಯತೆಯು ಗೊತ್ತಾಗುವದಿಲ್ಲವಾದ್ದರಿಂದ ಅವರಿಗೂ ಗೊತ್ತಾಗಬೇಕೆಂದು ಮೈಸೂರ್ ಶ್ರೀಮನ್ಮಹಾರಾಜರ ಕಾಲೇಜಿಗೆ ಚರಿತ್ರೆಗಳ ಬೋಧಕರಾಗಿ ದಯವಾಡಿಸಿದ್ದ ಮು|ರಾ|ರಾ| ರಾಮನಾಥೈಯ್ಯರವರು ಮೇಲೆ ಹೇಳಿದ ಪುಸ್ತಕದಲ್ಲಿ ಪ್ರತಿಯೊಂದಧ್ಯಾಯದಲ್ಲಿಯೂ ತಕ್ಕಮಟ್ಟಿಗೆ ಕೆಲವಂಶವನ್ನು ಎತ್ತಿ ಕನ್ನಡದಲ್ಲಿ ಬರೆದಿರುವರು.

ಮೊದಲನೇ ಅಧ್ಯಾಯ.

ಬಹುಕಾಲಕ್ಕೆ ಮುಂಚೆ ಅಂದರೆ ಈಗ ನಮ್ಮ ಮಹಾ ನಾಗರಿಕರೆಂದು ಪ್ರಸಿದ್ಧಿಗೆ ಬಂದ ಅನ್ಯದೇಶದ ಜನರು ಕಾಡಿನಲ್ಲಿ ಕಾಡುಜನರಂತೆ ವಾಸಮಾಡಿಕೊಂಡು ಅನಾಗರಿಕರಾಗಿದ್ದಕಾಲದಲ್ಲಿ ಈ ನಮ್ಮ ಆರ್ಯಾವರ್ತದಲ್ಲಿರುವ ಜನಗಳ ನಾಗರಿಕತೆಯು ಮುಗಿಲ್ಮುಟ್ಟಿ ಹೋಗಿ ನಮ್ಮ ಆರ್ಯರು ಅನೇಕ ಶಾಸ್ತ್ರ ವಿಷಯಗಳಲ್ಲಿ ತಾವೇ ತಾವಾಗಿ ನಿಸ್ಸೀಮರಾಗಿದ್ದರು.

ಜ್ಯೋತಿಶ್ಶಾಸ್ತ್ರದಲ್ಲಿ ಕ್ರಿಸ್ತಶಕಕ್ಕೆ 3000 ವರ್ಷಕ್ಕೆ ಮುಂಚೆಯೇ ಸೂರ್ಯ ಚಂದ್ರರ ಗ್ರಹಣವನ್ನು ಗೊತ್ತುಮಾಡಿಕೊಂಡಿದ್ದದ್ದಲ್ಲದೆ ಚಂದ್ರಗತಿಯನ್ನು ಮತ್ತು ಇತರವಾದ ಗ್ರಹಗಳ ಗತಿಯನ್ನೂ ಕೂಡ ಸರಿಯಾಗಿ ಗೊತ್ತುಮಾಡಿಕೊಂಡು ಇದ್ದರು. ಗಣಿತಭಾಗದಲ್ಲಿಯಂತೂ ಈಗ ಇಂಗ್ಲೀಷಿನಲ್ಲಿ ಮಹೋನ್ನತ ದಶೆಯಲ್ಲಿರುವ ಜ್ಯಾಮಿಟ್ರಿ (ಜ್ಯಾಮಿತಿ = ಭೂಮೊನ) ಟ್ರಿಗ್ನಾಮಿಟ್ರಿ (ತ್ರಿಕೋಣಮಿತಿ = ತ್ರಿಕೋಣಮೊನ) ಎಂಬ ಭಾಗಗಳೂ ಕೂಡ ನಮ್ಮ ಆರ್ಯರಿಗೆ ಬಹುಕಾಲಕ್ಕೆ ಮುಂಚೆಯೇ ಕರತಲಾಮಲಕವಾಗಿದ್ದವು. ಕೆಮಿಸ್ಟ್ರಿ (ರಸಾಯನ ಶಾಸ್ತ್ರದ ಅನೇಕವಾದ

ಆ ಕೈಡುಗಳೂ ಗೊತ್ತಾಗಿದ್ದವು. ಪಾಣಿನಿಯ ಅಷ್ಟಾಧ್ಯಾಯಿಯೆಂಬ ವ್ಯಾಕರಣವ ಲ್ಲದೆ ಬೇಕಾದಷ್ಟು ನಿಘಂಟುಗಳೂ ಕೂಡ ಪೂರ್ವದಲ್ಲಿಯೇ ವೇದದಲ್ಲಿ ಏರ್ಪಟ್ಟಿದ್ದವು. ಸಂಗೀತದಲ್ಲಿಯೂ ಇವರಲ್ಲಿ ಭಿಕ್ಷೆಬೇಡಬೇಕಾಗಿತ್ತು. ಶಿಲ್ಪಶಾಸ್ತ್ರದಲ್ಲಿಯೂ, ಧನುರ್ವೇದದಲ್ಲಿಯೂ, ಧರ್ಮಶಾಸ್ತ್ರದಲ್ಲಿಯೂ ಇವರಿಗಿದ್ದ ಪ್ರಜ್ಞೆಗೆ ತುದಿಮೊದಲೇ ಇಲ್ಲ. ನಿತ್ಯಾನಿತ್ಯವಸ್ತುವಿಚಾರದಲ್ಲಿ ಬರೆದಿರತಕ್ಕ ಷಡ್ದರ್ಶನಗಳನ್ನೆಲ್ಲಾ ವಿಚಾರಮಾಡಿದರೆ ಪರಮಾಶ್ಚರ್ಯವನ್ನು ಪಡೆಯದ ಪುರುಷನೆ ಇಲ್ಲ. ಆರ್ಯರಲ್ಲದೆ ಮತ್ತೆ ಇತರರಿಗೆ ಆತ್ಮಾನಾತ್ಮವೆಂಬ ವ್ಯವಸ್ಥೆಯು ಸುದ್ದಿ ಗೊತ್ತಾಗಿರಲಿಲ್ಲ. ಈ ಶಾಸ್ತ್ರಗಳೆಲ್ಲವೂ ವೇದಶಾಖೆಗಳೆಂದೂ ಈ ವೇದವೂ ಈಶ್ವರನ ಜ್ಞಾನಸ್ವರೂಪವೆಂದೂ ನಮ್ಮ ಆರ್ಯರು ಭಾವಿಸುವರು. ನಾಲ್ಕುವೇದಗಳೂ ಆರ್ಯಾವರ್ತದಲ್ಲಿದ್ದಾಗ ಯಾವದೇಶದಲ್ಲಿಯೂ ಯಾವಪುಸ್ತಕವೂ ಇರಲಿಲ್ಲವೆಂದು ಗೊತ್ತಾಗುವದು ಮತ್ತು ಆ ಕಾಲದಲ್ಲಿಯೇ ಪುಸ್ತಕಗಳು ಬರೆಯುವದು ರೂಢಿಯಾಗಿತ್ತೆಂದು ಋಗ್ವೇದದಲ್ಲಿ ಲಿಲ್ಲಲ್ಲಿ ದೊರೆಯುವ ಲಿಖಿತಂ ಎಂಬ ಪದದಿಂದಲೂ, ವಾಚಂಪರ್ಶ್ಯ (ಮಾತನ್ನು ಕಾಣುತಾ) ಎಂಬ ಪದಗಳಿಂದಲೂ ಗೊತ್ತಾಗುವದು. ವೇದದಲ್ಲಿ ಒಂದುಭಾಗವಾದ ಆಯುರ್ವೇದವೆಂಬುವದು ವೈದ್ಯದ ವಿಷಯವನ್ನು ಹೇಳುವದು, ಔಷಧಗಳ ವಿಷಯವು ಋಗ್ವೇದದಲ್ಲಿಯೂ, ಶಸ್ತ್ರವೈದ್ಯವು ಅಥರ್ವಣವೇದದಲ್ಲಿಯೂ ಉಕ್ತವಾಗಿರುವದು.

ಎರಡನೆಯ ಅಧ್ಯಾಯ.

ವೈದ್ಯಶಾಸ್ತ್ರವು ಮೊದಲು ಸಾಕ್ಷಾದ್ವಿರಾಟ್ಸ್ವರೂಪನಾದ ಪರಬ್ರಹ್ಮನಿಂದ ಹೊರಟು ಚತುರ್ಮುಖಬ್ರಹ್ಮನಿಂದ ಪ್ರಚಾರಕ್ಕೆ ಬಂತು. ಈ ಆಯುರ್ವೇದದಲ್ಲಿ ೧೦೦ ಅಧ್ಯಾಯಗಳಿರುವವು. ಅಧ್ಯಾಯ ಒಂದಕ್ಕೆ ನೂರುನೂರು ಶ್ಲೋಕಗಳಿರುವದು. (೧) ಅದರಲ್ಲಿ "ಶಲ್ಯ" ವೆಂಬುವದು ಶಸ್ತ್ರವೈದ್ಯವೆಂತಲೂ, (೨) ಕಂಬದಮೇಲೆ ಇರತಕ್ಕ ತಲೆಯು ಚಿಕಿತ್ಸಾಶಾಸ್ತ್ರಕ್ಕೆ "ಶಾಲ್ಯಕ" ವೆಂತಲೂ, (೩) ಶರೀರಾರ್ಧಂತದಲ್ಲಿಯೂ ಹುಟ್ಟುವ ರೋಗಕ್ಕೆ ಹೇಳಿದ ಚಿಕಿತ್ಸಾಶಾಸ್ತ್ರಕ್ಕೆ "ಕಾಯಚಿಕಿತ್ಸೆ" ಎಂತಲೂ (೪) ಪಿಶಾಚಿಯೇ ಮೊದಲಾದ ಗ್ರಹಗಳಬಾಧೆಗೆ ಮಾಡತಕ್ಕ ಚಿಕಿತ್ಸೆಗೆ 'ಭೂತವೈದ್ಯ' ವೆಂತಲೂ, (೫) ಮಕ್ಕಳ ಪೋಷಣೆಯನ್ನು ಕುರಿತು ಹೇಳುವಭಾಗಕ್ಕೆ "ಕುಮಾರ ಭೃತ್ಯ" ವೆಂತಲೂ, (೬) ವಿಷದೋಷವನ್ನು ನಿವಾರಣೆಮಾಡತಕ್ಕ ಚಿಕಿತ್ಸೆಗೆ 'ಅಗದ' ವೆಂತಲೂ (೭) ದೇಹಪುಷ್ಟಿಗಾಗಿ ಮಾಡತಕ್ಕ ವೈದ್ಯಕ್ಕೆ "ರಸಾಯನ" ವೆಂತಲೂ

(೪) ಇಂದ್ರಿಯಾಭಿವೃದ್ಧಿ ಮಾಡತಕ್ಕ ಚಿಕಿತ್ಸೆಗೆ "ವಾಜೀಕರಣ" ವೆಂತಲೂ ಹೆಸರು ಕೊಟ್ಟಿದೆ.

ಚತುರ್ಮುಖಬ್ರಹ್ಮನು ಆಯುರ್ವೇದವನ್ನು ದಕ್ಷಬ್ರಹ್ಮನಿಗೂ ಆತನು ಅಶ್ವಿನೀ ದೇವತೆಗಳಿಗೂ, ಅವರು ಇಂದ್ರನಿಗೂ, ಆ ಇಂದ್ರನು ಮೈತ್ರೇಯನಿಗೂ ಉಪದೇಶ ಮಾಡಿದರು. ಈ ಆತ್ರೇಯರು ಆತ್ರೇಯಸಂಹಿತೆಯೆಂಬ ೪೬೦೦ ಗ್ರಂಥಮುಖ್ಯ ಒಂದು ಪುಸ್ತಕವನ್ನು ಬರೆದಿರುವರು. ಈ ಆತ್ರೇಯರು ಅಗ್ನಿವೇಶನೆಂಬವನಿಗೆ ಉಪದೇಶ ಮಾಡಲು ಆತನು ನಿದಾನಾಂಜನವೆಂಬ ಗ್ರಂಥವನ್ನು ಬರೆದಿರುವನು. ಅದು ವ್ಯಾಧಿಯ ಕಾರಣವನ್ನು ಬೋಧಿಸುತ್ತದೆ. ಆತ್ರೇಯಶಿಷ್ಯನಾದ ಹರಿತನೆಂಬಾತನು ಹರಿತಸಂಹಿತೆಯೆಂಬ ಬೇರೊಂದು ವೈದ್ಯಗ್ರಂಥವನ್ನು ಬರೆದಿರುವನು.

ಕ್ರಿಸ್ತನಿಗಿಂತಮುಂಚೆ ೩೦೦ನೆ ಸಂವತ್ಸರದಲ್ಲಿ ಚರಕಾಚಾರ್ಯನೆಂಬಾತನು ಚರಕಸಂಹಿತೆಯನ್ನು, ವಿಶ್ವಾಮಿತ್ರರಮಗನಾದ ಸುಶ್ರುತನೆಂಬಾತನು ಸುಶ್ರುತವೆಂಬ ಶಸ್ತ್ರವೈದ್ಯ ಗ್ರಂಥವನ್ನು, ಕ್ರಿಸ್ತನಿಗೆ ಮುಂಚೆ ಬಿರಾರಲ್ಲಿ ವಾಗ್ಭಟನೆಂಬಾತನು ಸಿಂಧುದೇಶದಲ್ಲಿ ಅಷ್ಟಾಂಗಹೃದಯ ಮತ್ತು ಅಷ್ಟಾಂಗಸಂಗ್ರಹವೆಂಬದೊಂದು ಗ್ರಂಥವನ್ನು ಈಗಿನ ನವೀನಕಾಲದಲ್ಲಿ ಸಾಯಣಾಚಾರ್ಯರ ಸಹೋದರರಾಗಿ ವಿದ್ಯಾರಣ್ಯನೆಂದು ಪ್ರಸಿದ್ಧಪಡೆದ ಮಾಧವ ಅಥವಾ ಮಾಧವಾಚಾರ್ಯನೆಂಬಾತನು ಕ್ರಿಸ್ತನ ೧೩ನೇ ಶತಮಾನದಲ್ಲಿ ವಿಜಯನಗರದಲ್ಲಿ ಬುಕ್ಕರಾಯನಿಗೆ ಮಂತ್ರಿಯಾಗಿ ಮಾಧವನಿದಾನವೆಂಬ ಗ್ರಂಥವನ್ನೂ ಇನ್ನೂ ಇತರ ವೇದಾಂತ ಗ್ರಂಥಗಳನ್ನೂ ೧೫೫೦ ರಲ್ಲಿ ಭಾವಮಿಶ್ರನೆಂಬಾತನು ಭಾವಪ್ರಕಾಶವೆಂಬ ವೈದ್ಯಗ್ರಂಥವನ್ನು ಶಾರ್ಙ್ಗಧರನೆಂಬಾತನು ಶಾರ್ಙ್ಗಧರಸಂಹಿತೆಯೆಂಬ ವೈದ್ಯಗ್ರಂಥವನ್ನು ೧೬೨೭ ರಲ್ಲಿ ಭಟ್ಟವಾರೇಶ್ವರನೆಂಬಾತನು ವಿದ್ಯಾಮೃತವೆಂಬ ಗ್ರಂಥವನ್ನೂ ೧೬೩೩ ರಲ್ಲಿ ರೂಪಂ ಬಿರಾಜನೆಂಬಾತನು ವೈದ್ಯಜೀವನವೆಂಬ ಗ್ರಂಥವನ್ನೂ, ಬೋಪದೇವನೆಂಬುವನು ಬೋಪದೇವಶತಕವೆಂಬ ಗ್ರಂಥವನ್ನೂ, ೧೬೭೦ ರಲ್ಲಿ ಹಸ್ತಿಯೆಂಬಾತನು ವೈದ್ಯವಲ್ಲಭವೆಂಬಗ್ರಂಥವನ್ನೂ, ಚಂದ್ರದತ್ತನೆಂಬಾತನು ಚಿಕಿತ್ಸಾಸಂಗ್ರಹವೆಂಬ ಗ್ರಂಥವನ್ನೂ, ವಿದ್ಯಾಪತಿಯು ಚಿಕಿತ್ಸಾಂಜನವೆಂಬ ಗ್ರಂಥವನ್ನೂ ವೈದ್ಯದಲ್ಲಿ ಬರೆದಿರುವರು.

ಮೂರನೆಯ ಅಧ್ಯಾಯ—ಪ್ರಪಂಚ ಸೃಷ್ಟಿ ಕ್ರಮವು ಹೇಳಿದೆ.

ನಾಲ್ಕನೆಯ ಅಧ್ಯಾಯ—ಗರ್ಭ, ಜನನ, ಶಿಶುಪಾಲನ ವಿಷಯವಾಗಿ ಬರೆದಿದೆ.

ಐದನೆಯ ಅಧ್ಯಾಯ.

ದೇಹಾರೋಗ್ಯ ವಿಷಯದಲ್ಲಿ–ಸ್ನಾನ, ಪಾನ, ನಿದ್ರೆ, ಆಹಾರಾದಿಗಳ ಕ್ರಮವನ್ನು ಎತ್ತಿ ಬರೆದಿರುವದು. ಉದಯಕಾಲದಲ್ಲಿ ಮಾಡತಕ್ಕ ಆಚಮನದಿಂದ ಅನೇಕ ರೋಗ ನಿವಾರಣೆಯಾಗುವದೆಂದು ಹೇಳಿದೆ.

ಆರನೆಯ ಅಧ್ಯಾಯ

ದೇಹದಲ್ಲಿರುವ ವಾತ, ಪಿತ್ತ, ಶ್ಲೇಷ್ಮಗಳ ಕ್ರಮವು ಕಟ್ಟಲ್ಲಿ ವ್ಯಾಧಿಯು ಹುಟ್ಟುವದು. ಈ ವಾತದಲ್ಲಿ ಉದಾನ, ಪ್ರಾಣ, ಸಮಾನ, ಅಪಾನ, ವ್ಯಾನಗಳೆಂದು ೫ ಭೇದಗಳಿರುವವು. ಇವುಗಳಲ್ಲಿ ಉದಾನವು ಕಂಠದ ಮೇಲ್ಗಡೆಯಲ್ಲಿರುವದು. ಪ್ರಾಣವು ಹೃದಯದಲ್ಲಿರುವದು. ಸಮಾನವಾತವು ಉದರದಲ್ಲಿರುವದು. ಈ ವಾತದಿಂದಲೇ ಭುಕ್ತಪದಾರ್ಥವು ಜೀರ್ಣವಾಗುವದು. ಅಪಾನ ವಾತವು ಹೊಕ್ಕಳ ಕೆಳಗಡೆ ಇರುವದು. ಇದರಿಂದ ಜಲ, ಮಲ, ಇಂದ್ರಿಯ ವಿಸರ್ಜನೆಯಾಗುವದು. ವ್ಯಾನ ವಾಯುವು ದೇಹದಲ್ಲಿ ಎಲ್ಲೆಲ್ಲೂ ವ್ಯಾಪಿಸಿಕೊಂಡಿರುವದು. ಇದಲ್ಲದೆ ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯವೆಂದು ಇನ್ನೂ ೫ ಭೇದವಿದೆಯೆಂದು ಹೇಳುವರು. ಪಾಚಕ, ರಂಜಕ, ಸಾಧಕ, ಆಲೋಚಕ, ಭ್ರಾಜಕವೆಂದು ಪಿತ್ತವು ೫ ವಿಧವಾಗಿರುವದು. ಕ್ಲೇದನ, ಅವಲಂಬನ, ರಸನ, ಸ್ನೇಹನ, ಶ್ಲೇಷಣಗಳೆಂದು ಶ್ಲೇಷ್ಮವು ೫ ವಿಧವಾಗಿರುವದು. ಇದಲ್ಲದೆ ಶರೀರದಲ್ಲಿ ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜೆ, ಶುಕ್ಲವೆಂಬ ೭ ಧಾತುಗಳಿರುವವು. ಆಹಾರವು ಜಠರಕೋಶದಲ್ಲಿ ಪಚನವಾದಾಗ ಬಿಳ್ಳಗಿರತಕ್ಕ ರಸವಾಗಿ ಅಲ್ಲಿಂದ ಕರುಳಿಗೆ ಬಂದು ರಕ್ತವಾಗುವದು. ಆ ರಕ್ತದಿಂದ ಮಾಂಸವೂ, ಮಾಂಸದಿಂದ ಕೊಬ್ಬೂ, ಕೊಬ್ಬಿನಿಂದ ಅಸ್ಥಿಯೂ, ಅಸ್ಥಿಯಿಂದ ಮಜ್ಜೆಯೂ, ಮಜ್ಜೆಯಿಂದ ಶುಕ್ಲವೂ ಉಂಟಾಗುವದು.

ಹರಿತರು ಬರೆದಿರತಕ್ಕ ಗ್ರಂಥದಲ್ಲಿ ರಕ್ತವು ಯಾವಾಗಲೂ ಓಡಿಕೊಂಡಿರಬೇಕೆಂದು ಹೇಳಿರುತ್ತಾರೆ. ಗಂಡಸರ ದೇಹದಲ್ಲಿ ಶ್ಲೇಷ್ಮಕೋಶ, ಅಮಕೋಶ, ಪಿತ್ತಕೋಶ, ವಾತಕೋಶ, ಮಲಕೋಶ, ಜಲಕೋಶವೆಂದು ೬ ಕೋಶಗಳಿರುವವು. ಹೆಂಗಸರ ಶರೀರದಲ್ಲಿ ಗರ್ಭಕೋಶವೊಂದೂ, ಕ್ಷೀರಕೋಶವೆರಡೂ ಅಂತೂ ಮೂರು ಕೋಶವು ಹೆಚ್ಚಾಗಿರುವದು. ದೇಹದಲ್ಲಿ ೫೫೦ ಸಂಧಿಬಂಧಗಳೂ, ೯೦೦ ನರಾಸ್ನಾ

ಯುಗಳೂ ಇರುವವು. ಪುರುಷನ ಶರೀರದಲ್ಲಿ ನವದ್ವಾರಗಳು ಇರುವವು;—೨ ಮೂಗಿನ ಸೊಳ್ಳೆ, ೨ ನೇತ್ರ, ೨ ಕಿವಿ, ೧ ಬಾಯಿ, ಮಲದ್ವಾರ ಜಲದ್ವಾರಗಳು. ಹೆಂಗಸರಿಗೆ ಒಂದು ಗರ್ಭದ್ವಾರವೂ, ೨ ಕ್ಷೀರದ್ವಾರವೂಅಿಂತೂ ಮೂರು ದ್ವಾರವು ಅಧಿಕವಾಗಿರುವದು ಇದಲ್ಲದೆ ಶರೀರದಲ್ಲಿ ೫ ವಿಧವಾದ ಮರ್ಮಸ್ಥಾನಗಳಿರುವವು. ಈ ಐದರಲ್ಲಿ ಮೊದಲನೆಯ ಭಾಗಕ್ಕೆ ಸೇರಿದ ೧೯ ಮರ್ಮಸ್ಥಾನಗಳಿಗೆ ಏನಾದರೂ ಗಾಸಿಯಾಗಲ್ಲಿ ಪ್ರಾಣಹಾನಿಯೇ ಸಂಭವಿಸುವದು. ೨ ಸ್ನೇದಾದ ೩೩ ಮರ್ಮಸ್ಥಾನಗಳಿಗೆ ಗಾಸಿಯಾದರೆ ಕೂಡಲೆ ಮರಣಉಂಟಾಗದೆ ಕಾಲಾಂತರದಲ್ಲಿ ಮರಣವುಂಟಾಗುವದು. ೩ ಸ್ನೇದಾದ ೪೪ ಮರ್ಮಗಳಿಗೆಗಾಸಿಯಾದರೆ ಅವಯವಗಳ ಉಪಯೋಗವು ಸರಿಯಾಗಿರುವದಿಲ್ಲ. ೪ ಸ್ನೇದಾದ ೪ ಮರ್ಮಸ್ಥಾನಕ್ಕೆ ಏಟುಬಿದ್ದರೆ ಸಹಿಸಲಾರದಮಟ್ಟಿಗೆ ನೋವು ಉಂಟಾಗುವದು, ಅನ್ಯಪದಾರ್ಥಗಳು ಒಳಕ್ಕೆ ಹೋದಮೇಲೆ ಅದನ್ನು ಈಚಿಗೆ ತೆಗೆದರೆ ಕೂಡಲೆ ಮರಣವನ್ನುಂಟುಮಾಡತಕ್ಕ ಮರ್ಮಸ್ಥಾನಗಳು ಮೂರು, ಅಿಂತೂ ೧೦೭ ಮರ್ಮಸ್ಥಾನಗಳು ಇರುವವು. ವಾತ, ಪಿತ್ತ, ಶ್ಲೇಷ್ಮಗಳ ವ್ಯತ್ಯಾಸವೇ ಜಾಡ್ಯಕ್ಕೆ ಮೂಲವೆಂದು ಹಿಂದೂವೈದ್ಯರ ಸಿದ್ಧಾಂತವಾಗಿದೆ.

ಏಳನೆಯ ಅಧ್ಯಾಯ.

ಔಷಧಗಳಲ್ಲಿ ಮೂಲಿಕಾ ವೈದ್ಯವೆಂತಲೂ, ಜಂತು ವೈದ್ಯವೆಂದೂ, ಧಾತು ವೈದ್ಯವೆಂತಲೂ ಮೂರುವಿಧವಿರುವದು. ಈ ಔಷಧಗಳಲ್ಲಿ ರಸ, ಗುಣ, ವೀರ್ಯ, ಪ್ರಭಾವ, ವಿಪಾಕಗಳೆಂಬ ೫ ಲಕ್ಷಣಗಳಿರಬೇಕು. (೧) ಸಿಹಿ, ಕಹಿ, ಹುಳ್ಳಿ, ಉಪ್ಪು, ಕಾರ, ಒಗರು ಎಂಬದಾಗಿ ರಸವು ೬ ವಿಧವಾಗಿದೆ. (೨) ರೋಗವನ್ನುಡುಗಿಸುವ ಶಕ್ತಿಗೆ ಗುಣವೆಂದು ಹೆಸರು. ಇಂಥಾ ಔಷಧಗಳಿಗೆ ಜೀಕಾದ ೫೦೦ ಮೂಲಿಕೆಗಳನ್ನು ಚರಕಾಚಾರ್ಯರು ಹೇಳಿರುವರು. ಸುಶ್ರುತ ಸಂಹಿತೆಯಲ್ಲಿ ೭೬೦ ಮೂಲಿಕೆ ...ು ಹೇಳಿವೆ.

ಈ ಉಪನ್ಯಾಸವನ್ನು ಇಂಗ್ಲೀಷಿನಲ್ಲಿ ಬರೆದಿರುವದು. ಆರ್ಯರ ೭೫ ಮೂಲಿಕೆಗಳನ್ನು ಹೇಳಿ ಅದಕ್ಕೆ ಇಂಗ್ಲೀಷಿನಲ್ಲಿ ಹೆಸರನ್ನು ಹೇಳಿರುತ್ತಾರೆ.

ಚರಕಾಚಾರ್ಯ ಶಿಷ್ಯರಾದ ಅಗ್ನಿವೇಶರೆಂಬುವರು ಔಷಧಕ್ಕೆ ತಕ್ಕ ಪದಾರ್ಥ ೫೦೦ ಪಾವಾಗಿ ವಿಂಗಡಿಸಿ ಪ್ರತಿಯೊಂದರ ಗುಣವನ್ನೂ ಹೇಳುವ ಪಂದ

ರ್ಭದಲ್ಲಿ ಆ ಗುಣವುಳ್ಳ ಇತರ ಪದಾರ್ಥಗಳನ್ನು ಹೇಳಿರುವರು. (೩) ವೀರ್ಯ-ಉಷ್ಣ ರೋಗಕ್ಕೆ ಉಷ್ಣ ಚಿಕಿತ್ಸೆಯೂ, ಶೀತ ರೋಗಕ್ಕೆ ಶೀತ ಚಿಕಿತ್ಸೆಯೂ ಕೂಡ ವೀರ್ಯ ಲಕ್ಷಣನಾಗಿರುವದು. (೪) ವಿಪಾಕ—ಪದಾರ್ಥವು ಆಹಾರಕೋಶಕ್ಕೆ ಹೋದ ಮೇಲೆ ಉಂಟಾಗುವ ಪರಿಣಾಮಕ್ಕೆ ವಿಪಾಕವೆಂದು ಹೆಸರು. ಸಿಹಿ, ಹುಳಿ, ಕಾರ ವೆಂಬ ಮೂರು ರಸಗಳೂ ಆಹಾರಕೋಶಕ್ಕೆ ಹೋದವೆಲೆ ಬದಲಾಯಿಸುವದೇ ಇಲ್ಲ. ಉಪ್ಪು, ಸಿಹಿಯಾಗುವದು. ಒಗರು ಕಹಿ ಇವೆರಡೂ ಕಾರವಾಗ: ವದು. ವಿಪಾಕವಾಗುವಾಗ ಆಯಾಯ ಪದಾರ್ಥಗಳಲ್ಲಿರತಕ್ಕ ಪೃಥಿವ್ಯಾದಿ ಪಂಚ ಭೂತಗಳ ಅಂಶಾಧಿಕ್ಯಾನುಗುಣವಾಗಿ ವಿಪಾಕವಾಗುವದು. ಔಷಧದಲ್ಲಿರುವಂತೆ ರಸನೇಂದ್ರಿಯಕ್ಕೆ ತೋರತಕ್ಕ ರಸವು ರೋಗ ನಿವಾರಣೆಗೆ ಪ್ರಯೋಜನಕಾರಿಯಾ ಗದೆ ವಿಪಾಕವಾದಮೇಲೆ ಉಂಟಾಗತಕ್ಕ ರಸವೇ ರೋಗ ನಿವಾರಣೆಗೆ ಸಾಧನೆಯಾ ಗಿರುವದು. (೫) ಪ್ರಭಾವ—ಭಿನ್ನಭಿನ್ನವಾದ ಔಷಧಗಳು ಆಹಾರಕೋಶದಲ್ಲಿ ಪರಿ ಣಾಮಕ್ಕೆ ಬಂದಾಗ ಮಧುರಾದಿ ರಸದಲ್ಲಿ ಒಂದೇ ಆಗಿದ್ದಾಗ್ಯೂ ರಕ್ತಕ್ಕೆ ಸೇರಿದ ಮೇಲೆ ಉಂಟಾಗತಕ್ಕ ಬೇರೆಬೇರೆ ಶಕ್ತಿಗೆ ಅಭಾವವೆಂದು ಹೆಸರು. ಉದಾ—ದ್ರಾಕ್ಷಿ ಮತ್ತು ಜೇನುತುಪ್ಪವು ಅನ್ನಕೋಶಕ್ಕೆ ಹೋದಾಗಲೂ ವಿಪಾಕವಾದಾಗಲೂ ಕೂಡ ಸೀಯಾಗಿದ್ದರೂ ರಕ್ತಕ್ಕೆ ಸೇರಿದಮೇಲೆ ಜೇನುತುಪ್ಪವು ಮಲವನ್ನು ಬಂಧಿ ಸುವದು. ದ್ರಾಕ್ಷಿಯು ಮಲವನ್ನು ವಿರೇಚಿಸುವದು.

ಭಾವಮಿಶ್ರರೆಂಬುವರು ಧನ್ವಂತರಿ ನಿಘಂಟಿನಲ್ಲಿ ಹೇಳಿರುವ ಮೂಲಿಕೆಯು ಲ್ಲದೆ. ೧೪೦ ಮೂಲಿಕೆಗಳನ್ನು ಹೆಚ್ಚಾಗಿ ಹೇಳಿದಾರೆ.

ರಾಜಮದನಪಾಲರೆಂಬುವರು ಭಾವಪ್ರಕಾಶವೆಂಬ ಪುಸ್ತಕವನ್ನು ಸ್ವಲ್ಪ ವಿಸ್ತಾರವಾಗಿ ಬರೆದು ಅದಕ್ಕೆ ಮದನವಿನೋದವೆಂದು ಹೆಸರು ಕೊಟ್ಟಿರುವರು.

ಕಾಶ್ಮೀರಖಂಡದಲ್ಲಿದ್ದ ನರಹರಿ ಎಂಬಾತನು ಅಭಿಧಾನಚೂಡಾಮಣಿ ಅಥ ವಾ ರಾಜನಿಘಂಟು ಎಂಬ ಹೆಸರಿನ ಪುಸ್ತಕವನ್ನು ಕ್ರಿಸ್ತನ ೭ ನೇ ಶತಮಾನದಲ್ಲಿ ಬರೆದು ಅವರಲ್ಲೆಲ್ಲಾ ಮೂಲಿಕೆಗಳ ಹೆಸರನ್ನೆ ಹೇಳಿರುವನು. ಗೂರ್ಜರದೇಶದಲ್ಲಿದ್ದ ಗೂರ್ಜರಬ್ರಾಹ್ಮಣ ಶೊಢಲನೆಂಬಾತನು ಧನ್ವಂತರಿ ನಿಘಂಟನ್ನು ಆಧಾರಮಾಡಿಕೊಂ ಡು ಅದಕ್ಕಿಂತಲೂ ೫೦ ಮೂಲಿಕೆಗಳನ್ನು ಹೆಚ್ಚಾಗಿ ಹೇಳಿ ಒಂದು ಗ್ರಂಥ ಬರೆದಿರ ತ್ತಾನೆ. ಕ್ರಿಸ್ತನ ೧೭ನೆ ಶತಮಾನದಲ್ಲಿ ಅಹಮ್ಮದ್‌ನಗರದಲ್ಲಿ ವೈದ್ಯಮೋರೇಶ್ವರನೆ

ಬಾತನು ವೈದ್ಯಾವೃತವೆಂಬ ಗ್ರಂಥವನ್ನು ಬರೆದು ಅದರಲ್ಲಿ ಕೆಲವು ಪಾರಸೀಕ ಮೂಲಿಕೆಗಳನ್ನು ಸೇರಿಸಿರುವನು.

೧೪ನೆ ಶತಮಾನದಲ್ಲಿ ಕಾಶಿಯಲ್ಲಿ ಒಬ್ಬ ವೈದ್ಯನು ಆತಂಕತಿಮಿರಭಾಸ್ಕರ ವೆಂಬ ಪುಸ್ತಕವನ್ನು ಬರೆದಿರುವನು. ಅವರ ಪ್ರಪೌತ್ರನು ವೈದ್ಯಸೋಮಯಾಜೀ ಯೆಂಬಾತನು ಬಹುದಿನದಿಂದ ವೈದ್ಯವನ್ನು ಮಾಡುತ್ತಿದ್ದು ಈಗ್ಯೆ ಕೆಲವು ದಿನಕ್ಕೆ ಮುಂ ಚೆ ಪರಂಧಾಮವನ್ನು ಪಡೆದನು. ೧೭೬೨ರಲ್ಲಿ ಪಂಡಿತ ವಿಷ್ಣು ವೌಸುದೇವಗಾಡ್ಯೂಲ್ ಎಂಬವರು ನಿಘಂಟುರತ್ನಾಕರವೆಂಬ ಗ್ರಂಥವನ್ನು ಪ್ರಚುರಪಡಿಸಿರುವರು. ಅದರಲ್ಲಿ ಅದುವರಿಗೆಲ್ಲಾ ವೈದ್ಯರೂ ಹೇಳಿರತಕ್ಕ ಮೂಲಿಕೆಗಳಿಗಿಂತಲೂ ೫೦ ಮೂಲಿಕೆಗಳು ಹೆಚ್ಚಾಗಿ ಹೇಳಿವೆ.

ಈ ಆರ್ಯರ ವೈದ್ಯವನ್ನು ಅರೇಬಿಯರ್ಯರು ಗ್ರಹಿಸಿಕೊಂಡರು. ತುರುಕರ ಅಭಿವೃದ್ಧಿಕಾಲದಲ್ಲಿ ಆರ್ಯರ ಚಿಕಿತ್ಸೆಯು ಕೊಂಚಮಟ್ಟಿನವಾಗಿ ಯುನಾನಿವೈದ್ಯವು ಪ್ರಾಬಲ್ಯಕ್ಕೆ ಬಂತು. ಯುನಾನಿವೈದ್ಯವು ಬಂದಮೇಲೆಯೇ ಔಷಧದಲ್ಲಿ ಅಫೀಮು ಸೇರಿಸಲು ಮೊದಲಾಯಿತು. ಅಫೀಮುಗಿಡವು ತುರುಕರಿಂದಲೆ ಇಂಡಿಯಾದೇಶಕ್ಕೆ ಬಂತು. ಇಂಗ್ಲೀಷ್‌ನವರಲ್ಲಿ ಔಷಧಗಳು ತಯ್ಯಾರಾಗಿರುವದರಿಂದ ಇಂಗ್ಲಿಷ್‌ವೈದ್ಯವ ಪ್ರಾಬಲ್ಯಕ್ಕೆ ಬಂದಿದೆಯೆಂದು ಹೇಳುತ್ತಾರೆ. ಯುನಾನಿವೈದ್ಯದಲ್ಲಿ ಮೂಲಿಕೆಗಳನು ಬೇಕಾದಾಗ ತಂದು ಔಷಧವನ್ನು ಮಾಡಬೇಕಾಗಿರುವದು. ಆದರೆ ಇಂಗ್ಲಿಷ್‌ವೈದ್ಯ ಕೂ ಕೂಡ ಇಂಡಿಯಾದೇಶದ ಅನೇಕ ಮೂಲಿಕೆಗಳು ಸೇರುವದು.

ಜಂತುವೈದ್ಯ—ಅಸ್ಥಿ ಅನೆಯದಂತ, ಜಂತುಗಳಹಾಲು, ಹಾವಿನವಿಷ, ಹಾವಿನಪೊರೆ ಹಾಡವಪೊತೆ, ತಿಗುಣೆ ಕೂದಲು, ಆನೆಯುಮದಜಲ, ಮಾಂಸ, ಆಡು [redacted] ನಾಯಿವಾಳಿದಹಾ, ನವಿಲುಗರಿ, ಮುತ್ತು, ಹವಳ, ಶಂಖ, ಸಾರಂಗದಕೊಂ [redacted] ಔಷಧಕ್ಕೆ ಬರುತ್ತವೆ. ಧಾತುವರ್ಗದಲ ರಸ, ಲೋಹಗಳು—ಉಪ್ಪು— [redacted] ಇವುಗಳೆಲ್ಲವೂ ಔಷಧಕ್ಕೆ ಬರುತ್ತವೆ. ಇವುಗಳೊಳಗೆ ಪಾದ [redacted] ಹೇಳಿರುವದು. ಮೇಲೆಹೇಳಿದ ಔಷಧಗಳನ್ನು ತಯಾ [redacted] ಯೋಗ್ಯಗಳನ್ನು ಹೇಳಿ ಅವುಗಳ ಹೆಸರೂ ಹೇಳಿದೆ. [redacted] ಬರೆದಿರುವದು. ಇದುವರಗೂ ಹೇಳಿದಂಶವಲ್ಲ [redacted] ನೆಂಬ ಭಾಗದಲ್ಲಿಯೇ ಇರುವದು.

ಎಂಟನೆಯ ಅಧ್ಯಾಯ

ನಿದಾನಭಾಗ

ನಿದಾನದಲ್ಲಿ ಜಾಡ್ಯಗಳ ಗುರುತುಗಳನ್ನೂ ಆ ಜಾಡ್ಯಗಳ ಕಾರಣಗಳನ್ನೂ ತಿಳಿಯಪಡಿಸಿರುವದು. ಸುಶ್ರುತವೆಂಬ ಗ್ರಂಥದಲ್ಲಿ ೧೬ ಅಧ್ಯಾಯಗಳವರೆಗೂ ರೋಗದ ಕಾರಣ ಮತ್ತು ಗುರುತುಗಳೇ ಹೇಳಿರುವವು. ವಾತದಿಂದ ೪೦ ಜಾತಿ ರೋಗಗಳೂ, ಪಿತ್ತದಿಂದ ೪೦ಜಾತಿ ರೋಗಗಳೂ, ಶ್ಲೇಷ್ಮದಿಂದ ೨೦ಜಾತಿ ರೋಗಗಳೂ ರಕ್ತದೋಷದಿಂದ ೧೦ಜಾತಿ ರೋಗಗಳೂ ಉಂಟಾಗುವವೆಂದೂ ಅವರು ಹೇಳಿರುತ್ತಾರೆ. ಸುಶ್ರುತರು ವ್ಯಾಧಿಗೆ ಕೆಳಗೆ ಹೇಳತಕ್ಕ ೭ ವಿಧವಾದ ಕಾರಣವಿದೆಯೆನ್ನುತ್ತಾರೆ.

I (a) ತಂದೆಯು ವೀರ್ಯವು ಕೆಟ್ಟಿರುವದು (b) ತಾಯಿಯು ಗರ್ಭಕೋಶವು ಕೆಟ್ಟಿರುವದು.

2 (a) ತಾಯಿಯು ಗರ್ಭಿಣಿಯಾದಾಗ ವರ್ಜನೀಯವಾದ ಆಹಾರವನ್ನು ಭೋಜನವಾಡುವದು. (b) ಆಕೆಯ ಬಯಕೆಯು ನೆರವೇರದಿರುವದು.

3 ಹುಟ್ಟಿದವೇಲೆ ವಾತ, ಪಿತ್ತ, ಶ್ಲೇಷ್ಮಗಳು ಸರಿಯಾಗಿರದೆ ಕ್ರಮಗೆಡುವದು.

4 ಬೀಳುವದು, ಹಾವುಕಚ್ಚುವದೇ ಮೊದಲಾದ ಆಗಂತುಕಾಪಾಯಗಳು

5 ವಾಯುಗುಣ ಮತ್ತು ದೇಶಗುಣಗಳು.

6 ಪಿಶಾಚಾವೇಶಾದಿ ದೈವಿಕ ವ್ಯಾಧಿನಿಮಿತ್ತಗಳು.

7 ಶರೀರಕ್ಕೆ ಸ್ವಾಭಾವಿಕವಾದ ಹಸಿವು ಮೊದಲಾದವುಗಳು

ರೋಗಗಳು ಕರ್ಮವಶದಿಂದಲು ವಾತ ಪಿತ್ತ ಶ್ಲೇಷ್ಮಗಳ ವೈಪರೀತ್ಯದಿಂದಲೂ ಇವೆರಡರ ಮೇಳನದಿಂದಲೂ ಉಂಟಾಗುವದೆಂದು ಹರಿತರು ಹೇಳುತ್ತಾರೆ. ರೋಗಕ್ಕೆ ಮಾಡತಕ್ಕ ಪ್ರತಿಕ್ರಿಯೆಯನ್ನು ಹೇಳುವ ಶಾಸ್ತ್ರಕ್ಕೆ ಚಿಕಿತ್ಸಾಶಾಸ್ತ್ರವೆಂದು ಹೆಸರು. ಸ್ತ್ರೀಯರುಗಳ ಚಿಕಿತ್ಸೆ ಬೇರೆ ಹೇಳಿದೆ. ಮಕ್ಕಳ ಪೋಷಣೆಯು ಕುಮಾರಭೃತ್ಯದಲ್ಲಿ ಹೇಳಿರುವದು. ದೈವಿಕವಾದ ವ್ಯಾಧಿಗಳಿಗೆ ಚಿಕಿತ್ಸೆಯು ಭೂತವೈದ್ಯದಲ್ಲಿರುವದು. ವಿಷದವಿಷಯವಾಗಿಯೂ ಆದರ ಶುದ್ಧಿವಿಷಯವಾಗಿಯೂ ಹೇಳತಕ್ಕ ಶಾಸ್ತ್ರಕ್ಕೆ ಕಲ್ಪವೆಂದು ಹೆಸರು. ಮೂಲಿಕೆ ಮತ್ತು ಧಾತುಗಳಿಂದುಂಟಾದ ವಿಷಕ್ಕೆ ಸ್ಥಾವರವೆಂತಲೂ ಜಂತುವಿಷಕ್ಕೆ ಜಂಗ

ಮವೆಂತಲೂ ಹೆಸರು ರೋಗವು ಗೊತ್ತಾಗುವದಕ್ಕೆ ರೋಗಿಯ ದೇಹ, ಮುಖ, ಕಣ್, ನಾಲಗೆ, ಚರ್ಮ ಧಾತು ನಾಡಿ, ಧ್ವನಿ, ಮೂತ್ರ ಮಲಗಳನ್ನು ನೋಡಬೇಕೆಂದಿರುವದು. ನಾಡಿ ನೋಡುವಲ್ಲಿ ಗಂಡಸರಿಗೆ ಬಲಭಾಗದಲ್ಲಿಯೂ ಹೆಂಗಸರಿಗೆ ಎಡಗಡೆಯೂ ನೋಡಬೇಕು. ನಾಡಿ ನೋಡತಕ್ಕ ಕ್ರಮವು ವಿಸ್ತಾರವಾಗಿರುವದು. ದೈವಿಕವಾದ ರೋಗಕ್ಕೆ ತಾಯತಿಗಳಲ್ಲಿ ಚಕ್ರಮುಂತಾದ್ದನ್ನು ಬರೆದು ಕಟ್ಟಬೇಕೆಂದು ಹೇಳಿದೆ.

ಒಂಬತ್ತನೆಯ ಅಧ್ಯಾಯ

ವೈದ್ಯನು ನಡೆನುಡಿಗಳಲ್ಲಿ ಅನಿಂದಿತನಾಗಿಯೂ ದ್ರವ್ಯಾಶಾಪರನಲ್ಲದೆಯೂ ಪುಣ್ಯಕ್ಕಾಗಿ ಚಿಕಿತ್ಸೆಮಾಡುವನಂತೆ ನೆನಸತಕ್ಕವನಾಗಿಯೂ ಇರಬೇಕು. ಮತ್ತು ಒಂದುರೋಗಕ್ಕೆ ೧೦೦ ವಿಧವಾದ ಚಿಕಿತ್ಸೆಮಾಡುವವನಿಗೆ ವೈದ್ಯನೆಂತಲೂ, ೨೦೦ ವಿಧವಾಗಿ ಚಿಕಿತ್ಸೆಮಾಡತಕ್ಕವನಿಗೆ ಭಿಷಕ್ಕೆಂತಲೂ, ೩೦೦ ವಿಧವಾಗಿ ಚಿಕಿತ್ಸೆಮಾಡತಕ್ಕ ಪುರುಷನಿಗೆ ಧನ್ವಂತರಿಯೆಂತಲೂ ಹೆಸರು. ವೈದ್ಯನಿಗೆ ವ್ಯಾಧಿಗೆ ತಕ್ಕ ಚಿಕಿತ್ಸೆಯೂ, ರೋಗದಸ್ಥಿತಿಯೂ, ವೈದ್ಯಶಾಸ್ತ್ರವೂ ಗೊತ್ತಾಗಿರಬೇಕಲ್ಲದೆ ಅನುಭವವೂ ಇರಬೇಕು. ಔಷಧವಾಡುವದಕ್ಕೂ ಚಿಕಿತ್ಸಾರಂಭಕ್ಕೂ, ವಿರೇಚನಕ್ಕೂ ಕೆಲವು ವಾರಗಳು ನಿಶ್ಚೈಸಿರುವವು. ರೋಗಗಳಲ್ಲಿ ಕೆಲವು ಚಿಕಿತ್ಸೆಗೆ ಸಾಧ್ಯವಾಗಿಯೂ ಕೆಲವು ಅಸಾಧ್ಯವಾಗಿಯೂ ಕೆಲವು ಯಾಸ್ಯ (ಉಪಶಮನೀಯ) ಗಳಾಗಿಯೂ ಇರುವವು. ವೈದ್ಯನು ಚಿಕಿತ್ಸಾರಂಭಕ್ಕೆ ಶಕುನವನ್ನೂ ಸ್ವಪ್ನವನ್ನೂ ಜ್ಯೋತಿಷ್ಯವನ್ನೂ ನೋಡಬೇಕು. ರೋಗವು ಹುಟ್ಟಿದವಾರವನ್ನು ಹಿಡಿದು ರೋಗವು ಪರಿಹರವಾಗುವ ದಿನವನ್ನು ನಿರ್ಣಯಿಸುವದುಂಟು. ಶಾಸ್ತ್ರದಲ್ಲಿರುವ ಇಳಾ ಪಿಂಗಳಾ ಎಂಬ ನಾಡೀ ಭೇದದಿಂದಲೂ ಬದುಕತಕ್ಕ ದಿನವನ್ನು ಗೊತ್ತುಮಾಡುತ್ತಾರೆ.

ಹತ್ತನೆಯ ಅಧ್ಯಾಯ

ಶಸ್ತ್ರವೈದ್ಯಕ್ಕೆ ಶಲ್ಯವೆಂದು ಹೆಸರು. ಈ ಕಾಲದಲ್ಲಿ ಇಂಗ್ಲೀಷಿನವರಲ್ಲಿಯೇ ಅಧಿಕವಾಗಿ ಶಾಸ್ತ್ರಗಳಿದ್ದರೂ ಪೂರ್ವದಲ್ಲಿ ಹಿಂದುಗಳಿಗೆ ಆ ಶಾಸ್ತ್ರದಲ್ಲಿ ಯಾರೂ ಎದುರೇ ಇಲ್ಲ. ಸಾಧಾರಣವಾಗಿ ವ್ರಣ ಮುಂತಾದ್ದು ಹಬ್ಬಿದರೆ ಸಾಧ್ಯವಾದಮಟ್ಟಿಗೂ ಪಿಷ್ಟ (ಪೋಟ್ಲೀಸ್) ಮುಂತಾದ್ದನ್ನು ಕಟ್ಟಿನೋಡಿ ಅಸಾಧ್ಯವಾದರೆ ಶಸ್ತ್ರವೈದ್ಯವನ್ನು ಮಾಡುತ್ತಿದ್ದರು. ಇದೂ ಅಲ್ಲದೆ ಈ ಹಿಂದುಗಳು ಕೃತ್ರಿಮ ನೇತ್ರ

ಶೋತ್ರಗಳನ್ನು ನಿರ್ಮಿಸುತ್ತಿದ್ದರೆಂದು ಗೊತ್ತಾಗಿದೆ. ಸಿಡಬು ಏಳದೇ ಇರುವದಕ್ಕೆ ಹಸುವಿನ ಹಾಲನ್ನು ಪಯೋಗಿಸುತ್ತಿದ್ದರೆಂದೂ ಗೊತ್ತಾಗಿದೆ. ಶಸ್ತ್ರವೈದ್ಯವನ್ನು ಮಾಡುವದಕ್ಕೆ ಮೊದಲು ರೋಗಿಯು ಮಿತಾಹಾರಿಯಾಗಿರಬೇಕು. ಒಂದು ಸ್ಥಳವನ್ನು ಕೊಯ್ದಮೇಲೆ ಎಳ್ಳಿನ ಪೋಟ್ಟಣವಾಗಲೀ ಹಿಟ್ಟಿನ ಪೋಟ್ಟಣವಾಗಲೀ ಕಟ್ಟಬೇಕು. ಮತ್ತು ಕೊಯ್ಯುವಾಗ ಆ ಸ್ಥಳದಲ್ಲಿರತಕ್ಕ ಕ್ರಿಮಿಗಳು ಗಾಳಿಯಲ್ಲಿ ಸೇರಿ ಮತ್ತೊಂದು ಶರೀರಕ್ಕೆ ಸೇರದೆ ಗಾಳಿಯಲ್ಲಿ ಸಾಯುವಂತ ಸಾಮಾನ್ಯ ಧೂಪವನ್ನು ಮೊದಲೆ ಹಾಕಿ ಆಮೇಲೆ ಕೊಯ್ಯಬೇಕು. ಹಿಂದುಗಳು ಚಿಕಿತ್ಸೆಯನ್ನು ಮಾಡಲು ಇರಿಸಿಕೊಂಡಿದ್ದ ಸಲಾಕೆಮೊದಲಾದ ೨೪ ಯಂತ್ರಗಳೂ, ಛೇದಕವಾದ ೨೦ ಶಸ್ತ್ರಗಳೂ ಇದರಲ್ಲಿ ಬರೆದಿದೆ. ಬ್ರಾಹ್ಮಣರಿಗೆ ಶಸ್ತ್ರಚಿಕಿತ್ಸೆಯಲ್ಲ ಪ್ರೀತಿಕರ್ಮವಾದ್ದರಿಂದ ಆ ಶಾಸ್ತ್ರವು ಇಂಡಿಯಾದಲ್ಲಿ ಕಡಮೆಯಾಯಿತು.

೧೧ ನೇ ಅಧ್ಯಾಯ

ಭಾರತಯುದ್ಧರಂಗದಲ್ಲಿ ವೈದ್ಯವು ನಡೆಯುತ್ತಿದ್ದಂತೆಯೂ, ವೈದ್ಯರಿದ್ದಂತೆಯೂ, ಪಾಂಡವರಿಗೆ ವಾಗ್ಭಟರು ವೈದ್ಯರೆಂದೂ ಈ ಗ್ರಂಥದಲ್ಲಿದೆ. ಬೌದ್ಧರ ಕಾಲದಲ್ಲಿ ವೈದ್ಯಶಾಸ್ತ್ರವು ಪ್ರಾಬಲ್ಯಕ್ಕೆ ಬಂದರೂ ಶಸ್ತ್ರಚಿಕಿತ್ಸೆಯು ಮಾತ್ರ ಮಾಲಿನ್ಯಕ್ಕೆ ಬಂತು. ಆರ್ಯರ ವೈದ್ಯವನ್ನೇ ಗ್ರೀಕ್ ದೇಶದ ಜನರು ಕಲಿತರೆಂತೆ ಕಾಣುವುದು ಇಂಡಿಯಾದಿಂದಲೆ ಜನಗಳು ಹೋಗಿ ಈಜಿಪ್ಟಿನಲ್ಲಿ ವಾಸ ಮಾಡುತ್ತಿದ್ದಂತೆ ಕಾಣಬರುವುದು. ಆ ದೇಶಕ್ಕೆ ಮಿಶ್ರದೇಶವೆಂದು ಹೆಸರು ಆ ಹೆಸರು ಆರ್ಯರಿಂದಲೇ ಬಂದಿರಬೇಕು. ವಿಕ್ರಮಾರ್ಕನ ಸಭೆಯಲ್ಲಿ ನವರತ್ನದಲ್ಲಿ ಒಬ್ಬರಾದ ಧನ್ವಂತರಿ ಎಂಬುವರ ನಿಘಂಟು ಎಂಬ ವೈದ್ಯಶಾಸ್ತ್ರವನ್ನು ಬರೆದಿರುವರು. ಧಾರಾಧಿಪತಿ ಭೋಜರಾಜನು ಮತ್ತನ್ನಂಟುಮಾಡಿ ಕಪಾಲಶೋಧನೆಯನ್ನು ಮಾಡಿದಂತೆ ಗೊತ್ತಾಗುವದು. ಮಹಮ್ಮದೀಯರ ಅಭಿವೃದ್ಧಿಕಾಲದಲ್ಲಿ ಷಹಜಹಾನ್ ಚಕ್ರವರ್ತಿಯು ಬಳಿ ನಸುರಿದೀನ್ ಮಹಮ್ಮದ್ ಅಬ್ದುಲ್ಲಾ ಷಿರಾಜ ಎಂಬುವರು ೧೬೫೦ ರಲ್ಲಿ ಅಲಫಾಜಲ ಅಗ್ನಿಶ್ವರ ಎಂಬ ವೈದ್ಯಗ್ರಂಥವನ್ನು ಬರೆದಿರುವರು. ೧೫೫೮ ರಲ್ಲಿ ಔರಂಗಜೇಬನ ಸಭೆಯಲ್ಲಿ ಮಹಮ್ಮದ್ ಅಕ್ಬರ್ ಅರಸಾನಿಯೆಂಬ ಮುಸಲ್ಮಾನ್ ವೈದ್ಯರು ಕರಬದ್ರೀನ್ ಕಾದರಿ ಎಂಬ ಗ್ರಂಥವನ್ನು ಬರೆದಿದಾರೆ. ಮಹಾರಾಷ್ಟ್ರರ ಸಾಮ್ರಾಜ್ಯಗಳ ಕಾಲದಲ್ಲಿ ಆರ್ಯವೈದ್ಯವು ಸರಿಯಾದಸ್ಥಿತಿಯಲ್ಲಿದ್ದು ಇಂಗ್ಲೀಷಿನವರ ಕಾಲದಲ್ಲಿ ತುಂಬಾ ಮಾಲಿನ್ಯಕ್ಕೆ ಬಂತು

೦೭ನೇ ಅಧ್ಯಾಯ.

ಇಂಗ್ಲೀಷಿನವರು ಗೌರವಿಷತಕ್ಕ ಅನೇಕ ಅಂಶಗಳು ಆರ್ಯವೈದ್ಯದಲ್ಲಿರುವದು. ಆರ್ಯರು ಔಷಧದಲ್ಲಿ ಸೂಚಿಕಾಂತವನ್ನುಪಯೋಗಿಸುತ್ತಿದ್ದರು. (ಹಿಪ್ನಾಟಿಸಂ) ಎಂಬ ಮಂತ್ರಾದಿಗಳಿಂದ ಗುಣಮಾಡತಕ್ಕ ವೈದ್ಯವೂ ಮೆಸ್ಮರಿಜಂ ಎಂಬ ವೈದ್ಯವೂ ಆರ್ಯರಿಗೆ ಗೊತ್ತಾಗಿತ್ತು. ಆದಕಾರಣ ಆರ್ಯರ ಮತ್ತು ಇಂಗ್ಲೀಷಿನವರ ಚಿಕಿತ್ಸೆಗಳಿರಡೂ ಸೇರಿದಲ್ಲಿ ರೋಗಿಗೆ ರೋಗವು ನಾಶವಾಗಿ ಶೀಘ್ರವಾಗಿ ಶರೀರಾರೋಗ್ಯಮುಂಟಾಗಿ ಪರಮಾನಂದವನ್ನುಪಡೆದು ಆಯುಷ್ಮಂತನಾಗಿರುವನು.

ಅಂಕಗಣಿತ.

I. 550 ರೂ. ಗಳನ್ನು ನಾಲ್ಕುಜನಗಳಿಗೆ ಭಾಗ ಮಾಡಿಕೊಡಬೇಕು. ಅವರಿಗೆ ಬರುವ ಹಣವು 2, $2\frac{1}{2}$, 3, $3\frac{1}{2}$, ಯಂತೆ ಇರಬೇಕು.

$$2 + 2\frac{1}{2} + 3 + 3\frac{1}{2} = 11.$$

ಆದುದರಿಂದ ನಾವು 550 ರೂ. ಗಳನ್ನು 11 ಭಾಗವಾಗಿ ಮಾಡಿ, 2 ಭಾಗಗಳನ್ನು ಒಬ್ಬನಿಗೂ, $2\frac{1}{2}$ ಭಾಗಗಳನ್ನು ಎರಡನೆಯವನಿಗೂ, 3 ಭಾಗಗಳನ್ನು ಮೂರನೆಯವನಿಗೂ $3\frac{1}{2}$ ಭಾಗಗಳನ್ನು ನಾಲ್ಕನೆಯವನಿಗೂ ಕೊಡಬೇಕು.

ಅಂದರೆ.

ಮೊದಲನೆಯವನ ಭಾಗ $= \frac{2}{11} \times 550.$

$= 100$ ರೂ.

ಎರಡನೆಯವನ ಭಾಗ $= \frac{2\frac{1}{2}}{11} \times 550.$

$= 125$ ರೂ.

ಮೂರನೆಯವನ ಭಾಗ $= \frac{3}{11} \times 550.$

$= 150$ ರೂ.

ುರೆಯುವ ವಿಷಯದಲ್ಲಿ ಬೋಧಕರು ತಿಳಿಸಬಹುದಾದ ಕೆಲವು ಸೂಚನೆಗಳು ಇದರಲ್ಲಿ ಕೊಡಲ್ಪಟ್ಟಿವೆ. ಇವರ ಪ್ರಯೋಜನವು ಅನುಭವದಿಂದ ತಿಳಿಯುವುದು.

ಸೂಚನೆ.	ಈಗಿನ ಬರಹದ ಪದ್ಧತಿ.	ಶುದ್ಧವಾದ ಕ್ರಮ.
1 ಪದಮಧ್ಯದಲ್ಲಿ ಯಾಗಲಿ, ಪದಾಂತದಲ್ಲಿಯಾಗಲಿ ಬರುವ ಇ, ಉ, ಎ, ಒ ಇವುಗಳನ್ನು ಸ್ವರರೂಪದಲ್ಲಿ ಬರೆಯುವರು ಹೀಗೆ ಬರೆಯುವಾರದು.	ನಾಇ ಬೇಉ	ನಾಯಿ ಬೇವುಇತ್ಯಾದಿ
2 ಪದದ ಆದಿಯಲ್ಲಿ ಬರುವ ಇ, ಉ, ಎ, ಒ ವರ್ಣಗಳನ್ನು ವ್ಯಂಜನರೂಪದಲ್ಲಿ ಬರೆಯುವರು. ಇದು ತಪ್ಪು	ಯಿವನು ವೂಟ ಯೇರಿ ವೋಣಿ	ಇವನು ಊಟ ಏರಿ ಓಣಿ ಇತ್ಯಾದಿ
3 ಕೆಲವರು ಸ್ವರಾಕ್ಷರಗಳಿಗೆ ಕಾಗುಣಿತರೂಪವನ್ನು ಕೊಟ್ಟು ಬರೆಯುವರು ಇವು ಸರಿಯಾದುವಲ್ಲ ಅಾ, ಈ, ಅೀ, ಉ, ಅು, ಐ, ಅೌ.	ಅ್ಯದು ಅೌವ	ಐದು ಔವ ಇತ್ಯಾದಿ
4 ವ್ಯಂಜನಗಳಿಗೆ ಅನೇಕ ಸ್ವರಗಳನ್ನು ಸೇರಿಸಿ ಕಾಗುಣಿತರೂಪ ಮಾಡುವರು, ಮ್ಯೃ (ಮ್+ಉ+ಋ)	ಗ್ಯೃಹ ಮ್ಯೃತ	ಗೃಹ ಮೃತಇತ್ಯಾದಿ
5 ಲ—ಳ, ನ—ಣ, ಅ-ಹ, ಇ—ಹಿ, ಉ—ಹು. —ಷ—ಸ ಇವುಗಳ ಉಚ್ಚಾರಭೇದವನರಿಯದೆ ಒಂದಕ್ಕೆ ಪ್ರತಿಯಾಗಿ ಮತ್ತೊಂದನ್ನು ಬರೆಯಬಾರದು.	ಹಿದು ಮಇ ಶರ	ಇದು ಮಹಿ ಪರ ಇತ್ಯಾದಿ
6 ಅಲ್ಪಪ್ರಾಣಾಕ್ಷರಗಳಿಗೆ ಮಹಾಪ್ರಾಣವನ್ನೂ ಮಹಾಪ್ರಾಣಕ್ಕೆ ಅಲ್ಪಪ್ರಾಣವನ್ನೂ ಬರೆಯಬಾರದು.	ಧನ ಮಟ	ದನ ಮಠ ಇತ್ಯಾದಿ
7 ದ್ವಿತ್ವವಾಗಿರುವ ಣ, ನ, ಮ, ಇವುಗಳಿಗೆ ಬದಲೆ ಅನುಸ್ವಾರವನ್ನುಪಯೋಗಿಸುವದು ಅನಾವಶ್ಯಕ.	ಅಂಣ್ಣ ಸಂನ್ನಿ ತಂಮ್ಮ	ಅಣ್ಣ ಸನ್ನಿ ತಮ್ಮ ಇತ್ಯಾದಿ
8 ಅನುಸ್ವಾರದಮುಂದೆ ಇರುವ ವ್ಯಂಜನಕ್ಕೆ ದ್ವಿತ್ವವನ್ನು ಕೂಡುವರು. ಕೆಲವೊಮ್ಮೆ ಅನುಸ್ವಾರವನ್ನು ಲೋಪಿಸುವರು ಇವೆರಡೂ ತಕ್ಕುವಲ್ಲ.	ಬಂದ್ದು ಮುಚ್ಚ	ಬಂದು ಮುಂಜ ಮುಂತಾದ್ದು
9 ಶಬ್ದದ ಆದಿಯಲ್ಲಿ ಸಜಾತೀಯ ದ್ವಿತ್ವವಿರುವದಿಲ್ಲ. ಬರಹದಲ್ಲಿ ಹೆಚ್ಚಾಗಿ ಉಪಯೋಗಿಸುವರು. ಇದು ತಿದ್ದಲ್ಪಡತಕ್ಕದ್ದು.	ತ್ತಂದೆ ನ್ನಮ್ಮ	ತಂದೆ ನಮ್ಮ ಮುಂತಾದ್ದು

ನಾಲ್ಕನೆಯವನ ಭಾಗ $= \frac{3\frac{1}{2}}{11} \times 550.$

$= 175$ ರೂ.

2. ಪೌ 333—6 ಷಿ—8 ಪೆ ನ್ನು A, B, C ಎಂಬ ಮೂರು ಜನಗಳಿಗೆ ಭಾಗ ಮಾಡಿಕೊಡಬೇಕು. Aಗೆ Bಯು $1\frac{2}{3}$ ರಷ್ಟು, Cಗೆ A ಮತ್ತು Bಗೆ ಬಂದ ಷ್ಟು ಬರಬೇಕು

Bಯ ಭಾಗ $= 1\frac{2}{3}$ ರಷ್ಟು A ಭಾಗ.

Cಯ ಭಾಗ $=$ Aಯ ಭಾಗ $+$ Bಯ ಭಾಗ $= 2\frac{2}{3}$ ರಷ್ಟು A ಭಾಗ

ಆದುದರಿಂದ ಈ ಮೂರು ಜನಗಳ ಭಾಗಗಳು $1, 1\frac{2}{3}, 2\frac{2}{3}$ ಯಂತೆ ಇರುವು. ಅಂದರೆ $1, \frac{5}{3}, \frac{8}{3}$ ಯಂತೆ; ಅಂದರೆ 3, 5, 8 ಯಂತೆ.

$\therefore$ Aಯ ಭಾಗ $= \frac{3}{16} \times$ ಪೌ 333—6—8

$=$ ಪೌ 62—10—ಬ್ಬ

Bಯ ಭಾಗ $= \frac{5}{16} \times$ ಪೌ 333—6—8

$=$ ಪೌ 104—3—

Cಯ ಭಾಗ $= \frac{8}{16} \times$ ಪೌ 333—6—8

$=$ ಪೌ 166—13—4

3. A, B ಎಂಬ ಇಬ್ಬರು 3500 ರೂ. ಗನ್ನು ಸೇರಿಸಿ ವ್ಯಾಪಾರವನ್ನು ಪ್ರಾರಂಭಿಸುವರು. ಇದರಲ್ಲಿ 2000 ರೂ. A ಎಂಬುವನದು; ಬಾಕಿ B ಎಂಬುವನದು. ವರ್ಷದ ಕೊನೆಯಲ್ಲಿ 2100 ರೂ. ಲಾಭಬಂದರು ಇಬ್ಬರಿಗೂ ಎಷ್ಟೆಷ್ಟು ಬರುವುದು?

ಒಟ್ಟು ಬಂಡವಾಳ $= 3500$ ರೂ. ಇದರಲ್ಲಿ Aಯ ಭಾಗ $= 2000$ ರೂ.

ಒಟ್ಟಿನಲ್ಲಿ $\frac{2000}{3500} = \frac{4}{7}$ ಒಟ್ಟಿನಲ್ಲಿ

ವಿದ್ಯಾದಾಯಿನಿ

ಭಾಗ ೫.] ಅಕ್ಟೋಬರ್ ೧೯೨೩. [ಸಂಚಿಕೆ ೧೦.

ಎಡಿಟರವರ ನೋಟ್ಸ್.

ಸನ್ ೧೯೨೫—೨೬ ನೇ ಇಸವಿಯಲ್ಲಿ ನಡೆದ ವಿದ್ಯಾಭ್ಯಾಸವು ಅಭಿವೃದ್ಧಿಯಾಗುವುದಕ್ಕೆ ಇನ್‌ಸ್ಪೆಕ್ಟರ್ ಜನರಲ್ ಸಾ॥ರವರು ಬರೆದ ರಿಪೋರ್ಟನ್ನು ಸರ್ಕಾರದವರು ಈಚೆಗೆ ಅಚ್ಚು ಹಾಕಿಸಿದಾರೆ. ಇದರಿಂದ ಆ ವರ್ಷದಲ್ಲಿ ಗ್ರಾ॥ ಸ್ಕೂಲುಗಳ ಸಂಖ್ಯೆಯು ೧೯೨೯ರಿಂದ ೧೯೦೪ ಆಯಿತೆಂತಲೂ, ವಿದ್ಯಾರ್ಥಿಗಳ ಸಂಖ್ಯೆಯು ೪೩೯೪ರಿಂದ ೪೬೫೦ ಆಯಿತೆಂತಲೂ ತಿಳಿಯಬರುತ್ತೆ. ಈ ಸಂಖ್ಯೆಗಳು ಇಷ್ಟು ಮಟ್ಟಿಗೆ ಹೆಚ್ಚುವುದಕ್ಕೆ ಸರ್ಕಾರದವರು ಹಳ್ಳಿಗಳಲ್ಲಿರುವ ಮಠಗಳಲ್ಲಿ ಕೆಲವಕ್ಕೆ ಸಹಾಯದ್ರವ್ಯವನ್ನು ಕೊಡುವುದಕ್ಕೆ ಪ್ರಾರಂಭಿಸಿದುದು ಒಂದುಕಾರಣ. ಈಪ್ರಕಾರವಾಗಿ ಸಹಾಯದ್ರವ್ಯವನ್ನು ಕೊಟ್ಟು ಹಳ್ಳಿ ಮಠಗಳು ಕ್ರಮವಾಗಿ ಕೆಲಸಮಾಡುವಂತೆ ಮಾಡುವುದು, ನಮ್ಮ ದೇಶದ ಈಗಿನಸ್ಥಿತಿಗೆ ಎಷ್ಟು ಅವಶ್ಯಕವೆಂಬುದನ್ನು ಹಿಂದೆ ಈ ಪತ್ರಿಕೆಯಲ್ಲೊಂದಾವರ್ತಿ ತಿಳಿಸಿದೇವೆ. ಈ ದೇಶದಲ್ಲಿ ಕ್ರಮವಾಗಿ ನಡೆಯುವ ವಿದ್ಯಾಭ್ಯಾಸವು ಹಿಂದಿನವರ್ಷಗಳಿಗಿಂತಲೂ ೧೯೨೫—೨೬ರಲ್ಲಿ ಹೆಚ್ಚಾಗಿ ಅಭಿವೃದ್ಧಿಯಾಯಿತೆಂಬುದು ಮೇಲೆ ಬರೆದಿರುವ ಸಂಖ್ಯೆಗಳನ್ನು ನೋಡಿದರೆ ಗೊತ್ತಾಗುವುದು.

***

೧೯೨೪—೨೫ ನೇ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತಿದ್ದ ಬಾಲಕರು ವಿದ್ಯಾಭ್ಯಾಸಮಾಡಬಹುದಾಗಿದ್ದವರಲ್ಲಿ ೧೦೦ ಕ್ಕೆ ೨೬-೨೦ ರಂತೆ ಇತ್ತು; ಇದು ೧೯೨೫—೨೬ರಲ್ಲಿ ೧೦೦ಕ್ಕೆ ೨೬-೭೬ ರಂತೆ ಆಯಿತು. ೧೯೨೪-೨೫ ನೇ ವರ್ಷದಲ್ಲಿ ವಿದ್ಯಾಭ್ಯಾಸಮಾಡುತಿದ್ದ ಬಾಲಕಿಯರು ವಿದ್ಯಾಭ್ಯಾಸ ಮಾಡಬಹುದಾಗಿದ್ದವ

ಆಕಾರವನ್ನೂ ಬಲವನ್ನೂ ಹೊಂದಿದ್ದರೂ ಮನುಷ್ಯನಿಗೆ ಅಧೀನವಾಗಿರುತ್ತದೆ ಮನುಷ್ಯನು ಇಂಥಾ ಮಹತ್ತಾದ ಪ್ರಾಣಿಗೆ ಸಂಕಲೆಗಳನ್ನು ಹಾಕಿ ಅಂಕುಶದಿಂದ ಅಧೀನವೊಡಿಕೊಂಡು ತನ್ನಾಜ್ಞೆಗೆ ಒಳಪಡಿಸಿಕೊಳ್ಳುತ್ತಾನೆ. ಇಷ್ಟು ಬಲವಾದ ಪ್ರಾಣಿಯು ವಿನತವಾಗಿ ಬಲವುಳ್ಳ ಮನುಷ್ಯನ ಆಜ್ಞಾನುಸಾರವಾಗಿರುವುದಕ್ಕೆ ಕೆಲವು ಕಾರಣಗಳುಂಟು. ಮನುಷ್ಯನಿಗೆ ಈ ಪ್ರಪಂಚದಲ್ಲಿರತಕ್ಕ ಸಕಲ ಪ್ರಾಣಿಗಳ ಮೆದಳುಗಳಗಿಂತಲೂ ದೊಡ್ಡದಾದ ಮೆದಳುಂಟು. ಇವನ ಬುದ್ಧಿ ಶಕ್ತಿಯು ಇತರ ಪ್ರಾಣಿಗಳ ಬುದ್ಧಿಶಕ್ತಿಗಿಂತಲೂ ಬಹಳ ಹೆಚ್ಚಾಗಿರುವುದು. ಆದ್ದರಿಂದ ಇವನಿಗೆ ಅನೇಕ ಯುಕ್ತಿಗಳು ತೋರುತ್ತವೆ. ಸಕಲ ಪ್ರಾಣಿಗಳಿಗಿಂತಲೂ ಮನುಷ್ಯನು ಮೇಲಾದಸ್ಥಿತಿಯುಲ್ಲಿರುವುದಕ್ಕೆ ಇದೇ ಮುಖ್ಯಕಾರಣವು. ಹೀಗೆಯೇ ಮನುಷ್ಯ ವರ್ಗದಲ್ಲಿ ಒಂದು ದೇಶೀಯರಿಗಿಂತಲೂ ಇನ್ನೊಂದು ದೇಶೀಯರು ಮೇಲಾದ ಸ್ಥಿತಿಯುಲ್ಲಿರುವುದಕ್ಕೆ ಕಾರಣವನ್ನು ಗೊತ್ತುಮಾಡುವುದು ಅವಶ್ಯಕವಾದದ್ದು. ಮನುಷ್ಯಸಾಮಾನ್ಯಕ್ಕೆ ಬುದ್ಧಿ ಶಕ್ತಿಯು ವಿಶೇಷತಾರತಮ್ಯವುಳ್ಳದ್ದಾಗಿರುವುದಿಲ್ಲ. ಆದರೆ ಕೆಲವು ದೇಶೀಯರು ತಮ್ಮ ಬುದ್ಧಿ ಶಕ್ತಿಯನ್ನು ವ್ಯಾಸಂಗಬಲದಿಂದ ವೃದ್ಧಿಪಡಿಸಿಕೊಂಡಿರುವರು. ಅಂಥಾವರು ಸಕಲ ಸಂಪತ್ತುಗಳಿಗೂ ಬುದ್ಧಿ ಶಕ್ತಿಯು ಮುಖ್ಯ ಕಾರವು ಮೂಲಕಾರಣವೆಂದು ನಂಬಿ ಪುರುಷಕಾರೈಕಪರರಾಗಿರುವರು. ಇದರಿಂದಲೇ ಅಂಥಾವರು ಚಕ್ರಾಧಿಪತ್ಯಪದವಿಯನ್ನು ಅನುಭವಿಸುತ್ತಾರೆ. ಬುದ್ಧಿಪ್ರಾಬಲ್ಯಕ್ಕೆ ಬಾಧಕವಾದ ವಿದ್ಯಾಭ್ಯಾಸವನ್ನು ಪೂಡದವರು ಒಂದುವೇಳೆ ವಿದ್ಯಾಭ್ಯಾಸವನ್ನು ಮಾಡಿದಾಗ್ಯೂ ಆ ವಿದ್ಯೆಯನ್ನೂ ಅದರಿಂದ ಚುರುಕಾದ ಬುದ್ಧಿಯನ್ನೂ ಇಹಿಕ ಸಂಪತ್ತುಗಳ ಸಾಪ್ತಿಗೋಸ್ಕರ ವಿನಿಯೋಗಿಸದವರು ಪರಾಧೀನರಾಗುವರು. ಇದರಿಂದಲೇ ವಿದ್ಯಾವಿಹೀನರಾದವರನ್ನು ನಮ್ಮ ಹಿರಿಯರು ಪಶುಗಳಿಗೆ ಸಮಾನರೆಂದು ಹೇಳುತ್ತಿದ್ದರು. ಅದು ಹಾಗಿರಲಿ. ಈಗ ಇಂಡ್ಯಾದೇಶದಲ್ಲಿ ಅಖಂಡಸಾಮ್ರಾಜ್ಯ ಪದವಿಯನ್ನು ಅನುಭವಿಸುತ್ತಿರುವ ಆಂಗ್ಲೇಯರ ಚಕ್ರಾಧಿಪತ್ಯಕ್ಕೆ ಕಾರಣವನ್ನು ವಿಚಾರಮಾಡೋಣ. ಇವರ ದೇಶವಲ್ಲಿ ಹ್ಯಾಗೋಹಾಗೆ ಯೂರೋಪ್‌ಖಂಡದ ಎಲ್ಲಾ ದೇಶಗಳಲ್ಲಿಗಿಂತಲೂ ವಿದ್ಯಾಭ್ಯಾಸದ ಏರ್ಪಾಡು ಅತ್ಯಂತ ಶ್ಲಾಘ್ಯವಾಗಿರುತ್ತದೆ. ಈ ಪಾಶ್ಚಾತ್ಯರಲ್ಲಿ ಯಾವದೇಶದಲ್ಲಿ ಯಾವಶ್ಲಾಘ್ಯವಾದ ಏರ್ಪಾಡು ಆಚರಣೆಯುಲ್ಲಿದೆಯೋ ಅದನ್ನು ಆ ದೇಶೀಯರೆಲ್ಲರೂ ಅವಲಂಬಿಸಿ ಅದರ ಪ್ರಯೋ

ಜನವನ್ನು ಸಮಗ್ರವಾಗಿ ಹೊಂದುವರು. ಇದರಿಂದಲೇ ಈ ಪ್ರಪಂಚದ ಸಕಲ ದೇಶೀಯರಗಿಂತಲೂ ಯೂರೊಪ್‌ಖಂಡದವರು ಅತ್ಯಂತ ಮೇಲಾದಸ್ಥಿತಿಯಲ್ಲಿರುತ್ತಾರೆ. ಈ ಖಂಡದ ಅನೇಕ ವಿದ್ವಾಂಸರು ತಮ್ಮ ದೇಶವನ್ನು ಅತ್ಯಂತ ಉತ್ಕೃಷ್ಟಸ್ಥಿತಿಗೆ ತರಬೇಕೆಂದು ಸಂಕಲ್ಪವೂಡಿ ಯೂವಜ್ಜೀವವೂ ತದೇಕಾಯತ್ತಚಿತ್ತರಾಗಿ ಮಧ್ಯದಲ್ಲಿ ಸಂಬವಿಸತಕ್ಕ ವಿಘ್ನಗಳಿಗೆ ಅಂಜದೆ ತಾವು ಹಿಡಿದ ಕೆಲಸಗಳು ಫಲೋದಯವಾ ಗುವವರಿಗೂ ಕೆಲಸವನ್ನು ಮಾಡುವರು. ಅಥವಾ ಆ ಕಾರ್ಯವನ್ನು ಮಾಡುವುದರಲ್ಲಿ ಪ್ರಾಣವನ್ನಾದರೂ ಒಪ್ಪಿಸುವರು.

ಈರೀತಿ ತಮ್ಮ ದೇಶದ ಉನ್ನತಿಗೋಸ್ಕರ ಸಂಕಲ್ಪವನ್ನು ಮಾಡಿ ಯೂರೊಪ್ ಖಂಡದ ವಿದ್ಯಾಭ್ಯಾಸಕ್ಕೆ ಅನ್ಯಾದೃಶವಾದ ಪ್ರೋತ್ಸಾಹವನ್ನುಂಟುಮಾಡಿ ತಮ್ಮ ಸರ್ವಸ್ವವನ್ನೂ ಸರ್ವಶಕ್ತಿಯಿನ್ನೂ ವಿದ್ಯಾಭಿವೃದ್ಧಿಗೋಸ್ಕರ ವಿನಿಯೋಗಿಸಿದ ಮಹಾ ಪುರುಷರಲ್ಲಿ ಸ್ವಿಟ್‌ಜರ್ಲೆಂಡ್‌ದೇಶೀಯರಾದ ಜಾರ್ಜಹೆನ್ರಿಪೆಸ್ಟಲಾಟ್ಸಿಯವರು ಒಬ್ಬರಾ ಗಿರುತ್ತಾರೆ. ಇವರ ಚರಿತ್ರೆಯನ್ನೂ ಇವರು ಮಾಡಿಸಿದ ವಿದ್ಯಾಭ್ಯಾಸದಕ್ರಮವನ್ನೂ ಪರಿಶೀಲಿಸಿದರೆ ಯೂರೋಪ್‌ಖಂಡವು ಇಷ್ಟು ಉನ್ನತದೆಸೆಯಲ್ಲಿರುವುದು ಏನೂ ಆಶ್ಚ ರ್ಯವೆಲ್ಲವೆಂದು ಗೊತ್ತಾಗುತ್ತದೆ. ಪೆಸ್ಟಲಾಟ್ಸಿಯವರು 1746ನೇ ವರುಷದಲ್ಲಿ ಸ್ವಿಡ್ ಜರ್ಲೆಂಡಿಗೆ ಸೇರಿದ ಜ್ಯೂರಿಕ್ ಪಟ್ಟಣದಲ್ಲಿ ಜನಿಸಿದರು. ಇವರ ತಂದೆಗಳು ವೈದ್ಯರಾ ಗಿದ್ದರು. ಪೆಸ್ಟಲಾಟ್ಸಿಯವರಿಗೆ ೫ ವರುಷದ ವಯಸ್ಸಿನಲ್ಲಿರುವಾಗ ಪಿತೃವಿಯೋಗವುಂ ಟಾಯಿತು. ಆಸ್ತಿಯೂ ವಿಶೇಷವಾಗಿರಲಿಲ್ಲ. ಇವರ ಮಾತೋಶ್ರೀಯವರು ಬಹಳ ಬುದ್ಧಿಶಾಲಿಗಳಾಗಿಯೂ ಗೃಹಕೃತ್ಯಗಳನ್ನು ವಿಶದವಾಗಿ ನಡಸುವುದರಲ್ಲಿ ತಿಳುವಳಿಕೆ ಯುಳ್ಳವರಾಗಿಯೂ ಇದ್ದರು. ಆಕೆಗೆ ಪೆಸ್ಟಲಾಟ್ಸಿಯವರಲ್ಲದೆ ಇನ್ನಿಬ್ಬರು ಗಂಡು ಮಕ್ಕಳಿದ್ದರು. ಈ ನಾಲ್ಕು ಜನಗಳು ಬಹುಕಷ್ಟಪಟ್ಟು ಜೀವನವೂಡುತ್ತಾ ಇ ದ್ದರು. ಒಂದುದಿನ ಪೆಸ್ಟಲಾಟ್ಸಿಯವರಿಗೆ ಇವರ ಮಾತೋಶ್ರೀಯವರು ಒಂದು ಕಾಸನ್ನು ಕೊಟ್ಟರು. ಇವರು ಆ ಕಾಸನ್ನು ತೆಗೆದುಕೊಂಡು ಸವಿೂಪದಲ್ಲಿದ್ದ ಒಂದು ಮಿಠಾಯಿನ ಅಂಗಡಿಗೆ ಹೋಗಿ ಮಿಠಾಯಿಯನ್ನು ಕೊಂಡುಕೊಂಡು ತಿನ್ನಬೇಕೆಂದು ನಿಶ್ಚಯಿಸಿಕೊಂಡರು. ಆ ಅಂಗಡಿಯಲ್ಲಿ ಅನಾಸ್‌ಕಲ್ಬೆಸ್ಸೆಂಬ ಒಬ್ಬ ಹುಡುಗಿಯು ಮಿಠಾ ಯಿಯನ್ನು ಮಾರುವುದಕ್ಕೆ ಕುಳಿತಿದ್ದಳು ಪೆಸ್ಟಲಾಟ್ಸಿಯವರನ್ನು ಬಾಲೆಯು ನೋಡಿ " ಈ ಮಿಠಾಯಿ ಅಂಗಡಿಯು ಉಪಪನ್ನರಾದವರಿಗೆ ಮಿಠಾಯಿ ಮಾರುವುದ

ಕ್ಕೋಸ್ಕರ ಇಡಲ್ಪಟ್ಟಿದೆ. ನೀನು ಉಪಪನ್ನವಾದ ಕುಟುಂಬಕ್ಕೆ ಸೇರಿದವನಲ್ಲ. ಈ ಕಾಸು ಗೃಹಕೃತ್ಯಕ್ಕೆ ಉಪಯೋಗಿಸುವುದು ಒಳ್ಳೇದು. ಈರೀತಿಯಲ್ಲಿ ಆ ಕಾಸನ್ನು ವಿನಿಯೋಗಿಸುವುದು ನಿನ್ನಂಥಾವರಿಗೆ ಯೋಗ್ಯವಲ್ಲ. ಆ ಕಾಸನ್ನು ತೆಗೆದುಕೊಂಡು ಹೋಗಿ ನಿಮ್ಮ ತಾಯಿಯ ವಶಕ್ಕೆ ಕೊಡು'' ಎಂದು ಹೇಳಿದಳು. ಈ ಮಾತು ಪೆಸ್ಟಲಾಟ್ಸಿಯವರಿಗೆ ಯುಕ್ತಿಯುಕ್ತವಾಗಿ ತೋರಿತು. ಆ ದಿವಸದಾರಭ್ಯ ಅನಾಸ್ ಕಲ್ಪೆಸ್‌ರವರಿಗೂ ಇವರಿಗೂ ಮೈತ್ರಿಯು ಉಪಕ್ರಮವಾಯಿತು. ಇದು ವೃದ್ಧಿಯಾಗಿ ಕೆಲವು ವರ್ಷಗಳಲ್ಲೇ ಇವರು ಪರಸ್ಪರಾನುರಕ್ತರಾಗಿ ವಿವಾಹವನ್ನು ಮಾಡಿಕೊಂಡರು.

ಪೆಸ್ಟಲಾಟ್ಸಿಯವರು ಅನುಪಪನ್ನರಾಗಿದ್ದರೆಂದು ಹೇಳಿದೇವಷ್ಟೆ ಇವರಿಗೆ ಪಾಠಶಾಲೆಗೆ ಫೀಜು ಕೊಡುವುದಕ್ಕೂ ಮಾರ್ಗವಿರಲಿಲ್ಲ. ಇವರ ಮಾತೋಶ್ರಿಯವರೇ ಇವರಿಗೆ ವಿದ್ಯೆಯನ್ನು ಹೇಳಿದರು. ಅವರು ಮಾಡಿಸಿದ ವಿದ್ಯಾಭ್ಯಾಸದಿಂದ ಒಂದುವಿಧವಾದ ಪ್ರಯೋಜನವೂ ಮತ್ತೊಂದುವಿಧವಾದ ನಷ್ಟವೂ ಉಂಟಾದವು. ಪೆಸ್ಟಲಾಟ್ಸಿಯವರು ಸದಾ ತಮ್ಮ ಮಾತೋಶ್ರಿಯವರ ಸಹವಾಸದಲ್ಲಿದ್ದುದರಿಂದ ಒಳ್ಳೇ ನಡತೆಯವರಾದರು. ಜನರು ಕೆಟ್ಟ ಸಹವಾಸದಿಂದ ಕಲಿತುಕೊಳ್ಳತಕ್ಕ ಕೆಟ್ಟ ಮಾತುಗಳಲ್ಲಿ ಇವರಿಗೆ ಪ್ರವೇಶವುಂಟಾಗಲಿಲ್ಲ. ತಮ್ಮ ಮಾತೋಶ್ರಿಯವರ ಗುಣಾತಿಶಯಗಳಿಗೆ ಅನುಸಾರವಾಗಿ ಭೂತದಯೆ ಪಶ್ಚಾತ್ತಾಪಾದ ಸದ್ಗುಣಗಳು ಇವರಲ್ಲಿ ನಿಸರ್ಗವಾಗಿ ಪರಿಣಮಿಸಿದವು. ಇವೇ ಇವರಿಗುಂಟಾದ ಪ್ರಯೋಜನಗಳು. ಪಾಠಶಾಲೆಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಸ್ಪರ್ಧೆಯೂ ಆಟಪಾಟಗಳಲ್ಲಿ ಆಸಕ್ತಿಯೂ ಉಂಟಾಗುವುದು. ಇವುಗಳಿಂದ ವಿದ್ಯಾಭಿವೃದ್ಧಿಗೂ ದೇಹಶಕ್ತಿಗೂ ಆರೋಗ್ಯಕ್ಕೂ ಅವಕಾಶವಾಗುವುದು. ಈ ಪ್ರಯೋಜನಗಳು ಇವರಿಗೆ ದೊರೆಯಲಿಲ್ಲ. ಇದಲ್ಲದೆ ಅನೇಕ ವಿದ್ಯಾರ್ಥಿಗಳೊಡನೆ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸಮಾಡತಕ್ಕವರು ಅನೇಕರ ಪರಿಚಯವುಳ್ಳವರಾಗಿ ಚಟುವಟಿಕೆಯನ್ನೂ ಧೈರ್ಯತೆಯನ್ನೂ ಮುಂದಾಳಾಗತಕ್ಕ ಶಕ್ತಿಯನ್ನೂ ಹೊಂದುತ್ತಾರೆ ಈ ಗುಣಾತಿಶಯಗಳು ಯಾವವನ್ನೂ ಪೆಸ್ಟಲಾಟ್ಸಿಯವರು ಹೊಂದುವದಕ್ಕೆ ಅವಕಾಶವಾಗಲಿಲ್ಲ. ಈ ಗುಣಾತಿಶಯಗಳಿಲ್ಲದೇ ಇದಾವ್ಯಾಗ್ಯೂ ಪಾಠಶಾಲೆಗಳಲ್ಲಿ ಅನೇಕರು ಕಲಿಯತಕ್ಕ ಸುಳ್ಳು, ತಟವಟ ಮೋಸ ಮೊದಲಾದ ಅನೇಕ ದುರ್ವಿದ್ಯೆಗಳಿಗೂ

ಇವರು ಬಾಹಿರರಾಗಿದ್ದರು ಇವರ ಹೃದಯವು ಅತ್ಯಂತ ದಯಾರ್ದ್ರವಾದದ್ದು. ಸಂಕಟಪಡುವವರನ್ನು ನೋಡಿ ಸಹಿಸುತ್ತಿರಲಿಲ್ಲ. ಆರ್ತರಾದ ಜನರ ಸಂಕಟಗಳಲ್ಲಿ ಇವರು ವಿಶೇಷ ಭಾಗಿಗಳಾಗಿರುತ್ತಿದ್ದದ್ದರಿಂದ ಇವರನ್ನು ಅನೇಕರು ಹೆಂಗರುಳುಳ್ಳವರೆಂದು ನಿಂದಿಸುತ್ತಿದ್ದರು ಈ ನಿಂದೆಯು ಸ್ತುತಿಸಾಮ್ಯವಾಗಿಯೇ ಇತ್ತು.

ಇವರಿಗೆ ೩ ವರುಷ ಮುಗಿಯುತ್ತಲೇ ಒಂದು ಪಾಠಶಾಲೆಯನ್ನು ಸೇರಿದರು. ಆ ಪಾಠಶಾಲೆಯ ಉಪಾಧ್ಯಾಯರು ಇವರನ್ನು ನೋಡಿ " ಇವನೊಬ್ಬ ವಜ್ರಶುಂಠನಾಗಿ ತೋರುತ್ತಾನೆ " ಎಂದು ಹೇಳುತ್ತಿದ್ದರು. ಇವರ ಸಹಾಧ್ಯಾಯಿಗಳು " ಇವನು ಅದ್ಭುತವಾದ ಬುದ್ಧಿಶಕ್ತಿಯುಳ್ಳವನು " ಎಂದು ಹೇಳುತ್ತಿದ್ದರು ಅನೇಕ ವಿದ್ಯಾರ್ಥಿಗಳು ಇವರ ಬುದ್ಧಿ ಶಕ್ತಿಯನ್ನು ನೋಡಿ ಹೊಟ್ಟೇಕಿಚ್ಚುಪಡುತ್ತಿದ್ದರು. ಇವರ ಮಾತಾಮಹರು ಒಂದುದಿನ ರೋಗಿಗಳಿಂದ ಕೆಲವು ಬಡಜನರಿಗೆ ಅನ್ನಪಾನಗಳನ್ನೂ ಔಷಧಗಳನ್ನೂ ಕೊಡುವುದಕ್ಕೋಸ್ಕರ ಹೋಗುತ್ತಿದ್ದರು.. ಆ ದಿವಸ ಪೆಸ್ಟಲಾಟ್ಸಿಯವರೂ ಅವರ ಜೊತೆಯಲ್ಲಿ ಹೋದರು. ಆ ರೋಗಿಗಳು ಪಡುತ್ತಿದ್ದ ಶ್ರಮವನ್ನೂ ಅವರ ಶ್ರಮ ನಿವಾರಣಾರ್ಥವಾಗಿ ತಮ್ಮ ತಾತಂದಿರು ಮಾಡಿದ ಚಿಕಿತ್ಸಾದಿಗಳನ್ನೂ ಆ ಜನರ ಕೃತಜ್ಞತೆಯನ್ನೂ ನೋಡಿ ಪೆಸ್ಟಲಾಟ್ಸಿಯವರು " ನಮ್ಮ ತಾತಂದಿರೇ ಕೃತಕೃತ್ಯರು. ಇವರ ಮೇಲುಪಜ್ಞೆಯನ್ನು ನಾನೂ ಅನುಸರಿಸಿ ಈ ವಿಧನಾದ ಪರೋಪಕಾರದಿಂದ ಧನ್ಯನಾಗಬೇಕು " ಎಂದು ಯೋಚಿಸಿಕೊಂಡರು. ಇವರಿಗೆ 15 ವರುಷ ವಯಸ್ಸಾಗುವುದರೊಳಗಾಗಿ ತಾವು ಓದುತ್ತಿದ್ದ ಪಾಠಶಾಲೆಯ ಪರೀಕ್ಷೆಗಳನ್ನು ಸಮಗ್ರವಾಗಿ ಕೊಟ್ಟು ಬ್ಯೂರಿಕ್ ಯೂನಿವರ್ಸಿಟಿಗೆ ಸೇರಿದರು. ಆ ಯೂನಿವರ್ಸಿಟಿ ಉಪಾಧ್ಯಾಯರು ಅನ್ಯಾದೃಶವಾದ ಪಾಂಡಿತ್ಯವುಳ್ಳವರಾಗಿದ್ದರು. ಅಲ್ಲಿ ಇವರು ಕೆಲವು ವರುಷ ವಿದ್ಯಾಕಾಲಕ್ಷೇಪವಮಾಡುವುದರೊಳಗಾಗಿ ಇವರ ಬುದ್ಧಿ ಶಕ್ತಿಯು ಅನ್ಯಾದೃಶವಾದದ್ದೆಂದು ಗೊತ್ತಾಗುತ್ತಬಂತು. ಕ್ರಮಕ್ರಮವಾಗಿ ಇವರು ಆ ಯೂನಿವರ್ಸಿಟಿ ವಿದ್ಯಾರ್ಥಿಗಳಲ್ಲೆಲ್ಲಾ ಬಹಳ ಸಮರ್ಥರೆಂಬದಾಗಿಯೂ ವಿಶೇಷ ವೃದ್ಧಿಗೆ ಬರತಕ್ಕವರೆಂಬದಾಗಿಯೂ ಗೊತ್ತಾಗುತ್ತಾಬಂತು. ಆ ಯೂನಿವರ್ಸಿಟಿ ಪಾಠಕರು ಇವರ ಬುದ್ಧಿಯನ್ನು ನೋಡಿ ಅತ್ಯಂತ ವಿಸ್ಮಿತರಾಗುತ್ತಿದ್ದರು.

ಆ ಕಾಲದಲ್ಲಿ ಕೆಲವುಜನ ವಿದ್ವಾಂಸರು ಬ್ಯೂರಿಕ್ ಪಟ್ಟಣದಲ್ಲಿ ಅನೇಕ ಉಪನ್ಯಾಸಗಳನ್ನು ಮಾಡುತ್ತಿದ್ದರು. ಈ ಉಪನ್ಯಾಸಕರಲ್ಲಿ ಕೆಲವರು ದೇಶವು ವೃದ್ಧಿಗೆ

ಬರಬೇಕಾದರೆ ಜನರು ದೇಹಶಕ್ತಿಗೆ ಸಾಧಕವಾದ ಭೋಜನಗಳನ್ನು ಮಾಡುತ್ತ ಅಭಕ್ಷ್ಯಭೋಜನ ಅಪೇಯಪಾನಗಳನ್ನು ಪರಿತ್ಯಾಗಮಾಡುತ್ತ ನಿಗರ್ವಿಗಳಾಗಿಯೂ ಜಿತೇಂದ್ರಿಯರಾಗಿಯೂ ಅರಿಷಡ್ವರ್ಗಗಳಿಗೆ ಅಧೀನರಾಗದವರಾಗಿಯೂ ಯುಕ್ತಾಯುಕ್ತವಿವೇಚನೆಯುಳ್ಳವರಾಗಿಯೂ ಸರ್ವಭೂತಗಳಲ್ಲೂ ದಯೆಯುಳ್ಳವರಾಗಿಯೂ ವಿದ್ಯಾವಿನಯಸಂಪನ್ನರಾಗಿಯೂ ಸ್ವಾತಂತ್ರ್ಯವನ್ನು ಪ್ರಾಣನಿರ್ವಿಶೇಷವಾಗಿ ಪ್ರೀತಿಸತಕ್ಕವರಾಗಿಯೂ ಸತ್ಯಸಂಧರಾಗಿಯೂ ಇರಬೇಕೆಂದು ಉಪನ್ಯಸಿಸುತ್ತಿದ್ದರು. ಈ ಉಪನ್ಯಾಸಗಳನ್ನು ಪೆಸ್ಟಲಾಟ್ಸಿಯವರು ಕೇಳಿ ಅವನ್ನು ಆಚರಿಸುವುದಕ್ಕೆ ಉಪಕ್ರಮಿಸಿದರು. ಆ ಕಾಲದಲ್ಲಿ ಬ್ಯೂರಿಕ್ ಪಟ್ಟಣದಲ್ಲಿ ರಾಜಕೀಯ ವಿಷಯಗಳನ್ನು ಉಪನ್ಯಸಿಸತಕ್ಕ ಅನೇಕ ಸಂಘಗಳಿದ್ದವು. ಈ ಸಂಘಗಳಿಗೆ ಪೆಸ್ಟಲಾಟ್ಸಿಯವರು ಮೆಂಬರುಗಳಾಗಿ ಆಗಾಗ್ಗೆ ಅನೇಕ ಉಪನ್ಯಾಸಗಳನ್ನು ಮಾಡುತ್ತ ಬಂದರು. ಈ ಕಾಲದಲ್ಲಿ ದೇಶಕ್ಕೆ ಉಪಕಾರ ಮಾಡಬೇಕಾದರೆ ದೇಶಕ್ಕೆ ಉಂಟಾಗುತ್ತಲಿರುವ ನ್ಯೂನಾತಿರಕ್ತಗಳನ್ನು ತಿಳಿದುಕೊಳ್ಳುವುದು ಆವಶ್ಯಕವೆಂಬದಾಗಿಯೂ ಅವುಗಳನ್ನು ನಿಸ್ಕೃಷ್ಟವಾಗಿ ತಿಳಿದುಕೊಳ್ಳಬೇಕಾದರೆ ವೈದ್ಯಶಾಸ್ತ್ರವೂ ಧರ್ಮಶಾಸ್ತ್ರಗಳ (ಲಾ ಅಥವಾ ಕಾನೂನುಗಳು) ಜ್ಞಾನವೂ ಆವಶ್ಯಕವೆಂಬದಾಗಿಯೂ ತೋರಿಬಂತು. ಇದಕ್ಕೋಸ್ಕರ ಅನೇಕ ಕಾನೂನುಗಳನ್ನು ವ್ಯಾಸಂಗಮಾಡುವುದರಲ್ಲಿ ಕೆಲವು ವರುಷಗಳನ್ನು ವಿನಿಯೋಗಿಸಿದರು. ಆ ಕಾಲದಲ್ಲಿ ತಮ್ಮ ದೇಶದ ಜನರಿಗೆ ಅನೇಕ ವಿಷಯಗಳಲ್ಲಿದ್ದ ಮೌಢ್ಯವನ್ನು ನೋಡಿ ಈ ಮೌಢ್ಯವನ್ನು ಹೋಗಲಾಡಿಸಿ ಎಲ್ಲರನ್ನೂ ಸಾರಾಸರಜ್ಞರನ್ನಾಗಿ ಮಾಡಬೇಕಾದರೆ ವಿದ್ಯಾಭ್ಯಾಸವೇ ಮುಖ್ಯಕಾರಣವೆಂಬದಾಗಿಯೂ ಬಾಲಕರಿಗೆ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸದ ಏರ್ಪಾಡನ್ನು ಚೆನ್ನಾಗಿ ನಡೆಯುವಂತೆ ಮಾಡಬೇಕೆಂಬದಾಗಿಯೂ ವಯಸ್ಸಾದವರಿಗೆ ವಿದ್ಯಾಭ್ಯಾಸವು ವರ್ತಮಾನಪತ್ರಿಕೆಗಳದ್ವಾರ ಯುಕ್ತಿಯುಗಿ ಮಾಡಿಸಬೇಕೆಂಬದಾಗಿ ಪರ್ಯಾಲೋಚಿಸಿ ಮೆಪೋರಿಯಲ್ ಎಂಬ ಹೆಸರುಳ್ಳ ಒಂದು ಪತ್ರಿಕೆಯನ್ನು ಹೊರಡಿಸಿದರು. ಈ ಪತ್ರಿಕೆಯಲ್ಲಿ ಇವರು ಬರೆದಿರತಕ್ಕ ಕೆಲವು ಅಂಶಗಳು ಇವರ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತವೆ. ಅದೇನೆಂದರೆ—

ಈ ಪ್ರಪಂಚದಲ್ಲಿ ಜನಿಸಿರತಕ್ಕ ಸಕಲಜನರೂ ನಮಗೆ ಸಹೋದರಪ್ರಾಯರು. ಇವರು ಐಶ್ವರ್ಯವಂತರಾಗಲಿ ದರಿದ್ರರಾಗಲಿ ಯಾವಪಂಗಡದವರಾಗಲಿ ಪ್ರಾಮಾಣಿಕರಾಗಿಯೂ ತಮ್ಮ ಸ್ವಶಕ್ತಿಯಿಂದ ಜೀವನವಾಡತಕ್ಕವರಾಗಿಯೂ ಇದ್ದಪಕ್ಷದಲ್ಲಿ

ಎಲ್ಲರೂ ಪುರಸ್ಕರಣೀಯರು. ಧರ್ಮದಿಂದ ಜೀವನವನ್ನು ಸಂಪಾದಿಸಿಕೊಂಡು ಕೈಲಾದ ಮಟ್ಟಿಗೂ ಪರೋಪಕಾರವನ್ನು ಮಾಡುವುದರಲ್ಲಿ ಆಸಕ್ತರಾಗಿರತಕ್ಕ ಜನರೆಲ್ಲರೂ ಕೃತಕೃತ್ಯರು ಇಂಥಾ ಜನರೇ ಈಶ್ವರನ ಪ್ರೀತಿಗೆ ಪಾತ್ರರಾದವರು. ಇಂಥಾ ಜನರು ವಿಶೇಷವಾಗಿರತಕ್ಕ ರಾಜ್ಯವು ಜಗದೀಶ್ವರನ ಪ್ರಸನ್ನತೆಗೆ ಪಾತ್ರವಾಗುವುದು ಸೋಮಾರಿಗಳಾಗಿದ್ದು ದುರಹಂಕಾರಪ್ರತಿನಿವಿಷ್ಟರಾಗಿ ನಾನಾವಿಧ ಮದಗಳಿಂದ ವೈಮನಸ್ಯತೆ ಅವಿಮುಷ್ಯರ್ಗಗಳಿಗೆ ಅಧೀನರಾಗಿ ದೇಶದ ಹಿತವನ್ನು ಪರ್ಯಾಲೋಚಿಸದೆ ಉಚ್ಛೃಂಖಲವಾಗಿ ಪ್ರವರ್ತಿಸತಕ್ಕವರು ಯಾವದೇಶದಲ್ಲಿ ಹೆಚ್ಚುವರೋ ಆ ದೇಶಕ್ಕೆ ಈಶ್ವರನ ಪ್ರಸನ್ನತೆಯು ತಪ್ಪುವುದು. ಆ ದೇಶದಿಂದ ಲಕ್ಷ್ಮಿಯು ತೊಲಗುವಳು.

ಸಕಲ ಗುಣಾತಿಶಯಗಳ ವಸತಿಗೂ ವಿದ್ಯಾಭ್ಯಾಸವು ಕಾರಣಭೂತವಾದದ್ದು. ಯಾವದೇಶದಲ್ಲಿ ನಡೆಯತಕ್ಕ ಸದ್ವಿದ್ಯಾಭ್ಯಾಸದ ಬಲದಿಂದ ಜನರು ಖಾನುನುಗಳ ಕಟ್ಟಲೆಗಳನ್ನುಲ್ಲಂಘಿಸದೆ ಸನ್ಮಾರ್ಗಪ್ರವರ್ತಕರಾಗಿ ನಡೆದುಕೊಳ್ಳುತ್ತ ತಮ್ಮ ಮಕ್ಕಳಿಗೆ ಧರ್ಮನಾದ ಮೇಲುಪಜ್ಞೆಗಳನ್ನು ಹಾಕುತ್ತ ಅವರಿಗೆ ಸತ್ಸಂಗವನ್ನು ಕಲಿಸುತ್ತ ದುರ್ಮಾರ್ಗಕ್ಕೆ ಬೀಳದಂತೆ ನೋಡಿಕೊಳ್ಳುತ್ತ ಇರುವರೋ ಆ ದೇಶವು ಕ್ರಮಕ್ರಮವಾಗಿ ಉತ್ಕೃಷ್ಟದೆಸೆಗೆ ಬರುವುದು ಆ ದೇಶೀಯರು ಸುಲಭವಾಗಿ ಇಹಪರಗಳನ್ನು ಸಾಧಿಸುವರು.

ಎಲ್ಲಾ ದೇಶಗಳಲ್ಲಿಯೂ ಸಾಮಾನ್ಯರಾದ ಜನರು ಮಾರ್ಗದರ್ಶಿಗಳನ್ನು ಅಪೇಕ್ಷಿಸುವರು. ವಿಶೇಷ ವಿದ್ಯಾವಂತರಾಗಿಯೂ ಯುಕ್ತಾಯುಕ್ತವಿವೇಚನವುಳ್ಳವರಾಗಿಯೂ ಇರತಕ್ಕವರು ಈ ಗುಣಾತಿಶಯಗಳಿಲ್ಲದವರಿಗೆ ಮಾರ್ಗದರ್ಶಿಗಳಾಗತಕ್ಕವರು ಯಾರಿಗ ಸಂಪತ್ತು ಬುದ್ಧಿಯು ಹೆಚ್ಚಾಗಿರುತ್ತದೋ ಅವರಿಂದ ಅವುಗಳಿಲ್ಲದವರು ಅವುಗಳನ್ನು ಅಪೇಕ್ಷಿಸುವುದು ಸಹಜವಾಗಿರುವದು. ಹಾಗೆ ಅಪೇಕ್ಷಿಸತಕ್ಕವರಿಗೆ ಉಪಯೋಜನವಾಗುವಂತ ಅವುಗಳನ್ನು ದಾನಮಾಡತಕ್ಕದ್ದು. ಅವುಗಳನ್ನು ಹೊಂದಿರತಕ್ಕವರಿಗೆ ಕರ್ತವ್ಯವಾದದ್ದು. ಧನಕ್ಕೆ ಭೋಗ ದಾನಗಳು ವಿದ್ಯೆಗೆ ದಾನವೂ ಯುಕ್ತವಾದ ವಿನಿಯೋಗಗಳು. ಈರೀತಿಯಲ್ಲಿ ವಿನಿಯೋಗಿಸದೆ ಇರತಕ್ಕ ವಿತ್ತವೂ ವಿದ್ಯೆಯೂ ನಿಷ್ಫಲವಾಗುವುವು. ಆದ್ದರಿಂದ ಧನವಂತರು ತಮ್ಮ ವಿತ್ತಕ್ಕೆ ಸರಿಯಾದ ವಿನಿಯೋಗವನ್ನೂ ವಿದ್ವಾಂಸರು ತಮ್ಮ ವಿದ್ಯೆಗೆ ಸರಿಯಾದ

ಪ್ರಚಾರವನ್ನೂ ಕಲ್ಪಿಸಿ ತಮ್ಮ ದೇಶವನ್ನು ಉದ್ಧರಿಸುವ ಮೂಲಕ ತಾವೂ ಕೃತ ಕೃತ್ಯರಾಗಬೇಕು.

ಈ ಉಭಯತ್ರರೂ ಸೇರಿ ತಮ್ಮ ದೇಶೀಯರೆಲ್ಲರೂ ವಿದ್ಯಾವಂತರಾಗಿಯೂ ಪುರುಷಕಾರದಿಂದ ಬದುಕತಕ್ಕವರಾಗಿಯೂ ಆಗುವಂತೆ ಮಾಡಬೇಕು.

ವಿತರಣೆಯಿಂದ ಸನ್ಮಾನಗಳನ್ನು ಮಾಡುವುದು ಸರ್ಕಾರದವರಿಗೂ ಉನ್ನತ ಸ್ಥಿತಿಯಲ್ಲಿರತಕ್ಕವರೆಲ್ಲರಿಗೂ ಕರ್ತವ್ಯವಾದದ್ದು. ಯಾರು ಸ್ವಶಕ್ತಿಯಿಂದಲೂ ಸ್ವಬುದ್ಧಿಯಿಂದಲೂ ಜೀವಿಸುತ್ತಾರೋ, ಯಾರು ದ್ಯೂತಪಾನಾದಿ ದುರ್ಮಾರ್ಗಗಳಿಗೆ ಬೀಳದೆ ದೇಹಶಕ್ತಿಯಿಂದಲೂ ಬುದ್ಧಿಶಕ್ತಿಯಿಂದಲೂ ಧರ್ಮದಿಂದಾರ್ಜಿಸಿದ ದ್ರವ್ಯವನ್ನು ಧರ್ಮವಾಗಿ ವಿನಿಯೋಗಿಸುವರೋ ಯಾರು ಸ್ವಯಾರ್ಜನೆಯುಳ್ಳವರಾಗಿಯೂ ಮಿತವ್ಯಯಮಾಡತಕ್ಕವರಾಗಿಯೂ ಸ್ವತಂತ್ರರಾಗಿಯೂ ಮೋಸ ಸುಳ್ಳು ತಟವಟಮೊದಲಾದ ದುರ್ಮಾರ್ಗಗಳಲ್ಲಿ ಪರಾಙ್ಮುಖರಾಗಿಯೂ ಇರುತ್ತಾರೋ ಅವರು ನಾಸ್ತವನಾಗಿ ಸಕಲ ಸನ್ಮಾನಗಳಿಗೆ ಅರ್ಹರಾಗಿರುವರು. ಅಂಥಾವರಿಗೆ ಸನ್ಮಾನವನ್ನು ಮಾಡಿದರೆ ಸನ್ಮಾರ್ಗಾವಲಂಬಿಗಳಿಗೆ ಪ್ರೋತ್ಸಾಹವು ಹೆಚ್ಚುವುದು. ಹಾಗಿಲ್ಲದೆ ಅವಿಚಾರವಾಗಿ ಸನ್ಮಾನಗಳನ್ನು ಮಾಡುತ್ತಾ ಬಂದರೆ ಅಂಥಾ ಸನ್ಮಾನಗಳು ದುರ್ಮಾರ್ಗಪ್ರವರ್ತಕರಾಗಿ ವಿದ್ಯಾಬುದ್ಧಿ ಯೋಗ್ಯತೆ ಮೊದಲಾದವುಗಳು ಯಾವುದೂ ಇಲ್ಲದೆ ಇರತಕ್ಕ ಜನರಿಗೆ ಪ್ರೋತ್ಸಾಹಕಾರಿಯಾಗಿ ಪರಿಣಮಿಸಿ ಅನೇಕ ಅನರ್ಥಗಳನ್ನುಂಟುಮಾಡುವುದಲ್ಲದೆ ದೇಶದ ಹೀನಸ್ಥಿತಿಗೂ ಮುಖ್ಯಕಾರಣವಾಗುವುದು.

ನಮ್ಮ ದೇಶವು ಉನ್ನತಸ್ಥಿತಿಗೆ ಬರಬೇಕಾದರೆ ನಮ್ಮ ದೇಶೀಯರೆಲ್ಲರೂ ಈ ದೇಶದ ಚರಿತ್ರೆಯನ್ನು ಇಲ್ಲಿನ ಕಾನೂನುಗಳನ್ನು ಈ ದೇಶವನ್ನು ಉನ್ನತಸ್ಥಿತಿಗೆ ತಂದ ಮಹಾತ್ಮರ ಚರಿತ್ರೆಗಳನ್ನು ಓದಿ ಪರ್ಯಾಲೋಚಿಸಿ ನಮ್ಮ ಪೂರ್ವಿಕರು ಯಾವ ರೀತಿಯಲ್ಲಿ ಕಷ್ಟಪಟ್ಟು ಈ ದೇಶವನ್ನು ಇಂಥಾ ಉನ್ನತಸ್ಥಿತಿಗೆ ತಂದಿದಾರೂ ಅವುಗಳನ್ನೇ ಮೇಲುಪಜ್ಞೆಗಳನ್ನಾಗಿಟ್ಟುಕೊಂಡು ಎಲ್ಲರೂ ದೇಶದ ಅಭಿಮಾನಿಗಳಾಗಿ ಎಲ್ಲರ ಹಿತವೇ ತಮ್ಮ ಹಿತವೆಂದು ಭಾವಿಸಿ ನಡೆಯಬೇಕು.

ಪಠ್ಯಪಟ್ಟಿ.

ಭೂವಿವರಣೆ—ಕಾವೇರೀನದಿ.

ತರಗತಿ III] [ಕಾಲ 50ನಿಮಿಷ

ಉಪಕರಣಗಳು—ದಖ್ಖಿನ್ನಿನ ಭೂಪಟ ; ಹಲಗೆಯಮೇಲೆ ಬರೆದ ಕಾವೇರೀನದಿಯ ಪಟ.

ವಿಷಯ	ಬೋಧನಕ್ರಮ
ಕಾವೇರೀನದಿಯು ದಖ್ಖಿನ್ನಿನ್ನಲ್ಲಿರುವ ನದಿಗಳು ಸಾಮಾನ್ಯವಾಗಿ ಎಲ್ಲವೂ ಪಶ್ಚಿಮದಲ್ಲಿ ಹುಟ್ಟಿ ಪೂರ್ವಕ್ಕೆ ಹರಿಯುವುವು.	ಪ್ರಶ್ನೆಮಾಡಿ ಬಾಲಕರಿಂದ ಹೇಳಿಸುವುದು.
ಕಾವೇರೀನದಿಯು ಪಶ್ಚಿಮಘಟ್ಟದ ದಕ್ಷಿಣಭಾಗದಲ್ಲಿ ಹುಟ್ಟುವುದು ಪಶ್ಚಿಮಘಟ್ಟಕ್ಕೆ ಸಹ್ಯಾದ್ರಿಯೆಂಬ ಹೆಸರೂಉಂಟು	ಇದನ್ನು ಬಾಲಕರಿಂದ ಹೇಳಿಸಿ ಪಶ್ಚಿಮಘಟ್ಟಕ್ಕೆ ಇರುವ ಬೇರೊಂದು ಹೆಸರನ್ನು ತಿಳಿಸಬೇಕು. ಹಲಗೆಯಮೇಲೆ ಬರೆಯಬೇಕು
ಕಾವೇರಿಯು ಹರಿಯುವ ದೇಶಗಳು :- ಕೊಡಗು, ಮೈಸೂರು, ಮದ್ರಾಸ್.	ಭೂಪಟದ ಸಹಾಯದಿಂದ ಹೇಳಿಸುವುದು.
ಕೊಡಗು — ತಲಕಾವೇರಿಯಲ್ಲಿ ಹುಟ್ಟಿ ಪೂರ್ವಕ್ಕೆ ಹರಿದು ಸಿದ್ದಾಪುರದಲ್ಲಿ ಉತ್ತರಕ್ಕೆ ತಿರುಗಿ ಪ್ರೆಸರ್‌ಪೇಟೆಯಲ್ಲಿ ಮೈಸೂರು ದೇಶವನ್ನು ಪ್ರವೇಶಿಸುವುದು.	ಹಲಗೆಯಮೇಲೆ ಬರೆದಿರುವ ಭೂಪಟದ ಸಹಾಯದಿಂದ ಹೇಳಿಸಿ ಊರುಗಳ ಹೆಸರನ್ನು ಅಲ್ಲಿ ಬರೆಸಬೇಕು. ಕಪ್ಪುಹಲಗೆಯಮೇಲೆ ವಿಷಯದಲ್ಲಿ ಕಂಡ ಅಂಶಗಳನ್ನು ಬರೆಯಬೇಕು
ಮೈಸೂರು—ಈ ದೇಶದಲ್ಲಿ ಹಾಸನ ಮತ್ತು ಮೈಸೂರ. ಡಿಸ್ಟ್ರಿಕ್ಟ್‌ಗಳಲ್ಲಿ ಹರಿಯುವುದು. ದಿಕ್ಕು ಆಗ್ನೇಯ.	ಹಲಗೆಯಮೇಲೆ ಬರೆದಿರುವ ಭೂಪಟದ ಸಹಾಯದಿಂದ ಹೇಳಿಸುವುದು.
ಎರಡು ಕಡೆಯಿಂದಲೂ ಉಪನದಿಗಳು ಬಂದು ಸೇರುವುವು ಆದುದರಿಂದ ಮೈಸೂರು ದೇಶದ ದಕ್ಷಿಣಭಾಗದಲ್ಲಿ ಬಿದ್ದ ನೀರೆಲ್ಲ ಕಾವೇರೀನದಿಯನ್ನು ಸೇರುವುದೆಂದು ಹೇಳ	ಭೂಪಟವನ್ನು ತೋರಿಸಿ ಪ್ರಶ್ನೆಮಾಡುವುದರಿಂದ ಹುಡುಗರಿಂದಲೇ ಈ ಅಂಶವನ್ನು ಹೊರಡಿಸಬೇಕು.
ಯಾವುವು ಉಪನದಿಗಳು — ಹೇಮಾವತಿ ಶಿಂಷಾ ಲಕ್ಷ್ಮಣತೀರ್ಥ	ಇವುಗಳನ್ನು ತಿಳಿಸಿ ಬೇರೆ ಬರೆದಿರುವ ಭೂಪಟದಲ್ಲಿ ಹುಡುಗರಿಂದ ಬರೆಸಬೇಕು.

ನದಿಯ ಪಕ್ಕದಲ್ಲಿರುವ ಮುಖ್ಯಪಟ್ಟಣಗಳು-ಎಡತೊರೆ, ಶ್ರೀರಂಗಪಟ್ಟಣ, ತಿರುಮಕೂಡ್ಲು ನರಸೀಪುರ, ತಲಕಾಡು, ಶಿವನಸಮುದ್ರ

ಇವುಗಳಲ್ಲಿ ಶ್ರೀರಂಗಪಟ್ಟಣ ಮತ್ತು ಶಿವನಸಮುದ್ರ ಇವುಗಳು ದ್ವೀಪಗಳು ಆದುದರಿಂದ ರಾಜ್ಯಭಾರ ಮಾಡುವವರಿಗೆ ಮುಖ್ಯ ಪಟ್ಟಣವಾಗಿರುವುದಕ್ಕೆ ತಕ್ಕವುಗಳು.

ಜಲಪ್ರಪಾತಗಳು—ಚುಂಚನಕಟ್ಟೆ (೮೦ ಅಡಿ ಎತ್ತರದಿಂದ) ಶಿವನಸಮುದ್ರ (೩೦೦ ಅಡಿ ಎತ್ತರದಿಂದ)

ಮದ್ರಾಸ್—ಕೊಯಿಮುತ್ತೂರ್, ಶಾಲ್ಯ, ತಿರುಚನಾಪಳ್ಳಿ, ತಂಜಾಊರು ಈ ಡಿಸ್ಟ್ರಿಕ್ಟ್‌ಗಳಲ್ಲಿ ಹರಿಯುವುದು.

ದಿಕ್ಕು ಮೊದಲು ದಕ್ಷಿಣ, ಅನಂತರ ಪೂರ್ವ.

ತಿರುಚನಾಪಳ್ಳಿಯ ಹತ್ತರ ಎರಡಾಗಿ ಒಡೆಯುವುದು. ಎಡಗಡೆಯದಕ್ಕೆ ಕೊಲ್ಲಡಂ ಎಂದು ಹೆಸರು.

ಈ ಎರಡು ಶಾಖೆಗಳ ಮಧ್ಯೆ ಅನೇಕವಾಗಿ ಕಾಲುವೆಗಳಿವೆ. ಆದುದರಿಂದ ಆ ಪ್ರದೇಶ (ತಂಜಾಊರು) ಬಹಳ ಫಲವತ್ತರವಾದುದು.

ಎರಡು ಶಾಖೆಗಳೂ ಬೇರೆಬೇರೆಯಾಗಿಯೇ ಸಮುದ್ರವನ್ನು ಸೇರುವುವು.

ಒಟ್ಟು ನದಿಯ ಉದ್ದ ೪೭೦ಮೈಲಿ

ಉಪಯೋಗ—

ವ್ಯವಸಾಯಕ್ಕೆ ಬಹಳ ಅನುಕೂಲವಾಗಿದೆ. ಅಣೆಕಟ್ಟುಗಳು ಇದಕ್ಕಾಗಿ ಮಾಡಲ್ಪಟ್ಟವೆ.

ತಿಳಿಯದಿದ್ದರೆ ತಿಳಿಸಿ ಇಬ್ಬರು ಮೂವ್ವರಿಂದ ಆವೃತ್ತಿ ಮಾಡಿಸಿ ಮುಂದಟ್ಟು ಮಾಡಿಸುವುದು. ಹಲಗೆಯಮೇಲೆ ಬರೆಯುವುದು

ಬೇರೆ ಬರೆದಿರುವ ಪಠದಲ್ಲಿ ಇದನ್ನು ತೋರಿಸಬೇಕು. ಶತ್ರುಗಳಿಗೆ ಸಿಕ್ಕುವುದು ಕಷ್ಟವೆಂಬುದನ್ನು ಹುಡುಗರಿಂದಲೇ ಪ್ರಶ್ನೆ ಮಾಡಿ ಹೊರಡಿಸಬೇಕು. ಚರಿತ್ರೆಯಲ್ಲಿ ಈ ಊರುಗಳು ಪ್ರಸಿದ್ಧವಾಗಿರುವುದನ್ನು ಜ್ಞಾಪಿಸಬೇಕು.

ಇದನ್ನು ತಿಳಿಸಿ ಹಲಗೆಯಮೇಲೆ ಬರೆಯುವುದು.

ಇದನ್ನು ಭೂಪಠದ ಸಹಾಯದಿಂದ ಹೇಳಿಸುವುದು.

ಅವರಿಂದಲೇ ಹೇಳಿಸುವುದು.

ತಿಳಿಸುವುದು.

ಪ್ರಶ್ನೆ ಮಾಡಿ ಅವರಿಂದಲೇ ಹೇಳಿಸುವುದು.

ಭೂಪಠದ ಸಹಾಯದಿಂದ ಹೇಳಿಸುವುದು.

ತಿಳಿಸಿ ಹಲಗೆಯಮೇಲೆ ಬರೆಯುವುದು.

ಪುನರಾವರ್ತನೆ ಮಾಡಬೇಕು.

ನದಿಗಳಿಂದ ವ್ಯಾಪಾರಕ್ಕೆ ವ್ಯವಸಾಯಕ್ಕೂ ಸಹಾಯವಾಗುವುದೆಂದು ಹೇಳಿಸಿ ಕಲ್ಲು ಇರುವುದರಿಂದ ಜಹಜುಗಳು ಹೋಗಲಾರವೆಂದು ಹೇಳಿಸಿ ಇದನ್ನು ದೃಢಪಡಿಸ

ಬೇಕು. ಹಲಗೆಯ ಸಹಾಯದಿಂದ ಅಣೆಕಟ್ಟಿನ ರಚನೆಯನ್ನು ಸ್ಪಷ್ಟಪಡಿಸಬೇಕು. ಚುಂಚನಕಟ್ಟೆ, ಅಳಲಕಟ್ಟೆ ಎಂಬ ಹೆಸರುಗಳನ್ನು ಜ್ಞಾಪಿಸಬೇಕು. ಪುನರಾವರ್ತನೆ.

ಅಂಕಗಣಿತ.

1. $2\frac{3}{4}, 5\frac{1}{3}, 4\frac{1}{6}, 8\frac{1}{2}$ ಇವುಗಳ ಸರಾಸರಿಯನ್ನು ಕಂಡು ಹಿಡಿಯಿರಿ

ಇಲ್ಲಿ ನಾಲ್ಕು ಸಂಖ್ಯೆಗಳು ಇರುವುದರಿಂದ

ಇವುಗಳ ಸರಾಸರಿ $= \frac{1}{4}\left(2\frac{3}{4} + 5\frac{1}{3} + 4\frac{1}{6} + 8\frac{1}{2}\right)$

$= \frac{1}{4}\left(19 + \frac{9+4+2+6}{12}\right.$

$= \frac{1}{4}\left(19 + 1\frac{9}{12}\right)$

$= \frac{1}{4}\left(20 + \frac{3}{4}\right.$

$= 5\frac{3}{16}$.

2. A ಎಂಬುವನು 100 ಗಜದೂರ ಓಡುವುದರಲ್ಲಿ B ಎಂಬುವನನ್ನು 10ಗಜ ಮುಂದೆ ಬಿಟ್ಟು ಕೊನೆಗೆ ಅವನ ಜೊತೆಯಾಗಬಲ್ಲನು; C ಎಂಬುವನನ್ನು 15 ಗಜ ಮುಂದೆ ಕೊನೆಗೆ ಅವನ ಜೊತೆಯಾಗಬಲ್ಲನು. ಹೀಗಾದರೆ 150 ಗಜದೂರ ಓಡುವಾಗ B ಎಂಬುವನು C ಎಂಬುವನನ್ನು ಎಷ್ಟು ದೂರ ಮುಂದೆ ಬಿಡಬಹುದು?

A 100 ಗಜ ಓಡುವುದರಲ್ಲಿ B 90ಗಜ ಓಡುವನು

A 100 ಗಜ ಓಡುವುದರಲ್ಲಿ C 85ಗಜ ಓಡುವನು

ಅಂದರೆ B 90 ಗಜ ಓಡುವುದರಲ್ಲಿ C 85ಗಜ ಓಡುವನು

$\therefore$ B 10ಗಜ ಓಡುವುದರಲ್ಲಿ C $\frac{85}{9}$ ಗಜ ಓಡುವನು

$\therefore$ B I50 ಗಜ ಓಡುವುದರಲ್ಲಿ C $\frac{85}{9}\times$I5 ಗಜ ಓಡುವನು

$\therefore$ B I50 ಗಜ ಓಡುವುದರಲ್ಲಿ C I4I$\frac{2}{3}$ ಗಜ ಓಡುವನು

ಅಂದರೆ B ಯು I50ಗಜ ದೂರ ಓಡುವುದರಲ್ಲಿ C ಯನ್ನು $8\frac{1}{3}$ ಗಜನೂರ ಮುಂದೆ ಬಿಡಬಹುದು.

3. ಟನ್ನಿಗೆ 20ಷಿ 6ಪೆ ನಂತೆ ಬೆಲೆ ಇರುವ ಕಲ್ಲಿದ್ದಲಿನ 30 ಟನ್ನನ್ನು, 24ಷಿ ನಂತಿರುವ ಕಲ್ಲಿದ್ದಲಿನ $22\frac{1}{2}$ಟನ್ನಿನ ಜೊತೆಗೆ ಸೇರಿಸಿದರೆ ಹಾಗೆ ಸೇರಿಸಿದ ಲಿನ ಟನ್ನು Iಕ್ಕೆ ಬೆಲೆ ಯೇನು ?

ಟನ್ನಿಗೆ 20ಷಿ 6ಪೆ ನ ಪ್ರಕಾರ 30ಟನ್ನಿಗೆ ಬೆಲೆ

$= 30\times$I$\frac{1}{40}$ಪೌನುಗಳು

= ಪೌ 30–I5ಷಿ.

ಟನ್ನಿಗೆ 24ಷಿ ಪ್ರಕಾರ $22\frac{1}{2}$ ಟನ್ನಿಗೆ ಬೆಲೆ

$= 22\frac{1}{2}\times$I$\frac{1}{5}$ಪೌನುಗಳ

= ಪೌ 27.

$\therefore$ ಒಟ್ಟು $52\frac{1}{2}$ ಟನ್ನಿನ ಬೆಲೆ= ಪೌ 57–I5

$\therefore$ ಒಟ್ಟನಲ್ಲಿ I ಟನ್ನಿನಬೆಲೆ= ಪೌ $\frac{57\frac{3}{4}}{52\frac{1}{2}}$

$= $ ಪೌ$\frac{231}{2I0} = $ಪೌ$\frac{11}{I0}$= ಪೌ I–2ಷಿ

5. ಗ್ಯಾಲನ್ನಿಗೆ 32ಷಿ, 24ಷಿ ಹೀಗೆ ಬೆಲೆಯುಳ್ಳ ಎರಡು ದ್ರವಪದಾರ್ಥಗಳನ್ನು ಬೆರಸಿದೆ. ಬೆರಕೆಯಾದಮೇಲೆ ಗ್ಯಾಲನ್ನಿಗೆ 27ಷಿ 6ಪೆ ಬೆಲೆಯಾದರೆ ಆ ಯಾರಡೂದ್ರವ ಪದಾರ್ಥಗಳನ್ನು ಯಾವ ಪ್ರಮಾಣದಲ್ಲಿ ಬೆರೆಸಿರಬೇಕು?

ಮೊದಲನೇ ವಿಧವಾದ ದ್ರವಪದಾರ್ಥದ ಬೆಲೆಯು ಗ್ಯಾಲನ್ನು ಒಂದಕ್ಕೆ ಮಿಶ್ರದ ಗ್ಯಾಲನ್ನಿನ ಬೆಲೆಗಿಂತ $4\frac{1}{2}$ಷಿ ಹೆಚ್ಚು. ; ಎರಡನೇದರ ಬೆಲೆ ಗ್ಯಾಲನ್ನೊಂದಕ್ಕೆ ಮಿಶ್ರದ್ದಕ್ಕಿಂತ $2\frac{1}{2}$ ಷಿ ಕಡಮೆ.

ಆದುದರಿಂದ ಬರಕೆಯಲ್ಲಿರುವ ಮೊದಲನೇ ದ್ರವಪದಾರ್ಥದಿಂದುಂಟಾದ ನಷ್ಟವು ಎರಡನೇದರಿಂದ ಕೂಡಿಬರುವಂತೆ ಬೆರಸಬೇಕಾಯಿತು.

ಮೊದಲನೇದು Iಗ್ಯಾಲನ್ನಿದ್ದರೆ $4\frac{1}{2}$ಷಿ ನಷ್ಟವಾಗುವುದು. ಇದು ಕೂಡಿ

ಬರಬೇಕಾದರೆ $\frac{1\frac{1}{2}}{\frac{3}{4}}$ ಗ್ಯಾಲನ್ ಎರಡನೇ ದ್ರವಪದಾರ್ಥವಿರಬೇಕು.

ಆಂದರೆ ಮೊದಲನೇದು 1 ಆದರೆ ಎರಡನೇದು $\frac{9}{7}$-ಆಥವಾ ಮೊದಲನೇದ. 7 ಆದರೆ ಎರಡನೇದು 9.

∴ ಪ್ರಮಾಣ 7 : 9.

ಗದ್ಯವಿಮರ್ಶೆ—೦೦ರನೇ ಪುಟದ ಶೇಷ

ಇತ್ತಲಾ ಮದನಸುಂದರನು ಪತ್ನಿಯನ್ನು ತಿರಸ್ಕರಿಸಿದ್ದಕ್ಕೆ ಪಶ್ಚಾತಪ್ತನಾಗಿ ಮಗಳ ಮನೆಗೆ ಬಂದು ರಹಸ್ಯನಾಗಿ ಮಗಳನ್ನು ಕರಸಿ ತನ್ನ ಪತ್ನಿಯ ವಿಚಾರವನ್ನು ಕೇಳುತ್ತಿರಲು, ಮದನಮಂಜರಿಯ ಅತ್ಯೆಯಾದ ಗುಣಭೂಷೆಯು ಇದೆಲ್ಲಾನೋಡಿ ನನ್ನ ಸೊಸೆಯು ಎಂದೂ ಇಲ್ಲದೆ ಇಂದು ಪರಪುರುಷನೊಡನೆ ಮಾತನಾಡುತ್ತಿರುವಳು, ಏನು ಗತಿ ಎಂದು ಯೋಚಿಸುತ್ತ, ಮಗನಿಗೆ ಈ ವೃತ್ತಾಂತವನ್ನು ಸೂಚಿಸಿ ತಾನು ಚಿತ್ರವಲ್ಲರಿಯೊಡನೆ ತೀರ್ಥಯಾತ್ರೆಗೆ ಹೋಗಲು, ಸೌಂದರ್ಯರತ್ನಾಕರನಿಗೆ ಸಂದೇಹದಿಂದ ಪತ್ನಿಯಮೇಲೆ ಕೋಪಿಸಿಕೊಂಡು ಆರ್ಯವೃತ್ತನೊಡನೆ ಬೇಟೆಗೆ ಹೋಗಿ ಬಹಳ ಹೊತ್ತಾದರೂ ತನ್ನ ಪತಿಯು ಬರದೆ ಇರುವದನ್ನು ನೋಡಿ, ಇವನು ಕೋಪದಿಂದ ಹೊರಟುಹೋಗಿರುತ್ತಾನಾದ್ದರಿಂದ ನಾನೇ ಹೋಗಿ ಸಮಾಧಾನ ಮಾಡಿ ಕರೆದುಕೊಂಡು ಬರುವೆನೆಂದು ಕಾಡಿಗೆಹೋಗಿ ಎಲ್ಲೂ ಪತಿಯನ್ನು ಕಾಣದೆ ಅಲ್ಲಲ್ಲಿ ಅಲೆದಲೆದು ಬಳಲಿ ಬಳಲಿ ಸೊಕ್ಕಿಸೊರಗಾಗಿ ಕಾಮರೂಪನಗರದಲ್ಲಿ ತನ್ನ ಗಂಡನ ಸ್ನೇಹಿತನಾದ ಮಿತ್ರಮಣಿಯ ಮನೆಯನ್ನು ಸೇರಿದಳು.

ಸೌಂದರ್ಯರತ್ನಾಕರನು ಮಧ್ಯಾಹ್ನದವರೆಗೂ ಆರ್ಯವೃತ್ತನೊಡನೆ ಕಾಡೆಲ್ಲಾ ಸುತ್ತಿ ಬಳಲಿ ನಾನು ಅನ್ಯಾಯವಾಗಿ ಮದನಮಂಜರಿಯಮೇಲೆ ಕೋಪಿಸಿಕೊಂಡು ಬಂದೆ, ಅವಳು ಎಷ್ಟು ಸಂಕಟಪಡುವಳೊ, ಎಂದು ದೀನಮನಸ್ಕನಾಗಿ ಊರಿಗೆ ಬಂದು ಮನೆಯಲ್ಲಿ ಪತ್ನಿಯನ್ನು ಕಾಣದೆ ಹುಡುಕುವದಕ್ಕಾಗಿ ತಾನೂ ಹೊರಟುಹೋದನು. ಅಷ್ಟರಲ್ಲಿ ತೀರ್ಥಯಾತ್ರೆಗೆ ಹೋಗಿದ್ದ ಗುಣಭೂಷೆ, ಚಿತ್ರವಲ್ಲರಿ ಊರಿಗೆ ಬಂದು ಸೌಂದರ್ಯರತ್ನಾಕರನನ್ನೂ ಗರ್ಭಿಣಿಯಾಗಿದ್ದ ಮದನಮಂಜರಿಯನ್ನೂ ಕಾಣ

ದೆ ಮರುಗುತ್ತಿದ್ದರು ಅದರಲ್ಲಿ ಧೈರ್ಯವಂತೆಯಾದ ಚಿತ್ರವಲ್ಲರಿಯು ಗುಣಭೂಷೆಯನ್ನು ಸಮಾಧಾನಗೊಳಿಸಿ, "ಇನ್ನು ಸ್ವಲ್ಪ ದಿವಸಕ್ಕೆ ಚಿತ್ರವಲ್ಲರಿಗೆ ಲಗ್ನಬೆಳೆಯುವದು. ಆ ಕಾಲಕ್ಕೆ ಸೌಂದರ್ಯರತ್ನಾಕರನು ಅವಶ್ಯಕವಾಗಿ ಬರಬೇಕು, ಇಲ್ಲದಿದ್ದರೆ ಲಗ್ನವು ನಿಂತುಹೋಗುವುದು" ಎಂದು ಊರೂರಲ್ಲಿ ಸಾರಿಸಬೇಕೆಂದು ರಾಜಾಸ್ಥಾನಕ್ಕೆ ಹೇಳಿ ಕಳುಹಿಸಿದಳು. ಅದೇಪ್ರಕಾರ ಅವರು ಸಾರಿಸಿದರು. ಸೌಂದರ್ಯರತ್ನಾಕರನೂ ಬಂದು ಸೇರಿದನು. ಚಿತ್ರವಲ್ಲರಿಯು ಮದನಮಂಜರಿ ಯೆಲ್ಲಿಂದು ಕೇಳಲು, ಕಾಮರೂಪನಗರದಲ್ಲಿದಾಳೆಂದು ಕೇಳಿ ಅಲ್ಲಿ ಹುಡುಕುತ್ತಿರುವಾಗ ನಿನ್ನ ಸಮಾಚಾರ ಕೇಳಿ ಇಲ್ಲಿಗೆ ಹೊರಟುಬಂದೆನು, ಎಂದು ಹೇಳಿ ಮೂರ್ಛಿತನಾದ ಅವನನ್ನು ಸಮಾಧಾನಗೊಳಿಸಿ ಅವನೊಡನೆ ಕಾಮರೂಪನಗರಕ್ಕೆ ಬಂದಳು. ಅಲ್ಲಿ ಮಿತ್ರಮಂಜರಿಯು ಮನೆಯಲ್ಲಿದ್ದ ಮದನಮಂಜರಿಯನ್ನೂ ಅವಳ ಪುತ್ರನಾದ ಬಾಲಚಂದ್ರನನ್ನೂ ಕಂಡು ಸಂತೋಷದಿಂದ ಅಲ್ಲಿ ಕೆಲವು ದಿವಸ ವಾಸವಾಗಿದ್ದು ಸೌಂದರ್ಯರತ್ನಾಕರನು ಮಿತ್ರಮಣಿಯನ್ನು ಸಪರಿವಾರವಾಗಿ ತನ್ನೂರಿಗೆ ಕರೆತಂದು ತನಗೆ ಮಾಡಿದ ಉಪಕಾರಕ್ಕೆ ಬದಲಾಗಿ ಚಿತ್ರವಲ್ಲರಿಯನ್ನು ಕೊಟ್ಟು ಮಿತ್ರಮಣಿಗೆ ಮದುವೆಮಾಡಿಸಲು ಎಲ್ಲರೂ ಸುಖದಿಂದಿದ್ದರು.

ಅತಿಚಾತುರ್ಯವಿಲ್ಲದ ಹುಡುಗನು

ಒಬ್ಬ ಹುಡುಗನು ವೆಂಕಟೇಶ ಉಪಾಧ್ಯಾಯನ ಕೈಗೆ ಈ ಕೆಳಗೆ ಕಾಣುವ ಕಾಗದವನ್ನು ಒಂದುದಿವಸ ತಂದುಕೊಟ್ಟನು :—

ಮು॥ ರಾ॥ ವೆಂಕಟೇಶ ಉಪಾಧ್ಯಾಯರ ಸ॥ ಕ್ಕೆ

ಈ ಕಾಗದವನ್ನು ತಮಗೆ ತಂದು ಒಪ್ಪಿಸುವ ಹುಡುಗನು ನನ್ನ ಮಗನಾದ ಸುಬ್ಬಣ್ಣ; ಸರ್ವವಿದಿತವಾದ ತಮ್ಮ ನೈಪುಣ್ಯದಿಂದಲೂ ಪರಾಂಬರಿಕೆಯಿಂದಲೂ ಇವನನ್ನು ಮುಂದಕ್ಕೆ ತರಬೇಕೆಂದು ಬೇಡುತ್ತೇನೆ. ಇದುವರೆಗೆ ಅವನಿಗೆ ಬೋಧಕರಾಗಿದ್ದವರಲ್ಲಿ ಯಾರಿಗೂ ಈ ಕೆಲಸವು ಸಾಧ್ಯವಾಗಲಿಲ್ಲ. ಈಗ ಹುಡುಗನಿಗೆ ಹನ್ನೊಂದು ವರ್ಷಗಳು ತುಂಬಿದವು, ಆದರೂ ಕನ್ನಡವನ್ನು ಸ್ವಲ್ಪಮಟ್ಟಿಗೆ ಓದುವದು ಹೊರತು ಇನ್ನೇನು ಬರುವದಿಲ್ಲ, ಓದುವದರಲ್ಲಿಯೂ ತಡೆಯಿಲ್ಲದೆ ಸರಾಗವಾಗಿ ಓದಲಾರ. ಅವನಿಗೆ ಏಳು

ವರ್ಷಗಳು ತುಂಬುತ್ತಲೆ ನಮ್ಮ ಮನೆಬಳಿಯಲ್ಲಿದ್ದ ಮೆಥಕ್ಕೆ ಕಳುಹಿಸಿಕೊಟ್ಟೆ ; ಆದರೆ ಸ್ವಲ್ಪ ದಿವಸಗಳಲ್ಲಿಯೇ ಅಲ್ಲಿನ ಉಪಾಧ್ಯಾಯರು ಭಾಷೆಗಳನ್ನೂ ಕಲಿಯುವದಕ್ಕೆ ನಮ್ಮ ಹುಡುಗನಿಗೆ ಬುದ್ಧಿವಿಕಾಸಸಾಲದೆಂದು ಹೇಳಿದರು. ಅನಂತರ ಬರವಣಿಗೆಯನ್ನು ಬರೆಯುವದಕ್ಕೆ ಪ್ರಾರಂಭಿಸಿದ ; ಆದರೆ ಪ್ರಾರಂಭದಲ್ಲಿಯೇ ವಕ್ರವಾಗಿ ಪ್ರಾರಂಭಿದ್ದರಿಂದ ಅವನಿಗೆ ಏನೂ ಪ್ರಯೋಜನವಾಗಲಿಲ್ಲ. ಆಮೇಲೆ ಅಂಗಡಿಲೆಕ್ಕವನ್ನು ಬರೆಯುವದು ಕಲಿತುಕೊಳ್ಳುವದಕ್ಕೆ ಪ್ರಾರಂಭಿಸಿದ ; ಅದರಲ್ಲಿಯೂ ಏನುಸಾಗಲಿಲ್ಲ. ಜ್ಞಾನಾಪಕಶಕ್ತಿ ಚೆನ್ನಾಗಿಲ್ಲದೆ ಇದ್ದುದರಿಂದ ಭೂಗೋಳಶಾಸ್ತ್ರವು ಮನಸ್ಸಿಗೆ ಹತ್ತಲಿಲ್ಲ. ಮುಖ್ಯವಾಗಿ ಹುಡುಗನಿಗೆ ಯಾವದರಲ್ಲಿಯೂ ಪ್ರವೇಶಕ್ಕವಕಾಶವಿರುವಂತೆ ತೋರುವದಿಲ್ಲ. ಅಥವಾ ಅವಕಾಶವಿರುವದು ಇಂಥಾದ್ದೆಂದು ಇನ್ನೂ ವ್ಯಕ್ತಪಟ್ಟಿಲ್ಲ. ಈ ಸಂದರ್ಭದಲ್ಲಿ ತಮ್ಮ ಅನುಭವದಲ್ಲಿ ನಂಬಿಕೆಯಿಟ್ಟು ಹುಡುಗನು ಯಾವದಕ್ಕೆ ಅರ್ಹನೆಂಬುವದನ್ನು ಕಂಡುಹಿಡಿದು ಅವನಿಗೆ ಅದಕ್ಕೆ ಅನುಸಾರವಾಗಿ ಬೋಧನೆಮಾಡುವ ಕೆಲಸವನ್ನು ತಮಗೆ ಒಪ್ಪಿಸಿದೇನೆ. ಹುಡುಗನ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಶೀಘ್ರವಾಗಿ ನನಗೆ ತಿಳಿಸಬೇಕೆಂದು ಬೇಡುತ್ತೇನೆ.

ತಮ್ಮ ವಿಧೇಯನಾದ, ರಾಮಣ್ಣ.

ವೆಂಕಟೇಶ ಉಪಾಧ್ಯಾಯರು ಈ ಕಾಗದವನ್ನು ಓದಿಕೊಂಡು ತಲೆತೂಗುತ್ತ ಇತರ ಉಪಾಧ್ಯಾಯರ ಕಡೆ ನೋಡಿ—ಒಳ್ಳೆ ಹುಡುಗನನ್ನು ನಮ್ಮ ಬಳಿಗೆ ಕಳುಹಿಸಿದಾರೆ ; ಯಾವದನ್ನು ಕಲಿಯಲಿಕ್ಕೂ ಬುದ್ಧಿಯಿಲ್ಲದ ಹುಡುಗನಂತೆ, ಪ್ರಾಯಶಃ ಹುಡುಗರು ವಿಷಯವನ್ನು ಪರಿಚಯಮಾಡಿಕೊಳ್ಳುವದಕ್ಕೆ ಮುಂಚೆಯೇ ಅದರಲ್ಲಿ ಬುದ್ಧಿವಿಕಾಸವನ್ನು ತೋರಿಸಬೇಕೆಂದು ನಮ್ಮ ರಾಮಣ್ಣ ಹೇಳುತ್ತಾನೆ. ಹೀಗೆ ಹೇಳುವವನು ಅವನು ಒಬ್ಬನೇಯಲ್ಲ; ಸಾಮಾನ್ಯವಾಗಿ ಈ ತಪ್ಪನ್ನು ಇತರರೂ ಮಾಡುತ್ತಾರೆ. ಪ್ರಾಜ್ಞರಾದರೂ ಇರಲಿ ಹುಡುಗನು ಸ್ಪೋಡುವಕ್ಕೆ ಯಾವರೀತಿಯಲ್ಲಿದಾನೋ ತಿಳಿದುಕೊಳ್ಳೋಣ. ಅವನು ಇನ್ನೇನಲ್ಲದಿದ್ದರೂ ಮನುಷ್ಯನೆಂದಾದರೂ ಹೇಳಬಹುದೋ ಇಲ್ಲವೋ!

ಅನಂತರ ಉಪಾಧ್ಯಾಯನು ಹುಡುಗನನ್ನು ಒಳಗೆ ಕರಸಿದನು. ಅವನು ಪುಸ್ತಕವನ್ನು ಬಿಚ್ಚಿಸಿಕೊಂಡು ಜೋಲುಮುಖವಾಡಿಕೊಂಡು ಹೊಡೆಯುತ್ತಾರೆಂದು ಹೆದರುತ್ತಾ ಉಪಾಧ್ಯಾಯನ ಸನ್ನಿಧಿಗೆ ಹೋದನು.

'ಇಲ್ಲಿ ಬಾರಯ್ಯ; ನನ್ನ ಸವಿಾಪದಲ್ಲಿ ನಿಂತುಕೊ, ಹೆದರಿಕೊಳ್ಳಬೇಡ. ಯಾರೂ ನಿನ್ನನ್ನು ಹೊಡೆಯುವದಿಲ್ಲ. ನಿನ್ನ ವಯಸ್ಸು ಎಷ್ಟು ಹೇಳು' ಎಂದು ಉಪಾಧ್ಯಾಯನು ಎಂದನು.

ಹು—ಕಳೆದ ಶ್ರಾವಣಕ್ಕ ನನಗ ಹಸ್ನೊಂದು ತುಂಬಿತು, ಸ್ವಾಮಿ

ಉ—ನಿನ್ನ ವಯಸ್ಸಿಗೆ ಚೆನ್ನಾಗಿ ಬೆಳೆದಿದ್ದಿ. ನಿನಗೆ ಆಟವಾಡುವದಕ್ಕೆ ಇಷ್ಟವಷ್ಟೆ.

ಹು—ಇಷ್ಟವೇ, ಸ್ವಾಮಿ.

ಉ—ಯಾವ ಆಟದಲ್ಲಿ ನಿನಗೆ ಇಷ್ಟ. ಗೋಲಿಯಾಡುವದರಲ್ಲಿ ನೀನು ಘಟಕನೋ?

ಹು—ಸುಮಾರಾಗಿ ಆಡುತ್ತೇನೆ.

ಉ—ಬುಗುರಿಯನ್ನು ಆಡಿಸುವದಕ್ಕೂ ಚಿಣ್ಣಿಯನ್ನು ಚಿಮ್ಮುವದಕ್ಕೂ ಬರುತ್ತೋ?

ಹುಡುಗ—ಬರುತ್ತೆ.

ಉ—ಹಾಗಾದರೆ, ನಿನ್ನ ಕೈಗಳನ್ನು ಬರಳುಗಳನ್ನು ಧಾರಾಳವಾಗಿ ಉಪಯೋಗಿಸಲು ನಿನಗೆ ಶಕ್ತಿಯಿದೆ

ಹುಡುಗ—ಇದೆ.

ಉ—ಬರೆಯುವದಕ್ಕೆ ಬರುತ್ತೇನಯ್ಯ, ಹೇಳು.

ಹು—ಸ್ವಲ್ಪ ಕಲಿತುಕೊಂಡಿದ್ದೆ, ಆದರೆ ಈಜೆಗೆ ಬಿಟ್ಟುಬಿಟ್ಟೆ.

ಉ—ಯಾತಕ್ಕೆ ಬಿಟ್ಟೆ.

ಹು—ಅಕ್ಷರಗಳನ್ನು ಬರೆಯುವದಕ್ಕೆ ನನಗೆ ಬರಲಿಲ್ಲ,

ಉ—ಬರಲಿಲ್ಲವೇ, ಅದೇನು ಆಶ್ಚರ್ಯವಾಗಿದೆ, ನಿನ್ನಹಾಗಿರುವ ಇತರ ಹುಡುಗರು ಹ್ಯಾಗೆ ಬರೆಯುವದನ್ನು ಕಲಿತುಕೊಳ್ಳುತ್ತಾರೆ. ಹೇಳು. ಗಿರುವದಕ್ಕಿಂತ ಹೆಚ್ಚಾಗಿ ಬೆರಳುಗಳು ಇವೆಯೋ.

ಹುಡುಗ—ಇಲ್ಲ

ಉ—ಗೋಲಿ ಹಿಡಿದುಕೊಳ್ಳುವದಕ್ಕೆ ಬರುತ್ತೆಂದು ಹೇಳುತ್ತಿ. ಹಾಗ ಲೇಖಣಿಯನ್ನು ಹಿಡಿದುಕೊಳ್ಳುವದಕ್ಕೆ ಬರುವದಿಲ್ಲವೋ?

ಈ ಮಾತನ್ನು ಕೇಳಿ ಹುಡುಗನು ಪರೀಕ್ಷೆ ಮುಗಿದುದಕ್ಕೆ ಸಂತೋಷಪಟ್ಟು ಕೊಂಡು, ಸ್ವಶಕ್ತಿಯಲ್ಲಿ ಮೊದಲಗಿಂತ ಹೆಚ್ಚಾಗಿ ಧೈರ್ಯವನ್ನು ತಂದುಕೊಂಡು ಹೊರಟುಹೋದನು.

ಮಾರನೇದಿವಸ ಕ್ರಮವಾಗಿ ಪಾಠವನ್ನು ಪಕ್ರಮಿಸಿದನು. ಇವನಿಗಿಂತ ಚಿಕ್ಕವನಾದ ಒಬ್ಬ ಹುಡುಗನನ್ನು ಉಪಾಧ್ಯಾಯನು ಕರೆದು ಮಾನೆಯನ್ನು ಹಾಕಿಸಿ ಕೊಟ್ಟನು : ವ್ಯಾಕರಣ ಪಾಠವನ್ನು ಕೇಳುವದಕ್ಕೆ ಇನ್ನೊಬ್ಬ ಹುಡುಗನನ್ನು ನಿಯಮಿಸಿದನು. ಚೆನ್ನಾಗಿ ತಿಳಿಯುತಿದ್ದ ಕೆಲವು ವಾಕ್ಯಗಳನ್ನು ನೀತಿಚಿಂತಾಮಣಿಯಿಂದ ಉಪಾಧ್ಯಾಯನ ಎದುರಿಗೆ ಹುಡುಗನು ತಡೆಯಿಲ್ಲದೆ ಓದಿದನು. ಈಪ್ರಕಾರ ಅವಸರವಿಲ್ಲದೆ ಕ್ರಮವಾಗಿ ಪಾಠವನ್ನು ಓದುತ್ತ ಬಂದುದರಿಂದ ಕೆಲವುದಿನಗಳಲ್ಲಿ ಅಭಿವೃದ್ಧಿಯು ಚೆನ್ನಾಗಿ ತೋರಿತು, ಅಕ್ಷರಗಳನ್ನು ಕೂಡಿಸಿ ಓದುವುದು, ವಿಭಕ್ತಿಪ್ರತ್ಯಯಗಳನ್ನು ಹೇಳುವದು, ಗುಣಾಕಾರ ಮಾಡುವದು, ಇವುಗಳನ್ನೆಲ್ಲ ಸ್ವಲ್ಪದಿವಸಗಳಲ್ಲಿ ಹುಡುಗನು ಕಲಿತನು. ಇಷ್ಟು ಅಭಿವೃದ್ಧಿಯು ತೋರಿದಮೇಲೆ ಉಪಾಧ್ಯಾಯನು ಹುಡುಗನ ತಂದೆಗೆ ಈ ಕೆಳಗೆ ಬರೆದಿರುವ ಕಾಗದವನ್ನು ಬರೆದು ತಳುಹಿಸಿರುವನು.

(ಮೈಸೂರು) ಹೇವಿಳಂಬಿ ಸಂ॥ ಶ್ರಾವಣ ಪದ ಬ॥ ೧೧.

ಮು॥ ರಾ॥ ರಾಮಣ್ಣನವರ ಸ॥ ಕ್ಕೆ. ವೆಂಕಟೇಶ ಉಪಾಧ್ಯಾಯನು ಮಾಡುವ ನಮಸ್ಕಾರಗಳು. ಈವರಿಗೆ ಸರ್ವರೂ ಕ್ಷೇಮ. ಸಾಂ—ನಿಮ್ಮ ಮಗನ ಏಷ್ಟು ಯದಲ್ಲಿ ವಿದ್ಯಾಭಿವೃದ್ಧಿಯು ಎಷ್ಟರಮಟ್ಟಿಗೆ ಆಗಿದೆಯೋ ಅದನು ತಿಳಿಸುವದಕ್ಕೆ ಈ ಕಾಲವಾಗಿದೆ. ಇದಕೆ, ಮುಂಚೆಯೇ ನನ್ನ ಲೇಖನವನು ತಾವು ಎದರು ನೋಡುತ್ತಿರಬಹುದು, ಆದರೆ ದುಡುಕು ಅಭಿಪ್ರಾಯಗಳನ್ನು ತಿಳಿಸಕೂಡದೆಂದು ಇದುವರೆಗು ಬರೆಯದೆ ಸುಮ್ಮನಿದ್ದೆನು. ನೀವು ನನಗೆ ಬರೆದ ಕಾಗದದಲ್ಲಿ ನಿಮ್ಮ ಹುಡುಗನ ಬುದ್ಧಿಯು ಯಾವ ಮಾರ್ಗದಲ್ಲಿ ಪ್ರವರ್ತಿಸುವದೋ ಅದು ಇನ್ನು ವ್ಯಕ್ತಪಡಲಿಲ್ಲವೆಂದು ಬರೆದಿದ್ದರಿಂದ ಬುದ್ಧಿಪ್ರವರ್ತನೆಯಂದರೆ ನನಿಗೆ ಚೆನ್ನಾಗಿ ಅರ್ಥವು ಗೊತ್ತಾಗಲಿಲ್ಲ ಆದರೆ ಉಪದೇಶವನ್ನು ಹೊಂದಲೆಯೂ ಶ್ರಮವನ್ನು ಪಡಯದೆಯೂ ಬುದ್ಧಿಯು ಸ್ವಸಾಮರ್ಥ್ಯದಿಂದಲೇ ಕಾರ್ಯಸಾಧನೆಯನ್ನು ಮಾಡುವ ಶಕ್ತಿಯಂದು ಹೇಳಿದರ ಇಂಥ ಬಿದು ತವಾದ ಶಕ್ತಿಯು ನಿಮ್ಮ ಮಗನಲ್ಲಿಲ್ಲವೆಂದು ಸ್ಪಷ್ಟವಾಗಿ ನಾನು ಹೇಳಬಹುದು ಇದುವರೆಗೆ ನನ ಜೀವಮಾನದಲ್ಲಿ ಇಂಥ ಶಕ್ತಿಯುಳ್ಳವರು ಮೂರು ನಾಲ್ಕು

ಹುಡುಗರ ಮೇಲೆ ನಾನು ನೋಡಲಿಲ್ಲ. ಆದರೆ ಉಪದೇಶಬಲದಿಂದ ಸಾಮಾನ್ಯವಾಗಿ ಜನರು ಒದಗಿದ ಕೆಲಸಗಳನ್ನು ಸರಿಯಾಗಿ ಮಾಡುವ ಶಕ್ತಿಯು ನಿಮ್ಮ ಮಗನಲ್ಲಿದಯೋ ಇಲ್ಲವೇ ಯೆಂದು ಕೇಳಿದರೆ, ಅವನಲ್ಲಿ ಅಂಥ ನ್ಯೂನತ್ವವು ಕಾಣಬರುವುದಿಲ್ಲ. ಮುಂದಕ್ಕೆ ನಿಮ್ಮ ಹುಡುಗನ ಕಸಬು ವ್ಯಾಪಾರವಾಗಲಿ, ಕೈಗಾರಿಕೆಯಾಗಲಿ, ಯಾವುದಾದರು ಕ್ರಮೇಣ ತಕ್ಕಮಟ್ಟಿಗೆ ಯೋಗ್ಯತೆಯನ್ನು ಪಡೆಯುವುದರಲ್ಲಿ ಸಂಶಯವಿಲ್ಲವೆಂದು ನನಗೆ ತೋರುತ್ತೆ. ಅವೆರೆಪ್ಪವೆಂದು ಎಣಿಸುವ ವಸ್ತುಗಳನ್ನೆಲ್ಲ ಅನುಗುಣವಾದ ಪ್ರಯಾಸದಿಂದ ಪಡೆಯಬಹುದೆಂದು ಯಾವಾಗಲೂ ನನಗೆ ಇಷ್ಟವಾಗಿರುವ ನೀತಿವಾಕ್ಯಗಳಲ್ಲೊಂದಾಗಿದೆ. ನಿಮ್ಮ ಮಗನು ಪರಪ್ರೇರಣೆಯಿಲ್ಲದ ಯಾವ ದಾರಿಯನ್ನು ತಾನಾಗಿಯೇ ಹಿಡಿಯುವನೋ ಅದನ್ನು ಕಂಡುಹಿಡಿಯುವ ನಿಷ್ಫಲಪ್ರಯತ್ನದಲ್ಲಿ ವ್ಯರ್ಥವಾಗಿ ಬಹುಕಾಲ ಕಳೆದುಹೋಗಿಬಿಟ್ಟಿತು. ಹುಡುಗರಿಗೆ ಬಿಟ್ಟಬಿಟ್ಟರೆ ಚಂಡು ಬುಗುರಿಹೊರತು ಮತ್ತೇನನ್ನು ಅವರು ಅಪೇಕ್ಷಿಸುವದಿಲ್ಲ. ನಿಮ್ಮ ಹುಡುಗನು ನನ್ನ ಪರಾಂಬರಿಕೆಯಲ್ಲಿರುವವರಿಗೂ ಇನ್ನು ಮುಂದೆಯೂ ಹಿಂದಿನಂತೆ ಕಾಲಹರಣವಾಗದಂತೆ ನಾನು ನೋಡಿಕೊಳ್ಳುತ್ತೇನೆ ಮತ್ತು ಅವನು ಯಾವ ವಿಷಯಗಳನ್ನು ಗ್ರಹಿಸಲು ಶಕ್ತನಾಗಿರುವನೋ ಅಂಥವುಗಳನ್ನೇ ಪ್ರಾರಂಭಿಸಿ ಕ್ರಮೇಣ ವಿದ್ಯಾಭಿವೃದ್ಧಿಯನ್ನು ಮಾಡಿಸುತ್ತೇನೆ. ಮುಂದೆ ನಿಮ್ಮ ಹುಡುಗನು ಯೋಗ್ಯತೆಯನ್ನು ಪಡೆಯದೆ ಇರೆಲಾರನು.

ಇಂತಿ ನಮಸ್ಕಾರ.

ರಾಮಣ್ಣನಿಗೆ ಈ ಕಾಗದದಿಂದ ತನ್ನ ಮಗನು ಅದರಲ್ಲಿ ಹೇಳಿದಂತೆ ಮುಂದಕ್ಕೆ ಬರುತ್ತಾನೆಂದು ಭರವಸೆ ಹುಟ್ಟದೆಯಿದ್ದರೂ ವೆಂಕಟೇಶ ಉಪಾಧ್ಯಾಯರಂಥ ಶ್ರದ್ಧೆಯಾಗಿ ಬೋಧಿಸುವವರು ಮತ್ತೆಯಾರು ಇಲ್ಲದಿದ್ದರಿಂದ ಹುಡುಗನನ್ನು ಅವರ ಬಳಿಯಲ್ಲಿಯೇ ವ್ಯಾಸಂಗಕ್ಕಾಗಿ ಕೆಲವು ವರ್ಷಗಳವರೆಗೆ ಬಿಟ್ಟನು. ಎರಡು ಮೂರು ವರ್ಷಗಳಲ್ಲಿ ಹುಡುಗನು ಚೆನ್ನಾಗಿ ವ್ಯಾಸಂಗಮಾಡಿ ವಿದ್ಯಾಭಿವೃದ್ಧಿಯನ್ನು ಪಡೆದದ್ದನ್ನು ನೋಡಿ ರಾಮಣ್ಣನಿಗೆ ಆಶ್ಚರ್ಯವೂ ಸಂತೋಷವೂ ಉಂಟಾಯಿತು. ವಿದ್ಯಾವ್ಯಾಸಂಗವು ಮುಗಿದನಂತರ ಹುಡುಗನು ಸ್ವತಂತ್ರವಾಗಿ ವ್ಯಾಪಾರ ಮಾಡುವಂತೆ ತಂದೆಯು ಏರ್ಪಾಡು ಮಾಡಿದನು. ಅಧಿಕವಾದ ಚಾತುರ್ಯವಿಲ್ಲದಿದ್ದರೂ ಕೃಷ್ಣನು ವ್ಯಾಪಾರದಲ್ಲಿ ನಷ್ಟಪಡದೆ ಬಹಳ ಹಣವನ್ನು ಸಂಪಾದಿಸಿ ಬಡವನಿಗೆ ಸಹಾಯಮಾಡುತ್ತ ಸುಖವಾಗಿದ್ದನು.

ಹರಿಶ್ಚಂದ್ರ ಚರಿತ್ರೆ.

ಮು॥ ರಾ॥ ಎಂ. ವೆಂಕಟಕೃಷ್ಣಯ್ಯನವರು ಬರೆದಿರುವ ಹರಿಶ್ಚಂದ್ರ ಚರಿತ್ರೆಯೆಂಬ ಗ್ರಂಥದಲ್ಲಿ ಇಕ್ಷ್ವಾಕುವಂಶೋತ್ಪನ್ನನಾದ ಚಕ್ರವರ್ತಿ ಹರಿಶ್ಚಂದ್ರಮಹಾರಾಜನು ತಾನು ಆಡಿದ ಮಾತಿನಂತೆ ವಿಶ್ವಾಮಿತ್ರಮಹರ್ಷಿಗೆ ತನ್ನರಾಜ್ಯವೆನ್ನೆಲ್ಲಾ ಕೊಟ್ಟು ಅವರಿಗೆ ಕೊಡುವಂತೆ ಹೇಳಿದ್ದ ಹಣಕ್ಕಾಗಿ ಪತ್ನೀ ಪುತ್ರರನ್ನೂ ಮಾರಿ ಕೊನೆಗೆ ತಾನೂ ಚಂಡಾಲನಿಗೆ ದಾಸನಾಗಿ ಅವರ ಹಣವನ್ನೆಲ್ಲಾ ಕೊಟ್ಟು ಆ ಚಂಡಾಲ ದಾಸ್ಯದಲ್ಲಿ ತನ್ನ ಮಗನು ಸತ್ತುಬಿದ್ದಿರುವದನ್ನು ಕಣ್ಣಾರ ನೋಡುತ್ತಿರುವಾಗಲೇ ತನ್ನ ಕೈಯಾರ ತನ್ನ ಪಟ್ಟಮಹಿಷಿಯು ಕೊರಳಿಗೂ ಕತ್ತಿ ಹೂಡಬೇಕಾದ ಸಂದರ್ಭವಿದ್ದರೂ ಹಿಂತೆಗೆಯದೆ ತನಗೊಡೆಯನಾದ ಚಂಡಾಲನ ಆಜ್ಞೆಯಂತೆಯೇ ನಡೆದದ್ದರಿಂದ ಇಂದ್ರಾದಿಗಳಿಂದಲೂ ಮೆಚ್ಚಿಸಿಕೊಂಡು ಮೊದಲಿಗಿಂತಲೂ ಅತಿಶಯವಾಗಿ ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗಿ ಅನನ್ಯಸಾಧಾರಣವಾದ ಸತ್ಯಸಂಧನೆಂಬ ಕೀರ್ತಿಯನ್ನು ಪಡೆದು ಶವು ಗೊತ್ತಾಗುವದಲ್ಲದೆ, ಸಮಾಧರೂ ಒಂದುವಿಧದಿಂದ ಹರಿಶ್ಚಂದ್ರನಿಗೆ ಸತ್ಯಭ್ರಂಶವನ್ನುಂಟುಮಾಡಬೇಕೆಂದು ಕಲ್ಲುಮನಸ್ಸಿನಿಂದ ವಿಶ್ವಾಮಿತ್ರನು ಉಂಟುಮಾಡಿರತೊಂದರೆಯಲ್ಲಿಯೂ, ಈ ವಿಶ್ವಾಮಿತ್ರನ ಶಿಷ್ಯನು ನಕ್ಷತ್ರಿಕನೆಂಬಾತನು ಬೆನ್ನುಹತ್ತಿ ಬಂದು ಕಾಡುವಕಾಟ ಮತ್ತು ಆಗಾಗ್ಯದಲ್ಲಿಯೂ ಮಹಾಮಹಾ ಕಷ್ಟಕ್ಕೆ ಗುರಿಯಾದ ತನ್ನ ಪತಿಯನ್ನು ಶಾಂತಚಿತ್ತದಿಂದ ಅನುಸರಿಸಿಕೊಂಡು ಕೊನೆಗೆ ಪತಿಗಾಗಿ ಪರರಿಗೆ ದಾಸಿಯೂ ಆದ ಹರಿಶ್ಚಂದ್ರಮಹಾರಾಜನ ಪಟ್ಟಮಹಿಷಿ ಚಂದ್ರಮತಿದೇವಿಯ ಪಾತಿವ್ರತ್ಯಪ್ರಭಾವವು ವಿದಿತವಾಗುವದು ಲಸ್ಯಕೃತಭಾಷೆಯಲ್ಲಿರತಕ್ಕ ಹರಿಶ್ಚಂದ್ರೋಪಾಖ್ಯಾನದಮೇಲೆ ಹುಟ್ಟಿದಂತೆ ಕಾಣುವ ಈ ಗ್ರಂಥದಲ್ಲಿ ಹರಿಶ್ಚಂದ್ರ ಮೊದಲಾದವರಿಗೆ ಮೇಲೆ ಮೇಲುಂಟಾದ ಕ್ಲೇಶಗಳನ್ನು ಕೇಳತಕ್ಕವರಿಗೆ ಮನಸ್ಸಿನಲ್ಲಿ ಮಾರುಕವುಂಟಾಗಬಹುದಲ್ಲದೆ ಕೊನೆಯವರಿವಿಗೂ ಓದಿದಲ್ಲಿ ಸತ್ಯವಾದಿಗಳಾಗಿರಬೇಕೆಂದು ಮನಸ್ಸುಂಟಾಗದಿರಲಾರದು. ಈ ಗ್ರಂಥದಲ್ಲಿ ಶಬ್ದವನ್ನುಚ್ಚರಿಸಲು ಮನಸ್ಸಿಗೆ ಸಂಕೋಚವನ್ನುಂಟುಮಾಡುವ ಮಾತುಗಳಲ್ಲದೆ ಪದಬಂಧವು ಲಲಿತವಾಗಿರುವದರಿಂದ ಬಾಲಕಜನಕ್ಕೂ ಬಾಲಿಕಾ ಜನಕ್ಕೂ ಓದಲು ಅರ್ಹವಾಗಿರುವದು. ಬಾಲಕರಿಗೆ ಅರ್ಥವು ಗೊತ್ತಾಗದಕಡೆ ಸಣ್ಣ ಸಣ್ಣ ಅಕ್ಷರದಲ್ಲಿ ಪ್ರಕೃತೋಚಿತವಾದಮ್ಟ ಅರ್ಥವು ಕೊಟ್ಟಿರು

ಪದು ಈ ಗ್ರಂಥದಲ್ಲಿ ಅಲ್ಲಲ್ಲಿ ಕಾಣಿಬರುವ ಕೆಲವು ಅಚ್ಚಿನ ತಪ್ಪುಗಳನ್ನು ಗ್ರಂಥ ಕರ್ತರು ಮುಂದೆ ಸರಿಮಾಡಿಕೊಳ್ಳುವರೆಂದು ನಂಬಿರುತ್ತೇನೆ.

ದೇಶಭಾಷೆ.

1. ದೇಶಭಾಷಾವ್ಯವಸಾಯದ ಅಗತ್ಯವನ್ನೂ ಅದರ ಪ್ರಯೋಜನವನ್ನೂ ಎಲ್ಲರೂ ಒಪ್ಪುವರು. ಈ ಕಾರ್ಯಭಾಗವನ್ನು ತೀರಿಸುವುದು ಹೇಗೆ? ಈ ವಿಷಯವನ್ನು ಸಮರ್ಪಕವಾಗಿ ಇದುವರಿಗೆ ಯಾರೂ ಆಲೋಚಿಸಿ ಆ ಕಾರ್ಯಕ್ಕೆ ಪ್ರವರ್ತಿಸಿದಂತೆ ನನಗೆ ಕಾಣಲಿಲ್ಲ. ಪಂಪ, ನಾಗಚಂದ್ರ, ನಾಗವರ್ಮ, ರನ್ನ ಹೊನ್ನರೇ ಮೊದಲಾದ ಉದ್ದಾಮಕವಿಗಳು ಅನೇಕ ಕಾವ್ಯಗಳನ್ನು ಬರೆದಿದ್ದರೂ ಅಲ್ಲಿ ಇಲ್ಲಿ ನುಸುಳುಗಾಡಿಯಲ್ಲಿ ಬೆಳಕು ತೂರಿಬಂದಂತೆ ಒಂದೆರಡು ವಚನಗ್ರಂಥಗಳು ನಮ್ಮ ಕಣ್ಣಿಗೆ ಬಿದ್ದರೂ ಆಂಗ್ಲೇಯ ಭಾಷಾಪರಿಚಯದಿಂದ ಪ್ರಫುಲ್ಲಿತಾಂತಃಕರಣರಾದ ನಮ್ಮ ದೇಶೀಯರಿಗೆ ಆ ಕಾವ್ಯಗಳೆ ಆಗಲಿ, ವಚನಗ್ರಂಥಗಳೆ ಆಗಲಿ ತೃಪ್ತಿಯನ್ನು ಕೊಡಲಾರವು. ನಮ್ಮ ದೇಶೆಯಲ್ಲಯೇ ಹೀಗಾದಮೇಲೆ ಪುರೋವೃದ್ಧಿಯಲ್ಲಿ ಹತ್ತೈಸಿಗಳಾಗಿ ಯತ್ನಿಸುವ ನಮ್ಮ ದೇಶೀಯರ ವಂಶದವರಿಗೆ ಅವು ಅಸಮ್ಮತಿಯನ್ನು ಹುಟ್ಟಿಸಬಹುದೆಂಬುವುದರಲ್ಲಿ ಸಂಶಯವಿಲ್ಲ.

2. ಮೇಲೆ ಹೇಳಿದ ಕವಿಗಳ ಕಾವ್ಯಗಳಿಂದ ಈಗಿನವರಿಗಾಗಲಿ ಮುಂದಿನವರಿಗಾಗಲಿ ಪ್ರಯೋಜನವಿಲ್ಲವೆಂದು ಭಾವಿಸಕೂಡದು. ಆ ಕವಿತಾ ಗಾಂಭೀರ್ಯ ಮಾಧುರ್ಯಗಳೂ ವಾಗರ್ಥವೂ ಅತ್ಯಮೋಘವಾದವುಗಳು. ಪ್ರಸಿದ್ಧರಾದವರ ಕಾವ್ಯ ಮಾರ್ಗವನ್ನು ಬಿಟ್ಟು ಬೇರ ವಿಧವಾಗಿ ನಮ್ಮ ಭಾಷೆಯನ್ನು ಅಭಿವೃದ್ಧಿಗೆ ತರಬಹುದೆಂಬ ಭಾವವು ಚಿತ್ರವನ್ನು ಬರದು ಆ ಚಿತ್ರಕ್ಕೆ ಪ್ರಾಣಿಕ್ಷಲಯನ್ನು ತುಂಬಿ ಅದನ್ನು ಮಾತನಾಡಿಸುವೆನೆಂಬ ಮರುಳಿನ ಮಾತಿಗೆ ಸಮನಾಗಿರುವುದು. ಅದನ್ನು ಮೊದಲೆ ನಮ್ಮ ಮನಸ್ಸಿನಿಂದ ನಿವರ್ತಿಸಬೇಕು. ಪ್ರಸಿದ್ಧರಾದ ಮಹಾಕವಿಗಳ ಮಾರ್ಗವನ್ನು ಚೆನ್ನಾಗಿ ತಿಳಿಯುವಂತೆ ಬಯಲಿಗೆ ತಂದರೆ ಆ ಮಾರ್ಗದ ಮೂಲಕವಾಗಿ ಮುಂದಲವಾರ್ಗದ ವಿಧಾನವು ತಾನಾಗಿಯೇ ಸ್ಫುಟಕ್ಕೆ ಬರುವುದು. ಆದುದರಿಂದ ಪುರಾತನರ ಮಾರ್ಗದಲ್ಲಿ ಈಗಿನವರಿಗೆ ಅನುಚಿತವಂತಲೂ, ಅನಾವಶ್ಯಕವಂತಲೂ ಕಾಣುವವುಗಳನ್ನು ಬಿಟ್ಟು ಅದರಲ್ಲಿ ಅವಶ್ಯಕವಾದವುಗಳಿಲ್ಲದಿದ್ದರೆ ಅಂಥಾವುಗಳನ್ನು ಆ ಮಾರ್ಗ

ಕ್ಕೆ ಅನುಕೂಲವಾಗಿಯೂ ಸಹಜವಾಗಿಯೂ ಇರುವಂತೆ ಕಲ್ಪಿಸಿ ಬೇಕಾದವುಗಳಾಗಿರುವವು. ಕಾಲದೇಶ ರೀತಿಗಳಿಂದ ಕ್ಷೀಣಗತಿಗೆ ಇಳಿಯದೆ ಅಂದಿಗೆ ತಕ್ಕಂತೆ ಉತ್ತಮ ರೀತಿಯಲ್ಲಡುವದು ನಮ್ಮ ಈಗಿನ ವಿದ್ಯಾವಂತರ ಕರ್ತವ್ಯಕಾರ್ಯವಾಗಿರುವದು. ಈ ಕಾರ್ಯವು ಒಬ್ಬಿಬ್ಬರಿಂದ ಸಾಧ್ಯವಲ್ಲ. ಪೂರ್ವದಲ್ಲಿ ಕೆಲವರು ಭಾಷಾಭಿಮಾನಿಗಳಾದ ಮಹಾರಾಜರನ್ನು ಆಶ್ರಯಿಸಿ ಭಾಷೆಗೆ ಪ್ರಾಶಸ್ತ್ಯವನ್ನು ತರುವುದಕ್ಕೆ ಪ್ರಯತ್ನಪಟ್ಟಂತೆ ಈಗಲೂ ನಾವು ಆ ಮಾರ್ಗವನ್ನು ಹಿಡಿದು ನೋಡುವುದು ನಿಷ್ಪ್ರಯೋಜನವು. ಕಾಲರೀತಿಯು ಭಿನ್ನಿಸಿಹೋಗಿರುವುದರಿಂದ ನಡವಳಿಕೆಯೂ ಕಾಲಕ್ಕೆ ತಕ್ಕಂತೆ ಭಿನ್ನಿಸಿಯೇ ತೀರಬೇಕು.

3. ಪಾಶ್ಚಾತ್ಯರ ಅನುಪಮೋನ್ನತಿಯನ್ನು ಮನಸ್ಸಿಗೆ ತಗದುಕೊಂಡಂ ಅವರು ಯಾವಕಾರ್ಯದಲ್ಲಿ ಉದ್ಯಮರಾದರೂ ಕಾರ್ಯಕ್ಕೆ ತಕ್ಕ ಸಂಘಗಳನ್ನೇರ್ಪಡಿಸಿಕೊಂಡು ಯುಕ್ತಾಯುಕ್ತ ವಿಚಾರಪರರಾಗಿ ವ್ಯವಸಾಯ ಮಾಡುವುದು ಅವರ ಚರಿತ್ರೆಯನ್ನು ಓದುವ ಎಲ್ಲರ ದೃಕ್ಪಥಕ್ಕೂ ಬೀಳದೆ ಹೋಗಲಾರದು. ಉನ್ನತಿಯನ್ನು ಬಯಸುವರು ಯಾರೇ ಆಗಲಿ ಈ ಮಾರ್ಗವನ್ನು ಹಿಡಿದು ಹೋಗುವುದು ಸುಖವೆಂತಲೂ, ಸೌಭ್ಯಂತಲೂ, ಫಲಪ್ರದವೆಂತಲೂ ನಂಬಬಹುದು.

4. ನಮ್ಮ ಕರ್ತವ್ಯಕಾರ್ಯವು ಈ ಮೂರು ಮಾರ್ಗದಿಂದ ಸಿದ್ಧಿಸಬೇಕು.

i ದೇಶದ ಸಾಖ್ಯೋನ್ನತಿಗಳನ್ನು ಮನಸ್ಕರಿಸಿ ಕಂಕಣಬದ್ಧರಾಗಿರುವ ಸರ್ಕಾರವು.

ii. ಸರ್ಕಾರದ ಸಹಾಯದೊಡನೆ ಆಗಲಿ ಅಥವಾ ಸಹಾಯವಿಲ್ಲದ ಆಗಲಿ ದೇಶೋನ್ನತಿಯಲ್ಲಿ ಕುತೂಹಲವುಳ್ಳವರಾಗಿ ಸೇರಿ, ಜನರು ಮಾಡಿಕೊಂಡಿರುವ ಸಂಘಗಳು.

iii ದೇಶಾಭಿಮಾನಿಗಳಾಗಿ ಫಲಾಭಿಸಂಧಿಗೆ ಗಮನವಿಡದೆ ಕೇವಲ ಸ್ವಾರಮೌರ್ಧಿಕವಾಗಿ ವರ್ತಿಸುವ ವಿದ್ವಜ್ಜನರೂ, ಶ್ರೀಮಂತರಾದ ರಾಜಸಂಬಂಧಿಗಳೂ, ಐಶ್ವರ್ಯವಂತರೂ

5. ಮೇಲೆ ಹೇಳಿದಂಥಾ ಸಂಘಗಳು ನಮ್ಮ ದೇಶದಲ್ಲಿ ಇನ್ನೂ ಹುಟ್ಟದೆಹೋಗಿದ್ದರೂ ಅಂಥಾ ಸಂಘಗಳಿಗೆ ಹೇತುವಾಗುವ ಅನೇಕ ಸೀಳುದಾರಿಗಳು ಈಗ ಮುಖವಾಗುತ್ತಿರುವುವು. ನಮ್ಮ ಸರ್ಕಾರದವರು ನಮ್ಮ ದೇಶದಲ್ಲಿ ಬಾಲಕರ ಪ್ರಥಮವಿದ್ಯಾಭ್ಯಾ

ಸಕ್ಕೆ ತಕ್ಕ ಶಿಕ್ಷಕರನ್ನು ಒದಗಿಸುವುದು ಮೊದಲಕಾರ್ಯವೆಂದು ನಾರ್ಮಲ್‌ಸ್ಕೂಲಗಳನ್ನು ಸ್ಥಾಪಿಸಿದ್ದಾರೆ. ಇವುಗಳಲ್ಲಿ ಇನ್ನೂ ಅತ್ಯುಪಯೋಗಕರವಾದ ತಿದ್ದುಪಾಟುಗಳು ಆಗಬೇಕಾಗಿದ್ದರೂ ಸರಕಾರದವರ ಈ ಕಾರ್ಯವು ಜನಗಳ ಜ್ಞಾನಾಭಿವೃದ್ಧಿಗೆ ಇದ್ದದ್ದರಲ್ಲಿ ಸಾಕಷ್ಟಾಯ್ತಕರವಾಗಿದೆ ದೇಶಭಾಷೋನ್ನತಿಗೆ ಮಾರ್ಗವಾಗಬಹುದೆಂದು ಸ್ಪಷ್ಟವಾಗಿ ತಿಳಿದುಬಂದ ಎಲ್ಲಾ ಕಾರ್ಯಗಳಿಗೂ ಮಹಾರಾಜಾ ಸರಕಾರದವರು ಸಹಾಯ ಮೊಡಿದ್ದಾರೆ ಸ್ತ್ರೀವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಡುಗಳು ಪ್ರಾರಂಭವಾಗಿವೆ. ವಿದೇಶೀಯರಾದ ಮಿಷನೇರಿಗಳು ವಿದ್ಯಾಕಾರ್ಯಗಳಿಗೆ ಸಹಾಯಮೊಡುತ್ತಾ ಇದ್ದಾರೆ. ಕೈಗಾರಿಕೆಯು ವಿದ್ಯೆಯನ್ನು ಪ್ರಚುರಪಡಿಸಲು ಸ್ಕೂಲುಗಳನ್ನು ಸ್ಥಾಪಿಸಿ ವೇತನವನ್ನು ಕೊಟ್ಟು ವಿದ್ಯಾರ್ಥಿಗಳನ್ನು ಆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಪಡಿಸುತ್ತಾ ಇದ್ದಾರೆ. ಇಷ್ಟಲ್ಲವೆ ಪರರಾಜ್ಯಗಳಿಗೆ ಹೋಗಿ ಈಗ ಪ್ರಚಾರಗಲ್ಲಿರುವ ಪಾಶ್ಚಾತ್ಯರ ಉತ್ಕೃಷ್ಟ ಶಾಸ್ತ್ರಾಭ್ಯಾಸವನ್ನು ಮಾಡುವುದಕ್ಕೆ ಜನರನ್ನು ಪ್ರೋತ್ಸಾಹಿಸುತ್ತಿರುವರು. ಇಂಥಾ ಧರ್ಮಬುದ್ಧಿಯುಳ್ಳ ಸರಕಾರದವರ ಇವೆಮೊದಲಾದ ಕಾರ್ಯಗಳನ್ನು ಇಲ್ಲಿ ಹೇಳುವುದರಿಂದ ಅವರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಇನ್ನು ಮಾಡತಕ್ಕ ಕಾರ್ಯಗಳಿಲ್ಲವೆಂತಾಗಲಿ, ಅಥವಾ ಇಷ್ಟು ಮಾಡಿರುವ ಸರಕಾರದವರನ್ನು ದೇಶಭಾಷಾಸಂಸ್ಕರಣಕ್ಕಾಗಿ ಮತ್ತೆ ಯಾವುದಾದರೊಂದು ಕೆಲಸವನ್ನು ಮಾಡಿಯೆಂದು ನಾವು ಪ್ರಾರ್ಥಿಸುವುದು ಅನ್ಯಾಯವೆಂತಲಾಗಲಿ ತಿಳಿಯಬಾರದು. ವಿದ್ಯಾಭ್ಯಾಸದ ಇಲಾಖೆಯ ಸಾಮರ್ಥ್ಯವನ್ನು ಇನ್ನೂ ಹೆಚ್ಚಿಸುವುದಕ್ಕೆ ಸರಕಾರಕ್ಕೆ ಶಕ್ತಿಯುಂಟು. ಅಲ್ಲದೆ ಅವರು ಮಾಡಿಯೇತೀರಬೇಕಾದ ಕಾರ್ಯಗಳೂ ಎಷ್ಟೊ ಇವೆ. ಮಹಾರಾಜಾ ಸರಕಾರದವರು ದೇಶೀಯರ ವಿದ್ಯಾಭ್ಯಾಸದ ವಿಷಯದಲ್ಲಿ ಇದುವರೆಗೆ ಧರ್ಮಕ್ಕೂ ಒದಗಿದ ಕಾರ್ಯಕ್ಕೂ ಹಿಂಜರಿಯದೆ ತಮ್ಮ ಕರ್ತವ್ಯವನ್ನು ಮಾಡಿದ್ದಾರೆ. ಈಗಲೂ ದೇಶಭಾಷಾ ಸಂಸ್ಕರಣಾಭಿವೃದ್ಧಿಗಳಿಗೆ ಉಪಯುಕ್ತವಾದ ಮಾರ್ಗವನ್ನು ನಿಶ್ಚಯಿಸಿ ಕಾಲೋಚಿತವಾದ ಸಹಾಯ ಮಾಡಬೇಕೆಂದರೆ ಮಹಾರಾಜಾ ಸರಕಾರದವರು ನಮ್ಮನ್ನು ನಿಜವಾಗಿಯೂ ತಿರಸ್ಕರಿಸಲಾರರು.

೧೮೯೩ನೇ ಇಸವಿ ಡಿಶಂಬರ್‌ನಲ್ಲಿ ನಡೆಯುವ

ಮೈಸೂರು ದೇಶೀಯ ಪರೀಕ್ಷೆಗಳ ಪರೀಕ್ಷಕರು.

1. ಇಂಗ್ಲೀಷ್ ವ್ಯಾಕರಣ ಮತ್ತು ಭಾಷೆ.

(೧ನೇ ಭಾಗ) ಮೆ॥ ಎ. ಇ. ಅಡಾಲ್ಫಸ್ ಬಿ. ಎ. ರವರು. (೨ನೇ ಭಾಗ) ಮೆ॥ ಎ. ಜಿ. ಕಿಂಗ್, ಬಿ. ಎ. ರವರು.

ಇಂಗ್ಲಿಷ್ ಬರವಣಿಗೆ, ಮತ್ತು ಉಕ್ತಲೇಖನ. ಮೆ॥ ಸಿ. ಕೃಷ್ಣರಾವ್, ಬಿ. ಎ ಯವರು.

ಪರಿವರ್ತನೆ— (ಲೋವರ್‌ಸಕಂಡರಿ) ಮೆ ॥ ವೆಂಕಟಸ್ವಾಮಿ ಅಯ್ಯರ್ ಬಿ ಎ. ಯವರು

2. ಗಣಿತ—(ಇಂಗ್ಲಿಷ್ ಲೋವರ್‌ಸಕಂಡರಿ)

ಮೆ॥ ಟಿ. ಆರ್. ವೆಂಕಟಸ್ವಾಮಿನಾಯಡು ಬಿ. ಎ. ಯವರು. ರೇಖಾಗಣಿತ ಮತ್ತು ಬೀಜಗಣಿತ ಡಿಟೋ ಮೆ॥ ಎಸ್. ಮಲ್ಲಾರಿರಾವ್ ಬಿ. ಎ. ಯವರು.

3. ಗಣಿತ—(ಕನ್ನಡ ಲೋವರ್‌ಸಕಂಡರಿ ಮತ್ತು ಅಪ್ಪರ್‌ಸಕಂಡರಿ)

ಎಚ್ ಆರ್. ಕೃಷ್ಣಮೂರ್ತಿ ಬಿ. ಎ ಯವರು. ೧ ರೇಖಾಗಣಿತ ಮತ್ತು ಪೈಮೊಯಿಪಿ (ಅಪ್ಪರ್‌ಸಕಂಡರಿ) ೨ ಬೀಜಗಣಿತ ಡಿಟೋ. ೩ ಪೈಮೊಯಿಸಿ— (ಲೋವರ್‌ಸಕಂಡರಿ) ಮೆ॥ ಎಂ. ಟಿ. ನಾರಾಯಣೈಯ್ಯಂಗಾರ್ ಎಂ. ಎ. ಯವರು.

4. ಕನ್ನಡಟೆಕ್ಸ್ಟ್ (ಅಪರ್‌ಸಕಂಡರಿ) ಕನ್ನಡವ್ಯಾಕರಣ (ಲೋವರ್‌ಸಕಂಡರಿ)

ಮೆ ॥ ಎಸ್. ಜಿ. ನರಸಿಂಹಾಚಾರ್‌ರವರು. ಕನ್ನಡಟೆಕ್ಸ್ಟ್ (ಡಿಟ್ಟೊ) ಎಂ ಬಿ. ಶ್ರೀನಿವಾಸೈಯ್ಯಂಗಾರ್, ಎಂ. ಎ. ಕನ್ನಡ ವ್ಯಾಕರಣ—ಸಾಧಾರಣಭಾಗ— (ಅಪ್ಪರ್‌ಸೆಕಂಡರಿ.) ಮೆ ॥ ಆರ್. ನರಸಿಂಹಾಚಾರ್, ಎಂ. ಎ. ಯವರು. ಕನ್ನಡ ವಾಕ್ಯರಚನೆ (ಲೋವರ್ ಮತ್ತು ಅಪ್ಪರ್‌ಸೆಕಂಡರಿ) ಎಂ. ಬಿ ಶ್ರೀನಿವಾಸೈಯ್ಯಂಗಾರ್, ಎಂ. ಎ. ಯವರು. ಕನ್ನಡ ಉಕ್ತಲೇಖನ ಬರವಣಿಗೆ (ಲೋವರ್‌ಸೆಕಂಡರಿ) ಮೆ॥ ವೆಂಕಣ್ಣ ಬಿ. ಎ ಎಲ್. ಟಿ. ಯವರು. ಮೆ ॥ ಬಿ ಮಲ್ಲಪ್ಪನವರು.—

ಅಪ್ಪರ್‌ಸೆಕಂಡರಿ ಹಿಂದೂಸ್ಥಾನಿ.

೧ ವ್ಯಾಕರಣ. ೨ ಪರಿಷಿಯರ್ಟ ಟೆಕ್‌ಸ್ಟ್ ಮತ್ತು ವ್ಯಾಕರಣ. ೩ ವಾಕ್ಯ ರಚನಾ. ಲೋವರ್‌ಸೆಕಂಡರಿ—೪ ಪರಿಷಿಯರ್ಟ (ಐಚ್ಛಿಕ) ಟೆಕ್‌ಸ್ಟ್ ಮತ್ತು ಪರಿವರ್ತನೆ. ೫ ಡಿಟೋ ಡಿಟೋ ಉಕ್ತಲೇಖನ. ೬ ಡಿಟೋ (ಆವಶ್ಯಕ) ಟೆಕ್‌ಸ್ಟ್ ಮತ್ತು ವ್ಯಾಕರಣ. ೭ ಉಕ್ತಲೇಖನ. ಮೆ॥ ಇಸ್ಮಾಲ್ ಷರಿಫ್ ಸಾಹೇಬರು.

5. ಅಪ್ಪರ್‌ಸೆಕಂಡರಿ.

೧ ಹಿಂದೂಸ್ಥಾನಿ ಟೆಕ್‌ಸ್ಟ್, ೨ ಭಾಷಾಂತರೀಕರಣ,

ಲೋವರ್‌ಸೆಕಂಡರಿ.

೩ ಹಿಂದೂಸ್ಥಾನಿ ಟೆಕ್‌ಸ್ಟ್ ವ್ಯಾಕರಣ, ವಾಕ್ಯರಚನಾ, ೪ ಹಿಂದೂಸ್ಥಾನಿ ಬರವಣಿಗೆ, ೫ ಪರಿಷಿಯರ್ಟ (ಐಚ್ಛಿಕ) ಬರವಣಿಗೆ, ೬ ಡಿಟೋ (ಆವಶ್ಯಕ) ಭಾಷಾಂತರೀಕರಣ, ೭ ಡಿಟೋ ಉಕ್ತಲೇಖನ, ೮ ಡಿಟೋ ಬರವಣಿಗೆ. ಸುಲ್ತಾನ್ ಮಹಮದ್‌ಖಾನ್ ಸಾಹೇಬರು.

ಅಪ್ಪರ್‌ಸೆಕಂಡರಿ.

೧ ಹಿಂದೂಸ್ಥಾನಿ ಚರಿತ್ರೆ, ೨ ಡಿಟೋ ಭೂಗೋಳ, ೩ ಅಂಕಗಣಿತ, ೪ ಡಿಟೋ ಶೇಖಾಗಣಿತ, ಸೈಮೊಯಿಷಿ, ೫ ಡಿಟೋ ವ್ಯವಸಾಯಶಾಸ್ತ್ರ, ೬ ಡಿಟೊ ಆರೋಗ್ಯಶಾಸ್ತ್ರ, ೭ ಡಿಟೋ ಬೀಜಗಣಿತ, ೮ ಡಿಟೋ ಫಿಸಿಕಲ್ ಸೈನ್ಸ್.

(ಲೋವರ್‌ಸೆಕಂಡರಿ)

೯ ಹಿಂದೂಸ್ಥಾನಿ ಭಾಷಾಂತರೀಕರಣ, ೧೦ ಡಿಟೋ ಅಂಕಗಣಿತ, ೧೧ ಡಿಟೋ ಇಂಡಿಯಾಚರಿತ್ರೆ, ೧೨ ಡಿಟೋ ಭೂಗೋಳ, ೧೩ ಡಿಟೋ ಭೂಪಠ ಬರೆಯುವದು ೧೪ ಆರೋಗ್ಯಶಾಸ್ತ್ರ. ಮೆ॥ ಸಯ್ಯದ್ ಸಾಹೇಬರವರು.

೧ ಸಂಸ್ಕೃತ ಟೆಕ್‌ಸ್ಟ್ ಮತ್ತು ವ್ಯಾಕರಣ. (ಅಪ್ಪರ್‌ಸೆಕಂಡರಿ)

ಲೋವರ್‌ಸೆಕಂಡರಿ

೨ ಸಂಸ್ಕೃತ ಆವಶ್ಯಕ ವ್ಯಾಕರಣ ಮತ್ತು ಟೆಕ್‌ಸ್ಟ್, ೩ ಡಿಟೋ ಭಾಷಾಂತರೀಕರಣ, ೪ ಡಿಟೋ ಉಕ್ತಲೇಖನ, ೫ ಬರವಣಿಗೆ. ವೆ॥ ಪಿ ತಿರುಮಲಾಚಾರ್ಯರವರು.

6. (ಅಪ್ಪರ್‌ಸೆಕಂಡರಿ)

೧ ಸಂಸ್ಕೃತ ಭಾಷಾಂತರೀಕರಣ.

(ಲೋವರ್‌ಸೆಕಂಡರಿ)

೨ ಸಂಸ್ಕೃತ (ನಿಚ್ಚಿಕ) ವ್ಯಾಕರಣ, ಡಿಟೋ ಟೆಕ್ಸ್ಟ್, ಡಿಟೋ ಭಾಷಾಂತರೀಕರಣ, ೩ ಡಿಟೋ ಉಕ್ತಲೇಖನ, ೪ ಡಿಟೋ ಬರವಣಿಗೆ. ಮೆ॥ ಹಿಂಡಿಯಣ್ಣ ಬಿ. ಎ. ಎಲ್. ಟಿ ಯವರು.

ತೆಲಗು—ಭಾಷೆಮುಂತಾದ್ದು, ಮೆ॥ ಮಾಹದೇವಶಾಸ್ತ್ರಿ ಬಿ. ಎ. ಯವರು.

ತಮಿಳ್ ಡಿಟ್ಟೋ ಮೆ॥ ಕೆ. ಎ. ಕೃಷ್ಣಸ್ವಾಮಿ ಅಯ್ಯರ್ ಬಿ. ಎ. ಯವರು

ಆರೋಗ್ಯ—(ಅಪ್ಪರ್ ಮತ್ತು ಲೋವರ್‌ಸೆಕಂಡರಿ) ಮೆ॥ ಎಚ್. ನರಸಿಂಹ್ಯಯ್ಯಂಗಾರ್‌ರವರು.

ವ್ಯವಸಾಯ—ಡಿಟ್ಟೋ ಮೆ॥ ಎಚ್. ಶ್ರೀನಿವಾಸರಾಯರು.

ಫಿಸಿಕಲ್ ಸೈನ್ಸ್—(ಆ ಸ) ಮೆ॥ ಬಿ ರಾಮಸ್ವಾಮಿ ಅಯ್ಯರ್ಸ್ ಬಿ. ಎ. ಯವರು.

ಭೂಗೋಳ—(ಫಿಸಿಕಲ್) (ಲೊ ಸ) ಭೂಗೋಳ ಮತ್ತು ನಕ್ಷೆ ಬರೆಯುವದು (ಆ ಸ) ಮೆ॥ ಎಚ್. ವೆಂಕಟೇಶ ಅಯ್ಯಂಗಾರ್ ಬಿ. ಎ. ಯವರು.

ಹಿಂದೂಚರಿತ್ರೆ—(ಲೋವರ್ ಮತ್ತು ಅಪ್ಪರ್‌ಸೆಕಂಡರಿ) ಮೆ॥ ಕೆ. ಕೃಷ್ಣಸ್ವಾಮೈಯ್ಯ ಬಿ. ಎ. ಹಿಂ॥ ಚ॥ ಎನೇ ಭಾಗ. (ಲೋ॥ ಸ॥) (ಹಿಂ॥ ಚ॥) (ಆ॥ಸ॥) ಮೆ॥ ಎಚ್. ಕೇಶವ್ಯಯ್ಯಂಗಾರ್ ಬಿ. ಎ. ಹಿಂ॥ ಚ॥ ಎನೇ ಭಾಗ. ಲೊ॥ ಸ॥ ಹಿಂ॥ ಚ॥ (ಆ॥ ಸ॥).

7. ನಕ್ಷೆ ಬರೆಯುವದು.

(ಲೋ॥ ಸ॥), ಮೆ॥ ಎಸ್. ಕೆ.ಸ್. ಬಿ. ಎ. ಯವರು.

ಭೂಗೋಳ—ಡಿಟ್ಟೋ ಮೆ॥ ಎಸ್. ಗೋಪಾಲರಾಯರು.

ಪಾಕಶಾಸ್ತ್ರ—ಡಿಟ್ಟೋ ಆ॥ ಮಿ॥ ಚಲ್ಲಮ್ಮ.

ಹೊಲಗೆ—(ಲೋ॥ ಸ॥) ಮತ್ತು (ಆ॥ ಸ॥), ಮಿಸೆಸ್. ಗಲಿಫರ್ಡ್, ಮಿಸ್ ಕುಕ್, ಹಾರ್ಡ್‌ವಿಕ್, ರವರು.

ಗಾನ—(ಆ॥ ಸ॥) ಮೆ॥ ಆರ್. ನರಸಿಂಹಾಚಾರ್, ಎಂ. ಎ. ಯವರು.

ವಿದ್ಯಾದಾಯಿನಿ.

ಭಾಗ ೫೫.] ನವಂಬರ್ ೧೯೯೭. [ಸಂಚಿಕೆ ೧೧.

ಎಡಿಟರವರ ನೋಟ್ಸ್.

ಕಳೆದ ತಿಂಗಳಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಶ್ರೀಮೊರ್ಲೆ ದಿವಾನರವರು ವಿದ್ಯಾಭ್ಯಾಸದ ವಿಷಯದಲ್ಲಿ ಹೇಳುನಾಗ 1896-97ನೇ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತಿದ್ದ ಬಾಲಕರ ಸಂಖ್ಯೆಯು ವಿದ್ಯಾಭ್ಯಾಸ ಮಾಡಬಹುದಾಗಿದ್ದವರ ಸಂಖ್ಯೆಯಲ್ಲಿ ಶೇಕಡ 27. 51ರಂತೆ ಇತ್ತೆಂತಲು, ಬಾಲಕಿಯರ ಸಂಖ್ಯೆಯು ಶೇಕಡ 400 ರಂತಿತ್ತೆಂತಲೂ ತಿಳಿಸಿದರು. 1895-96ನೇ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತಿದ್ದವರ ಸಂಖ್ಯೆಯ ವಿಷಯವಾಗಿ ನಾವು ಹಿಂದಿನ ಸಂಚಿಕೆಯಲ್ಲಿ ಬರೆದಿದ್ದೇವೆ. ಇದನ್ನು ನೋಡಿದರೆ ಕಳೆದ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತಿದ್ದವರ ಸಂಖ್ಯೆಯು ಆಚೆ ವರ್ಷಕ್ಕಿಂತಲೂ ಹೆಚ್ಚಾಗಿತ್ತೆಂಬುವದು ಗೊತ್ತಾಗುವುದು. ಯೂರೊಪ್ ಖಂಡದ ಕೆಲವು ದೇಶಗಳಲ್ಲಿ ವಿದ್ಯಾಭ್ಯಾಸ ಮಾಡಬಹುದಾದವರು ಎಷ್ಟುಮಂದಿ ಇರುವರೋ ಅಷ್ಟುಮಂದಿಯೂ ವಿದ್ಯಾಭ್ಯಾಸ ಮಾಡುತಿದಾರೆ. ಇದನ್ನು ನಾವು ಯೋಚಿಸಿದರೆ ನಮ್ಮ ದೇಶದಲ್ಲಿ ವಿದ್ಯಾಭಿವೃದ್ಧಿಯು ವರ್ಷೇವರ್ಷೆ ಹೆಚ್ಚಾಗುತಿದ್ದರೂ ಇಲ್ಲಿನ ವಿದ್ಯಾಭ್ಯಾಸವು ಇನ್ನೂ ಎಷ್ಟು ಹಿಂದಿರುವುದೆಂಬುವದು ತಿಳಿಯುವದು. ಈ ಕೊರತೆಯು ಕಡಮೆಯಾಗಬೇಕಾದರೆ ಸರ್ಕಾರದವರ ಪ್ರಯತ್ನವಾತ್ರವೆ ಸಾಲದು. ಮುಖ್ಯವಾಗಿ ಜನಗಳಿಗೆ ವಿದ್ಯಾಭ್ಯಾಸದಿಂದಾಗುವ ಪ್ರಯೋಜನಗಳು ಮಂದಟ್ಟಾಗಬೇಕು.

ಬಾಲಕರ ದೇಹದಾರ್ಢ್ಯ ವಿಷಯವಾಗಿ ಸರಿಯಾಗಿ ನೋಡಿಕೊಳ್ಳುವುದಕ್ಕೆ ಅರ್ಹತೆ ಇರುವ ಉಪಾಧ್ಯಾಯರನ್ನು ಎಲ್ಲಾ ಕಾಲೇಜು ಮತ್ತು ಹೈಸ್ಕೂಲುಗಳಲ್ಲಿಯೂ

ಹೋದ ವರ್ಷದಲ್ಲಿ ಇಟ್ಟಂತೆ, ಅದೇಸಭೆಗೆ ಶ್ರೀಮಾನ್ ದಿವಾನರವರು ತಿಳಿಸಿದರು. ನಮ್ಮದೇಶದ ಜನರಿಗೀಗಿರುವ ಅಭಿಪ್ರಾಯಾನುಸಾರನಾಗಿ ಯೋಚಿಸುವವರು ವಿದ್ಯಾಭ್ಯಾಸಕ್ಕೂ ದೇಹದಾರ್ಢ್ಯಕ್ಕೂ ಏನು ಸಂಬಂಧವೆಂದು ತಿಳಿದಿರಬಹುದು. ಇದು ಸರಿಯಲ್ಲ ಎಲ್ಲಸುಖವೂ ಶರೀರವನ್ನೇ ಅವಲಂಬಿಸಿರುವದರಿಂದ ಅದಕ್ಕೆ ಲಕ್ಷ್ಯಕೊಡದೆ ಮಾಡಿದ ಕೆಲಸದಿಂದ ಏನುಪ್ರಯೋಜನ? 'ಶರೀರಮಾದ್ಯಂ ಖಲುಧರ್ಮಸಾಧನಮ್'. ದೇಹವು ಸರಿಯಾಗಿಲ್ಲದಿದ್ದರೆ ಸುಖ ಕಡಮೆಯಾಗುವದಲ್ಲದೆ ಉಪಾಧ್ಯಾಯನು ಮಾಡಿದ ಬೋಧನೆ ಸಹ ಪ್ರಯೋಜನವಿಲ್ಲದೆ ಹೋಗುವದು.

***

ಮಹಾರಾಣಿಯವರ ಬಲಿಕಾ ಪಾಠಶಾಲೆಯಲ್ಲಿ ಓದಿದವರು ಮೂರುಮಂದಿ ಬ್ರಾಹ್ಮಣ ಸ್ತ್ರೀಯರು ಮದರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರೆಂದು ಪೂರ್ವದಲ್ಲಿ ತಿಳಿಸಿದೆವಷ್ಟೆ. ಈಗ ಅವರು ಎಫ್. ಎ. ಪರೀಕ್ಷೆಗೆ ಅದೇಸ್ಕೂಲಿನಲ್ಲಿ ನ್ಯಾಸಂಗ ಮಾಡುತಿದಾರೆಂತಲೂ ಇದಕ್ಕಾಗಿ ಅವರಿಗೆ ಉಚಿತವಾದ ಸ್ಕಾಲರ್‌ಷಿಪ್‌ಗಳನ್ನು ಸರಕಾರದವರು ಕೊಡುತಿರುವರೆಂತಲು ಪರೀಕ್ಷೆಯಲ್ಲಿ ತೇರ್ಗಡೆಯಾದನಂತರ ಅವರು ಉಪಾಧ್ಯಾಯರಾಗಿರುವುದಕ್ಕೆ ಒಪ್ಪಿದಾರೆಂತಲೂ ತಿಳಿದು ಅದಕ್ಕೆ ಸಂತೋಷ ಪಡುತ್ತೇವೆ.

———○೦○———

ಬಾಯಿಪಾಠ ಮಾಡುವದು.

ಬುದ್ಧಿ ಶಕ್ತಿಗಳಲ್ಲೆಲ್ಲ ಉಪಾಧ್ಯಾಯರು ಸ್ಮೃತಿಶಕ್ತಿಯ ವಿಷಯವಾಗಿ ಹೆಚ್ಚಾಗಿ ತಿಳಿದುಕೊಳ್ಳಬೇಕು. ತಾವು ಹೇಳಿಕೊಡುವ ಅಂಶಗಳೆಲ್ಲ ಹುಡುಗರಿಗೆ ಜ್ಞಾಪಕವಿದ್ದು ಸಮಯಕ್ಕೆ ಉಪಯೋಗಿಸಲೆಂಬುದೇ ಇವರ ಉದ್ದೇಶವಾದುದರಿಂದ ಈ ಶಕ್ತಿಯು ಸ್ವರೂಪವನ್ನು ಅವರು ತಿಳಿದುಕೊಳ್ಳಬೇಕಾದುದು ಅವಶ್ಯಕ. ಇದು ತಿಳಿದರೆ ಸ್ಮೃತಿಶಕ್ತಿಯು ಸ್ವರೂಪಕ್ಕನುಗುಣವಾಗಿ ಬೋಧಿಸಿ ತಮ್ಮ ಉದ್ದೇಶವನ್ನು ನೆರ

ವೇರಿಸ ಬಹುದು. ಬಾಲಕರಲ್ಲಿ ಅಶಕ್ತಿಯನ್ನೂ ಬೆಳೆಯಿಸಲೂ ಬಹುದು. ಆದರೆ ಇದು ಸ್ವಲ್ಪ ಕಷ್ಟವಾದುದು. ಈ ಮಾರ್ಗವನ್ನನುಸರಿಸಬೇಕಾದರೆ ಉಪಾಧ್ಯಾಯರು ಮೊದಲು ಸ್ಮೃತಿಶಕ್ತಿಯ ಸ್ವರೂಪವನ್ನು ತಿಳಿದುಕೊಳ್ಳಬೇಕು; ಅನಂತರದಲ್ಲಿ ತಾವು ತಿಳಿದುದಕ್ಕನುಗುಣವಾಗಿ ಬೋಧಿಸಬೇಕು. ಈ ಎರಡು ಶ್ರಮಗಳನ್ನೂ ತಪ್ಪಿಸಿ ಕೊಳ್ಳುವುದಕ್ಕಾಗಿ ಉಪಾಧ್ಯಾಯರು ಸಾಮಾನ್ಯವಾಗಿ ಬೇರೊಂದು ಮಾರ್ಗವನ್ನನುಸರಿಸುವುದುಂಟು. ಅದು ಯಾವುದೆಂದರೆ—ಒಂದರ್ಥವನ್ನು ಜ್ಞಾಪಕವಿಡುವದಕ್ಕೆ ಬದಲಾಗಿ ಆ ಅರ್ಥವನ್ನು ಹೇಳುವ ಪದಸಮುದಾಯವನ್ನು ಗಟ್ಟಿಮಾಡಿಸುವದು. ಇದನ್ನು ಸಾಮಾನ್ಯವಾಗಿ ಬಾಯಿಪಾಠವೆಂದೆನ್ನುವರು.

ಈ ವಿಧವಾಗಿ ಗಟ್ಟಿಮಾಡಿಸಿ ಪ್ರಯೋಜನವಿಲ್ಲವೆಂಬುದು ಎಲ್ಲರಿಗೂ ತಿಳಿಯುವುದು. ಪದಸಮುದಾಯವನ್ನು ಗಟ್ಟಿಮಾಡಿ ಅರ್ಥ ತಿಳಿದಂತೆ ತೋರಿಸಿಕೊಂಡು ಉಪಯೋಗವೇನು? ಹೀಗೆ ಮಾಡುವುದನ್ನು ಬಾಯಿಪಾಠವೆಂಬುದಕ್ಕೆ ಬದಲಾಗಿ 'ಕುರುಡುಪಾಠ' ವೆಂದು ಹೇಳಬೇಕು. ಅರ್ಥವನ್ನು ತಿಳಿದು ಪದಸಮುದಾಯವನ್ನು ಮುಖಸ್ಥವನ್ನಾಗಿಟ್ಟುಕೊಳ್ಳುವುದಕ್ಕೆ 'ಬಾಯಿಪಾಠವೆಂಬ ಹೆಸರನ್ನು ಕೊಡಬಹುದು. ಕುರುಡುಪಾಠವೇನೋ ತಪ್ಪು; ಆದರೆ ಬಾಯಿಪಾಠವೆಲ್ಲ ಹಾಗಲ್ಲ. ಅರ್ಥವನ್ನು ತಿಳಿದು ಕೊಂಡಾಗ್ಯೂ ಎಲ್ಲವನ್ನು ಬಾಯಿಪಾಠ ಮಾಡಬಾರದು. ಅದು ವ್ಯರ್ಥ ಶ್ರಮ. ಕೆಲವನ್ನು ಮಾತ್ರ ಬಾಯಿಪಾಠ ಮಾಡಿಸಲೇಬೇಕಾಗುವುದು. ಇಷ್ಟನ್ನುಮಾತ್ರ ಹಾಗೆ ಮಾಡಿಸಿ, ವಿಷ್ಕವುಗಳ ಅರ್ಥವನ್ನುಮಾತ್ರ ಹುಡುಗರು ಜ್ಞಾಪಕದಲ್ಲಿಡು ವಂತೆ ಮಾಡಿದರೆ ಸಾಕು. ಹಾಗೆ ಆವಶ್ಯಕವಾಗಿ ಬಾಯಿಪಾಠ ಮಾಡಿಸಬೇಕಾದ ಅಂಶಗಳು ಯಾವುವೆಂದರೆ:—

೧ ಅಂಕಗಣಿತ ಮುಂತಾದವುಗಳಲ್ಲಿ ಪದೇಪದೇ ಉಪಯುಕ್ತವಾಗುವ ಅಂಶಗಳನೇಕವಿವೆ. ಇವುಗಳನ್ನು ಗಟ್ಟಿಮಾಡಿಸಬೇಕು. ಉದಾಹರಣೆಗಾಗಿ ಮಗ್ಗಿಯನ್ನು ಹೇಳಬಹುದು.

೨ ಕೆಲವು ಅರ್ಥಗಳನ್ನು ಒಂದುವಿಧವಾದ ಪದಸಮುದಾಯದೊಡನೆ ಜ್ಞಾಪಕವಿಡಬೇಕಾಗುವುದು. ಏಕೆಂದರೆ ಆ ಅರ್ಥವನ್ನು ಹೇಳಬೇಕೆಂದು ಪ್ರಯತ್ನಪಟ್ಟು ಉಚಿತವಾದ ಮಾತುಗಳನ್ನು ಹುಡುಕಿರುವರು. ಉದಾಹರಣೆಗಾಗಿ ರೇಖಾಗಣಿತದ ನಿರುಕ್ತಿಗಳನ್ನು ಹೇಳಬಹುದು. ಅದೇ ಅರ್ಥವನ್ನು ಬಾಲಕರು ಹೇಳಬೇಕಾದರೆ ಪದ

ಗಳು ಹೆಚ್ಚಾಗಿ ಬೇಕಾಗುವುವು. ಇಷ್ಟಾದರೂ ಅರ್ಥದಲ್ಲಿ ನ್ಯೂನತೆ ಇರಬಹುದು.

೩ ಮತ್ತೆ ಕೆಲವನ್ನು ಪದಗಳಿಗಾಗಿಯೆ ಜ್ಞಾಪಕವಿಡಬೇಕಾಗುವುದು. ಅರ್ಥವು ಜೆನ್ನಾಗಿರುವುದುಮೊತ್ರವಲ್ಲದೆ ಪದಗಳನ್ನು ಅರಿನ ಜೋಡಿಸಿರುವುದರಿಂದ ಜ್ಞಾಪಕವಿಡುವುದಕ್ಕೆ ಅರ್ಹವಾಗಿರುವುದು. ಇದಕ್ಕೆ ಮಹಾಕವಿಗಳ ಗ್ರಂಥಗಳಲ್ಲಿ ದೃಷ್ಟಾಂತಗಳನೇಕವಾಗಿ ದೊರೆಯುವುವು.

ಈ ಮೂರುವಿಧನಾದ ವಿಷಯಗಳನ್ನು ಹೊರತು ವೈಕ್ಯವ್ಯಗಳನ್ನು ಬಾರಿಸಾತ ಮಾಡಿಸಿ ಪ್ರಯೋಜನವಿಲ್ಲ.

ಅಂಕಗಣಿತ.

1 ಕೊನೇ ಅಂಕಿಯು 5 ಉಳ್ಳ ಒಂದು ಸಂಖ್ಯೆಯನ್ನು ಭಾಗಿಸಿದರೆ ಬರುವ ಭಾಗಲಬ್ಧದ ಕೊನೇ ಅಂಕಿಯು 7; ಶೇಷವು 14. ಭಾಜಕದ ಕೊನೇ ಅಂಕೆ ಯಾವುದು.

ಭಾಜ್ಯದ ಕೊನೆ ಅಂಕಿ 5; ಶೇಷ 14.

∴ ಭಾಜ್ಯ—ಶೇಷ = ...5−14 = ...1.

ಭಾಜ್ಯ−ಶೇಷವು = ಭಾಜಕ × ಭಾಗಲಬ್ಧವಾದುದರಿಂದ ಭಾಜಕವನ್ನು ಭಾಗಲಬ್ಧದಿಂದ ಗುಣಿಸಿದರೆ ಕೊನೆಯಲ್ಲಿ I ಬರವ್ವದೆಂದಾಯಿತು ಆದುದರಿಂದ ಭಾಜಕದ ಕೊನೇ ಅಂಕಿಯು 3 ರೇ ಆಗಿರಬೇಕು. ಏಕೆಂದರೆ 7 ನ್ನು 3 ರಿಂದ ಗುಣಿಸಿದರೇ 1 ಬರುವುದು.

2 ಒಂದು ವರ್ತುಳಾಕಾರವಾದ ಹೊಲದ ಸುತ್ತಲು ಓಡುವುದಕ್ಕೆ ಒಬ್ಬನಿಗೆ 20 ಘಂಟೆಗಳು, ಇನ್ನೊಬ್ಬನಿಗೆ 5 ಘಂಟೆಗಳು, ಮತ್ತೊಬ್ಬನಿಗೆ 2 ಘಂಟೆಗಳು ಬೇಕು. ಒಂದೇಕಾಲದಲ್ಲಿ ಈ ಮೂವ್ವರೂ ಹೊರಟು ಒಂದೇ ದಿಕ್ಕಿನಲ್ಲಿ ನಡೆದರೆ ಪುನಃ ಅವರು ಮೊದಲುಸಲ ಸೇರುವ್ವದು ಯಾವಾಗ?

ಮೊದಲನೆಯವನು 1 ಘಂಟೇಹೊತ್ತಿನಲ್ಲಿ $\frac{1}{20}$ ಭಾಗ ಹೋಗುವನು;

ಎರಡನೆಯವನು 1 ಘಂಟೆ ಹೊತ್ತಿನಲ್ಲಿ $\frac{1}{5}$ ಭಾಗ ಹೋಗುವನು.

ಮೂರನೆಯವನು ... $\frac{1}{6}$ .. ..

ಅಂದರೆ ಒಂದು ಘಂಟೇಹೊತ್ತಿನಲ್ಲಿ ಎರಡನೆಯವನು ಮೊದಲನೆಯವನಿಗಿಂತ ಹೊಲದ ಸುತ್ತಳತೆಯಲ್ಲಿ $\frac{3}{20}$ ಭಾಗವನ್ನು, ಮೂರನೆಯವನು ಎರಡನೇಯವನಿಗಿಂತ $\frac{3}{10}$ ಭಾಗವನ್ನೂ ಹೆಚ್ಚಾಗಿ ಹೋಗುವರು. $\frac{3}{10}$ ಮತ್ತು $\frac{3}{20}$ ಇವುಗಳಿಗೆ ಲ. ಸಾ. ಅ. ನ್ನು ಕಂಡು ಹಿಡಿದರೆ ನಮಗೆ ಉತ್ತರ ಬರುವುದು. ಇಷ್ಟು ಘಂಟೆಗಳಲ್ಲಿ ಮೂವ್ವರೂ ಎಷ್ಟೆಷ್ಟೋಸಲ ಹೊಲವನ್ನು ಸಂಪೂರ್ಣವಾಗಿ ಸುತ್ತಿರುವರು. ಅಂದರೆ ಸೇರುವರು. ಇದು ಲ. ಸಾ. ಅ. ಆದುದರಿಂದ ಇಷ್ಟು ಘಂಟೆಗಳಲ್ಲಿ ಅವರು ಮೊದಲು ಸೇರುವರು.

$$\frac{3}{10}, \text{ ಮತ್ತು } \frac{3}{20} \text{ ಲ ಸಾ. ಅ} = \frac{\text{ಭೇದಗಳ ಲ. ಸಾ. ಅ.}}{\text{ಅಂಶಗಳ ಮ. ಸಾ. ಅ}} = \frac{3}{20}$$

$$= 6\frac{2}{3} \text{ ಘಂಟೆಗಳು.}$$

3. $\frac{15}{17}$ = ಎಂಬ ಭಿನ್ನರಾಶಿಯು $\frac{15-4}{17-4}$ ಗಿಂತ ದೊಡ್ಡದು,

$\frac{15+4}{17+4}$ ಗಿಂತ ಚಿಕ್ಕದು ಎಂತಲೂ, $\frac{17}{15}$ ಎಂಬುದು $\frac{17-4}{15-4}$ಗಿಂತ ಚಿಕ್ಕದು,

$\frac{17+4}{15+4}$ಗಿಂತ ದೊಡ್ಡದೆಂತಲೂ ತೋರಿಸಬೇಕು.

$$\frac{15}{17} = 1 - \frac{2}{17}; \quad \frac{15-4}{17-4} = \frac{11}{13} = 1 - \frac{2}{13}.$$

$1\frac{2}{17}$ ಎಂಬುದು $\frac{2}{13}$ ಗಿಂತ ಚಿಕ್ಕದಾಗಿಯೂ $\frac{2}{21}$ ಗಿಂತ ದೊಡ್ಡದಾಗಿಯೂ ಇರುವುದರಿಂದ $1-\frac{2}{17}$ಎಂಬುದು $1-\frac{2}{13}$ಗಿಂತ ದೊಡ್ಡದು. $1-\frac{2}{21}$ಗಿಂತ ಚಿಕ್ಕದು.

ಇನ್ನೊಂದು ಭಾಗದ ವಿಷಯನಾಗಿಯೂ ಹೀಗೆ ಮಾಡಬೇಕು.

ಇದರಿಂದ ಯಾವ ಸಾಮಾನ್ಯನಿಯಮವನ್ನು ನಿಶ್ಚಯಿಸಬಹುದು. ?

4 1800 ನೇ ಇಸವಿಯ ಮೊದಲು ಮೂರುತಿಂಗಳಲ್ಲಿ ಕೊನೇ ಮೂರುತಿಂಗಳಿಗಿಂತ ಎಷ್ಟುದಿನ ಕಡಮೆ ?

1800ನೇ ಜನವರಿ	ತಿಂಗಳಲ್ಲಿ	31 ದಿನ	ಅಕ್ಟೋಬರ್	ತಿಂಗಳಲ್ಲಿ	31 ದಿನ
ಫಿಬ್ರವರಿ	,,	28 ದಿನ	ನವಂಬರ್	,,	30 ದಿನ
ಮಾರ್ಚಿ	,,	31 ದಿನ	ಡಿಸೆಂಬರ್	,,	31 ದಿನ
		90			92

ಆದುದರಿಂದ ವ್ಯತ್ಯಾಸ 2 ದಿನ.

(1800 ನೇ ಇಸವಿಯ ಫಿಬ್ರವರಿ ತಿಂಗಳಲ್ಲಿ 28 ದಿನಗಳೇ ಎಂಬುದನ್ನು ಜ್ಞಾಪಕವಿಡಬೇಕು.)

M. H.

ಪೆಸ್ಟಲಾಜ್ಜೀಯವರ ಚರಿತ್ರೆ.

(೨೬೧ ನೇ ಪುಟದ ಶೇಷ.)

ಪೆಸ್ಟಲಾಜ್ಜಿಯವರು ಧರ್ಮಶಾಸ್ತ್ರವನ್ನು ಕಲಿಯಬೇಕೆಂದು ಯೋಚಿಸಿ ಕೆಲವು ಕಾನೂನುಗಳನ್ನು ಅಭ್ಯಾಸ ಮಾಡುತ್ತಾ ಕೆಲವುಕಾಲ ಕಳೆದು ೧೭೬೭ ರಲ್ಲಿ ಗ್ರಂಥದ ಹೆಸರಿಲ್ಲದೆ ಒನ್ದು ಪುಸ್ತಕವನ್ನು ಮುದ್ರಿಸಿದರು. ಈ ಪುಸ್ತಕದಲ್ಲಿ ಪ್ರಜೆಗಳ ಹಕ್ಕು ಬಾಧ್ಯತೆಗಳು, ಸ್ವಾತಂತ್ರ್ಯಗಳು, ಸರಕಾರದ ಕರ್ತವ್ಯಗಳು ವಿವರಿಸಲ್ಪಟ್ಟಿದ್ದವು. ಈ ಪುಸ್ತಕವು ಸರಕಲರಕ್ಕೆ ಬರೆಯತಕ್ಕ ಅರ್ಜಿಯಂತೆ ಇತ್ತು. ಇದನ್ನು ನೋಡಿದಕೂಡಲೆ ಸರಕಾರದವರು ಬಹಳ ಆಗ್ರಹದಿಂದ ಅದನ್ನು ತರಿಸಿ ಸುಡಿಸಿಬಿಟ್ಟರು. ಮತ್ತು ಇದನ್ನು ಬರೆದವರು ಇವರೇ ಎಂದು ಗೊತ್ತುಮಾಡಿ ಪೆಸ್ಟಲಾಜ್ಜಿಯವರನ್ನು ಹಿಡಿದು, ಇದು ಸರಕಾರದ ವಿಷಯದಲ್ಲಿ ಪ್ರಜೆಗಳ ಅನುರಾಗವನ್ನು ತಪ್ಪಿಸಿ ದಂಗೆ ಎಬ್ಬಿಸತಕ್ಕದ್ದಾಗಿದೆ ಎಂದು ತೀರ್ಪುಮಾಡಿ ಜುರ್ಮಾನೆಯನ್ನು ವಿಧಿಸಿದರು.

ಪೆಸ್ಟಲಾಟ್ಸೀಯವರು ಅನೇಕ ಕಾನೂನುಗಳನ್ನು ಓದಿ ಧರ್ಮಾಧರ್ಮವಿವೇ
ಕದಿಂದ ಪ್ರಜೆಗಳ ಪಕ್ಷವನ್ನವಲಂಬಿಸಿ ಈ ಗ್ರಂಥವನ್ನು ಬರೆದದ್ದಕ್ಕೆ ಶಿಕ್ಷೆ
ಯನ್ನು ಹೊಂದಿದರು. ಕಾನೂನುಗಳನ್ನು ಕಲಿತು ಸರಕಾರದಲ್ಲಿ ಉದ್ಯೋಗವನ್ನು
ಸಂಪಾದಿಸಬೇಕೆಂದಿದ್ದ ಇವರ ಆಶೆಯು ಭಗ್ನವಾದ್ದರಿಂದಲೂ, ಸರಕಾರದ ಅಭಿಮಾ
ನಕ್ಕೆ ಪಾತ್ರರಾಗಬೇಕೆಂದು ಕೆಲವರು ಹಠದಿಂದ ಇವರನ್ನು ದಂಡನೆಗೆ ಗುರಿಮಾಡಿದ್ದ
ರಿಂದಲೂ, ಮನಸ್ಸು ಕೆಟ್ಟು, ಇದಕ್ಕೆ ಸಂಬಂಧಪಟ್ಟ ಎಲ್ಲಾ ಕಾಗದಪತ್ರಗಳನ್ನು
ಸುಟ್ಟು ಜೀವನಕ್ಕೆ ಬೇರೇಮಾರ್ಗವನ್ನು ಹುಡುಕಬೇಕೆಂದು ಯೋಚಿಸಿ, ಲೋಕದಲ್ಲಿ
ಈ ರೀತಿಯಾಗಿ ತಮ್ಮ ಹಿತಚಿಂತಕರಲ್ಲಿ ಉಪೇಕ್ಷೆಯಿಂದ ಪ್ರಜೆಗಳು ಪ್ರತಿಭಟಿಸುವು
ದಕ್ಕೆ ವಿದ್ಯೆಯಿಲ್ಲದಿರುವುದೇ ಕಾರಣವೆಂದು ನಿಶ್ಚಯಿಸಿ ಲೌಕಿಕರ ಅಜ್ಞಾನವನ್ನು ಕಳೆ
ಯುವುದಕ್ಕೆ ವಿದ್ಯೆಯೇ ಮುಖ್ಯಸಾಧಕವೆಂದು ನಿಷ್ಕರ್ಷೆ ಮಾಡಿದರು.

ಅಷ್ಟರಲ್ಲೆ ಸ್ವಿಟ್ಜರ್ಲೆಂಡ್ ದೇಶದಲ್ಲಿ ಅನೇಕ ವಿದ್ವಾಂಸರು ಸೇರಿ ಜನರ
ಹೀನಸ್ಥಿತಿಯನ್ನು ತಪ್ಪಿಸುವುದಕ್ಕೆ ಒಳ್ಳೇ ಉಪಾಯವಾವದೆಂದು ಯೋಚಿಸಿ, ಅನ್ನ
ವಸ್ತ್ರಕ್ಕೆ ನೆಮ್ಮದಿಯಾಗಿರುವವರಲ್ಲಿ ಪಾರ್ಯಕವಾಗಿ ಒಳ್ಳೆಗುಣವಿರುವದಕ್ಕೆ ಅವಕಾಶ
ಉಂಟೆಂಬದಾಗಿಯೂ, ಲೋಕೋಪಕಾರಕ್ಕಿಂತಲೂ, ಅನ್ನವಸ್ತ್ರಗಳನ್ನು ಸಂಪಾ
ದಿಸಿಕೊಳ್ಳುವದು ಜನರಿಗೆ ಮುಖ್ಯಕರ್ತವ್ಯವೆಂಬದಾಗಿಯೂ, ಧರ್ಮಾಧರ್ಮ ಬೋಧನೆ
ಯಿಂದ ಅವರನ್ನು ಉತ್ತಮಸ್ಥಿತಿಗೆ ತರಬಹುದೆಂಬದಾಗಿಯೂ, ಚರ್ಚೆಮಾಡುತಿದ್ದರು.

ಪೆಸ್ಟಲಾಟ್ಸಿಯವರು ಇದನ್ನು ಕೇಳಿ, ಅನ್ನವಸ್ತ್ರಗಳು ಮನುಷ್ಯನಿಗೆ ಸುಲ
ಭವಾಗಿ ದೊರೆಯಬೇಕಾದರೆ ಶಾಸ್ತ್ರೀಯವಾದ ಕೃಷಿಯನ್ನು ಮಾಡಿಸಬೇಕೆಂಬದಾಗಿ
ಯೂ, ಆ ಕೃಷಿಯಿಂದ ಭೂಮಿಯು ಹೊರವಾಗಿ ಬೆಳೆದು ಉತ್ಪತ್ತಿಯನ್ನು ಹೆಚ್ಚಿಸು
ವುದೆಂಬದಾಗಿಯೂ, ಇದರಿಂದ ಜನರಿಗೆ ಸೌಖ್ಯವುಂಟೆಂಬದಾಗಿಯೂ, ನಿಶ್ಚಯಿಸಿ
ಶಾಸ್ತ್ರೀಯವಾದ ಕೃಷಿಯನ್ನು ಮಾಡಲು ಪ್ರಾರಂಭಿಸಿದರು. ಈ ಕೆಲಸದಲ್ಲಿ ಅನು
ಭವವಿದ್ದ ಸ್ವಿಫೆಲಿಯವರೂ ಇವರೊಡನೆ ಸೇರಿದರು.

ಅಷ್ಟರಲ್ಲೇ ಇವರಿಗೂ ಅನಾಸ್ಕಲ್ಟೆಸ್‌ರವರಿಗೂ, ವಿವಾಹಕ್ಕಾಗಿ ನಿಶ್ಚಿತಾ
ರ್ಥವು ನಡೆಯಿತು. ಅನಾಸ್ಕಲ್ಟೆಸ್‌ರವರು ವಿದ್ಯಾವಿನಯಸಮ್ಪನ್ನರಾಗಿಯೂ ಒಳ್ಳೆ
ನಡತೆಯುಳ್ಳವರಾಗಿಯೂ, ಇವರಿಗೆ ಪತ್ನಿಯಾಗುವುದಕ್ಕೆ ತಕ್ಕವರಾಗಿಯೂ ಇದ್ದರು.
ಇವರಿಗೆ ನಿಶ್ಚಿತಾರ್ಥವಾದ ಮೇಲೆ ೨ ವರ್ಷದವರಿಗೂ ಕಾಗದಪತ್ರಗಳುವ್ಯತ್ಯಪರ

ಸ್ವರವಾಗಿ ನಡೆಯುತ್ತಿದ್ದವು. ಆಗ ಪೆಸ್ಟಲಾಟ್ಸಿಯವರು ಬರೆಯುತ್ತಿದ್ದ ಕಾಗದಗಳಲ್ಲಿ, ಶಾಸ್ತ್ರೀಯವಾದ ಸೃಷ್ಟಿಯು ಎಲ್ಲಾ ಕಡೆಯಲ್ಲೂ ಆಚರಣೆಗೆ ತರಬೇಕೆಂದು ತಾವು ಮಾಡುವುದನ್ನೂ, ಈ ಪ್ರಯತ್ನದಿಂದ ಲೋಕದ ಹೀನಸ್ಥಿತಿಯು ಹೋಗಲಾಡಿಸಬೇಕೆಂಬ ತಮ್ಮ ಭಿಲಾಷೆಯನ್ನೂ ಸ್ಪಷ್ಟೀಕರಿಸುತ್ತಾರೆ. ಈ ಲೇಖನಗಳು ಲೋಕೋಪಕಾರವಾದುದರಿಂದ ಇವರ ಚರಿತ್ರೆಯನ್ನು ಬರೆದವರು ಸಂಗ್ರಹಿಸಿರುತ್ತಾರೆ. ಇವುಗಳಲ್ಲಿ ಒಂದರ ಸಾರಾಂಶವೇನೆಂದರೆ.

" ನಾನು ನನ್ನ ಉಡಿಗೆಗಳಲ್ಲಿ ಅಜಾಗರೂಕನಾಗಿಯೂ, ನಡೆನುಡಿಗಳಲ್ಲಿ ವಿನಯೂಭಿನಯಹೀನನಾಗಿಯೂ ಇದ್ದೇನೆ. ಇದು ವೃದ್ಧಿಗೆ ಬರುವ ಪ್ರಯತ್ನಕ್ಕೆ ಪ್ರತಿಬಂಧಕವಾಗುವುದು ಈ ವಿಷಯವು ಸರ್ವರಿಗೂ ವೇದ್ಯವಾಗಿಯೇ ಇದೆ. ಯೋಗ್ಯತೆವಿುರಿ ವೃದ್ಧಿಗೆ ಬರುವುದಕ್ಕೆ ಇವೇ ಮುಖ್ಯಕಾರಣಗಳು. ಇವುಗಳನ್ನು ಸಂಪಾದಿಸಿ ವೃದ್ಧಿಗೆ ತರುವುದು ನನಗೆ ಅಸಾಧ್ಯನಾಗಿದೆ. ನಾನು ಅನೇಕ ಪ್ರಯತ್ನಗಳನ್ನು ಮಾಡುತ್ತೇನೆ. ಆದರೆ ಆ ಪ್ರಯತ್ನಗಳು ಫಲದಾಯಕಗಳಾಗುವುದಿಲ್ಲ. ಆಗಾಗ್ಯೆ ಕೆಲವು ಕೆಲಸಗಳು ಲೋಕಕ್ಕೆ ಪ್ರಯೋಜನಕರವಾದವುಗಳೆಂದು ತೋರುತ್ತದೆ ಕೂಡಲೆ ಆ ಕೆಲಸಗಳನ್ನು ಮಾಡಬೇಕೆಂದು ಪ್ರಯತ್ನ ಮಾಡುತ್ತೇನೆ. ಈ ಪ್ರಯತ್ನಗಳಲ್ಲಿ ಕೆಲವು ಸಾಗುವುವು ಕೆಲವು ನಿಷ್ಫಲಗಳಾಗುವುವು. ನಾನು ವಿಶೇಷ ತಿಳುವಳಿಕೆಯುಳ್ಳವನಲ್ಲನೆಂಬುವುದಕ್ಕೆ ನಿಷ್ಫಲವಾಗತಕ್ಕ ಕಾರ್ಯಾವಲಂಬನೆಯೇ ದೃಷ್ಟಾಂತವಾಗಿ ಇರುತ್ತದೆ. ಎಂಬುವದು—

ಹೀಗೆ ಭಗ್ನಮನೋರಥರಾಗಿ ಪೆಸ್ಟಲಾಟ್ಸಿಯವರು :— " ಒಂದುವೇಳೆ ವಿವಾಹವನ್ನು ಮಾಡಿಕೊಂಡು ಪುತ್ರಮಿತ್ರ ಕಳತ್ರಾದಿಗಳೊಡನೆ ಸಂಸಾರಸುಖವನ್ನನುಭವಿಸುತ್ತಾ ಕಾಲಹರಣವನ್ನು ಮಾಡಬೇಕೆಂದು ತೋರುತ್ತದೆ. ಮತ್ತೊಂದುವೇಳೆ ವೈರಾಗ್ಯವನ್ನು ವಹಿಸಿ ನಿರ್ಜನಪ್ರದೇಶವನ್ನು ಹೊಂದಿ ಈ ಪ್ರಪಂಚದ ಚರಾಚರ ವಸ್ತುಗಳ ಸೃಷ್ಟಿಸ್ಥಿತಿ ಲಯಗಳನ್ನು ಪರೀಕ್ಷಿಸುತ್ತಾ ಇವುಗಳಿಗೆ ಕಾರಣಭೂತನಾದ ಜಗದೀಶ್ವರನ ಲೀಲೆಯನ್ನು ಶಾಸ್ತ್ರಮುಖದಿಂದ ತಿಳಿದುಕೊಳ್ಳುತ್ತಾ ಕಾಲಹರಣಮಾಡಬೇಕೆಂಬದಾಗಿಯೂ ತೋರುತ್ತದೆ. ಈ ಮನೋರಥಗಳೆಲ್ಲಾ ಒಂದೊಂದಾಗಿ ಲಭ್ಯವಾಗುವದೋ ಏನೋ, ಅದು ಹಾಗಿರಲಿ. ಈಗ ನನ್ನ ದೇಹಸ್ಥಿತಿಯು ಚನ್ನಾಗಿಲ್ಲ. ಹೀಗಿದ್ದಾಗ್ಯೂ ಲೋಕಕ್ಕೆ ಉಪಕಾರಪ್ರಾಯನಾದ ಕೆಲವು ದೊಡ್ಡ ಕೆಲಸ

ಗಳನ್ನು ಮಾಡುವದಕ್ಕೆ ಮುಂಚೆಯೇ ನಾನು ಕಾಲಾಧೀನನಾಗುವಂತೆ ತೋರುವದಿಲ್ಲ. ಇದರಮೇಲೆ ಈಶ್ವರನ ಇಚ್ಛೆ ಇದ್ದಂತೆ ಆಗಲಿ''

ಈ ಲೇಖನಕ್ಕೆ ಆನಾಸ್ಕಲ್ಫಿಸ್‌ರವರು ಬರೆದ ಉತ್ತರವು ಅವರ ಮನೋಧರ್ಮವನ್ನು ವ್ಯಕ್ತಮಾಡುತ್ತದೆ. ಅವರು ಬರೆದಿರುವದೇನಂದರೆ :—

''ತಮ್ಮ ಕಾಗದವನ್ನು ಶಿರಸಾವಹಿಸಿನೋಡಿದೆನು. ತಾವು ಹಿಂದಿನ ಕೆಲಸವು ನಿಷ್ಫಲನಾಯಿತೆಂದು ಹೇಳಿಕೊಂಡಿರುವ ಮಾತು ನನಗೆ ಬಹಳ ವಿಸ್ಮಯವನ್ನುಂಟುಮಾಡುತ್ತಲಿದೆ. ಒಳ್ಳೇಕೆಲಸಮಾಡುವದು ನಮಗೆ ಸೇರಿದ್ದು ಫಲಿಸುವದು ಈಶ್ವರನ ಅಧೀನವಾದ್ದು. ಇದಕ್ಕೆ ಪರಿತಾಪವೇಕೆ? ಇದಿಂತಿರಲಿ, ವಿವಾಹದ ವಿಷಯವಾದ ನಿಮ್ಮ ಸಂಕಲ್ಪವು ಶ್ಲಾಘ್ಯವಾದದ್ದು. ಲೋಕೋಪಕಾರಾರ್ಥವಾಗಿ ಮಹಾತ್ಮರು ಜನಿಸುವದುಂಟು. ಉದಾರಮನಸ್ಸನ್ನೂ ನಿಸರ್ಗವಾದ ಭೂತದಯೆಯನ್ನೂ ತೋರಿಸುವದರಲ್ಲಿ ನಿರ್ಮಲವಾದ ನಿಮ್ಮ ಮುಖಭಾವವು ನಿಮ್ಮ ಮಹಾನುಭಾವತ್ವವನ್ನು ಪ್ರಕಾಶಿಸುವದು. ಗೃಹಕೃತ್ಯದ ಸೌಖ್ಯಾನುಭವ ವಿಷಯದಲ್ಲಿ ನೀವು ಬರೆದಿರತಕ್ಕದ್ದು ಉತ್ತರೋತ್ತರ ಭಾಗ್ಯಪರಿಪಾಕವನ್ನು ವ್ಯಕ್ತಪಡಿಸುವದು. ಅಜ್ಞಾಳಾಗಿ ಅಕೃತ್ರಿಮಭಕ್ತಿಯುಂದಿರತಕ್ಕ ನನ್ನಮೇಲೆ ತಮ್ಮ ಕೃಪೆಯು ಏಕರೀತಿಯಾಗಿರಬೇಕು''

ಪೆಸ್ಟಲಾಟ್ಸಿಯವರು ಬರೆದಿರತಕ್ಕ ಇನ್ನೊಂದು ಲೇಖನದ ಸಾರಾಂಶ,—

'' ಕೈಲಾದವರಿಟ್ಟಿಗೂ ಧರ್ಮಮಾರ್ಗವನ್ನವಲಂಬಿಸಿಯೇ ಜೀವಿಸಬೇಕೆಂದುದ್ದೇಶಿಸಿದೇನೆ. ನಿನ್ನ ಮನಸ್ಸೂ ಇದೇರೀತಿಯಲ್ಲಿರುವದರಿಂದ ನನ್ನ ಕೋರಿಕೆಯು ಫಲಿಸುವಂತೆ ಕಾಣುತ್ತೆ. ಇಂಥಾ ಅಭಿಪ್ರಾಯವುಳ್ಳವರಿಗೆ ಪಟ್ಟಣವಾಸವು ಯೋಗ್ಯವಾದದ್ದಿಲ್ಲ. ಹಳ್ಳಿಗಳಲ್ಲಿ ಒಂದು ಗುಡಿಸಲು ಕಟ್ಟಿಕೊಂಡು ವಾಸಮಾಡುತ್ತಾ ದೇಶಕ್ಕೆ ಹಿತಕರವಾದ ಎಷ್ಟೋ ಕೆಲಸಗಳನ್ನು ಮಾಡುತ್ತಾ ನೆರೆಹೊರೆಯವರಿಗೆ ಸನ್ಮಾರ್ಗ ಪ್ರವರ್ತನೆಗೆ ಮೇಲುಪಜ್ಞೆಯನ್ನು ಪಾಕುತ್ತಾ ಅವರ ಮಕ್ಕಳಲ್ಲಿ ಬುದ್ಧಿಶಾಲಿಗಳಿಗೆ ವಿದ್ಯಾಭ್ಯಾಸವನ್ನು ಮಾಡಿಸಿ ವಿವೇಕವನ್ನು ತಂದುಕೊಟ್ಟು ದುಷ್ಕಾರ್ಯಗಳಲ್ಲಿ ಜುಗುಪ್ಸೆಯನ್ನುಂಟುಮಾಡುತ್ತಾ, ಕಾಮಕ್ರೋಧಾದಿಗಳಿಗೆ ದಾರಿಯಿಲ್ಲದೆ ಜಿತೇಂದ್ರಿಯರಾಗಿ ಬಹುಕಾಲ ಬದುಕುವಂತೆ ಮಾಡಿದರೆ ಸಾರ್ಥಕವಾಗುವದು. ಇಂಥಾ ಸಂದರ್ಭವು ನಮಗೆ ಕೂಡಲೇ ಉಂಟಾಗಬಹುದೆಂದು ತೋರುತ್ತೆ. ಆದರೆ ನನ್ನನ್ನು ವಿವಾಹಮಾಡಿಕೊಳ್ಳುವದಕ್ಕೆ ಮುಂಚೆ ನೀನು ಒಂದು ವಿಷಯವನ್ನು ಪರ್ಯಾಲೋಚಿಸಬೇಕು. ನನ್ನ

ಮನೋರಥಗಳು ಪ್ರತಿದಿನದಲ್ಲೂ ಬಗೆಬಗೆಯಾಗಿ ಪರಿಣಮಿಸುತ್ತಲಿವೆ. ಈಗ ಗ್ರಹಸ್ಥಾಶ್ರಮವನ್ನಾಶ್ರಯಿಸಿ ಧರ್ಮವಾರ್ಗ ಪ್ರವರ್ತನೆಗೆ ತಕ್ಕ ಮೇಲುಪಜ್ಞೆಯನ್ನು ಹಾಕಬೇಕೆಂದು ಅಭಿಲಾಷೆಯು ನನಗೆ ಉಂಟಾಗಿದೆ. ನಾಳೇದಿವಸ ಇನ್ನು ಯಾವ ಹೊಸ ಮನೋರಥವು ಉಂಟಾಗುವದೋ ತಿಳಿಯದು. ಲೋಕಹಿತಾರ್ಥವಾದ ಯಾವದಾದರೂ ಒಂದು ಪ್ರಯತ್ನವು ತೋರಿ ಅಂಥಾ ಪ್ರಯತ್ನಕ್ಕೆ ಸಂಸಾರಬಂಧವು ಪ್ರತಿಕೂಲವಾಗಿರುವ ಪಕ್ಷದಲ್ಲಿ ಆಗ್ಗೆ ಅಂಥಾ ಕೆಲಸವನ್ನು ಮಾಡುವದಕ್ಕೋಸ್ಕರ ನಾನು ನನ್ನ ಅನುರಾಗಕ್ಕೆ ಪಾತ್ರಳಾದ ನಿನ್ನನ್ನೂ ಪರಿತ್ಯಾಗಮಾಡಿ ಲೋಕಹಿತಾರ್ಥವಾದ ಕಾರ್ಯದಲ್ಲಿ ಪ್ರವರ್ತಿಸಬಹುದೆಂದು ತೋರುತ್ತದೆ. ಆದುದರಿಂದ ಇಂಥಾ ಹುಚ್ಚನನ್ನು ವಿವಾಹಮಾಡಿಕೊಳ್ಳುವದು ಯುಕ್ತವೇ ? ಅಯುಕ್ತವೇ ? ಎಂಬುವದನ್ನು ಮೊದಲೇ ಯೋಚನೆ ಮಾಡಿಕೋ. ಅನೇಕರು ಸರ್ವವಿಷಯದಲ್ಲಿಯೂ ಅನುರೂಪ್ಯವನ್ನು ಪರೀಕ್ಷಿಸನೋಡದೆ ದುಡುಕಿ ವಿವಾಹವನ್ನು ಮಾಡಿಕೊಂಡು ಆಮರಣಾಂತವಾಗಿ ಸಂಕಟಪಡುವರು. ಇಂಥಾ ಸಂಕಟವು ನಿನಗೆ ಬರದೇಇರಬೇಕೆಂಬುವದೇ ಮುಖ್ಯಸಂಕಲ್ಪವಾಗಿದೆ. ಹೀಗಿದ್ದಾಗ್ಯೂ ಬಾಧಕವಿಲ್ಲವೆಂದು ನಿಷ್ಕರ್ಷೆಮಾಡಿ ನೀನು ನನ್ನನ್ನು ವಿವಾಹಮಾಡಿಕೊಳ್ಳತಕ್ಕ ಪಕ್ಷದಲ್ಲಿ ನಿನ್ನ ಇಷ್ಟವಿದ್ದಂತಾಗಲಿ. ಗೃಹಕೃತ್ಯಗಳಲ್ಲಿ ಪ್ರಾಣಧಾರಣೆಗ ಅತ್ಯಾವಶ್ಯಕಗಳಾದ ಪದಾರ್ಥಗಳು ಮಾತ್ರ ನನ್ನಿಂದ ಅರ್ಜಿಸಲ್ಪಡುವವು. ಇತರ ಭೋಗ್ಯವಸ್ತುಗಳು ನಮ್ಮ ಮನೆಯ ಹೊಸಲಿನಿಂದೊಳಗೆ ಬರುವದಕ್ಕೂ ಅವಕಾಶ ವಿರುವದಿಲ್ಲ. ಇಂಥಾ ಕಷ್ಟಜೀವನವನ್ನು ಮಾಡುವದಕ್ಕೆ ಇಷ್ಟವಿದ್ದರೆ ವಿವಾಹವು ನಡೆಯಬಹುದು.

ಈ ಲೇಖನವನ್ನು ನೋಡಿದ ಕೂಡಲೇ ಅನಾರವರಿಗೆ ಪೆಸ್ಟಲಾಟ್ಸಿಯವರಲ್ಲಿ ಗೌರವವೂ ಅನುರಾಗವೂ ವಿಶೇಷವಾಗಿ ಹೆಚ್ಚಿತು. ಲೋಕದಲ್ಲಿ ಅನೇಕ ವಿಧವಾದ ಮನೋರಥಗಳನ್ನು ಚಿತ್ರವಿಚಿತ್ರವಾದ ನಾಗಾಲ್ದಾನಗಳಿಂದ ಉಂಟುಮಾಡಿ ಅನಂತರದಲ್ಲಿ ಆಶಾಭಂಗವನ್ನು ಮಾಡತಕ್ಕ ಜನರು ಅನೇಕವಾಗಿ ಇರುತ್ತಾರೆ. ಈ ರೀತಿಯಲ್ಲಿ ವಾಸ್ತವಾಂಶವನ್ನು ಹೇಳತಕ್ಕವರು ಅಪೂರ್ವ. ಇದೇ ಇವರ ಸತ್ಯಸಂಧತೆಯನ್ನು ತೋರಿಸುತ್ತದೆ. ಸತ್ಯವಂತರೊಡನೆ ಅಹೋರಾತ್ರಿಯಲ್ಲಿಯೂ ಶ್ರಮಪಟ್ಟು ಶುಷ್ಕವನ್ನವನ್ನು ತಿಂದು ಸಾಮಾನ್ಯವಾದ ಸ್ಥಿತಿಯಲ್ಲಿರುವದು, ಅಧರ್ಮಪ್ರವರ್ತಕರಾಗಿಯೂ ಮೃಷಾವಾದಿಗಳಾಗಿಯೂ ಇರತಕ್ಕ ಐಶ್ವರ್ಯವಂತರೊಡನೆ ಸಕಲಸಾಮ್ರಾಜ್ಯವನ್ನು

ಭವಿಸುವದಕ್ಕಿಂತಲೂ ಉತ್ತಮವಾದದ್ದು. ಆದುದರಿಂದ ಪೆಸ್ಟಲಾಟ್ಸಿಯವರನ್ನು ವಿವಾಹವಾಡಿಕೊಳ್ಳುವದೇ ಶ್ರೇಯಸ್ಕರವಾದದ್ದು'' ಎಂಬ ತಾತ್ಪರ್ಯವು ಅನಾರವರಿಗೆ ಉಂಟಾಯಿತು. ಪೆಸ್ಟಲಾಟ್ಸಿಯವರ ಲೇಖನಕ್ಕೆ ಇವರು ಬರೆದ ಉತ್ತರವು ಅವರ ಸೌಜನ್ಯವನ್ನು ಚನ್ನಾಗಿ ವ್ಯಕ್ತಮಾಡುತ್ತದೆ. ಅವರು ಬರೆದಿರುವದೇನೆಂದರೆ:—

''ತಮ್ಮನ್ನು ಮೊದಲು ಅಂಗಡಿಯಲ್ಲಿ ನೋಡಿದಾಗಲೇ ನನಗೆ ಏನೋ ಒಂದು ಅನಿವಾರ್ಯವಾದ ಅನುರಾಗವು ಹುಟ್ಟಿತು. ಈ ಅನುರಾಗಕ್ಕೆ ದೈವಸಂಕಲ್ಪವೇ ಕಾರಣವಾಗಿರಬಹುದು. ನಾನು ಸಂಪತ್ತಿನಮೇಲೆ ದೃಷ್ಟಿಇಟ್ಟು ತಮ್ಮಲ್ಲಿ ಅನುರಕ್ತಳಾಗಲಿಲ್ಲ ಅಮೂಲ್ಯವಾದ ವಸ್ತ್ರಾಭರಣಗಳನ್ನೂ ಅಸಾಧಾರಣವಾದ ಗೃಹಾಂಗವಾದಿಗಳನ್ನೂ ಚಿತ್ರವಿಚಿತ್ರವಾದ ವಾಹನಾದಿಗಳನ್ನೂ ಷಡ್ರಸೋಪೇತಗಳಾದ ಆಹಾರಗಳನ್ನೂ ಎಲ್ಲರಿಗೂ ನೇತ್ರೋತ್ಸವಮಾಡುವ ಉಡಿಗೆತೊಡಿಗೆಗಳನ್ನೂ ಹಾಕಿಕೊಂಡು ಮೆರೆಯುವದಕ್ಕೆ ನನ್ನ ಮನವು ಒಪ್ಪುವದಿಲ್ಲ. ಸದಾ ಸನ್ಮಾರ್ಗಪ್ರವರ್ತಕರಾಗಿಯೂ ಲೋಕಬಂಧುಗಳಾಗಿಯೂ ಜಿತೇಂದ್ರಿಯರಾಗಿಯೂ ಭೋಗಾದಿಗಳ ವಿಷಯದಲ್ಲಿ ಪರಾಙ್ಮುಖರಾಗಿಯೂ ಮನೋವಾಕ್ಕಾಯಗಳಲ್ಲಿ ಒಂದೇವಿಧವಾಗಿಯೂ ಇರತಕ್ಕವರ ಸೇವೆಯೂ ಸಹವಾಸವೂ ಜನ್ಮಸಾರ್ಥಿಕ್ಯಕ್ಕೆ ಮುಖ್ಯಕಾರಣವಾದವುಗಳೆಂದು ನಿಶ್ಚಯಮಾಡಿ ತಮ್ಮಲ್ಲಿ ಅನುರಾಗವನ್ನು ಇಟ್ಟೆನು. ಗೃಹಕೃತ್ಯದಲ್ಲಿ ವೈರಾಗ್ಯ ಉಂಟಾಗಿ ಕಾರ್ಯಾಂತರಗಳಲ್ಲಿ ಆಸಕ್ತರಾಗಿ ನನ್ನನ್ನು ಪರಿತ್ಯಾಗಮಾಡುವ ಸಂದರ್ಭವು ಬರಬಹುದೆಂದು ನೀವು ಯೋಚಿಸಿ ಇದ್ದೀರಿ. ಅಂಥಾ ಕಾರ್ಯಾಂತರಗಳು ಬಂದು ಆ ಕಾರ್ಯನಿರ್ವಾಹಕ್ಕೆ ನಾನು ಸಹಾಯಭೂತಳಾಗದೇ ಹೋದಪಕ್ಷದಲ್ಲಿ ನಾನು ಪರಿತ್ಯಾಗಕ್ಕೆ ಅರ್ಹಳಾಗಿಯೇ ಆಗುತ್ತೇನೆ. ಹೀಗಿರಲಾಗಿ ಪೂರ್ವಭಾವಿಯಾಗಿಯೇ ಈ ವಿಷಯಗಳನ್ನೆಲ್ಲಾ ನನಗೆ ತಿಳಿಸಿ ನನ್ನ ಅನುರಾಗವು ನಿಸರ್ಗವಾದದ್ದು ಹೌದೋ ಅಲ್ಲವೋ ಎಂದು ನೀವು ಪರೀಕ್ಷಿಸುವದು ನೋಡಿದರೆ ಇನ್ನೂ ನನ್ನ ಮನಸ್ಸು ತಮಗೆ ವೇದ್ಯವಾಗಿಲ್ಲವೆಂದು ತೋರುತ್ತದೆ. ಈ ಅನುಮಾನಗಳನ್ನು ಬಿಟ್ಟು ಮನೋವಾಕ್ಕಾಯಕರ್ಮಗಳಲ್ಲಿಯೂ ನಾನು ನಿಮ್ಮ ಇಷ್ಟಾನುವರ್ತಿಯಾಗಿ ನಡೆದುಕೊಳ್ಳುವವಳೆಂದು ದೃಢವಾಗಿ ನಂಬಬೇಕು. ನನ್ನ ಸ್ವಭಾವವು ನಿಮಗೆ ಕಾರ್ಯತಃ ಗೊತ್ತಾಗುವದು ''

ಈ ವಿಧವಾದ ದೃಢಸಂಕಲ್ಪವುಳ್ಳ ಸ್ತ್ರೀರತ್ನಗಳು ಸಿಕ್ಕುವದು ಬಹಳ ಅಪೂರ್ವ.

ನೈಲ್‌ನದಿ.

ಈ ಪ್ರಪಂಚದಲ್ಲಿ ಅನೇಕ ದೊಡ್ಡನದಿಗಳುಂಟು. ಇವುಗಳಲ್ಲಿ ಆಫ್ರಿಕಾ ಖಂಡದ ನೈಲ್‌ನದಿಯು ಒಂದಾಗಿರುತ್ತದೆ. ಅನೇಕ ಚಿಕ್ಕನದಿಗಳು ಸೇರಿ ಪಶ್ಚಿಮದಲ್ಲಿ ಬಿಳಿನೈಲ್, ಮಧ್ಯದಲ್ಲಿ ನೀಲೀನೈಲ್, ಪೂರ್ವದಲ್ಲಿ ಪೂರ್ವದನೈಲ್'' ಎಂಬದಾಗಿ ಇದು ಮೂರು ಶಾಖೆಗಳುಳ್ಳದ್ದಾಗಿದೆ. ಬಿಳಿನೈಲ್ ಚಂದ್ರಪರ್ವತದ ತಪ್ಪಲಲ್ಲಿ ಏಳುತ್ತದೆ. ಈ ಶಾಖೆಯು ನ್ಯೂಬಿಯೂದೇಶದಲ್ಲಿ ಕೆಲವುಕಡೆ ೦ ಮೈಲಿ, ಕೆಲವುಕಡೆ ೫ ಮೈಲಿ ಅಗಲವುಳ್ಳದಾಗಿರುತ್ತದೆ. 'ನೀಲ್' 'ನೈಲ್' ನದಿಯು, ನೈಲಿನ ಮುಖ್ಯಶಾಖೆ. ಇದು 'ಗೋಜಂ' ಎಂಬ ಪ್ರಸ್ಥಭೂಮಿಗಳಲ್ಲಿ ಹುಟ್ಟಿ, ಡೆಂಬಿಯಾ ಸರೋವರವನ್ನು ಹೊಕ್ಕು ಸೆನ್ನಾರ್ ಮಾರ್ಗವಾಗಿ ಖಾರ್ಟೂಂಗೆ ಬಂದು ಅಲ್ಲಿ ಬಿಳಿನೈಲಿನೊಡನೆ ಸಂಗಮವಾಗುತ್ತದೆ. ಇವೆರಡುಸೇರಿ ಒಂದೇನದಿಯಾಗಿ ಬರ್‌ಬರ್ ದೇಶಕ್ಕೆ ಪ್ರವೇಶಿಸುತ್ತವೆ. ಅಲ್ಲಿ ಪೂರ್ವದ ನೈಲ್ ಬಂದು ಸಂಗಮವಾಗುತ್ತದೆ. ಅಲ್ಲಿಂದ ಮೂವರಕ್ಕೆ ಈ ಮೂರು ಶಾಖೆಗಳು ಸೇರಿ ಒಂದು ನದಿಯಾಗಿ ಪ್ರವಹಿಸಿ ಅನೇಕ ಸ್ಥಳಗಳಲ್ಲಿ ಬಹಳ ವಿಶಾಲವಾಗಿಯೂ ಇರುವ ಜಲಪತನಗಳಾಗಿ ನವ್ಯಪ್ರಾಂತ್ಯಗಳಿಗೆ ಇಳಿದು ನ್ಯೂಬಿಯಾದೇಶಕ್ಕೆ ಜಲಸಮೃದ್ಧಿಯನ್ನುಂಟುಮಾಡಿ ಈಜಿಪ್ಟ್ ದೇಶವನ್ನು ಪ್ರವೇಶಿಸುತ್ತದೆ. ಇಲ್ಲಿ ಬಹಳ ವಿಶಾಲವಾಗಿ ಹರಿಯುವುದರಿಂದ ಸಮುದ್ರದಂತೆ ಗಂಭೀರವಾಗಿ ಕಾಣುತ್ತದೆ. ಈಜಿಪ್ಟ್‌ದೇಶದಲ್ಲಿ ಅನೇಕಸ್ಥಳಗಳಲ್ಲಿ ಪೂರ್ವ ಪಶ್ಚಿಮವಾಹನಿಯಾಗಿ ಹರಿದು ಕೈರೊಪಟ್ಟಣವನ್ನು ಸೇರುತ್ತದೆ. ಈ ನದಿಯು ೧೧ ಮುಖಗಳಿಂದ ಸಮುದ್ರವನ್ನು ಸೇರುವುದು. ಈಪೈಕಿ 'ರಾಸೆಟ್ಟ್' 'ಡೆಮ್ಯೆಟಾ' ಎಂಬ ೨ ಮುಖಗಳಿಂದವೂತ್ರ ಹಡಗುಗಳು ನದಿಯಮೇಲಕ್ಕೆ ಪ್ರಯಾಣಮಾಡುವುವು. ಈ ನದಿಯು ಸಮುದ್ರತೀರದಿಂದ ಮೇಲೆ ೧೨೦೦ ಮೈಲಿಗಳವರಿಗೂ ಬಹಳ ವಿಸ್ತಾರವಾಗಿರುವುದು. ಈ ಭಾಗದಲ್ಲಿ ಈ ನದಿಗೆ ಉಪನದಿಗಳಾವುದೂ ಸೇರುವುದಿಲ್ಲ. ನೈಲ್‌ನದಿಯು ಜೂನ್‌ತಿಂಗಳು ಮಧ್ಯಭಾಗದಲ್ಲಿ ಹೊಸನೀರನ್ನು ಹೊಂದಿ ಪ್ರವಹಿಸುವುದಕ್ಕೆ ಉಪಕ್ರಮಿಸುವುದು. ಸಪ್ಟಂಬರು ಮಧ್ಯದಲ್ಲಿ ಪೂರ್ಣಪ್ರವಾಹವುಳ್ಳದ್ದಾಗುವುದು. ಅಂತೆಂ ಪ್ರವಾಹವು ಸ್ವಲ್ಪಸ್ವಲ್ಪವಾಗಿ ಜೂನ್‌ತಿಂಗಳವರಿಗೂ ಕಡಮೆಯಾಗುತ್ತಾ ಗಳು ಇರುವುದು. ಈ ಪೂರಾತಿಂಗಳಲ್ಲಿ

ಈಜಿಪ್ಟಿಗೆ ಈ ನದಿಯು ಕಲ್ಪವೃಕ್ಷದಂತೆ ಸಕಲ ಇಷ್ಟಾರ್ಥಗಳನ್ನು ಕೊಡುವುದು. ಇದರ ಪ್ರವಾಹವು ಪೂರ್ತಿಯಾಗಿ ಬಂದಾಗ ನೀರು ಉಕ್ಕಿ ಉಭಯಪಾರ್ಶ್ವದ ದಡಗಳ ಮೇಲೆ ಹರಿದು ಅನೇಕಮೈಲಿಗಳ ವರಿಗು ಭೂಮಿಗೆ ನೀರು ಗೊಬ್ಬರಕ್ಕೆ ಅನುಕೂಲವಾದ ಗೋಡು ಇವುಗಳನ್ನು ಪಾಡಿದಾಗ್ಯು ಒದಗಿಸಿ ಧಾನ್ಯ ಸಮೃದ್ಧಿಗೆ ಅವಕಾಶವನ್ನು ಕೊಡುವುದು. ಇದರಿಂದ ವಿಾನುಗಳನ್ನು ಹಿಡಿದು ಉಪಯೋಗಿಸಿಕೊಳ್ಳುವರು ಇದರ ನೀರನ್ನು ಸಾನಾರ್ಥವಾಗಿ ವಿನಿಯೋಗಿಸುವರು. ಇದು ಹಡಗುಗಳ ಪ್ರಯಾಣಕ್ಕೆ ಮಾರ್ಗವಾಗಿರುವುದು. ಇದರ ನೀರಿನ ಸಹಾಯದಿಂದ ಲಕ್ಷಾಂತರ ಜನರು ಮಾಡುವ ಕೆಲಸಗಳನ್ನು ಕೆಲವು ಜಲಯಂತ್ರಗಳು ಮಾಡುವುವು. ಇಂಥಾ ಕೆಲಸಗಳು ಮಾಡುವುದಕ್ಕೆ ಇನ್ನು ಅವಕಾಶವು ಬಹಳವಾಗಿರುತ್ತದೆ. ಹೀಗೆ ಈ ನದಿಯು ಪ್ರತ್ಯಕ್ಷವಾಗಿ ಲೋಕಕ್ಕೆ ಇಷ್ಟಾರ್ಥಗಳನ್ನು ಮಿತಿಯಿಲ್ಲದೇ ಕೊಡುವುದರಿಂದ ಪೂರ್ವೀಕರು ಇದನ್ನು ಪೂಜಿಸುತ್ತಿದ್ದರು. ಈ ನದಿಯು ದಡಗಳವೀಲೆ ಉರುಳಿ ಉಭಯಪಾರ್ಶ್ವಗಳಲ್ಲಿಯು ಇರುವ ಪ್ರದೇಶಗಳ ಮೇಲೆ ಹರಿದಾಗ ಈಜಿಪ್ಟ್ಪ್ರದೇಶದ ರಮಣೀಯತೆಯು ಅನ್ಯಾದೃಶವಾಗಿ ಪರಿಣಮಿಸುತ್ತದೆ. ಈಜಿಪ್ಟ್ಪ್ರದೇಶದಲ್ಲಿ ಮಳೆಯೇ ಬರುವುದಿಲ್ಲ. ನೈಲ್‌ನದಿಯು ತನ್ನಮೇರೆಯೊಳಗೆ ಇರುವದು. ಒಂಭತ್ತುತಿಂಗಳು ಈ ದೇಶದ ನೆಲವು ತೀಕ್ಷ್ಣವಾದ ಬಿಸಲಿನಿಂದ ಕಾದು ಬಿರಕುಬಿಟ್ಟಿರುತ್ತದೆ. ಇದರ ಪ್ರವಾಹವು ದಡಗಳಮೇಲಿನಿಂದ ಉರಳಿ ಈ ದೇಶವನ್ನೆಲ್ಲಾ ಆವರಿಸಿಕೊಳ್ಳುತ್ತದೆ. ಇಲ್ಲಿನ ಮನೆ ಮಠ ದೇವಸ್ಥಾನ ಮೊದಲಾದ ಕಟ್ಟಡಗಳೆಲ್ಲಾ ಎತ್ತರವಾದ ಗುಡ್ಡಗಳ ಮೇಲೆ ಕಟ್ಟಿರುತ್ತಾರೆ. ನಿಮ್ನಪ್ರದೇಶಗಳೆಲ್ಲಾ ನೀರಿನಿಂದ ಮುಚ್ಚಲ್ಪಟ್ಟು ದೇಶಕ್ಕೆ ಬೆಳೀವಸ್ತ್ರವನ್ನು ಉಡಿಸಿದಂತೆ ಇರುತ್ತದೆ. ಆಗ ಈಜಿಪ್ಟ್ದೇಶವು ಸಮುದ್ರಮಧ್ಯದ ಅನೇಕ ದ್ವೀಪಗಳಿರುವಂತೆ ಕಾಣಿಸುತ್ತದೆ. ಆ ದೇಶೀಯರಿಗೆ ಇದೇ ಉತ್ಸವಕಾಲವು. ಆಗ ಕರ್ಮಕರಿಗೆ ರಜಾ. ಇತರಕಸುಬಿನಿಂದ ಜೀವಿಸುವವರುಕೂಡ ಆಕಾಲದ ಉತ್ಸವಾನುಭವಾರ್ಥವಾಗಿ ತಮ್ಮ ಕೆಲಸಗಳನ್ನು ನಿಲ್ಲಿಸುತ್ತಾರೆ ಆಗ ದೋಣೀ ನಡಸುವವರಿಗೆವಾತ್ರ ಕೆಲಸವಿರುತ್ತದೆ. ಆದರೆ ಅವರ ಕೋಲಾಹಲಗಳನ್ನು ನೋಡಿದರೆ ಈ ಕೆಲಸವು ಅವರಿಗೆ ಕ್ರೀಡೆಯಾಗುವಂತೆ ತೋರುತ್ತದೆ. ಆಗ ಸಾವಿರಾರು ದೋಣಿಗಳು ಹಗಲುರಾತ್ರಿ ಸಂಚಾರಮಾಡುತ್ತಲಿರುವುವು. ಪ್ರತಿಯೊಂದು ದೋಣಿಯಿಂದ ಹೃದಯಂಗಮವಾದ ಸಂಗೀತ, ವಾದ್ಯವಿಶೇಷಗಳ ಧ್ವನಿಗಳು ಎಲ್ಲೆಲ್ಲಿಯೂ ಕೇಳು

ತ್ತಿರುವುವು. ಈ ಉತ್ಸವಕಾಲವು ಕಳೆದಕೂಡಲೆ ಅಂದರೆ ಪ್ರವಾಹವು ದಡದಮೇಲೆ ಹರಿಯುವುದು ನಿಂತಮೇಲೆ ಭೂಮಿಯುವೆಲೀನ ಹೆಚ್ಚುನೀರು ಹರಿದುಹೋಗುವುದು. ಎಲ್ಲರ ಭೂಮಿಗಳಿಗು ಆಫ್ರಿಕಾದ ಕಾಡಿನಿಂದ ಬಂದ ಅತ್ಯುತ್ಕೃಷ್ಟವಾದ ಗೊಬ್ಬರದ ಗೊಡ್ಡು ಬಂದು ಯಥೇಚ್ಛವಾಗಿ ತುಂಬುವದು. ಆಗ ಭೂಮಿಯನ್ನು ಸಮವಾಡಿ ಬೀಜಗಳನ್ನು ಹಾಕುವರು. ಸಮಸ್ತ ಭೂಮಿಗಳು ಪೂರಾಫಲವನ್ನು ಕೊಡುವುವು. ಈ ಫಲವು ಈಜಿಪ್ಟ್‌ದೇಶಕ್ಕೆ ಸವೃದ್ಧಿಯಾಗಿ ದೇಶಾಂತರಗಳಿಗೂ ರಫ್ತಾಗುವುದು. ಈ ನದಿಯು ಸಮುದ್ರದಂತೆ ಚಿತ್ರವಿಚಿತ್ರವಾದ ಅನೇಕ ಪ್ರಾಣಿಗಳಿಗೆ ವಾಸಸ್ಥಾನವಾಗಿರುವುದು. ಇದರಲ್ಲಿ ಮೊಸಳೆಗಳು ಹೆಚ್ಚು. ಕೆಲವು ಪ್ರದೇಶಗಳಲ್ಲಿ ನಿಂತ ನೀರು ಕುಡಿದರೆ ಮೊಸಳೆಗಳು ಬಂದು ಹಿಡಿದುಕೊಳ್ಳುತ್ತವೆ. ಅದಕ್ಕೋಸ್ಕರ ನಾಯಿಗಳು ತೀರದಲ್ಲಿ ನೀರು ಕುಡಿಯುತ್ತಾ ನೀರಿನ ಅಂಚಿನಲ್ಲಿ ಒಂದುಕಡೆಯಿಂದ ಮತ್ತೊಂದು ಕಡೆಗೆ ಓಡುತ್ತವೆ. ಈ ನದಿ ೪೦೦೦ ಮೈಲಿಗಳ ಉದ್ದವುಳ್ಳದ್ದಾಗಿದೆ. ಇದರ ತೀರದ ಲ್ಲಿರುವ ಮುಖ್ಯಪಟ್ಟಣಗಳು ಸೆನ್ನಾರ್, ಖಾರ್ಟೂನ್, ಕೈರೊ, ರಾಸೆಟ್ಟಾ, ಡೆಮಿಯಟ್ಟಾ, ಗಳಾಗಿರುತ್ತವೆ.

ದೇಶಭಾಷೆ.

(೨೦೩ ನೇ ಪುಟದ ಶೇಷ.)

೬ ದೇಶಭಾಷೆಯ ಉನ್ನತಿಯ ವಿಷಯದಲ್ಲಿ ಮದ್ರಾಸಿನಲ್ಲಿರುವ ಯೂನಿವರ್ಸಿಟಿ ಎಂಬ ಸಂಘವನ್ನುಕುರಿತು ವಿಶೇಷ ಹೇಳತಕ್ಕದಿಲ್ಲ. ಈ ಸಂಘದ ಮಹಿಮೆಯಿಂದ ದೇಶ ಭಾಷೆಯು ಇದುವರಿಗೆ ಉಳಿಯಿತಲ್ಲ. ಅದಕ್ಕಾಗಿ ಈಶ್ವರನಿಗೂ ಆ ಸಂಘಕ್ಕೂ ನಾವು ಕೃತಜ್ಞರಾಗಿರಬೇಕು. ಆ ಸಂಘದಿಂದ ಈಗ ನಮಗಾಗಬೇಕಾದ ಫಲವು ಲಭಿಸಲಾರದು. ಈಗಿನ ಕ್ರಮದಲ್ಲಿಯೇ ಆ ಸಂಘವು ಇನ್ನೂ ಪ್ರವರ್ತಿಸುವುದಾದರೆ ನಾವಿನ್ನೂ ಎಚ್ಚರಗೊಳ್ಳದಿದ್ದರೆ ನಮ್ಮಭಾಷೆಯಲ್ಲಿ ನಮಗಿರುವ ಆಂತರಿಕವಾದ ಅನುರಾಗವೆ ಬಯಲಾಗಬಹುದೆಂಬ ಕೆಲವರ ಭೀತಿಯು ನಿಜವಾಗಿ ಪರಿಣಮಿಸುವುದು.

೭ ಮೈಸೂರು ಕಾವ್ಯಮಂಜರಿಯವರ ಸಾಹಸವು ದೇಶೀಯ ವಿದ್ವನ್ಮಂಡಲಿಗೆ ಅಸಾಧಾರವಾದ ಸಂತೋಷವನ್ನುಂಟುಮಾಡಿದೆ. ಕಾವ್ಯಮಂಜರಿಯು ಈ ೪–೫ ವರ್ಷಗಳಲ್ಲಿ ಮಾಡಿರುವ ಕೆಲಸವನ್ನು ಸರಕಾರದವರು ಇನ್ನು ೪೦—೫೦ ವರ್ಷ ಪಾಠಶಾಲೆಗಳನ್ನು ಹೆಚ್ಚಿಸಿ ಕಷ್ಟಪಟ್ಟಿದ್ದರೂ ಮಾಡುವದಕ್ಕಾಗುತ್ತಿರಲಿಲ್ಲ. ಪುರಾತನ ಕಾವ್ಯಾವಲೋಕನವು ಈಗ ಸುಲಭವಾಯಿತು. ಪುರಾತನರ ಮಾರ್ಗವನ್ನು ಕಂಡುಹಿಡಿಯುವುದಕ್ಕೆ ಅನುಕೂಲವಾಯಿತು. ಕಾವ್ಯಮಂಜರಿಯು ಪ್ರಕಟವಾಗುವುದಕ್ಕೆ ಮೊದಲೂ ಪ್ರಕಟವಾದನಂತರವೂ ಬರೆದಿರುವ ಅನೇಕ ನಾಟಕಗಳು ಇದಕ್ಕೆ ಸಾಕ್ಷಿಯಾಗಿರುತ್ತವೆ. ಪುರಾತನ ಮಾರ್ಗದಲ್ಲಿ ನಾವು ಚೆನ್ನಾಗಿ ಪಳಗಬೇಕಾದರೆ ನಮಗೆ ಅವರ ಗ್ರಂಥಾವಲೋಕನವು ಬಹಳ ಬೇಕಾಗುವುದು. ಪುರಾತನರ ಮಾರ್ಗದಲ್ಲಿ ನಮಗೆಷ್ಟು ಜ್ಞಾನವು ಹೆಚ್ಚುತ್ತಾ ಬರುವುದೋ ನಮ್ಮ ಕರ್ತವ್ಯಕಾರ್ಯಕ್ಕೆ ನಾವು ಅಷ್ಟು ಹೆಚ್ಚು ಅಧಿಕಾರಿಗಳಾಗುತ್ತಾ ಬರುವೆವು. ಆದಕಾರಣ ಕಾವ್ಯಮಂಜರಿಯ ಸ್ಥಿತಿಯನ್ನು ನಾವು ಇನ್ನೂ ಹೆಚ್ಚಿಸಬೇಕು. ಆದರೆ ಪ್ರಾಚೀನಕಾವ್ಯಗಳ ಮುದ್ರಣಕ್ಕೆ ವಿನಿಯೋಗಿಸಲ್ಪಟ್ಟಿರುವುದರಿಂದ ನಮ್ಮ ಕಾವ್ಯಕ್ಕೆ ಪ್ರಕಾರಾಂತರವಾದ ಸಹಾಯವೂಡುವುದಲ್ಲದೆ ಬೇರೆಯಿಲ್ಲ.

೮ ಧಾರ್ವಾಡದಪ್ರಾಂತ್ಯದ ಕನ್ನಡಕ್ಕೂ ನಮ್ಮ ಕನ್ನಡಕ್ಕೂ ಚೆನ್ನಾಗಿ ಪರಿಶೀಲಿಸಿ ನೋಡಿದರೆ ಸಹಜವಾದ ವ್ಯತ್ಯಾಸವು ಬಹಳವಾಗಿಲ್ಲ. ಆದರೆ ಅಲ್ಲಿ ಈಗಿನವರು ಅನುಸರಿಸುವ ಕವಿತಾಮಾರ್ಗವನ್ನು ನೋಡಿದರೆ ಏನೂ ತೃಪ್ತಿಕರವಾಗಿಲ್ಲ. ಮೇಲಾಗಿ ಆ ಪ್ರಾಂತ್ಯದಲ್ಲಿ ಸಂಸ್ಕೃತ, ಮಹಾರಾಷ್ಟ್ರ ಭಾಷೆಗಳ ಪ್ರಾಬಲ್ಯವು ವಿಶೇಷವಾಗಿರುವುದು. ಕನ್ನಡಕ್ಕೆ ಮೋಹಿಸುವರು. ಮತ್ತು ಈ ಭಾಷೆಯನ್ನು ಬಳಸುವರು. ಅತ್ಯಂತ ವಿರಳರು, ಹೀಗಿದ್ದರೂ ಅಲ್ಲಿನ ವಿದ್ವನ್ಮಂಡಲಿಯು ಸ್ವಭಾಷೆಗಳಲ್ಲಿ ಮಮತೆಯನ್ನು ತೊರೆಯದೆ ಮಾಡತಕ್ಕ ಸಾಹಸವು ಚಿರಸ್ಮರಣೀಯವಾಗಿದೆ. ಅವರು ಕನ್ನಡಭಾಷಾಭಿವೃದ್ಧಿಗಾಗಿ ಕರ್ಣಾಟಕ ವಿದ್ಯಾವರ್ಧಕ ಸಂಘವೆಂಬ ಒಂದು ಸಂಘವನ್ನು ಸ್ಥಾಪಿಸಿಕೊಂಡು ಕನ್ನಡಭಾಷೆಗೆ ತಕ್ಕ ಸಾಹಿತ್ಯವನ್ನು ತರಬೇಕೆಂದು ಪ್ರಯತ್ನ ಪಡುತ್ತಿರುವರು. ಆ ಸಂಘಕ್ಕೂ ಮೈಸೂರ ಜನಕ್ಕೂ ಸಂಬಂಧವೇ ಇಲ್ಲ. ಇದ್ದರೂ ನಾಮಮಾತ್ರವಾಗಿದೆ. ಅನುಕೂಲವಾದ ವಿಶೇಷ ಸಂಬಂಧವನ್ನು ಬೆಳೆಯಿಸದಿದ್ದರೆ ಆ ಸಂಘದಿಂದ ಕನ್ನಡಕ್ಕೆ ಏನೂ ನಿಜವಾದ ಸಹಾಯವಾಗಲಾರದೆಂದು ಹೇಳಬಹುದು.

೯ ಮೈಸೂರಿಗೆ ಕನ್ನಡವೇ ಮುಖ್ಯವಾದ ಸ್ವಕೀಯವಾದ ಭಾಷೆ. ಕರ್ಣಾಟ

ರಾಜಧಾನಿಯಲ್ಲಿ ಕನ್ನಡ ಭಾಷೆಗೆ ತಕ್ಕ ಪ್ರೋತ್ಸಾಹವಿಲ್ಲದಿರುವುದು ದೇಶಕ್ಕೆ ಲಜ್ಜಾಸ್ಪದವಾದ ಮಾತಾಗಿದೆ. ನಮಗೀಗ ಅಗತ್ಯವಾದ ದೇಶಭಾಷಾಸಂಸ್ಕರಣವು ಆಂಗ್ಲೇಯಬಾಷಾಪರಿಚಯವಿಲ್ಲದೆ ಕೇವಲ ಪವಿತ್ರ ಸಂಸ್ಕೃತಾಧ್ಯಾಯಿಗಳಿಂದ ನಡೆಯುವುದಕ್ಕೆ ಸಾಧ್ಯವಲ್ಲವು. ಪೂರ್ವಕವಿಗಳು ತಮ್ಮ ಕವಿತಾಸಮೂಧಿಯಲ್ಲಿ ತಮಗೆ ಹೊಳೆದು ಆನಂದವನ್ನು ಕೊಟ್ಟ ಬಗೆಗಳನ್ನು ಅವರು ಬರೆದು ಕವಿಗಳಾದರು. ಈಗಿನವರು ಅವರಾಡಿದ ಮಾತುಗಳನ್ನೇ ಆಡುತ್ತಾ, ಆ ಮಾತುಗಳನ್ನು ತಿರುಗಮುರುಗಹಾಕಿ ತಮ್ಮದೆಂದು ನಟಿಸುತ್ತಾ ಅಥವಾ ಕೆಲವು ಸಮಯದಲ್ಲಿ ಅಣಕಿಸುತ್ತಾ ಕಾಲಕ್ಷೇಪಮಾಡುತ್ತಿರುವರಲ್ಲದೆ ನೂತನಸೃಷ್ಟಿಯಿಲ್ಲದೆ ಹೋಗಿದೆ. ಈ ಮಾತಿನ ಅಭಿಸಾಯವು ಸ್ಪಷ್ಟವಾಗುವಂತೆ ಒಂದೆರಡು ಉದಾಹರಣೆಗಳನ್ನು ತೆಗೆದುಕೊಂಡು ಯೋಚಿಸುವುದು ಯುಕ್ತವಾಗಿದೆ. ಪಟ್ಟಣವನ್ನು ಎಲ್ಲಿ ನೋಡಿದರೂ ಸ್ತ್ರೀಯಂತೆ ವರ್ಣಿಸಿದ್ದಾರೆ. ಎಲ್ಲಿ ನೋಡಿದರೂ ಒಂದೇ ವರ್ಣನೆಯೆ. ಬೇರೆ ಮಾತುಗಳು ವರ್ಣನವು ಮನೋದೃಷ್ಟಿಗೆ ಒಂದಾಕೃತಿಯಾಗಿ ನಿಲ್ಲುವುದೆ ಇಲ್ಲ. ಇಂಥಾ ವರ್ಣನದಿಂದ ಪ್ರಯೋಜನವೇನೆಂದು ಕವಿಯು ಯೋಚಿಸಬೇಕಲ್ಲವೆ ? ಸ್ತ್ರೀವರ್ಣನವನ್ನು ತೆಗೆದುಕೊಂಡರೆ ಆ ವರ್ಣನವೆಲ್ಲವನ್ನೂ ಓದಿನೋಡಿದರೂ ವರ್ಣಿತ ಸ್ತ್ರೀಯು ಅಕಾರವಾಗಲಿ ಶೀಲವಾಗಲಿ ಮನಸ್ಸಿಗೆ ಹೊಳೆಯುವುದಿಲ್ಲ. ಎಲ್ಲಿ ನೋಡಿದರೂ ಕಮಲನೇತ್ರೆ, ವೀಣನೇತ್ರೆ, ಚಂಪಕನಾಸೆ, ಸಿಂಹಕಟಿ ಈ ಮೊದಲಾದ ಶಬ್ದಗಳನ್ನು ಒಂದು ಚಮತ್ಕಾರವಾದ ಮೂರ್ಗದಲ್ಲಿ ಜೋಡಿಸಿದರೆ ನಾಯಕೀ ವರ್ಣನವು ಮುಗಿಯಿತು. ಭಾವಚಿತ್ರಕನಾದ ಈಗಿನ ಕವಿಯು ಕಾರ್ಯವು ಇತರರ ಚಿತ್ರವನ್ನು ತಿದ್ದಿಕೊಂಡಿರುವುದರಲ್ಲಿಯೇ ತೀರಿತು.

೧೦ ಈಗಿನ ಭಾಷಾಸ್ಥಿತಿಯನ್ನು ಸಾಮಾನ್ಯವಾಗಿ ನಿಷ್ಫಲವಾದ, ನಿರ್ಜೀವವಾದ ಪದಗಳೆಂಬ ಬೂದಿ ಮುಚ್ಚಿದ ಕೆಂಡವೆಂದು ಹೇಳಬಹುದು. ಒಳಗಡೆಯಲ್ಲಿ ಪೂರ್ವಕವಿಗಳು ಹುತಮಾಡಿದ್ದ ಸಹಜಶಕ್ತಿಯು ಅಡಗಿರುವುದು. ಬೂದಿಯನ್ನು ತೊಲಗಿಸಿ ಕಿಡಿಯನ್ನು ಅನುಕೂಲವಾದ ಸಂಸರ್ಗದಲ್ಲಿಟ್ಟರೆ ಜ್ವಾಲಾಮಾಲಿಯಾಗಿ ನಾನಾಮುಖದಲ್ಲಿ ಪ್ರಜ್ವಲಿಸದೆ ಬಿಡದು. ಮಿಕ್ಕ ತಮಿಳು, ತೆಲುಗು, ಮಲೆಯಾಳ ಭಾಷೆಯವರು ತಮ್ಮ ದೇಶಭಾಷೆಯು ಉನ್ನತಿಗೆ ತಕ್ಕ ಪ್ರಯತ್ನವನ್ನು ಮಾಡುತ್ತಾ ಇರುವಲ್ಲಿ ಕನ್ನಡಿಗರು ಮಿಸುಕದಿರುವುದು ಅವರಿಗೆ ಪ್ರತಿಷ್ಠೆಯನ್ನು ಕೊಡದು. ನಮ್ಮ ಸಾಹುಕಾರರೂ, ದೇಶಾಭಿಮಾನಿಗಳೂ, ಸರ್ಕಾರವೂ, ವಿದ್ವಾಂ

ಸರೂ, ಕನ್ನಡಭಾಷೆಯು ಸಂಸ್ಕರಣಕ್ಕೂ ಪೋಷಣಕ್ಕೂ ತಮ್ಮ ಕೈಲಾದಮಟ್ಟಿಗೂ ಶ್ರಮಪಟ್ಟು ದ್ರವ್ಯವನ್ನು ಜೋಡಿಸಿಕೊಂಡು ಒಂದು ಸಂಘವನ್ನು ಏರ್ಪಡಿಸುವುದು ಅನಿರ್ವಚನೀಯವಾದ ಆಚಂದಾರ್ಕವಾದ ಅವರ ಕೀರ್ತಿಗೆ ಬೀಜವಾಗುವುದು. ದೇಶಾಭಿಮಾನಿಗಳೆಗೆ ಇದೊಂದು ಅಸಾಧ್ಯಕಾರ್ಯವಲ್ಲವು.

೧೧ "ಬುದ್ಧಿಕರ್ಮಾನುಸಾರಿಣೀ" ಪೂರ್ವಸಂಸ್ಕಾರಕ್ಕೆ ತಕ್ಕಂತೆ ಬುದ್ಧಿಯು ಸಾಮಾನ್ಯವಾಗಿ ವಿಕಸ್ಥಿತವಾಗುವುದು. ಆದಕಾರಣ ಜನರ ಜ್ಞಾನವು ಹೀಗಿರಬೇಕೆಂದು ನಾವು ಮೊದಲು ನಿಶ್ಚಯಿಸಿಕೊಂಡರೆ ಅವರ ಪೂರ್ವಸಂಸ್ಕಾರರೂಪನಾದ ವಿದ್ಯಾಭ್ಯಾಸವು ಕ್ಲುಪ್ತವಾದ ಮಾರ್ಗದಲ್ಲಿ ತಿದ್ದಿದ್ದಾಗಬೇಕು. ಅಂಥಾ ಮಾರ್ಗಗಳನ್ನು ಆತಿದ್ದುಪಾಟನ್ನು ನಿಶ್ಚಯಿಸಿ ತೋರಿಸುವುದಕ್ಕೆ ಜೇತನವುಳ್ಳ ಸರಕಾರದವರಿಗೆ ಕಾಲಾನುಸಾರವಾಗಿ ಕರ್ತವ್ಯಕಾರ್ಯಗಳನ್ನು ಎಚ್ಚರಿಸಿ ತೋರಿಸುವುದಕ್ಕೆ ಪದವಿಯುಳ್ಳ ಒಂದು ಸಂಘವು ಎಷ್ಟು ಅಗತ್ಯವಾಗಿದೆ! ಆಸಂಘವು ವಿದ್ವಾಂಸರ ಅಭಿಪ್ರಾಯಗಳನ್ನು ಒಂದುಗೂಡಿಸಿ ಪ್ರಚುರಪಡಿಸುವುದಕ್ಕೆ ಸಮರ್ಥವಾಗುವುದು. ಮುಖ್ಯವಾಗಿ ದೇಶದಲ್ಲಿ ನಿಜವಾದದೊಂದು ಶಕ್ತಿಯಾಗಿ ಪರಿಣಮಿಸುವುದು.

೧೨ ಪುರಾತನಶಾಸ್ತ್ರವು ಸಂಸ್ಕೃತಭಾಷೆಯಲ್ಲಿ ಅಡಗಿದೆ. ಆಧುನಿಕಶಾಸ್ತ್ರವು ಇಂಗ್ಲೀಷುಭಾಷೆಯಲ್ಲಿ ಅಡಗಿದೆ. ಜನರಿಗೆ ಸಾಮಾನ್ಯವಾಗಿ ಈಯೆರಡುಭಾಷೆಗಳೂ ದೂರವಾಗಿರುವುವು. ಜನರು ಮೂಢರಾಗಿರುವುದಕ್ಕೂ ಮೌಢ್ಯವು ದಿನೆದಿನೆ ಹೆಚ್ಚುವುದಕ್ಕೂ ಶಾಸ್ತ್ರವು ಮರೆಯಾಗಿರುವುದೆ ನಿಶ್ಚಯನಾದಕಾರಣವು. ಪುರಾತನಶಾಸ್ತ್ರವನ್ನು ಆಧುನಿಕರಾದ ಪಾಶ್ಚಾತ್ಯರ ಶಾಸ್ತ್ರವನ್ನು ಸಾಮಾನ್ಯವಾಗಿ ಎಲ್ಲರಿಗೂ ತಿಳಿಯುವಂತೆ ಮಾಡಿದರೆ ವಿವೇಕಶಕ್ತಿಯ ವಿಜಯಧ್ವಜವೆಲ್ಲೆಲ್ಲಿಯೂ ನಿಬ್ಯಂಭಿಸುವುದು. ಈಯೆರಡು ಶಾಸ್ತ್ರಗಳ ಸ್ಪರ್ಧೆಯಿಂದಲೂ, ಏಕವಾಕ್ಯತೆಯಿಂದಲೂ, ಮೇಳನದಿಂದಲೂ ಶಾಸ್ತ್ರವು ನಿಜಕ್ಕೆ ನಿಂತು ಪ್ರವಚನವು ಹೆಚ್ಚುವುದಕ್ಕೆ ಮಾರ್ಗವಾಗುವುದು. ವಚನಗ್ರಂಥಗಳೂ, ಶಾಸ್ತ್ರೋಪನ್ಯಾಸಗಳು. ಚರಿತ್ರೆಯು, ಗುಣಲೋಪದೋಷದರ್ಶನರೂಪಕವಾದ ಮತ್ತು ವಿಮರ್ಶಾತ್ಮಕವಾದ ಲೇಖನಗಳೂ ಇಂಥಾ ಒಂದು ಸಂಘದ ಮೇಲುವಿಚಾರಣೆಗೊಳಪಟ್ಟು ಮುದ್ರಿತವಾಗಲಿ. ಕಾಲಕ್ಕೆತಕ್ಕ ಸಚೇತನವಾದ ಕಾವ್ಯಗಳೂ, ಈಗ ಶುದ್ಧಾಂಗವಾಗಿ ಇಲ್ಲದೆ ಹೋಗಿರುವ ಶಾಸ್ತ್ರಪಾಠವು ಹುಟ್ಟಿ ಎಲ್ಲಾಕಡೆಯಲ್ಲಿಯೂ ಹಬ್ಬುವುವು. ಕನ್ನಡದವಿದ್ವಾಂಸರನ್ನು ವರ್ಷಕ್ಕೊಂದುವೇಳೆ ಒಂದು

ಸ್ಥಳದಲ್ಲಿ ಸೇರುವಂತೆ ಮಾಡಿ ಭಾಷೋಚ್ಚ್ರಯವೆನ್ನೂ ತದಂಗಗಳಾದ ವಿಷಯು ಗಳನ್ನುಕುರಿತು ದೇಶಭಾಷೆಯಲ್ಲಿ ಚರ್ಚೆ ನಡೆಯುವಂತೆ ಮಾಡುತ್ತಾ ಬರಬೇಕು. ಇದು ತುಂಬಾ ಫಲಪ್ರದವಾಗುವುದು. ಸಂಘದವರು ಇಂಥಾ ತಿದ್ದುಪಾಟಿನಿಂದ ಭಾಷೆಗೆ ಸಂಸ್ಕಾರವೂ ಉನ್ನತಸ್ಥಿತಿಯೂ ತಾನಾಗಿಯೆ ಲಭಿಸುವುವು.

೧೩. ಮೇಲ್ಕಂಡ ಕಾರ್ಯಕ್ಕೆ ಸರಕಾರವು ಸಹಾಯಮಾಡೀತಲ್ಲದೆ ತಾನಾಗಿ ಮಾ ರ್ಗವನ್ನು ಹುಡುಕಿ ವ್ಯವಸಾಯಮಾಡುವಹಾಗಿಲ್ಲ. ಯೂನಿವರ್ಸಿಟಿಯೆಂಬ ವಿದ್ಯಾಭಿ ವೃದ್ಧಿ ಸಂಘದ ಮೇಲೆ ಭರವಸೆಯಿಡುವುದಕ್ಕೆ ೪೦ ವರ್ಷದಿಂದಲೂ ಆ ವಿದ್ಯಾಭ್ಯಾಸದ ಫಲವನ್ನು ಗಣಿಸುವರು ಎಂದಿಗೂ ಒಪ್ಪಲಾರರು. ಈಗ ಪ್ರಚಾರದಲ್ಲಿರುವ ಕಾವ್ಯ ಮಂಜರಿಯಿಂದಲೂ, ಮತ್ತು ಗ್ರಂಥಮಾಲೆ ವಿದ್ಯಾದಾಯಿನಿಗಳಿಂದಲೂ ಈ ಕಾರ್ಯ ವು ಈಗಿನರೀತಿಗಳಲ್ಲಿ ಸಾಧ್ಯವಲ್ಲ. ಆದಕಾರಣ ಒಂದು ಸಂಘವು ಅದರ ವಿಚಾರಣೆ ಯಲ್ಲಿ ಮೇಲೆ ಹೇಳಿದಂತಾ ಲೇಖನಗಳ ಮುದ್ರಣೆಗೆ ಸಾಕಾದಷ್ಟು ಅವಕಾಶವುಳ್ಳ ಎರ ಡು ಮಾಸಪತ್ರಿಕೆಗಳೂ ಈಗ ಅತ್ಯಗತ್ಯವಾಗಿ ಕಾಣುವುವು. ಇಂಥಾ ಒಂದು ಸಂಘದ ಪ್ರಯೋಜನಗಳನ್ನು ಸವಿಸ್ತಾರವಾಗಿ ಇಲ್ಲಿ ನಿರೂಪಿಸಿಲ್ಲ. ಈ ಲೇಖನವು ಇಂಥಾ ಒಂದು ಸಂಘದ ಅವಶ್ಯಕತೆಯನ್ನು ತೋರಿಸಬೇಕೆಂಬ ಉದ್ದೇಶದಿಂದ ಬರೆಯಿತು. ಈಗಿರುವ ಮಾಸಪತ್ರಿಕೆಗಳೂ ದೇಶೀಯರ ಗಮನಿಕೆಯೂ ದೇಶಭಾಷಾಸಂಸ್ಕರಣಕ್ಕೆ ಸಾಕಾಗಲಾರದೆಂಬ ಅಂಶವನ್ನು ಸಯುಕ್ತಿಕವಾದ ಸೂಚನೆಗಳಿಂದ ಗರ್ಭಿತವಾಗದೆ ಇದ್ದರೂ ಈ ಅಲ್ಪಲೇಖನದಿಂದ ದೇಶಭಾಷೆಯ ಕ್ಷೀಣದಶೆಯನ್ನು ನೋಡಿ ವ್ಯಥೆಪಡು ವರ ಮನಸ್ಸಿಗೆ ಹೊಳೆಯುವಂತೆ ಮಾಡಿದರೆ ನನ್ನ ಇಷ್ಟಾಪೂರ್ತಿಯಾದಂತೆ ಎಣಿಸುವೆನು.

12th October 8997.
Madras.

H. Lakshmenarasimiah
Kanarese Pandit
Christian College.
Madras.

ಸಸ್ಯಗಳು ಮತ್ತು ಅವುಗಳ ಆಹಾರ.

ಸಸ್ಯಗಳು ತಮ್ಮ ಆಹಾರಪದಾರ್ಥಗಳನ್ನು ದ್ರವ, ವಾಯು ಈ ಎರಡು ರೂಪಗಳಲ್ಲಿ ತೆಗೆದುಕೊಳ್ಳುತ್ತವೆ. ಒಂದು ಗಿಡವನ್ನು ಸುಟ್ಟರೆ ಅದರ ವಿಶೇಷವಾದ ಭಾಗವು ಹಬೇರೂಪದಲ್ಲಿ ವಾಯುಮಂಡಲಕ್ಕೆ ಸೇರುತ್ತೆ. ಆ ಗಿಡದ ಕೊಂಚವಾದ ಭಾಗವು ಬೂದಿಯಾಗಿ ನಿಲ್ಲುತ್ತೆ. ಬೂದಿ ಕೊಂಚವಾದರೂ, ಅದರಲ್ಲಿ ಸಸ್ಯಗಳ ಪ್ರಾಣಕ್ಕೂ ಅಭಿವೃದ್ಧಿಗೂ ಅತ್ಯವಶ್ಯಕವಾದ ವಸ್ತುಗಳು ಇರುವವು. ಹಬೆಯಾಗಿ ಹೋದ ಭಾಗಕ್ಕೆ "ಸಾವಯವಪದಾರ್ಥ" ಎಂದು ಹೆಸರು, ನಿಂತ ಬೂದಿಗೆ 'ನಿರವಯವಪದಾರ್ಥ' ಎಂದು ಹೆಸರು, 'ಸಾವಯವಪದಾರ್ಥವು ವಾಯುವಿನಿಂದಲೂ, ನಿರವಯವ ಪದಾರ್ಥವು ಮಣ್ಣಿನಿಂದಲೂ ಗಿಡಗಳಿಗೆ ಬರುತ್ತವೆ. ಈ ಸಾವಯವ ನಿರವಯವ ಪದಾರ್ಥಗಳು ಸಸ್ಯಗಳಲ್ಲಿ ಒಂದರೊಡನೆ ಇನ್ನೊಂದು ಪೂರ್ಣವಾಗಿ ಬೆರತು ಹೋಗುವವು.

ಎಲ್ಲಾ ಸಸ್ಯಗಳ ಅವಯವಗಳಲ್ಲಿಯೂ ನೀರು ಇರುತ್ತದೆ. ಒಣಗಿದ ಬೀಜಗಳಲ್ಲಿ ಸೇಕಡಾ ೧೦ ರಿಂದ ೧೫ ರವರಿಗೆ ಇರುತ್ತೆ. ಹಸಿಯ ಹುಲ್ಲಿನಲ್ಲಿ ಸೇಕಡಾ ೮೦ ರವರಿವಿಗೂ ಇರುತ್ತೆ. ಬೇರುಗಳಲ್ಲಿ ಅನೇಕವೇಳೆ ಸುಮಾರು ಸೇಕಡಾ ೯೦ ರವರಿವಿಗೂ ಇರುತ್ತೆ. ವೃಕ್ಷಗಳ ಜೇಗಾದ ಭಾಗದಲ್ಲಿ ಸುಮಾರು ಸೇಕಡಾ ೪೦ ರಿಂದ ೫೦ ರವರಿವಿಗೂ ಇರುತ್ತೆ.

ಸಾವಯವ ಪದಾರ್ಥದಲ್ಲಿ ಕೆಳಗೆ ಬರೆದಿರುವ ಮೂಲವಸ್ತುಗಳಿಂದ ಕಟ್ಟಲ್ಪಟ್ಟ ಸಂಯೋಗಜನ್ಯಪದಾರ್ಥಗಳಿವೆ. ಇಂಗಾಲ (ಕಾರ್ಬನ್); ಜಲಜನಕ (ಹೈಡ್ರಜಿನ್); ಆಮ್ಲಜನಕ (ಆಕ್ಸಿಜನ್); ಸಾರಜನಕ (ನೈಟ್ರೊಜನ್); ಗಂಧಕ (ಸಲ್ಫರ್.) ಈ ಮೂಲವಸ್ತುಗಳು ನಾನಾಪರಿಮಾಣಗಳಲ್ಲಿ ಸೇರುವುದರಿಂದ ನಾನಾವಸ್ತುಗಳು ಉಂಟಾಗುವುವು. (ಇಂಗಾಲ ಮತ್ತು ಜಲಜನಕ) ಇವು ಸೇರುವುದರಿಂದ ಅನೇಕಬಗೆ ಎಣ್ಣೆಗಳಾಗುತ್ತವೆ.

(ಇಂಗಾಲ, ಜಲಜನಕ, ಆಮ್ಲಜನಕ); ಇವುಗಳ ಸಂಯೋಗದಿಂದ ಪಿಷ್ಟ, ನಾನಾಬಗೆ ಸಕ್ಕರೆಗಳು, ಅಂಟುವಸ್ತುಗಳು, ವಿಘವಿಧವಾದ ಸಸ್ಯಜಾಮ್ಲಗಳು, ಇವುಗಳೆಲ್ಲಾ ಆಗುವವು.

(ಇಂಗಾಲ, ಜಲಜನಕ, ಆಮ್ಲಜನಕ, ಸಾರಜನಕ); ಇವುಗಳಿಂದ, ಕ್ವಿನಿಕ್ (ಕೊಯಿನ), ಸ್ಟ್ರಿಕ್ನಿಕ್, ಈ ಜಾತಿಗೆ ಸೇರಿದ ವಿಷಪದಾರ್ಥಗಳು ಉಂಟಾಗುವವು. ಇದಲ್ಲದೆ ಇನ್ನೂ ಅನೇಕ ವಸ್ತುಗಳಾಗುತ್ತವೆ.

(ಇಂಗಾಲ, ಜಲಜನಕ, ಆಮ್ಲಜನಕ, ಸಾರಜನಕ.) ಇವುಗಳಿಂದ ಬಲಕಾರಿ ಪದಾರ್ಥಗಳು (ಆಲ್‌ಬೂಮಿನಾಯಿಡ್ಸ್) ಉಂಟಾಗುತ್ತವೆ.

ಸಾವಯವ ಪದಾರ್ಥದಲ್ಲಿ ಸುಮಾರು ಸೇಕಡಾ ೫೦ಭಾಗ ಇಂಗಾಲವಿರುತ್ತೆ. ಸೇಕಡಾ ೪ ಭಾಗ ಸಾರಜನಕವಿರುತ್ತೆ, ಅಲ್ಪಸ್ವಲ್ಪ ಗಂಧಕವಿರುತ್ತೆ—ಉಳಿದ ಭಾಗ ವೆಲ್ಲಾ ಜಲಜನಕ ಮತ್ತು ಆಮ್ಲಜನಕ.

ಗಿಡಗಳಲ್ಲಿ ಸುಡುವುದಕ್ಕೆ ಆಗದಿರುವ ಪದಾರ್ಥಗಳಲ್ಲಿ ಎಂದರೆ ಬೂದಿಯಲ್ಲಿ ಅನೇಕ ಮೂಲವಸ್ತುಗಳಿವೆ. ಇವುಗಳಲ್ಲಿ ಕೆಲವು ಸಸ್ಯಗಳ ಬೆಳವಳಿಕೆಗೂ ಸಾಧಾರಣಕ್ಕೂ ಅತ್ಯಂತ ಆವಶ್ಯಕ; ಉಳಿದವುಗಳು ಮುಖ್ಯವಲ್ಲ. ರಂಜಕ (ಫಾಸ್ಫೊರಸ್), ಪೊಟಾಸಿಯಂ, ಕೆಲ್ಸಿಯಂ, ಮೆಗ್ನೀಷಿಯಂ, ಕಬ್ಬಿಣ (ಐರನ್) ಇವು ಅತ್ಯಾವಶ್ಯಕ ವಸ್ತುಗಳು; ಸಿಲಿಕಾನ್, ಸೋಡಿಯಂ, ಕ್ಲೋರಿನ್, ಮ್ಯಾಂಗನೀಸ್, ಇನ್ನೂ ಕೆಲವು ಮುಖ್ಯವಲ್ಲನವುಗಳು.

ಸಸ್ಯಗಳಲ್ಲಿ ಬೂದಿಯ ಅಂಶವು ಬಹಳ ಕಡಮೆ. ಹೊಟ್ಟನ್ನು ತೆಗೆದುಹಾಕಿದ ಒಣಬೀಜಗಳಲ್ಲಿ, ಸೇಕಡಾ ೩ ರಿಂದ ೫ ರವರೆವಿಗೆ ಬೂದಿ ಇರುವವಲ್ಲದೆ ಈ ಬೂದಿಯಲ್ಲಿ ಫೊಟಾಷ್ ಮತ್ತು ಸಾಸ್ಫೋರಿಕ್ ಆಸಿಡ್ ಹೆಚ್ಚಾಗಿರುತ್ತೆ. ಧಾನ್ಯಗಳ ಹುಲ್ಲಿನಲ್ಲಿ ಸೇಕಡಾ ೪ ರಿಂದ ೮ ರವರೆವಿಗೆ ಬೂದಿ ಇರುತ್ತೆ; ಮತ್ತು ಆ ಬೂದಿಯಲ್ಲಿ ಕೆಲ್ಸಿಯಂ ಸೆಲಿಸ್ ಆಕ್ಸೈಡು ಮೊದಲಾದ ಮುಖ್ಯವಲ್ಲದ ವಸ್ತುಗಳಿರುತ್ತವೆ ತೊಲೆಗಳಲ್ಲಿ ಸೇಕಡಾ ೩ ರಿಂದ ೪ ರವರೆವಿಗೆ ಇರುತ್ತೆ.

ಗಿಡಗಳಲ್ಲಿರುವ ನಿರವಯವ ಪದಾರ್ಥಗಳಲ್ಲಿ ಲೋಹಗಳು ನೈಟ್ರೇಟುಗಳಾಗಿಯೂ, ಸಲ್ಫೇಟುಗಳಾಗಿಯೂ, ಫಾಸ್ಫೇಟುಗಳಾಗಿಯೂ, ಕ್ಲೋರೈಡುಗಳಾಗಿಯೂ ಸಿಕ್ಕುವದಲ್ಲದೆ ಆಕ್ಸಾಲಿಕ್, ಮೇಲಿಕ್, ಸಿಟ್ರಿಕ್ ಮೊದಲಾದ ಸಸ್ಯಜಾಮ್ಲಗಳಿಂದ ಹುಟ್ಟಿದ ಲವಣಗಳಾಗಿಯೂ ಸಿಕ್ಕುತ್ತವೆ. ಅಲೋಹವಾದ ರಂಜಕವು ಫಾಸ್ಫೇಟಾಗಿಯೂ, ಸಿಲಿಕಾನ್ ಸಿಲಿಕವಾಗಿಯೂ ಸಿಕ್ಕುತ್ತವೆ. ಗಂಧಕವು ಸಲ್ಫೇಟಾಗಿ ಸಿಕ್ಕುತ್ತೆ. ಬೂದಿಯಲ್ಲಿ ಈ ಲವಣಗಳು ಸಿಕ್ಕುವದಿಲ್ಲ. ಏಕೆಂದರೆ ಉಷ್ಣದ ಬಲದಿಂದ

ಇವುಗಳೆಲ್ಲವೂ ಕಾರ್ಬೊನೇಟುಗಳಾಗುತ್ತವೆ.

ಸಸ್ಯಗಳು ತಮ್ಮ ಆಹಾರಕ್ಕಾಗಿ ತೊಡಕಾದ ಸಂಯೋಗಜನ್ಯಪದಾರ್ಥಗಳನ್ನು ತೆಗೆದುಕೊಳ್ಳುವುದಿಲ್ಲ. ಇದು ತೆಗೆದುಕೊಳ್ಳುವ ಪದಾರ್ಥಗಳು ಸುಲಭರೂಪದಲ್ಲವೆ. (ಉ) ಎಲೆಗಳಿಂದ ಇಂಗಾಲವನ್ನು ಬೇರುಗಳಿಂದ ನೀರನ್ನು ಹೊಂದಿ ಪಿಷ್ಟವನ್ನು ಉಂಟುಮಾಡುತ್ತವೆ. ಇದೇರೀತಿಯಲ್ಲಿ ಆಹಾರವನ್ನು ಬೇರುಗಳಿಂದಲೂ ಎಲೆಗಳಿಂದಲೂ ತೆಗೆದುಕೊಂಡು ಪಿಷ್ಟ, ಸಕ್ಕ್ರೆ, ಮೇದಸ್ಸು, ಲವಣಗಳು, ಬಲಕಾರಿಪದಾರ್ಥಗಳು, ಇನ್ನೂ ಅನೇಕ ಸಂಯೋಗಜನ್ಯ ಪದಾರ್ಥಗಳನ್ನು ಕಟ್ಟುತ್ತವೆ.

ಸಸ್ಯಗಳನ್ನು ಸುಟ್ಟರೆ ಹಬೆಯಾಗಿ ಹೋಗುವ ಸಾವಯವಪದಾರ್ಥದ ಮೂಲವಸ್ತುಗಳಲ್ಲಿ—ಇಂಗಾಲವನ್ನು ಅವು ಮುಖ್ಯವಾಗಿ ಎಲೆಗಳಿಂದ ತೆಗೆದುಕೊಳ್ಳುತ್ತವೆ. ಸಸ್ಯಗಳ ಎಲೆಗಳಲ್ಲಿ ಸೂಕ್ಷ್ಮರಂಧ್ರಗಳಿರುವವು. ಈ ರಂಧ್ರಗಳು ವಾಯುವಿನಲ್ಲಿರುವ ಇಂಗಾಲಾಮ್ಲ (ಕಾರ್ಬಾನಿಕ್ ಆಸಿಡ್) ವನ್ನು ಹೀರಿಕೊಂಡು, ಅದನ್ನು ಖಂಡಿಸಿ, ಇಂಗಾಲವನ್ನು ಇಟ್ಟುಕೊಂಡು ಆಮ್ಲಜನಕವನ್ನು ಹೊರಕ್ಕೆ ಬಿಟ್ಟುಬಿಡುತ್ತವೆ. ಈ ಕೆಲಸವನ್ನು ಸಸ್ಯಗಳ ಹಸುರಾದ ಭಾಗಗಳು ಸೂರ್ಯನ ಬೆಳಕಿನಲ್ಲಿ ಮಾಡುವವು. ಸಸ್ಯಗಳಿಗೆ ಬೇಕಾದ ಇಂಗಾಲವೆಲ್ಲಾ ಮುಖ್ಯವಾಗಿ ಎಲೆಗಳಿಂದಲೇ ಬರುತ್ತೆ. ಜಲಜನಕವು ಮತ್ತು ಆಮ್ಲಜನಕವು ಬೇರುಗಳು ತೆಗೆದುಕೊಳ್ಳುವ ನೀರಿನಿಂದ ಬರುತ್ತೆ. ಎಲೆಗಳು ಕೊಂಚಮಟ್ಟಿಗೆ ನೀರಿನ ಆವಿಯನ್ನು ಹೀರಿಕೊಳ್ಳುವವು. ಸಾರಜನಕವು ಮುಖ್ಯವಾಗಿ ಬೇರುಗಳಿಂದ ಬರುತ್ತೆ. ಎಲೆಗಳೂ ಕೊಂಚಮಟ್ಟಿಗೆ ಗಾಳಿಯಲ್ಲಿರುವ ಅಮೋನಿಯವನ್ನು ಹೀರಿಕೊಳ್ಳುವುದರಿಂದ, ಸಾರಜನಕವು ಕೊಂಚಮಟ್ಟಿಗೆ ಎಲೆಗಳಿಂದಲೂ ಬರುತ್ತೆ.

ಮಹಾರಾಣಿಯವರ ಶ್ರೇಯಃಪ್ರಾರ್ಥನೆ.

ವೃತ್ತಂ॥ ತವಪದಾಂಭೋಜಸೇವಾವ್ಯತವ ಸವಿವುದೌಭೂವಿಪಾಲಾಳಿಭೃಂಗಂ।
ಭುವನಸ್ತೋತ್ರಾರ್ಹಸತ್ಪೌರುಷಹೃದಯಸರೋಜಾಳಿಯುನ್ಮೀಲಿಕುಂಮೇ॥
ಣವಿನೀತಕ್ಷೋಣಿಪಾಲಾನ್ವಯತಿವಿಮಿರಕುಲಂಪಾರುಗುಂಸರ್ವಧಾತ್ರೀ।
ಧವೆ ನೀಂತ್ವತ್ಷಷ್ಟಿವರ್ಷೋತ್ಸವದದಿನವನುದ್ಭೂತಿಯಿಂದಂ॥೧॥

ಕಂದ ॥ ಜಗದೀಶಂ ವೋದದೊಳಾ। ವಗಮುಂನಿನಗೇಳ್ಗೆಯಿಾಗೆರವಿಶಶಿಯಿಪ್ಪ್ ॥
ನ್ನೆಗವೊರ್ಗಂಮುದಮುಂ ಕುಡು । ಸುಗುಣಾನ್ವಿತೆಯಾಗಲೆಂದು ಹಾರೈಪೆ
ವುನಾಂ ॥೦॥

ಕಂದ ॥ ತವಮುಖಸೂರ್ಯೋದಯದಿಂ । ದವನೀತಳದೊಳ್ತವಾಶ್ರಿತಮುಖಾಂಭೋ
ಜಂ ॥ ತವಕದೆ ವಿಕಸಿತಮಕ್ಕುಂ । ಪ್ರವಿದಿತವೈಭವಮನಾಂತು ಸದ್ಗುಣೆಯೆ
ನಿಸಾ ॥೩॥

ರಾಗ—ಕಾಪಿ. ಭಾವು.

ಜಗದೀಶಕೃಪೆಯುನಾಂತು ಧರೆಯೊಳಾವಗಂ । ಸೊಗವಸಾರ್ವಭೌಮಪದನಾಂತ ಇಂ
ಡಿಯಾ ॥ ಚಕ್ರವರ್ತಿನೀಯೆರಾಜಿಸಾ ॥ಪ॥ ಖಲರಾಜಜಾಲಶೈಲಕುಲಿಶೆವಾನಿತೆ ।
ಜಲದವಾಹನೋರುವಿದಿತವೈಭವಾನ್ವಿತೆ । ಖ್ಯಾತಪೂತಾನ್ವಯಶೋಭಿತೆ ॥ ೧ ॥
ಸುಜನಮಾನಸಾಂಬುಜಾತಲೋಕಬಾಂಧವೆ । ಅಜಿತವಂಶಪಾರಾವಾರಕುಮುದಬಾಂಧ
ವೆ । ಭೂರಿಕೃಪಾರಸಭರಿತಳೆ ॥ ೨ ॥ ದೀನಜಳಿಕಲ್ಪತರುವೆಸನ್ಮತಾತ್ಮಕೆ । ಭೂನಾ
ಥದೇವಸಾದಪಂಜರಶುಕಸುಶಾಖಕೆ । ವಾನ-ದಿಂದ-ಸಲಹುಯಮ್ಮನು ॥ ೩ ॥

ಪ್ರೆಂಚರಾಕ್ಸ್ ಗರಲ್‌ಸ್ಕೂಲು ಹೆಡ್ಮಾಸ್ಟರು,
ಆನವಟ್ಟಿ ರಾಮರಾವ್.

ಮೈಸೂರುಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು ೧೮೯೩—೯೪.

(ಕನ್ನಡ ಮಿಡಲ್‌ಸ್ಕೂಲುಗಳು.)

ಬೆಂಗಳೂರು ಡಿಸ್ಟ್ರಿಕ್ಟು :—ಈ ಡಿಸ್ಟ್ರಿಕ್ಟಿನಲ್ಲಿ ಹತ್ತು ಕನ್ನಡ ಮಿಡಲ್ ಸ್ಕೂಲುಗಳು ಇವೆ. ಇವುಗಳಲ್ಲಿ ನಾಲ್ಕು ತಾಲೊಲ್ಲೋಕ್‌ಸ್ಕೂಲುಗಳು, ಮೂರು ತಾಲೊಲ್ಲೋಕ್ ಬ್ರಾಂಚ್‌ಸ್ಕೂಲುಗಳು, ಎರಡು ಏಡೆಡ್‌ಸ್ಕೂಲುಗಳು, ಒಂದು ಮ್ಯುನಿಸಿಪಲ್‌ಸ್ಕೂಲು. ಚನ್ನಪಟ್ಟಣದ ಕನ್ನಡಸ್ಕೂಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೧೪೬. ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗಿದ್ದ ಹತ್ತುಮಂದಿಗಳಲ್ಲಿ ಆರುಮಂದಿ ತೇರ್ಗಡೆಯಾದರು. ನೆಲವಂಗಲದ ಸ್ಕೂಲಿನಲ್ಲಿ ೧೩೪ ಮಂದಿ ವಿದ್ಯಾರ್ಥಿಗಳು. ಲೋ। ಸೆ।

ಪರೀಕ್ಷೆಗೆ ಹೋಗಿದ್ದ ಎಂಟುಮಂದಿಗಳಲ್ಲಿ ಇಬ್ಬರು ತೇರ್ಗಡೆಯಾದರು. ಆನಿಕಲ್ ಕನ್ನಡಸ್ಕೂಲಿನಲ್ಲಿ ೧೧೭ ಮಂದಿ ವಿದ್ಯಾರ್ಥಿಗಳು ಇದ್ದರು. ಇವರಲ್ಲಿ ಲೊ। ಸೆ। ಪರೀಕ್ಷೆಗೆ ಹೋದ ಮೂರುಮಂದಿಯಲ್ಲಿ ಇಬ್ಬರು ತೇರ್ಗಡೆಯಾದರು. ಕ್ಲೋಸ್‌ಪೇಟೆ ತಾಲ್ಲೂಕ್ ಕನ್ನಡ ಸ್ಕೂಲಿನಲ್ಲಿ ೧೦೪ ಮಂದಿ ; ಲೋ। ಸೆ। ಪರೀಕ್ಷೆಗೆ ಹೋಗಿದ್ದವರ ಸಂಖ್ಯೆ ಒಂಭತ್ತು. ಇದರಲ್ಲಿ ತೇರ್ಗಡೆಯಾದವರ ಸಂಖ್ಯೆ ಎರಡು. ತಾಲ್ಲೂಕ್ ಬಾ೨ಜ್‌ಸ್ಕೂಲು ಇಮ್ಮಡಿಹಳ್ಳಿಯಲ್ಲಿ ಓದುವರು ಮೂವತ್ತುಮಂದಿ ಬಾಲಕರು. ಲೊ। ಸೆ। ಪರೀಕ್ಷೆಯಲ್ಲಿ ತೇರ್ಗಡೆಯಾದವರು ಒಬ್ಬರು ; ಪರೀಕ್ಷೆಗೆ ಹೋಗಿದ್ದವರು ಇಬ್ಬರು ತಾಲ್ಲೂಕ್ ಬಾ೨ಂಚಸ್ಕೂಲು ಸೋಲೂರಿನಲ್ಲಿ ಓದುತಿದ್ದವರು ನಲವತ್ತುಮಂದಿ ; ಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿತ್ತು. ವಡಗೇನಹಳ್ಳಿ ಬಾ೨ಂಚ್ ಸ್ಕೂಲಿನಲ್ಲಿ ಎಂಭತ್ತೇಳುಮಂದಿ ವಿದ್ಯಾರ್ಥಿಗಳು ; ಹಿಂದಣ ಸಾಲಿನಲ್ಲಿ ನೂರಿಪ್ಪತ್ತೆಂಟುಮಂದಿ ವಿದ್ಯಾರ್ಥಿಗಳು ಇದ್ದರು. ಆದಾಗ್ಯೂ ಸ್ಕೂಲು ಒಳ್ಳೆಸ್ಥಿತಿಯಲ್ಲಿರುತ್ತೆ. ಬೆಂಗಳೂರು ಮ್ಯೂನಸಿಪಲ್ ಕನ್ನಡಸ್ಕೂಲನ್ನು ಪೂರ್ವದಲ್ಲಿ ಅದು ಇದ್ದಸ್ಥಳಕ್ಕೆ ವರ್ಗಾಯಿಸಿದರು. ಹಿಂದಣ ಸಾಲಿನಲ್ಲಿದ್ದ ವಿದ್ಯಾರ್ಥಿಸಂಖ್ಯೆ ೧೪೭. ಈ ಸಾಲಿನಲ್ಲಿ ೨೦೨. ಲೊ। ಸೆ। ಪರೀಕ್ಷೆಗೆ ಹೋಗಿದ್ದ ಆರುಮಂದಿಯಲ್ಲಿ ಇಬ್ಬರು ತೇರ್ಗಡೆಯಾದರು. ಬೆಂಗಳೂರು ದೊಡ್ಡಪೇಟೆಯಲ್ಲಿರುವ ವೆಸ್ಲ್ಯಾರ್ಮಿರ್ಷ್ ಕನ್ನಡ ಸ್ಕೂಲಿನಲ್ಲಿ ೧೪೪ ಮಂದಿ ವಿದ್ಯಾರ್ಥಿಗಳು ಇರುತ್ತಾರೆ. ಆನಿಕಲ್‌ನಲ್ಲಿರುವ ಲ್ಯಾಡ್ಲಿ ಮಿರ್ಷ್ ಕನ್ನಡಸ್ಕೂಲಿನಲ್ಲಿ ೧೩೦ ಮಂದಿ ವಿದ್ಯಾರ್ಥಿಗಳು ಇದ್ದರು. ಈ ಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿರುತ್ತೆ.

ಈ ಕೆಳಗೆ ಸೂಚಿಸಿರುವ ವರ್ಗಾವರ್ಗಿಗಳು, ಬಡ್ತಿಗಳು ಮಂಜೂರಾಗಿವೆ.

ಮೈಸೂರು ನಾರ್ತ್‌ಸರ್ಕಲ್ ಡೆಪ್ಟಿ ಇನ್‌ಸ್ಪೆಕ್ಟರ್ ಮೆ॥ ಎಸ್. ರಂಗಾಚಾರ್ಯರವರು ಶಿವಮೊಗ್ಗಾಡಿಸ್ಟ್ರಿಕ್ಟಿಗೂ, ಅಲ್ಲಿ ಡೆಪ್ಟಿ ಇನ್‌ಸ್ಪೆಕ್ಟರ್ ಆಗಿದ್ದ ಮೆ॥ ಶ್ರೀನಿವಾಸರಾವ್ ಬಿ. ಎ. ಯವರು ಮೈಸೂರು ನಾರ್ತ್‌ಸರ್ಕಲ್‌ಗೂ ವರ್ಗಾಯಿಸಲ್ಪಟ್ಟರು.

ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟು ಡೆಪ್ಟಿಯಿನ್‌ಸ್ಪೆಕ್ಟರ್ ಮೆ॥ ಹೆಚ್. ಕೇಶವಯ್ಯನವರು ಮೂರುತಿಂಗಳು ಪ್ರಿವಿಲಿಜ್ ರಜಾಪಡೆದಿರುವುದರಿಂದ ಅವರ ಬದಲು ಕಡೂರು ಅ। ಡೆ। ಇನ್‌ಸ್ಪೆಕ್ಟರ್ ಮೆ॥ ಟಿ. ಶ್ರೀನಿವಾಸರಾಯರವರು, ತಮ್ಮ ಕೆಲಸದೊಂದಿಗೆ ಆ ಕೆಲಸವನ್ನೂ ನೋಡುವರು.

ಈಸ್ಟ್‌ಸರ್ಕಲ್ ಹಿಂದೂಸ್ಥಾನಿ ಸ್ಕೂಲು ಅ। ಡೆ। ಇ೯ಸ್ಪೆಕ್ಟರಾಗಿರುವ ಮೆ। ಸೈದ್ ಮಹಮ್ಮದ್‌ರವರು, ನೂರುರೂಪಾಯಿ ತಲಬಿನಮೇಲೆ ಹಿಂದೂಸ್ಥಾನಿಸ್ಕೂಲು ಡೆಪ್ಟಿ ಇ೯ಸ್ಪೆಕ್ಟರಾಗಿಯೂ, ವೆಸ್ಟ್‌ಸರ್ಕಲ್ ಹಿಂದೂಸ್ಥಾನಿಸ್ಕೂಲ್ ಅ। ಡೆ। ಇ೯ಸ್ಪೆಕ್ಟರ್ ಮೆ॥ ಖಾಜಾಮಹಮದ್ ಸಾ। ರವರು, ಅ। ಡೆ। ಇ೯ಸ್ಪೆಕ್ಟರಾಗಿಯೆ ಇದ್ದು ಕೊಂಡು, ಎಲ್ಲಾತಾಲ್ಲೂಕ್ ಬಾ೯ಂಚ್, ಮತ್ತು ಹೋಬಳಿ ಹಿಂದೂಸ್ಥಾನಿಸ್ಕೂಲುಗಳ ಇ೯ಸ್ಪೆಕ್ಟರ್ ಥಾರ್ಜ್‌ವಹಿಸತಕ್ಕದ್ದು. ಇವರ ಹೆಡ್‌ಕ್ವಾರ್ಟರ್ ಹಾಸನದಿಂದ ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿದೆ.

ಮೆ॥ ಸೈದ್‌ಮಹಮ್ಮದ್‌ರ ಆಫೀಸಿನ ನೌಕರಮಾನೇರ ತಲಬು ಡೆಪ್ಟಿ ಇ೯ಸ್ಪೆಕ್ಟರ ಆಫೀಸಿನ ನೌಕರಮಾನೇರ ತಲಬಿಗೆ ಬಡತಿ ಮಾಡಲ್ಪಟ್ಟಿದೆ.

ಚಿಕ್ಕಮಗಳೂರು ಹೈಸ್ಕೂಲಿಗೆ ಹೊಸದಾಗಿ ಒಬ್ಬರು ಹಿಂದೂಸ್ಥಾನಿ ಮುನಷಿಯವರನ್ನು (ಇನೇಗ್ರೇಡ್) ನೇಮಕಮಾಡಲು ಗೌರ್ನಮೆಂಟಿನವರು ಸಾ೯ಂಕ್ಷನ್ ಮಾಡಿರುತ್ತಾರೆ.

ತೀರ್ಥಹಳ್ಳಿ ತಾಲ್ಲೂಕಿನ ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಮೆಸ್ಟರಾಗಿದ್ದ ಮು॥ ಹೆಚ್. ಬಿ. ಶೇಷಗಿರಿರಾಯರಿಗೆ ೧೫ ರಿಂದ ೨೦ ರೂ। ಪ್ರಮೋಷನ್ ಸೊಡನೆ ಹೊಸದಾಗಿ ಏರ್ಪಡಿಸಿದ ಬಾಳೇಪಲ್ಲಿ ಆಂಗ್ಲೋವರ್ನಾಕ್ಯುಲರ್ ಸ್ಕೂಲಿಗೆ ವರ್ಗವಾಗಿದೆ.

ತುರುವೆಕೆರೆಯಲ್ಲಿ ಹೊಸದಾಗಿ ಏರ್ಪಡಿಸಿದ ಆಂಗ್ಲೋವರ್ನಾಕ್ಯುಲರ್‌ಸ್ಕೂಲಿಗೆ ಮು॥ ಕೆ. ವೆಂಕಟಸ್ವಾಮಿ ಅಯ್ಯರ್‌ನ್ನು ೨೦ ರೂ। ತಲಬಿನಿಂದ ಇಂಗ್ಲೀಷ್ ಅಸಿಸ್ಟೆಂಟ್ ಮಾಸ್ಟರನ್ನಾಗಿ ಮಾಡಿರುವರು.

ಚೆನ್ನರಾಯಪಟ್ಟಣದ ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರು ಮು॥ ಕೆ. ಎಸ್. ರಾಮಸ್ವಾಮಿ ಅಯ್ಯರವರನ್ನು, ೫೫ ರೂ। ಪ್ರಮೋಷನ್‌ನಿಂದ ಹೊಸದಾಗಿ ಏರ್ಪಡಿಸಿದ ಮುಳಬಾಗಿಲು ಆಂಗ್ಲೋವರ್ನಾಕ್ಯುಲರ್ ಸ್ಕೂಲಿಗೆ ವರ್ಗಾಯಿಸಿದೆ.

ಚಿಕ್ಕಮೆಗಳೂರು ಹೈಸ್ಕೂಲಿನಲ್ಲಿ ಖಾಲಿಯಿದ್ದ ೧೫೫ ರೂ। ಸ್ಥಳಕ್ಕೆ ಮೆ॥ ಕೆ. ರಾಮಕೃಷ್ಣಯ್ಯರವರನ್ನು ಅ। ಮಾ। ರಾಗಿ ಮೊಕರೂರು ಮಾಡಿರುವರು.

ಹೊಳಲಕೆರೆ ಆಂಗ್ಲೋವರ್ನಾಕ್ಯುಲರ್ ಸ್ಕೂಲಿಗೆ ಮು॥ ಎಂ. ಶೇಷಯ್ಯಂಗಾರವರನ್ನು ೧೦ ರೂ। ತಲಬಿನಮೇಲೆ ಅ। ಮಾ। ರನ್ನಾಗಿ ಮಾಡಿರುವರು.

ವಿದ್ಯಾದಾಯಿನಿ.

ಭಾಗ ೫.] ಡಿಸಂಬರ್ ೧೯೨೩. [ಸಂಚಿಕೆ ೧೦.

ಎಡಿಟರವರ ನೋಟ್ಸ್.

ಈಗ ಸ್ವಲ್ಪದಿವಸಗಳಿಗೆ ಹಿಂದೆ ಮದರಾಸ್ ಗೌರ್ನರ್ ಸಾಹೇಬರು ಒಂದು ವಿದ್ಯಾಶಾಲೆಗೆ ಹೋಗಿದ್ದಾಗ ಈಗ ನಡೆಯುತಿರುವ ವಿದ್ಯಾಭ್ಯಾಸಕ್ರಮವನ್ನು ಕುರಿತು ಮಾತನಾಡಿದರು. ಈಗಿನ ಕ್ರಮವು ಪಾಶ್ಚಾತ್ಯರ ಪದ್ಧತಿಯನ್ನು ವಿಶೇಷವಾಗಿ ಅನುಸರಿಸುತಿದೆಯೆಂತಲು, ಹಾಗೆ ಹೆಚ್ಚಾಗಿ ಪಾಶ್ಚಾತ್ಯರಕ್ರಮವನ್ನೇ ಅನುಸರಿಸುವುದು ಈ ದೇಶಕ್ಕೆ ಅಷ್ಟು ಸರಿಯಾದುದಲ್ಲವೆಂತಲೂ ಹೇಳಿದರು. ಇದರಿಂದ ಇಂಗ್ಲೀಷು ವಿದ್ಯಾಭ್ಯಾಸ ಮುಖ್ಯವಾದುದೇ, ಅಥವಾ ದೇಶಭಾಷೆಗಳ ವಿದ್ಯಾಭ್ಯಾಸ ಮುಖ್ಯವಾದುದೇ ಎಂಬ ವಿಷಯದಲ್ಲಿ ಚರ್ಚೆಯುಂಟಾಗಿದೆ. ಇಂಗ್ಲೀಷು ವಿದ್ಯಾಭ್ಯಾಸವೇನೋ ಮುಖ್ಯವಾದುದೇಸರಿ. ಆದರೆ ದೇಶದ ಪುರೋಭಿವೃದ್ಧಿಗೆ ದೇಶಭಾಷಾಭಿವೃದ್ಧಿಯು ಆವಶ್ಯಕ.

***

ಹಳ್ಳಿಸ್ಕೂಲುಗಳಲ್ಲಿ ಉಪಾಧ್ಯಾಯರಾಗಿರುವವರು ಕೆಲಸಗಾರರು ಮುಂತಾದವರಿಗೆ ಸಾಯಂಕಾಲದಲ್ಲಿ ಬೇರೆಯಾಗಿ ಪಾಠ ಹೇಳುವುದರಿಂದ ನೈಟ್‌ಸ್ಕೂಲುಗಳನ್ನು ಏರ್ಪಡಿಸುವುದಕ್ಕೆ ಅನುಕೂಲಗಳಿದ್ದರೂ ಅವರು ಹಾಗೆ ಮಾಡುವದಿಲ್ಲವೆಂದು ೧೯೨೫—೨೬ ನೇ ವರ್ಷದ ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು ತಿಳಿಸುತ್ತೆ. ಇದರಿಂದ ಕ್ರಮವಾಗಿ ಸ್ಕೂಲುಗಳಿಗೆ ಬರುವುದಕ್ಕಾಗದವರಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಅನುಕೂಲವಾಗುವುದು ; ಉಪಾಧ್ಯಾಯರಿಗೆ ತಮಗೆ ಬರುತಿರುವ ಸಂಬಳದ ಜತೆಗೆ ಇನ್ನೂ ಸ್ವಲ್ಪ ಹಣವೂ ವಿದ್ಯಾರ್ಥಿಗಳುಕೊಡುವ ಫೀಯಿಂದ ಬರುವುದು. ಇದುಸರಿ. ಆದರೆ ಹಗಲು ಸರಿಯಾಗಿ ತಮ್ಮ ಕೆಲಸವನ್ನು ಮಾಡಿದ ಉಪಾಧ್ಯಾಯ

ರಿಗೆಪುನಃ ಸರಿಯಾಗಿ ಸಾಯಂಕಾಲದಲ್ಲಿ ಬೋಧಿಸುವುದು ಸಾಮಾನ್ಯವಾಗಿ ಅಸಾಧ್ಯವಾಗುವುದು. ಒಂದುಪಕ್ಷೆ ಹೀಗೆಮಾಡುವುದು ಸಾಧ್ಯವಾದರೂ ಅದರಿಂದ ಉಪಾಧ್ಯಾಯರ ದೇಹಕ್ಕೆ ಕೆಡಕಾಗದಿರದು.

ಬಾಲಕರ ದೇಹದಾರ್ಢ್ಯ.

ನೂತನವಾದ ವಿದ್ಯಾಭ್ಯಾಸಕ್ರಮಕ್ಕನುಸಾರವಾಗಿ ಉಪಾಧ್ಯಾಯರು ಬಾಲಕರ ದೇಹದಾರ್ಢ್ಯದ ವಿಷಯವಾಗಿ ಲಕ್ಷ್ಯಕೊಡಬೇಕಾಗಿದೆ, ನಮ್ಮದೇಶದ ಜನರಿಗಿರುವ ಅಭಿಪ್ರಾಯಾನುಸಾರವಾಗಿ ಯೋಚಿಸುವವರು ಉಪಾಧ್ಯಾಯರಿಗೂ ಬಾಲಕರ ದೇಹದಾರ್ಢ್ಯಕ್ಕೂ ಸಂಬಂಧವೇನು? ಬಾಲಕರ ಆರೋಗ್ಯವಿಷಯದಲ್ಲಿ ಉಪಾಧ್ಯಾಯರು ಗಮನಕೊಡಬೇಕಾದುದುಹೇಗೆ ಅವಶ್ಯಕ? ಎಂದು ಕೇಳಬಹುದು. ಈ ಆಕ್ಷೇಪಣೆಗೆ ಸಮಾಧಾನವನ್ನು ಹೇಳುವುದು ಸುಲಭ. ಆರೋಗ್ಯವಿಲ್ಲದವನಿಗೆ ಮತ್ತಾವ ಸೌಕರ್ಯಗಳಿದ್ದರೂ ಸುಖವಿಲ್ಲವೆಂಬುದನ್ನು ಎಲ್ಲರೂ ಒಪ್ಪುವರು. ವಿದ್ಯಾಭ್ಯಾಸದ ಉದ್ದೇಶವೂ ಮುಖ್ಯವಾಗಿ ಬಾಲಕರಿಗೆ ಮುಂದಕ್ಕೆ ಸುಖವನ್ನುಂಟುಮಾಡುವದಾದುದರಿಂದ ಉಪಾಧ್ಯಾಯರು ಬಾಲಕರ ದೇಹದಾರ್ಢ್ಯದ ವಿಷಯದಲ್ಲಿ ಗಮನಕೊಡಲೇಬೇಕೆಂಬುದು ಇದರಿಂದ ಸಿದ್ಧವಾಗುವುದು.

ಇಷ್ಟೇಅಲ್ಲ. ಬಾಲಕರಿಗೆ ಆರೋಗ್ಯಕಡಮೆಯಾದರೆ ಪಾಠಶಾಲೆಯಲ್ಲಿ ನಡೆಯಬೇಕಾದ ಬೋಧನೆಯಾಗಲಿ ನೀತ್ಯನುಶಾಸನವಾಗಲಿ ಸರಿಯಾಗಿ ನಡೆಯದೆಹೋಗುವುದು. ದೇಹಕ್ಕೆ ಆಲಸ್ಯವಾದಾಗ ಬುದ್ಧಿಯು ಸರಿಯಾಗಿ ಕೆಲಸಮಾಡಲಾರದು. ದೇಹದಲ್ಲಿ ಲವಲವಿಕೆಯಿದ್ದರೆ ಬುದ್ಧಿಯಲ್ಲಿಯೂ ಲವಲವಿಕೆಯಿರುವುದು. ಇದು ಎಲ್ಲರಿಗೂ ಅನುಭವಸಿದ್ಧವು. ದೇಹಕ್ಕೂ, ಬುದ್ಧಿಗೂ ಈ ವಿಧವಾದ ಸಂಬಂಧವಿರುವುದರಿಂದ ಬುದ್ಧಿಯನ್ನು ವೃದ್ಧಿಪಡಿಸಬೇಕೆಂದು ಪ್ರಯತ್ನಪಡುವವರೆಲ್ಲರೂ ದೇಹದಸ್ಥಿತಿಯ ವಿಷಯವಾಗಿಯೂ ಪರ್ಯಾಲೋಚಿಸಬೇಕು. ಪರೀಕ್ಷಿಸಿ ನೋಡಿದರೆ ದೇಹಸ್ಥಿತಿ ಸರಿಯಾಗಿಲ್ಲದವರಿಗೆ ಸಾಮಾನ್ಯವಾಗಿ ಒಳ್ಳೇ ನಡತೆಯೂ ಕಡಮೆಯಾಗಿರುವುದು ನಮಗೆ ಗೊತ್ತಾಗುವುದು. ಅಂಥವರಲ್ಲಿ ಚಿತ್ತಸ್ಥೈರ್ಯ, ಧೈರ್ಯ ಮುಂತಾದ ಗುಣಗಳು ಕಡಮೆಯಾಗಿರುವುವು. ಅವರು ಬಹಳ ಬೇಗ ಕೋಪತಾಪಗಳಿಗೆ ಒಳಗಾ

ಗುವರು. ಇದರಿಂದ ಅವರಿಗೆ ಸಹನೆಯು ಕಡಮೆಯೆಂದು ಸ್ಪಷ್ಟವಾಗುವುದು. ಚಿತ್ತ ಸ್ಥೈರ್ಯ, ಧೈರ್ಯ, ಸಹನೆ ಇಂಥ ಗುಣಗಳು ಕಡಮೆಯಾದವರಲ್ಲಿ ಇತರ ಸುಗುಣಗಳು ಸಹ ಕಡಮೆಯೇ ಎಂದು ಹೇಳಬಹುದು. ಆದುದರಿಂದ ಬಾಲಕರ ತಿಳುವಳಿಕೆ ಮತ್ತು ನಡತೆ ಇವುಗಳನ್ನು ವೃದ್ಧಿಮಾಡಬೇಕಾದರೂ ದೇಹದಾರ್ಢ್ಯವು ಅವಶ್ಯಕವಾಗಿರುವುದು.

ದೇಹವನ್ನು ಅಲಕ್ಷ್ಯದಿಂದ ಕಾಣುವುದು ಮತ್ತು ಉಪವಾಸಾದಿಗಳಿಂದ ಕೋಪಿಸುವುದು ಒಳ್ಳೆಯದೆಂದು ಪೂರ್ವದಲ್ಲಿ ಕೆಲವರು ನಂಬಿದ್ದರು. ಇದು ಈಗಿನ ಕಾಲಕ್ಕೆ ಒಪ್ಪತಕ್ಕ ಅಭಿಪ್ರಾಯವಲ್ಲ. " ಶರೀರಮಾದ್ಯಂ ಖಲುಧರ್ಮಸಾಧನಮ್ " ಎಂಬಂತೆ ಯಾವಕೆಲಸ ಮಾಡುವುದಕ್ಕೂ ಮೊದಲು ದೇಹಸ್ಥಿತಿ ಸರಿಯಾಗಿರಬೇಕು. ಶರೀರಸ್ಥಿತಿಯು ಸರಿಯಾಗಿರಬೇಕಾದರೆ ಮಗುವನ್ನು ಹುಟ್ಟಿದ ಕ್ಷಣ ಮೊದಲೊಂಡು ಕ್ರಮವಾಗಿ ನೋಡಿಕೊಳ್ಳಬೇಕು. ಅಗಿನಿಂದಲೂ ಸ್ವಾಭಾವಿಕವಾಗಿಯೇ ಆಗುವ ಬೆಳವಣಿಕೆಯು ಕ್ರಮವನ್ನರಿತು ಅದಕ್ಕೆ ಕುಂದಕಬಾರದಂತೆ ತಕ್ಕವರು ನೋಡಿಕೊಳ್ಳುತಿರಬೇಕು. ಇದು ಮುಖ್ಯವಾಗಿ ತಂದೆ ತಾಯಿಗಳ ಕೆಲಸವಾದುದರಿಂದ ಪ್ರತ್ಯೇಕಕ್ಕೆ ಬೇಕಾದುದಲ್ಲ. ಕೆಲವು ವರ್ಷಗಳು ಕಳೆದ ನಂತರ ಬಾಲಕರು ಪಾಠಶಾಲೆಗೆ ಬರುವುದಕ್ಕೆ ಪ್ರಾರಂಭಿಸುತಲೆ ಅವರ ದೇಹದಾರ್ಢ್ಯದ ವಿಷಯವಾಗಿ ಉಪಾಧ್ಯಾಯರು ಮಾಡಬೇಕಾದುದನ್ನು ಮಾತ್ರ ಇಲ್ಲಿ ತಿಳಿಸಿದರೆ ಸಾಕು.

ಪಾಠಶಾಲೆಯಲ್ಲಿ ಬಾಲಕರಿಗೆ ಅನಾರೋಗ್ಯಕ್ಕೆ ಅಸ್ಪದ ಕೊಡದಂತಿರುವುದು ಇವರು ಮಾಡಬೇಕಾದುದರಲ್ಲಿ ಮೊದಲನೆಯದು. ಇದಕ್ಕೆ ಮುಖ್ಯವಾಗಿ ಪಾಠಶಾಲಾ ಕಟ್ಟಡವಿರುವಸ್ಥಳವು ಉಚಿತವಾದುದಾಗಿರಬೇಕು. ವಿದ್ಯಾಭ್ಯಾಸಕ್ಕಾಗಿ ಬರುವ ಬಾಲಕರಿಗೆಲ್ಲ ಸಾಕಾಗುವಷ್ಟು ಗಾಳಿ, ಬೆಳಕು ಬರುವುದಕ್ಕೆ ಕಟ್ಟಡದಲ್ಲಿ ಅನುಕೂಲವಿರಬೇಕು. ಪಾಠಶಾಲೆಯಲ್ಲಿ ಬಾಲಕರು ಮಾಡಬೇಕಾದ ಕೆಲಸಗಳನ್ನು ಮಾಡುವಾಗ್ಗೆ ಅವರ ದೇಹಕ್ಕೆ ಯಾವವಿಧವಾದ್ದೊಂದರೆಯೂ ಬಾರದಿರುವುದಕ್ಕೆ ತಕ್ಕ ಏರ್ಪಾಡನ್ನು ಮಾಡಿರಬೇಕು. ಈ ಅನುಕೂಲ್ಯಗಳ ಜತೆಗೆ ಅವರ ಬುದ್ಧಿಯನ್ನು ವಿಶೇಷವಾಗಿ ಶ್ರಮಪಡಿಸಿ, ಅದರಿಂದ ದೇಹಕ್ಕೆ ಆಲಸ್ಯವನ್ನುಂಟುಮಾಡದಿರಬೇಕು. ಈ ನಾಲ್ಕು ನಿಯಮಗಳಿಗನುಗುಣವಾಗಿರುವಂತೆ ಉಪಾಧ್ಯಾಯರು ನಡೆದುಕೊಂಡರೆ ಬಾಲಕರಿಗೆ ಅನಾರೋಗ್ಯಕ್ಕೆ ಕಾರಣವಿರುವುದಿಲ್ಲ. ಸ್ವಲ್ಪ ವಯಸ್ಸಾದನಂತರ ಆರೋಗ್ಯಶಾಸ್ತ್ರದ ಮುಖ್ಯ ತತ್ವಗಳನ್ನು ಬಾಲಕರಿಗೆ ತಿಳಿಸುವುದು ಒಳ್ಳೆಯದು.

ಅನಾರೋಗ್ಯಕ್ಕೆ ಅಸ್ಪದವನ್ನು ಕೊಡದಿರುವುದು ಮಾತ್ರ ಸಾಲದು. ಇದರ ಜತೆಗೆ ಬಾಲಕರಿಂದ ಸ್ವಲ್ಪಮಟ್ಟಿಗೆ ವ್ಯಾಯಾಮವನ್ನು ಮಾಡಿಸಿ ಅವರ ಆರೋಗ್ಯವನ್ನು ಹೆಚ್ಚಿಸಬೇಕು; ಮತ್ತು ಅವರ ಅಂಗಗಳಿಗೆ ಪುಷ್ಟಿಯನ್ನುಂಟುಮಾಡಬೇಕು. ವ್ಯಾಯಾಮಕ್ಕಾಗಿ ಪಾಠಶಾಲಾವೇಳಾಪತ್ರಿಕೆಯನ್ನು ಮಾಡುವಾಗ್ಗೆ ಬೇರೆ ಕಾಲವನ್ನು ನಿಷ್ಕರ್ಷಿಸಬೇಕು. ನಿಯಮಿತಕಾಲದಲ್ಲಿ ಅದನ್ನು ಕ್ರಮವಾಗಿ ಮಾಡಿಸಬೇಕು. ಚಿಕ್ಕ ಹುಡುಗರಿಗೆ ಡ್ರಿಲ್ ಮಾತ್ರ ಸಾಕು.

ವಿದ್ಯಾಭ್ಯಾಸಮಾಡುವವರಲ್ಲನೇಕರು ಸ್ವಲ್ಪದಿವಸಗಳನಂತರದಲ್ಲಿಯೇ ದೇಹಕ್ಕೆ ವಿಶೇಷವಾಗಿ ಶ್ರಮವಾಗುವ ಕೆಲಸಗಳನ್ನು ಮಾಡಬೇಕಾಗುವುದು. ಅಷ್ಟು ಬೇಗ್ಗನೆಯೇ ಅಂಥ ಕೆಲಸಗಳನ್ನು ಮಾಡುವುದಕ್ಕೆ ಪ್ರಾರಂಭಿಸಬೇಕಾದುದು ಬಹಳ ಜನಗಳಿಗೆ ಆವಶ್ಯಕವಾಗುವುದು. ಪಾಠಶಾಲೆಯಲ್ಲಿದ್ದಾಗ ಅವರ ದೇಹಕ್ಕೆ ಲಕ್ಷ್ಯ ಕೊಡದಿದ್ದರೆ ಅದು ಮುಂದಕ್ಕೆ ಅವರು ಮಾಡಬೇಕಾದ ಕೆಲಸಗಳಿಗೆ ಎಷ್ಟು ಕುಂದಕವಾಗುವುದೋ ಅದನ್ನು ಯೋಚಿಸಿದರೆ ಪಾಠಶಾಲೆಯಲ್ಲಿ ಉಪಾಧ್ಯಾಯರು ಬಾಲಕರ ದೇಹದಾರ್ಢ್ಯದ ವಿಷಯವಾಗಿ ಗಮನ ಕೊಡುವುದು ಎಷ್ಟುಮಟ್ಟಿಗೆ ಅವಶ್ಯಕವೆಂಬುದು ಚೆನ್ನಾಗಿ ಗೊತ್ತಾಗುವುದು.

ಕಿಂಡರ್‌ಗಾರ್ಟನ್.

(ಪೀಠಿಕೆ)

'ಬಳ್ಳಿಯಾಗಿ ಬಗ್ಗುವುದಲ್ಲದೆ ಮರವಾಗಿ ಬಗ್ಗದು' ಎಂಬ ಗಾದೆಯು ವನಸ್ಪತಿವರ್ಗಕ್ಕೆ ಹೇಗೆ ಸಹಜವೋ ಮನುಷ್ಯವರ್ಗಕ್ಕೂ ಹಾಗೆ ಸಹಜವೆಂದು ಅರಿತು ಬಾಲಬೋಧೆಯನ್ನು ಕ್ರಮಪಡಿಸಲು ಅಪೂರ್ವ ಪದ್ಧತಿಯನ್ನು ಆಚರಣೆಗೆ ತಂದವನು ಫ್ರೊಬಲ್ ಎಂಬುವನು. ಇವನು ೧೮೩೦ರಲ್ಲಿ ಬಾಲಬೋಧನಾಕ್ರಮಕ್ಕೆ ಕಿಂಡರ್‌ಗಾರ್ಟನ್ ಎಂದು ಹೆಸರಿಟ್ಟು ಆ ಕ್ರಮವನ್ನು ಆಚರಣೆಗೆ ತಂದನು. ವಯಸ್ಕರಾದವರಲ್ಲಿ ಇರತಕ್ಕ ಅಜ್ಞಾನಕ್ಕೂ, ದುಷ್ಪ್ರವರ್ತನೆಗೂ ದೌರ್ಬಲ್ಯಕ್ಕೂ, ಅವರ ಬಾಲ್ಯದಲ್ಲಿ ವಿದ್ಯಾಭ್ಯಾಸಕ್ಕೆ ಉಂಟಾದ ಅನಾದರಣೆಯೂ, ಬೋಧಸೌಕರ್ಯವು ಕಾರಣವೆಂದು

ನಿಶ್ಚಲಸಿದನು. ಮಕ್ಕಳಲ್ಲಿ ಸಸಿಗಳಲ್ಲಿಯೂ ಸಾಮಾನ್ಯಗುಣವಿರುವುದೆಂದು ಅವನು ಹೇಳುತ್ತಿದ್ದನು. ಸಸಿಯನ್ನು ಪೋಷಿಸಿ ಫಲವತ್ತನ್ನಾಗಿ ಮಾಡುವುದಕ್ಕೆ ತೋಟಗಾರನು ಎಷ್ಟು ಅನುಕೂಲಗಳನ್ನು ಕಲ್ಪಿಸಿಕೊಂಡು, ಕಂಟಕಗಳನ್ನು ಮುರಿದು ಅದರ ಏಳಿಗೆಯನ್ನು ಅತುರದಿಂದ ಕಾಯುವನೋ ಹಾಗೆಯೆ ಬಾಲಕರಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಟ್ಟು ತೊಂದರೆಗಳನ್ನು ತಪ್ಪಿಸಿ, ಅವರ ಏಳಿಗೆಯನ್ನು ಕಾಯುವುದು ಅವಶ್ಯಕವು. ಸಸಿಯು ಏಳಿಗೆಗೆ ಅವಶ್ಯಕವಾದವು ಉತ್ಕೃಷ್ಟವಾದ ಭೂಮಿ, ಸಾಕಾದಷ್ಟು ಸೂರ್ಯರಶ್ಮಿ, ಬೇಕಾದಷ್ಟು ನೀರು, ಇವುಗಳು. ಸಸಿಯು ದಿನೇ ದಿನೇ ದೊಡ್ಡದಾಗಿ, ಸೊಂಪಾಗಿ ಬೆಳೆದು, ಪುಷ್ಪಫಲಭರಿತವಾಗಿ, ತೋಟಗಾರನಿಗೆ ಮಾತ್ರವಲ್ಲದೆ ಅದನ್ನು ನೋಡಿದ ಎಲ್ಲರಿಗೂ ಆಹ್ಲಾದವನ್ನುಂಟುಮಾಡುವುದು. ಅದೇ ಸಸಿಯನ್ನು ಈ ಅನುಕೂಲಗಳು ಯಾವದೂ ಇಲ್ಲದ ಕರಲಭೂಮಿ ಸೂರ್ಯರಶ್ಮಿಯೇ ಸೋಂಕದ ಕತ್ತಲು ಕೋಣೆಯಲ್ಲಿ ನೀರನ್ನೂ ಹೆಚ್ಚಾಗಿ ಹೊಯ್ದು ಬೆಳೆಸಿದರೆ ಅದೂ, ಅರ್ಧ ಹೊಳಕ್ಕು, ಸ್ವಲ್ಪ ಬಣಗಿ, ಪೊಟಕಾಗಿ, ಎಷ್ಟೋದಿವಸದಮೇಲೆ ಎಲ್ಲೊ ಒಂದು ಹುಮ್ಮಸ್ಸು ಬಿಟ್ಟರೆ ಅರಳುವುದರೊಳಗೆ ಉದರಿಹೋಗುವರೀತಿಯಲ್ಲಿ ಬೆಳೆಯುವುದು. ಉತ್ಕೃಷ್ಟವಾದ ಭೂಮಿಯಲ್ಲೆಲ್ಲಾ ಅನುಕೂಲಗಳಿಂದಲೂ ಸೊಂಪಾಗಿ ಬೆಳೆಯುತಕ್ಕ ಸಸಿಗೂ ಕೃಮಿಕೀಟಾದಿಗಳ ಬಾಧೆಯು ಮಧ್ಯದಲ್ಲಿ ಬರುವುದುಂಟು. ಚತುರನಾದ ತೋಟಬಾರನು ಪ್ರತಿದಿನದಲ್ಲಿಯೂ, ಅದರ ಏಳಿಗೆಯನ್ನು ನೋಡುತ್ತಾ, ಕೃಮಿಕೀಟಾದಿಗಳ ಪೀಡೆಯನ್ನು ಒಡನೆಯೆ ಪರಿಹರಿಸಿ ಸ್ವಭಾವವಾದ ಏಳಿಗೆಗೆ ಕುಂದಕಬಾರದಂತೆ ಸಹಾಯವೊಡುವನು. ಬಾಲಕನೆಂಬ ಸಸಿಯನ್ನು ವೃದ್ಧಿಗೊಳಿಸುವ ಉಪಾಧ್ಯಾಯನೆಂಬ ತೋಟಗಾರನಿಗೆ ವಿದ್ಯಾರಂಗವೇ ಉತ್ಕೃಷ್ಟಭೂಮಿ, ವಿಹಾರಸ್ಥಾನವೇ ಸೂರ್ಯರಶ್ಮಿ, ಆಹಾರವೇ ಬೇಕಾದಷ್ಟು ನೀರು. ಈ ನಡುವೇ ಬೆಳೆಯುವ ಬಾಲಸಸಿಯು ಏಳಿಗೆಗೆ ಕುಂದುಕತರುವ ಕೃಮಿಕೀಟಾದಿಗಳೇ ದುಸ್ಸಂಗ. ಈ ದುಸ್ಸಹವಾಸವು ವೃದ್ಧಿಯಾಗದಂತೆ ಕಾದು ತಪ್ಪಿಸತಕ್ಕದ್ದೇ ಚತುರನಾದ ಉಪಾಧ್ಯಾಯನಧರ್ಮ. ಅದುದರಿಂದ ಸಸಿಯುಂತೆ ಬಾಲರು. ಸಸಿಯಲ್ಲಿರುವಂತೆ ಬಾಲರಲ್ಲಿಯೂ ಕೆಲವು ಸಹಜಗುಣಳು ಇರುವುವು ಬಾಲಬೋಧಕನಾದ ಉಪಾಧ್ಯಾಯನು ಮಕ್ಕಳ ಸ್ವಭಾವವನ್ನು ಚೆನ್ನಾಗಿ ಅರಿತವನಾಗಿರಬೇಕು. ಚಟುವಟಿಕೆಯು ಆರೋಗ್ಯವಾದ ಮಗುವಿಗೆ ಸಹಜಗುಣವು. ಆಟದಲ್ಲಿ ಮಕ್ಕಳಿಗೆ ಪ್ರೀತಿಯು, ಸುಖವು. ವಯಸ್ಕರಾದವರು ಕಾರ್ಯನಿರ್ವಾಹದಲಿ

ಹಾಗೆ ತಮ್ಮ ಸಾಮರ್ಥ್ಯವನ್ನು ಉಪಯೋಗಿಸುವರೋ ಮಕ್ಕಳು ಹಾಗೆಯೆ ತಮ್ಮ ಶಕ್ತಿಯನ್ನು ಉಪಯೋಗಿಸುವರು. ಅವಯವಗಳನ್ನು ಅಡಿಸೋಣದರಲ್ಲಿ ಅವಕ್ಕೆ ಹಿತವು. ಎಚ್ಚರಿಕೆಯಾಗಿದ್ದವೇಳೆಯಲ್ಲಿ ಮಕ್ಕಳಿಗೆ ಮಲಗಿದ್ದಕಡೆಯಲ್ಲಿಯೆ ಸುಮ್ಮನೆ ಮಲಗಿರಲು ಸಾಧ್ಯವಿಲ್ಲ. ಹರಿದಾಡಬೇಕು, ನಡೆಯಬೇಕು, ಹಾರಬೇಕು, ಹತ್ತಬೇಕು, ಓಡಬೇಕೆಂಬ ಕುತೂಹಲವುಳ್ಳವುಗಳಾಗಿ ಮನಸ್ಸಿಗೆ ತೋರಿದ ಆಯಾಯ ಕೃತ್ಯಗಳನ್ನು ಒಡನೆಯೆ ಮಾಡಲು ಆರಂಭಿಸುವುದೇಹೊರತು ಸುಮ್ಮನೆ ಇರಲಾರವು. ಮಕ್ಕಳು ನಡೆಯುಕೊಂಡು ಹೋಗುತಿರುವಹಾಗೆ ಸುಮ್ಮಸುಮ್ಮಗೆ ಹಾರುವುವು, ಓಡಲಾರಂಭಿಸುವುವು. ಇದಕ್ಕೆ ಆ ಬಾಲ್ಯಾವಸ್ಥೆಯಲ್ಲಿರುವ ಅವಯವಗಳ ಪಟುತ್ವವೇ ಕಾರಣವೆಂದು ಹೇಳಬೇಕೇಹೊರತು, ಅವುಗಳಿಗೆ ಹುಚ್ಚು ಎಂದು ಭಾವಿಸಲಾಗದು. ಈರೀತಿಯಲ್ಲಿ ಸಾಮರ್ಥ್ಯವನ್ನು ಸಂಪಾದಿಸಿಕೊಳ್ಳುವುದಲ್ಲದೆ ಆಯಾಯ ಅವಯವಗಳನ್ನು ಬೇಕಾದಹಾಗೆ ಉಗಯೋಗಿಸುವ ಶಕ್ತಿಯನ್ನೂ ಸಂಪಾದಿಸಿಕೊಳ್ಳುವುವು.

ಮಗುವಿನ ಇಂದ್ರಿಯಗಳು ಬಹು ಪಟುವಾಗಿರುವವು. ಅದರ ಮನಸ್ಸೂ ಯಾವದೊಂದನ್ನೂ ಸಂಗ್ರಹಿಸುವುದರಲ್ಲಿ ಆತುರವಾಗಿರುವುದು. ಮಗುವಿಗೆ ಪ್ರಪಂಚವೇ ಹೊಸದು. ಹೊಸಹೊಸದನ್ನು ನೋಡುವುದರಲ್ಲಿಯೂ, ಹೊಸ ಧ್ವನಿಯನ್ನು ಕೇಳುವುದರಲ್ಲಿಯೂ ಆತುರವಾಗಿರುವುದು. ಏದು ಆರು ತಿಂಗಳ ಮಗು ಸಹಿತ, ಹಾಲಿನ ಬಟ್ಟಲನ್ನು ಸ್ಪೂನಿಂದ ಹೊಡೆದು ಶಬ್ದ ಮಾಡಿದರೆ ಅಳುವದನ್ನು ನಿಲ್ಲಿಸಿ ಆದರದಿಂದ ಕೇಳುವುದು ಎರಡು ಮೂರು ವರ್ಷದ ಮಕ್ಕಳು ಓಲಗ, ಭೇರಿ ಶಬ್ದವಾದರೆ ಎಲ್ಲಿದ್ದರೂ ಓಡಿಬಂದು ಎಷ್ಟೋ ಸಂತೋಷದಿಂದ ಕೇಳುವುವು. ಮಕ್ಕಳು ನವೀನ ವಿಷಯಗಳನ್ನು ಸಂಗ್ರಹಿಸುವುದರಲ್ಲಿ ಪಂಚೇಂದ್ರಿಯಗಳನ್ನು ಉಪಯೋಗಿಸುವುವಲ್ಲದೆ ಮಾತನಾಡಲು ಬಂದಹಾಗೆಲ್ಲಾ ದೊಡ್ಡವರನ್ನು ಪದೇ ಪದೇ ಕೇಳಿ ತಿಳಿದುಕೊಳ್ಳಲು ಯತ್ನಿಸುವುವು ಮಕ್ಕಳ ಲೀಲೆಯಲ್ಲಿ ಲೋಲರಾದ ಅನೇಕರು (ವಿದ್ವಾಂಸರು) ಸಹ ಮಕ್ಕಳು ಕೇಳುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡುವುದೇ ಕಷ್ಟ. ಉತ್ತರವನ್ನು ಕೊಟ್ಟು ಅವರ ಮನಸ್ಸನ್ನು ಸಮಾಧಾನಪಡಿಸುವುದು ಮತ್ತೂ ಕಷ್ಟವೆಂದು ಅನುಭವದಿಂದ ಹೇಳುವರು.

ಮಕ್ಕಳಲ್ಲಿ ಒಬ್ಬರು ಮಾಡಿದಂತೆ ಮಾಡುವ ಕುತೂಹಲವು ಅತಿಶಯವಾಗಿರುವುದು. ಮನೆಯನ್ನು ಕಟ್ಟುವುದು, ಅಡಿಗೆಯನ್ನು ಮಾಡುವುದು, ಪಾಠವನ್ನು ಹೇಳ

ವುದು, ಇವುಗಳಲ್ಲಿ ದೊಡ್ಡವರು ಆಚರಿಸುವಂತೆ ಮಕ್ಕಳು ಆಟದಲ್ಲಿ ಆಚರಿಸಲು ಆರಂಭಿಸುವುರು. ಆ ಆಚರಣೆಯಲ್ಲಿ ಚಾರುಚೂರೂ ತಪ್ಪುವದಿಲ್ಲ. ಮಕ್ಕಳ ಆಟಕ್ಕೆಕಾಗದದಚೂರುಗಳು, ಮಣ್ಣು, ಕಲ್ಲು, ಕಡ್ಡಿ, ಕಸ ಇವಿಲ್ಲಾ ಉಪಯೋಗಿಸುವುದು. ಇವುಗಳಲ್ಲಿ ಮನೆಯನ್ನು ಕಟ್ಟುವುವು, ಅಡಿಗೆಯನ್ನು ಮಾಡುವುವು, ವಿವಾಹವನ್ನು ಬೆಳಸುವುವು, ಈ ಆಟಗಳನ್ನು ಆಡುವಾಗ ದೊಡ್ಡವರು ಕಾರಣಾಂತರದಿಂದ ಸಿಟ್ಟು ಮಾಡಿದ್ದು ಕಂಡಿದ್ದರೆ—ಸಿಟ್ಟುಮಾಡಿಕೊಳ್ಳುವುದೂ, ಒಂದು ಅವಶ್ಯಭಾಗವೆಂದು ಸುಮ್ಮಸುಮ್ಮನೆ ಸಿಟ್ಟುಮಾಡಿಕೊಳ್ಳುವುವು. ನನಗೆ ಸಿಟ್ಟು ಬಂದಿದೆ ಎಂದು ಹೇಳಿಕೊಳ್ಳುವುವು. ಆಟದ ಮನೆಯನ್ನು ಕಟ್ಟುವ ಉದ್ದಿಶ್ಯ, ತೆಗೆದು ಕೊಳ್ಳಬಾರದ ಚೂರಿ, ಪುಸ್ತಕ, ದೀಪದಕಡ್ಡಿಯೇ ಮೊದಲಾದವುಗಳನ್ನು ತೆಗೆದುಕೊಂಡು- ಉತ್ಸಾಹಭಂಗವಾಗಿ ಹೆದರಿಕೊಂಡು, ಅದಿಯಲ್ಲಿ ನಾಚಿಕೊಂಡು ಮುಂದರಿದು ಹೋಗದೆ ಹಿಂದೆಹಿಂದೆ ನಿಲ್ಲುವರು. ಇಂಥಾ ಮನಸ್ಕರಾಗಿರುವ[illegible]ಮಕ್ಕಳನ್ನು ಒಡನೆಯೇ ಸರಿಯೂವ ಮಾರ್ಗಕ್ಕೆ ತೆಗೆದುಕೊಂಡು ಬರಬಹುದು. ಅದು ತಪ್ಪಿದರೆ ಅಕೃತ್ಯದಲ್ಲಿ ಧೈರ್ಯ ಹೆಚ್ಚಿ ವಿಪರೀತವಾಗಿ ಇವುಗಳನ್ನು ಪರಿಣಮಿಸುವುದು.

ಇಬ್ಬರು ಮಾಡಿದಂತೆ ಮಾಡುವುದರಲ್ಲಿ ಮಾತ್ರವೇ ಮಕ್ಕಳು ಕುತೂಹಲವಿಶಿಷ್ಟರಾಗಿರುವುದಿಲ್ಲ. ತಾವು ನೋಡಿದ್ದನ್ನೂ, ಕೇಳಿದ್ದನ್ನೂ ತೋರಿಸುವುದರಲ್ಲಿಯೂ ಹೇಳುವುದರಲ್ಲಿಯೂ ಆತುರರಾಗಿರುವರು. ಆಟದಲ್ಲಿ ಬೆಕ್ಕಿನಂತೆ ' ಮ್ಯಾ ' ಎನ್ನುವುದು, ಕಾಗೆಯಂತೆ ' ಕಾ ಕಾ ' ಎಂದು ಅರಿಚುವುದೂ, ಒಬ್ಬರು ನಡೆದಂತೆ ನಡೆಯುವುದೂ, ಆಡಿದಂತೆ ಆಡುವುದೂ, ಕೂಗುವದೂ ಇವುಗಳನ್ನು ಆರಂಭಿಸುವರು.

ಬಹಳ ಚಿಕ್ಕವಯಸ್ಸಿನಲ್ಲಿಯೇ ಮಕ್ಕಳ ಸುಗುಣ ದುರ್ಗುಣಗಳು ತೋರಿಬರುವುವು. ಕೆಲವು ಮಕ್ಕಳು ಬಹು ಸಾರಾಳಮನಸ್ಕರಾಗಿರುವುವು. ತಮ್ಮ ತಿಂಡಿತೀರ್ಥದಲ್ಲಿಯೂ, ಆಟಪಾಟದಲ್ಲಿಯೂ, ಇತರ ಮಕ್ಕಳೊಡನೆ ಸೇರಿ ಸಂತೋಷಪಡಲು ಮನಸ್ಸುಳ್ಳವರಾಗಿರುವರು. ಕೆಲವರು, ಎಲ್ಲವೂ ತನಗೆ, ತಾನೇ ತಿನ್ನಬೇಕು. ತನಗೆ ಎಷ್ಟು ಕೊಟ್ಟರೂ ಸಾಲದು, ಎಂಬ ಹಟವನ್ನು ಹಿಡಿಯುವರಲ್ಲದೆ ಇತರ ಬಾಲಕರಿಗೆ ಕೊಟ್ಟದ್ದನ್ನು ಸಹಿಸಲಾಗದ ಸ್ವಭಾವವುಳ್ಳವರಾಗಿರುವರು. ಸುಳ್ಳು ಹೇಳುವುದು, ಬೇಡವೆಂದು ಕೆಲಸವನ್ನು ಮಾಡುವುದು, ಹಠ ಹಿಡಿಯುವುದು, ಕೋಪ ತೋರಿಸುವುದು, ಇತರರ ಪದಾರ್ಥವನ್ನು ತೆಗೆದುಕೊಳ್ಳುವುದು ಇವೇ ಮುಂತಾದ ಕೆಟ್ಟ ಗುಣಗ

ಳನ್ನು ತೋರಿಸುವರು. ಎಂಥಾ ದುರ್ಗುಣವೇ ಆಗಲಿ, ಅದು ಆದಿಯಲ್ಲೇ ಮಗುವಿನೊಂದಿಗೆ ಬೆಳೆದು ಮಗುವಿನ ಅಂಗದಲ್ಲಿ ಒಂದಂಗವಾಗಿ ಪರಿಣಮಿಸಿ, ಛೇದಿಸಿ ಅಂಗವಿಹೀನನನ್ನಾಗಿ ಮಾಡಿದಹೊರ್ತು ಹೋಗಲಾರದಷ್ಟು ಬಲಿಯದಂತೆ ಪೂರ್ವದ ಲ್ಲಿಯೇ ನಿಗ್ರಹಿಸಬೇಕು. ಕೆಟ್ಟಕೆಲಸ ಮಾಡಬಾರದು. ಮಾಡಬಾರದೆಂದು ಸಾರಿ ಸಾರಿ ಹೇಳುವುದಕ್ಕಿಂತ ಮಾಡಿದಾಗ ಶಿಕ್ಷಿಸುವುದು ಉತ್ತಮಪಕ್ಷವೆಂದು ಕೆಲವರು ಅಭಿಪ್ರಾಯಪಡುವರು. ದುರ್ಗುಣಗಳು ತಲೆದೋರಿದೊಡನೆಯೇ ನಿಗ್ರಹಿಸದಿದ್ದರೆ ಆ ಮಕ್ಕಳನ್ನು ಪೋಷಿಸಿದವರು ಮಕ್ಕಳಿಗೆ ಮನಃಪೂರ್ವಕವಾಗಿ ಕೇಡನ್ನು ಬಯಸಿ ದಂತೆ ಆಗುವುದು. ಆದರೆ ದುರ್ಗುಣವೇ ಮಕ್ಕಳ ಸಹಜಗುಣವೆಂದು ಎಂದಿಗೂ ಭಾವಿ ಸಲಾಗದು. ದುರ್ಗುಣವು ಹೇಗೆ ತಲೆದೋರುವುದೋ ಹಾಗೆಯೇ ಸದ್ಗುಣವೂ ಕಾಣ ಬರುವುದು. ಮಕ್ಕಳು ದಯೆಯನ್ನೂ, ವಿಶ್ವಾಸವನ್ನೂ, ನಮ್ರತೆಯನ್ನೂ, ಭಕ್ತಿ ಯನ್ನೂ ತೋರಿಸುವುವು. ಇಂಥಾ ಸುಗುಣಗಳು ಕಾಣಬಂದಾಗ ಅವುಗಳು ನೆಲೆ ಯಾಗಿ ನಿಂತು ವೃದ್ಧಿಗೊಳ್ಳಲಿಕ್ಕೆ ಸಾಕಾದಷ್ಟು ಪ್ರೋತ್ಸಾಹಪಡಿಸಬೇಕು.

ಮಕ್ಕಳಲ್ಲಿ ಇನ್ನೊಂದು ಅತಿಶಯವಾದ ಗುಣ ಉಂಟು. ಅವು ಬಹುಬೇಗ ಸ್ನೇಹವನ್ನು ಬೆಳಿಸುವುವು. ಮಗು ಒಂದೇ ಇದ್ದು ಸ್ವಭಾವವಾಗಿ ಆಡುವವರೆಗೂ ಆಡಿ ಜೊತೆ ಇಲ್ಲದೆ ಬೇಜಾರಾಗಿ ಸಪ್ಪಗೆ ಕೂತಿರುವಾಗ ಇತರ ಮಕ್ಕಳು ಬಂದರೆ ಸರ್ರ ನೆ ಓಡಿಹೋಗಿ ಅವರೊಡನೆ ಬೆರೆದು ಸಂತೋಷವಾಗಿ ಆಡಲಾರಂಭಿಸುವುದು. ಮಕ್ಕ ಳಲ್ಲಿ ಒಬ್ಬರಿಗೊಬ್ಬರಿಗೆ ಪರಿಚಯಮಾಡಬೇಕು. ಸ್ನೇಹಬೆಳಸಲು ಪ್ರೋತ್ಸಾಹಗೊಳಿ ಸಬೇಕೆಂಬ ಪ್ರಕೃತವಿರುವುದಿಲ್ಲ. ಮಕ್ಕಳು ಒಬ್ಬರನ್ನೊಬ್ಬರು ನೋಡಿದೊಡನೆಯೇ ಬೆರೆಯುವರು. ವಯಸ್ಸು ಹೆಚ್ಚಾದಹಾಗೆಲ್ಲ ಈ ಸ್ವಭಾವವು ಮಲಿನವಾಗುತಾ ಬರುವುದು.

ಮಕ್ಕಳಿಗೆ ಇನ್ನೂ ಒಂದು ಸಹಜಗುಣವಿರುವುದು. ಇದು ಕರು, ನಾಯಿ, ಬೆಕ್ಕು, ಗಾಳಿ, ಪಾರವಾಳದಹಕ್ಕಿ ಇವುಗಳೊಡನೆ ಬೆರೆತು ಆಡಬೇಕೆಂಬ ಕುತೂಹಲ. ಮಕ್ಕಳು—ಕರುವನ್ನೂ, ನಾಯಿಯನ್ನೂ ಕಟ್ಟಿಕೊಂಡು ಮುದ್ದುಕೊಡುವುದು, ಅವು ಗಳೂ ಸುಲಭವಾಗಿ ಮಕ್ಕಳ ಇಷ್ಟಾನುಸಾರದಂತೆ ನಡೆಯುವುದೂ ನೋಡಿದರೆ ಪರ ಸ್ಪರ ಸಹಜವಾದ ಪ್ರೀತಿ ಇರುವುದೆಂದು ತೋರುವುದು.

ಮಕ್ಕಳ ಸ್ವಭಾವವನ್ನೆಲ್ಲಾ ಇಲ್ಲಿ ವರ್ಣಿಸಲು ಸಾಧ್ಯವಿಲ್ಲ. ಮಕ್ಕಳ ಆಟ

ಸಾಟದಲ್ಲಿ ಬೇಸರಪಡದೆ ನೋಡಿದಹಾಗೆಲ್ಲ ಅವುಗಳ ಗುಣವು ವ್ಯಕ್ತಗೊಳುವುದು. ಅವುಗಳ ಸ್ವಭಾವವನ್ನು ಚೆನ್ನಾಗಿ ಅರಿತು, ಅವುಗಳ ಸದ್ಗುಣಗಳನ್ನು ಅಭಿವೃದ್ಧಿ ಪಡಿಸಿ, ದುರ್ಗುಣಗಳನ್ನು ನಿಗ್ರಹಿಸುವುದೇ ಬಾಲಶಿಕ್ಷಕರ ಕರ್ತವ್ಯ. ಬಾಲಕರಿಗೆ ಬೋಧಿಸತಕ್ಕವರು ಮಕ್ಕಳ ಆಟಪಾಟಗಳಲ್ಲಿ ವಿಶ್ವಾಸವುಳ್ಳವರಾಗಿ, ಅವರಲ್ಲಿ ನಿಜವಾದ ಪ್ರೀತಿಯುಳ್ಳವರಾಗಿರಬೇಕು. ಆಟಪಾಟಗಳನ್ನು ಕ್ರಮಪಡಿಸಿ ಒಂದು ಉಪಯುಕ್ತ ನಾದ ಪದ್ಧತಿಯಲ್ಲಿ ಮಕ್ಕಳನ್ನು ಆಡಿಸುವುದೇ ಕಿಂಡರ್‌ಗಾರ್ಟ್ನ್ ಎನ್ನಿಸಿಕೊಳ್ಳುವುದು. ಬಾಲಶಿಕ್ಷೆಯು ಪ್ರೀತಿಯಿಂದ ಮೂಡಿದಲ್ಲದೆ ಮೇಲಾಗದು.

ಪೆಸ್ಟ್‌ಲಾಟ್ಸಿಯವರ ಚರಿತ್ರೆ.

ಪೆಸ್ಟ್‌ಲಾಟ್ಸಿಯವರು 'ಥಸಲಿ' ಎಂಬ ಸ್ಥಳದಲ್ಲಿ ಒಂದು ವರುಷದವರೆ ವಿಗೂ ಕೃಷಿಯನ್ನೂ, ವಿದ್ಯಾಭ್ಯಾಸಮಾಡಿಸುವದನ್ನೂ ಅವಲಂಬಿಸಿ ಕಾಲಹರಣ ವನ್ನು ಮಾಡಿದರು. ತಮ್ಮ ಇಷ್ಟಪ್ರಕಾರವಾಗಿ ಸಾಗುವಳೀಮಾಡುವದಕ್ಕೋಸ್ಕರ ಥಫಿಲೆಯಲ್ಲಿ ೧೦೦ ಎಕರೆ ಭೂಮಿಯನ್ನು ಸಂಪಾದಿಸಿಕೊಂಡರು. ವ್ಯವಸಾಯ ಶಾಸ್ತ್ರಪ್ರಕಾರ ಸಾಗುವಳೀ ಮಾಡುವದಕ್ಕೆ ಬೇಕಾದ ಸಹಾಯ ಸಂಪತ್ತುಗಳನ್ನು ಮಾಡಿಕೊಳ್ಳುವನಕೆ ಇವರೋಸ್ಕರ ಒಬ್ಬ ಸ್ನೇಹಿತನಿಂದ ಸ್ವಲ್ಪ ದ್ರವ್ಯವನ್ನು ಸಾಲಮಾಡಿ ದರು. ತಮ್ಮ ಭೂಮಿಗೆ ಸವಿೂಪದಲ್ಲಿ ಇದ್ದ ಮಲಿಂಗರ್ ಎಂಬತಕ್ಕ ಗ್ರಾಮದಲ್ಲಿ ವಾಸಾರ್ಥವಾಗಿ ಒಂದು ಮನೆಯನ್ನು ಕಟ್ಟಿಕೊಂಡರು. ಈ ಮಧ್ಯೆ ಆಗಾಗ್ಗೆ ಅನಾ ರವರನ್ನು ನೋಡುತ್ತಲಿದ್ದರು. ಈ ಗ್ರಾಮದಲ್ಲಿ ಅದ್ವಿತೀಯರಾಗಿ ವಾಸಮಾಡು ವದು ಇವರಿಗೆ ಬಹಳ ಬೇಜಾರನ್ನು ಉಂಟುಮಾಡಿತು. ಈ ಸಂಗತಿಯನ್ನು ಅನಾ ವರಿಗೆ ತಿಳಿಸಿ ವಿವಾಹವನ್ನು ಇನ್ನು ಮುಂದೆ ವಿಳಂಬ ಮಾಡಕೂಡದೆಂದು ಹೇಳಿದರು. ಅದಕ್ಕೆ ಅವರು ಒಪ್ಪಿದರು. ಆದಾಗ್ಯೂ ಅನಾರವರ ತಂದೆ ತಾಯಿಗಳು ಈ ವಿವಾ ಹಕ್ಕೆ ಸಮ್ಮತಿಸಲಿಲ್ಲ. ಪೆಸ್ಟ್‌ಲಾಟ್ಸಿಯವರು ಯುಕ್ತಾಯುಕ್ತವಿವೇಚನೆ ಇಲ್ಲದವರೆಂ ಬದಾಗಿಯೂ, ಹುಚ್ಚರೆಂಬದಾಗಿಯೂ ಅಸಾಧ್ಯವಾದ ಕೆಲಸಗಳನ್ನು ಮಾಡಿ ಇವರು ದರಿದ್ರರಾಗುವದರಲ್ಲಿ ಯಾವಸಂಶಯವೂ ಇಲ್ಲವೆಂಬದಾಗಿಯೂ ಅವರು ಭಾವಿಸಿದರು. ಆದಾಗ್ಯೂ ಅನಾರವರು ಪೆಸ್ಟ್‌ಲಾಟ್ಸಿಯವರ ಶಕ್ತಿಯೂ ಅನನ್ಯಸಾಧಾರಣವಾದದೆಂ

ಬದಾಗಿಯೂ ಅವರು ವಿಶೇಷ ಐಶ್ವರ್ಯವಂತರಾಗದೆ ಇದ್ದಾಗ್ಯೂ ಅಭೂತಪೂರ್ವವಾದ ಪರೋಪಕಾರವನ್ನು ಮಾಡಿ ದಿಗಂತವಿಶ್ರಾಂತವಾದ ಕೀರ್ತಿಯನ್ನು ಪಡೆದು ಅವರನ್ನು ವಿವಾಹ ಮಾಡಿಕೊಳ್ಳತಕ್ಕವರಿಗೂ ಅಸಾಧಾರಣವಾದ ಕೀರ್ತಿಯನ್ನು ತರುತ್ತಾರೆಂದೂ ಧೃಡವಾದ ನಂಬಿಕೆ ಉಳ್ಳವರಾದುದರಿಂದ ತಂದೆತಾಯಿಗಳನಿರ್ಬಂದವನ್ನು ಉಲ್ಲಂಘಿಸಿ ಇವರನ್ನು ವಿವಾಹವಾಡಿಕೊಳ್ಳುವದಾಗಿ ಸಂಕಲ್ಪವಾಡಿದರು. ಇವರ ವಿವಾಹವು ೧೭೬೯ನೇ ಇಸವಿ ಸೆಪ್ಟಂಬರ್ ತಿಂಗಳಲ್ಲಿ ನೆರವೇರಿತು. ವಿವಾಹವಾದಮೇಲೆ ಪೆಸ್ಟ ಲಾಟ್ಸ್ಯವರು ಅನಾರವರೊಡನೆಕೂಡಿ ಮಲಿಂಗರ್ ಗ್ರಾಮದಲ್ಲಿ ಹದಿನೆಂಟು ತಿಂಗಳು ವಾಸ ಮಾಡಿದರು. ಈ ಹದಿನೆಂಟು ತಿಂಗಳು ಕೃಷಿಯನ್ನು ಮಾಡುತ್ತಾ ಅದರಿಂದ ಜೀವಿಸುತ್ತಾ ಇದ್ದರು. ಆಗ ಇವರಿಗೆ ಪುತ್ರೋತ್ಪತ್ತಿಯಾಯಿತು. ಈ ಸಂತೋಷ ದಲ್ಲಿ ಪೆಸ್ಟಲಾಟ್ಸ್ಯವರು ತಮಗೆ ಉಂಟಾಗಿದ್ದ ತಾಪತ್ರಯ ಪರಂಪರೆಗಳನ್ನೆಲ್ಲಾ ಮರೆತರು.

ಕ್ರಮೇಣ ಇವರ ಖರ್ಚುಗಳು ಹೆಚ್ಚಾದವು. ವ್ಯವಸಾಯದಿಂದ ಬರತಕ್ಕದ್ದು ಖರ್ಚಿಗೆ ಸಾಲದೆ ಹೋಯಿತು. ಸಾಲಗಾರರ ತಗಾದೆ ಬಹಳ ಜಾಸ್ತಿಆಯಿತು ೧೭೭೧ ರಲ್ಲಿ ಪೆಸ್ಟಲಾಟ್ಸ್ಯವರು ನ್ಯೂಹಾಫ್ ಎಂಬ ಬೇರೆ ಒಂದುಗ್ರಾಮದಲ್ಲಿ ೫ವಿೂನುಗ ಳನ್ನು ಮಾಡಿ ಅಲ್ಲಿ ಬೇರೆ ಒಂದು ಮನೆಯನ್ನು ಕಟ್ಟಿಸಿ ಅಲ್ಲಿಗೆ ವಾಸಕ್ಕೆ ಹೋದರು. ಅಲ್ಲಿ ೪ ವರುಷಗಳು ಬಹಳ ಪರಿಶ್ರಮ ಪಟ್ಟು ಕೆಲಸ ಮಾಡಿದರು, ಆದಾಗ್ಯೂ ಭೃತ್ಯ ರ ದ್ರೋಹದಿಂದ ಇವರ ಶ್ರಮಕ್ಕೆ ಅನುರೂಪವಾದ ಫಲವು ಉಂಟಾಗಲಿಲ್ಲ. ಆದ್ದ ರಿಂದ ಕೃಷಿವೃತ್ತಿಯು ಫಲಕಾರಿಯಲ್ಲವೆಂದು ಅದನ್ನು ಬಿಟ್ಟುಬಿಟ್ಟರು.

ಪೆಸ್ಟಲಾಟ್ಸ್ಯವರು ಕೃಷಿಯನ್ನು ಬಿಟ್ಟು ಮುಂದೆ ಜೀವನಾರ್ಥವಾಗಿ ಏನು ಮಾಡಬೇಕೆಂದು ಯೋಚಿಸಿ ಇನ್ನುಮೇಲೆ ಚಾಂಚಲ್ಯಪಡದೆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವದೇ ವೃತ್ತಿಯಾಗಿ ಅವಲಂಬಿಸಬೇಕೆಂದು ನಿಶ್ಚೈಸಿ ಮಾಡಿದರು. ಈ ನಿಶ್ಚೈಸಿಯೇ ಇವರಿಗೆ ಉತ್ತರೋತ್ತರ ಉಂಟಾದ ಕೀರ್ತಿಗೆ ಮುಖ್ಯ ಕಾರಣವಾಯಿತು. ಸ್ತ್ರೀಪುರುಷರ ಉನ್ನತಿಗೆ ಜನ್ಮಾವಧಿ ಲಭಿಸುವ ಸಹವಾಸವು ಶಿಕ್ಷೆಯು ಮುಖ್ಯಕಾರಣ ಗಳು. ಮಕ್ಕಳು ದೊಡ್ಡವರ ಮಾತುಗಳನ್ನು ಗುಣಾತಿಶಯುಗಳನ್ನು ಕೇಳಿ ಮತ್ತು ನೋಡಿ ಅವುಗಳನ್ನು ಅನುಸರಿಸುತ್ತಾರೆ. ಮಕ್ಕಳಿಗೆ ತಂದೆತಾಯಿಗಳು ಹಿರಿಯರಾದ ಒಂದೇಮನೆಯಲ್ಲಿ ವಾಸಮಾಡುವ ಬಂಧುಗಳು ಮತ್ತು ಭೃತ್ಯರು ನಡೆನುಡಿಗಳ ವಿಷ

ಯದಲ್ಲಿ ಗುರುಗಳಾಗಿ ಪರಿಣಮಿಸುತ್ತಾರೆ. ಅನೇಕ ತಂದೆತಾಯಿಗಳು ಈ ವಿಷಯವನ್ನು ಚೆನ್ನಾಗಿ ಪರಿಶೀಲಿಸುವದಿಲ್ಲ. ಮಕ್ಕಳ ಎದುರಿಗೆ ಆಡಬಾರದ ಮಾತುಗಳನ್ನು ಆಡುತ್ತಾರೆ, ಮಾಡಬಾರದ ಕೆಲಸಗಳನ್ನು ಮಾಡುತ್ತಾರೆ. ಅವರನ್ನು ಶಿಕ್ಷಿಸುವದರಲ್ಲಿ ಸ್ಥೈರ್ಯವನ್ನು ತೋರಿಸುವದಿಲ್ಲ. ಅವರ ಪ್ರಾರ್ಥನೆಗಳನ್ನು ಪ್ರಥಮತಃ ತಿರಸ್ಕರಿಸುತ್ತಾರೆ. ಅವರು ಅತ್ತು ಹಟವನ್ನು ಹಿಡಿದರೆ ಅವರ ಇಷ್ಟಾರ್ಥವನ್ನು ಸಲ್ಲಿಸುತ್ತಾರೆ. ಅವರನ್ನು ಹೆದರಿಸುವದಕ್ಕೋಸ್ಕರ ನಾನಾವಿಧವಾದ ಅಪದ್ಧಗಳನ್ನು ಹೇಳುತ್ತಾರೆ. ಈ ಅಪದ್ಧಗಳಿಂದ ಅವರು ಭೀತರಾದರೆ ತಾವು ಹೇಳಿದ್ದು ಅಪದ್ಧಗಳೆಂದು ಅವರಿಗೆ ಪ್ರತ್ಯಯವನ್ನು ಉಂಟುಮಾಡುತ್ತಾರೆ. ಅವರಿಗೆ ಅನ್ನಪಾನಗಳೇ ಮೊದಲಾದವುಗಳಲ್ಲಿ ಕ್ರಮವಾದ ಏರ್ಪಾಡನ್ನು ಮಾಡುವದಿಲ್ಲ. ಕಾಲಕ್ಕನುಸಾರವಾಗಿ ಉಡಿಗೆಗಳನ್ನು ಹಾಕತಕ್ಕ ಏರ್ಪಾಡುಗಳನ್ನು ಮಾಡಿರುವದಿಲ್ಲ. ಆಗಾಗ್ಯೆ ಅವರಿಗೆ ವಿಶ್ರಾಂತಿಗತಕ್ಕ ಏರ್ಪಾಡನ್ನು ಸಮರ್ಪಕವಾಗಿ ಮಾಡಿರುವದಿಲ್ಲ. ಇದರಿಂದ ಮಕ್ಕಳಿಗೆ ಆರೋಗ್ಯ ತಪ್ಪುವದು, ಅಶಕ್ತಿಯುಂಟಾಗುವದು. ಸೌಶೀಲ್ಯಾದಿ ಗುಣಗಳ ಅರ್ಜನೆಗೆ ಅವಕಾಶವು ಕಡಮೆಯಾಗುವದು. ದುರ್ಮಾರ್ಗ ಪ್ರವರ್ತನೆಯು ಅಭ್ಯಸ್ಥವಾಗುವದು. ಸುಳ್ಳು ವಂಚನೆ, ತುಂಟತನ, ಇವೇ ಮೊದಲಾದ ಕೆಟ್ಟಗುಣಗಳು ನಿಸರ್ಗವಾದ ಗುಣಗಳಾಗಿ ಪರಿಣಮಿಸುವವು. ಲೋಕದಲ್ಲಿ ಜನರು ದನಕರುಗಳು, ಕುದುರೆಗಳು, ನಾಯಿಗಳು, ಇವೇ ಮೊದಲಾದ ಪ್ರಾಣಿಗಳ ಶಿಕ್ಷೆಯ ವಿಷಯದಲ್ಲಿ ಎಷ್ಟು ಅಸಕ್ತರಾಗಿರುವರೊ ಅದರಲ್ಲಿ ಒಂದು ಶತಾಂಶ ಶ್ರದ್ಧೆಯನ್ನು ತಮ್ಮ ಮಕ್ಕಳ ಪೋಷಣೆಯ ವಿಷಯದಲ್ಲಿ ತೋರಿಸುವದಿಲ್ಲ. ಅನೇಕ ಸ್ತ್ರೀಪುರುಷರು ದುರ್ಮಾರ್ಗ ಪ್ರವರ್ತಕರಾಗಿ ತಂದೆತಾಯಿಗಳಿಗೂ ಬಂಧು ಮಿತ್ರರಿಗೂ ತಮ್ಮ ದೇಶಕ್ಕೂ ಕಳಂಕಪೂತರಾಗುತ್ತಾರೆ. ಈ ಅನರ್ಥ ನಿವಾರಣೆಯನ್ನು ಮಾಡುವದಕ್ಕೆ ತಕ್ಕ ಪ್ರಯತ್ನವನ್ನು ಮಾಡಬೇಕು. ಹೀಗೆ ಮಾಡದೇ ಕಾದರೆ ಸುಲುಭವಾದ ಉಪಾಯವ್ಯಾವದು'' ಎಂದು ಪೆಸ್ಟಲಾಟ್ಸಿಯವರು ಮತ್ತು ಅನಾರವರು ಪರ್ಯಾಲೋಚಿಸಿದರು.

ಮಕ್ಕಳ ಪೋಷಣೆಯು ವಿದ್ವಾಂಸರಾಗಿಯೂ, ಸತ್ಯಸಂಧರಾಗಿಯೂ, ಯುಕ್ತಾಯುಕ್ತ ವಿಚಾರವಿಚಾರರಾಗಿಯೂ, ಬುದ್ಧಿಶಾಲಿಗಳಾಗಿಯೂ, ಮಕ್ಕಳನ್ನು ಸಕಲ ವಿದ್ಯಾವಿಶಾರದರನ್ನಾಗಿಯೂ ಸಕಲಸದ್ಗುಣೋಪೇತರನ್ನಾಗಿಯೂ ಮಾಡಿ, ಕೃತಕೃತ್ಯರಾಗಿ ಸಂತೋಷಪಡಬೇಕೆಂಬ ಶ್ರದ್ಧೆಯೂ ವಿಶ್ವಾಸವೂ ಉಳ್ಳವರಾಗಿಯೂ ಇರತಕ್ಕ ಜನ

ರಿಗೆ ಒಪ್ಪಿಸಬೇಕು. ಹಾಗೆ ಒಪ್ಪಿಸಿದ ಪಕ್ಷದಲ್ಲಿ ಆ ಮಕ್ಕಳು ಸುಶಿಕ್ಷಿತರಾಗುತ್ತಾರೆ. ಇಂಥಾ ಗುಣಾತಿಶಯಗಳುಳ್ಳ ಜನರು ಎಲ್ಲಿ ಶಿಕ್ಕುವರು? ಹಾಗೆ ಸಿಕ್ಕಿದಾಗ್ಯೂ ಅವರು ಸುದಾ ಮಕ್ಕಳನ್ನು ಈ ರೀತಿಯಲ್ಲಿ ಪೋಷಿಸುವಂತೆ ತಕ್ಕ ಏರ್ಪಾಡುಗಳನ್ನು ಮಾಡಿ ತಮ್ಮ ಮಕ್ಕಳನ್ನು ವೃದ್ಧಿಗೆ ತರಬೇಕೆಂಬ ಉಪಪನ್ನರಾದ ತಂದೆತಾಯಿಗಳುತಾನೇ ಎಲ್ಲಿ ಸಿಕ್ಕುವರು? ಇವೆರಡು ದುರ್ಲಭಗಳೇ ಆದಾಗ್ಯೂ ನಮ್ಮ ಮಗುವಿನ ವಿದ್ಯಾಭ್ಯಾಸಾರ್ಥವಾಗಿ ನಾವು ಈ ಏರ್ಪಾಡನ್ನು ಮಾಡೋಣ. ಇನ್ಯಾರಾದರೂ ತಮ್ಮ ಮಕ್ಕಳನ್ನ ನಮ್ಮ ವಶಕ್ಕೆ ಒಪ್ಪಿಸಿದರೆ ಅವರನ್ನು ಸ್ವೀಕರಿಸೋಣ. ಅನಾಥರಾದ ಮಕ್ಕಳು ಸಿಕ್ಕಿದಪಕ್ಷದಲ್ಲಿ ಅವರನ್ನು ನಾವೇ ಸನಾಥರನ್ನಾಗಿ ಮಾಡೋಣ ಎಂದು ನಿಶ್ಚೈಸಿ ಮಾಡಿದರು. ಹೀಗೆ ನಿಶ್ಚೈಸಿಯನ್ನು ಮಾಡಿ, ಈ ದಂಪತಿಗಳಿಬ್ಬರೂ ತಮ್ಮ ಮನೆಯನ್ನೇ ಒಂದು ಪಾಠಶಾಲೆಯನ್ನಾಗಿ ಮಾಡಿದರು. ಮಕ್ಕಳಕೈಯಲ್ಲಿ ಉಪಯುಕ್ತವಾದ ಕೆಲಸಗಳನ್ನು ಮಾಡಿಸುತ್ತಾ ಮಧ್ಯೆಮಧ್ಯೆ ಅಕ್ಷರಾಭ್ಯಾಸವನ್ನು ಮಾಡಿಸುವದಕ್ಕೆ ಉಪಕ್ರಮಿಸಿದರು. ಇಲ್ಲಿಕೆಲಸವೂ ವಿದ್ಯಾಭ್ಯಾಸವು ಆಟಗಳಾಗಿ ಪರಿಣಮಿಸಿದವು. ಮಕ್ಕಳು ಈ ಆಟಪಾಟಗಳ ರೂಪವಾದ ಕೆಲಸಗಳ ವಿಷಯದಲ್ಲಿ ಅತ್ಯಂತ ಆಸಕ್ತಿಯಿಂದ ಪ್ರವರ್ತಿಸುತ್ತಾ ಬಂದರು. ಪೆಸ್ಟಲಾಟ್ಸಿಯವರು ಈ ಮಕ್ಕಳನ್ನು ಕರೆದುಕೊಂಡು ಅಲ್ಲಲ್ಲಿಯೇ ಸಂಚರಿಸುತ್ತಾ ತಮ್ಮ ದೃಷ್ಟಿಪಥಕ್ಕೆ ಬೀಳತಕ್ಕ ಪ್ರತಿವೊಂದು ಪದಾರ್ಥದ ಹೆಸರುಗಳನ್ನೂ ಅವುಗಳ ಗುಣಾತಿಶಯಗಳನ್ನೂ ಕೇಳುತ್ತಾ ಅವರಿಗೆ ತಿಳಿಯದ ವಿಷಯವನ್ನು ಅವರಿಂದಲೇ ಪರಿಕ್ಷೇಮಾಡಿಸಿ ಅವರಿಂದಲೇ ಹೇಳಿಸುತ್ತಾ ಆಡತಕ್ಕವೇಳೆಯಲ್ಲಿ ಅವರಜೊತೆಯಲ್ಲಿ ತಾವೂ ಆಡುತ್ತಾ ಕೆಲಸ ಮಾಡತಕ್ಕವೇಳೆಯಲ್ಲಿ ಅವರಜೊತೆಯಲ್ಲಿ ತಾವೂ ಕೆಲಸಮಾಡುತ್ತಾ, ಭೋಜನಾದಿಗಳಕಾಲದಲ್ಲಿ ಬಹಳ ವಿನೋದದಿಂದ ಅವರ ಜೊತೆಯಲ್ಲಿ ತಾವೂ ಭುಜಿಸುತ್ತಾ, ಕೆಲಸದಿಂದಲೂ ಆಟಪಾಟಗಳಿಂದಲೂ ವಿಶ್ರಮಿಸಿಗೊಳ್ಳತಕ್ಕಕಾಲದಲ್ಲಿ, ಉದ್ಯೋಗ, ಸಾಹಸ, ಧರ್ಮವೀ ಮೊದಲಾದ ಅನೇಕ ಸುಗುಣಾತಿಶಯಪ್ರತಿಪಾದಕಗಳಾದ ಅನೇಕ ಮಹನೀಯರ ಚರಿತ್ರೆಗಳನ್ನು ಹೇಳುತ್ತಾ ಬಂದರು. ಈ ವಿದ್ಯಾಭ್ಯಾಸದ ಏರ್ಪಾಡು ಕ್ರಮಕ್ರಮವಾಗಿ ಅನೇಕ ತಂದೆತಾಯಿಗಳಿಗೆ ಜನಜನಿತವಾಗಿ ತಿಳಿಯಬಂದವು. ಈ ಏರ್ಪಾಡು ಬಹಳ ಶ್ಲಾಘ್ಯವಾದದ್ದೆಂಬದಾಗಿಯೂ, ಉಪಪನ್ನರಾದ ತಂದೆತಾಯಿಗಳೆಲ್ಲರೂ ತಮ್ಮ ಮಕ್ಕಳನ್ನು ಇವರ ಪೋಷಣೆಯಲ್ಲಡುವದು ಕರ್ತವ್ಯವೆಂಬದಾಗಿಯೂ ಭಾವನೆಯುಂಟಾಗು

ವದಕ್ಕೆ ಉಪಕ್ರಮವಾಯಿತು. ಪೆಸ್ಟಲಾಟ್ಸಿಯವರ ಮಗನು ಇವರ ಜೊತೆಯಲ್ಲಿ ಶಿಕ್ಷೆಯನ್ನು ಹೊಂದುತ್ತಿದ್ದ ಅನಾಥರಾದ ಕೆಲವು ಮಕ್ಕಳು ಕ್ರಮಕ್ರಮವಾಗಿ ಮಾತನಾಡುವದನ್ನೂ ಓದುವದನ್ನೂ ಬರಿಯುವದನ್ನೂ ಕೆಲಸ ಮಾಡುವದನ್ನೂ ಕಲಿತುಕೊಂಡರು. ಈ ಮಕ್ಕಳು ಅನೇಕಸಹಸ್ರ ಪದಾರ್ಥಗಳ ಹೆಸರುಗಳನ್ನೂ ಅವುಗಳ ಗುಣದೋಷಗಳನ್ನು ತಿಳಿದುಕೊಂಡು ಪ್ರಶ್ನೆ ಮಾಡಿದವರಿಗೆ ಸದುತ್ತರಗಳನ್ನು ಕೊಡುವದಕ್ಕುಪಕ್ರಮಿಸಿದರು. ಈ ಗುಣಪಾಠಗಳು ದೊಡ್ಡವರಿಗೂ ಅಸಾಧ್ಯವಾಗಿ ತೋರುತ್ತಾಬಂತು. ಇದನ್ನು ನೋಡಿ ಜನರು ಅತ್ಯಂತ ವಿಸ್ಮಿತರಾಗಿ ಪೆಸ್ಟಲಾಟ್ಸಿಯವರ ಅಸಾಧಾರಣವಾದ ವಿದ್ವತ್ತನ್ನೂ ಬೋಧಕಾಶಕ್ತಿಯನ್ನೂ ಕೊಂಡಾಡಲುಪಕ್ರಮಿಸಿದರು. ಕ್ರಮಕ್ರಮವಾಗಿ ಇವರ ವಿದ್ಯಾಭ್ಯಾಸಕ್ರಮವು ಸ್ವಿಟ್ಸರ್‌ಲೆಂಡಿನ ಅನೇಕ ಪಟ್ಟಣಗಳಲ್ಲಿ ಹರಡಿಕೊಂಡಿತು.

ಉಪ್ಪು

ವಿಷಯ	ಭೋದನಕ್ರಮ.
(I) ದೊರೆಯುತಕ್ಕ ಸ್ಥಳಗಳು	
ಉಪ್ಪುಪ್ರಪಂಚದ ಅನೇಕ ಭಾಗಗಳಲ್ಲಿ ದೊರೆಯುತ್ತದೆ.	
ಯೂರೊಪ್. ಆಸ್ಟ್ರಿಯಾದೇಶದ ಗ್ಯಾಲಿಷಿಯಾ; ಪೋಲೆಂಡ್ ಇಗ್ಲೆಂಡಿನಲ್ಲಿ ಡ್ರಾಯಿಟಿಚ್, ನಾರಿಚ್‌ಪಟ್ಟಣಗಳು.	ಭೂಪಠದಲ್ಲಿ ಈ ಸ್ಥಳಗಳನ್ನು ತೋರಿಸಬೇಕು.
ಇಂಡಿಯಾ. ಸಂಬಾರ್ ಸರೋವರ; ಕಲಭಾಗ್; ಮದ್ರಾಸ್ ಮತ್ತು ಬೊಂಬಾಯಿ ಸಮುದ್ರತೀರಗಳು.	
II ಪಡೆಯುತಕ್ಕ ವಿಧಾನ	
ಉಪ್ಪನ್ನು ಮೂರು ವಿಧದಲ್ಲಿ ಪಡೆಯಬಹುದು.	
(1) ಉಪ್ಪುನೀರಿನ ಊಟೆಗಳಿಂದ. ಈ ವಿಧವಾದ ಊಟೆಗಳು, ಉಸ್ಟರ್ ಷೈರಿನಲ್ಲಿರುವ ಟ್ರಾಯಿಟಿಚ್, ಚೆಸ್ಟರ್ ಷೈರಿನಲ್ಲಿರುವ ನಾರಿಚ್‌ಪಟ್ಟಣಗಳ ಸಮೀಪದಲ್ಲಿ ಬಹಳವಾಗಿವೆ.	
(2) ಸಮುದ್ರದಿಂದ	

(3) ಉಪ್ಪಿನ ಗಣೆಗಳಿಂದ. ಉಪ್ಪಿನ ಗಣಿಗಳು ನಾರಿಚ್ ಪಟ್ಟಣದ ಸವಿಾಪದಲ್ಲಿ ಬಹಳ ವಾಗಿವೆ

ಊಟೆ ಅಥವಾ ಸಮುದ್ರದ ನೀರನ್ನು ತೆಟ್ಟಿಯೂದ ಪಾತ್ರೆಗಳಲ್ಲಿ ಹಾಕಿ ಬೆಂಕಿಯಲ್ಲಾಗಲಿ ಬಿಸಲಿನಲ್ಲಾಗಲಿ ಕಾಯಿಸುವದರಿಂದ, ಜಲಭಾಗವೆಲ್ಲಾ ಇಂಗಿಹೋಗಿ, ಉಪ್ಪು ಉಳಿಯುತ್ತದೆ ಸ್ಕಾಟ್ಲಾಂಡಿನಲ್ಲಿ 'ಪ್ರೆಸ್ಟ್‌ಪಾರ್' ಎಂಬ ಊರಿನಲ್ಲಿ ಈರೀತಿ ಉಪ್ಪು ತೆಗೆಯುವದು ಬಹಳ; ಇದರಿಂದಲೇ ಆ ಊರಿಗೆ ಈಹೆಸರು ಬಂದಿರುತ್ತದೆ.

ಉಪ್ಪಿನ ಗಣಿಗಳಲ್ಲಿ ಮೇಲಿನ ನೆಲವು ಒಳಕ್ಕೆ ಕುಸುಕೊಳ್ಳದಂತೆ ಅಲ್ಲಲ್ಲಿ ದೊಡ್ಡದೊಡ್ಡ ಕಂಭಗಳಂತೆ ಮಾಡಿಕೊಂಡು, ಉಳಿದಬಾಗದಲ್ಲೆಲ್ಲಾ ಅಗೆದು ಉಪ್ಪು ತೆಗೆಯುತ್ತಾರೆ. ಗಣಿಗಳಲ್ಲಿ ಕಲ್ಲಿದ್ದಲು ತೆಗಿಯುವಂತೆ.

III ಗುಣಗಳು.

ಶುದ್ಧವಾದ ಉಪ್ಪಿಗೆ ಬಣ್ಣವಿಲ್ಲ; ಗಾಜಿನಲ್ಲಿ ಕಾಣುವಂತೆ ಇದರ ಒಂದುಕಡೆಯಿಂದ ನೋಡಿದರೆ ಇನ್ನೊಂದುಕಡೆ ಇರುವ ವಸ್ತುಗಳು ಕಾಣುತ್ತವೆ. ಇದನ್ನು ಸುಲಭವಾಗಿ ಮುರಿಯಬಹುದು. ಬಹಳಹೊತ್ತು ಕಾಯಿಸಿದರೆ ಕರಗಿ ನೀರಾಗುತ್ತದೆ.

IV ಉಪಯೋಗಗಳು.

(a) ನಾವು ತಿನ್ನುವ ಪದಾರ್ಥಗಳಿಗೆ ಹಾಕಿದರೆ ರುಚಿಕೊಡುತ್ತದೆ ಒಂದು ಉಪ್ಪಿನಹರಳನ್ನು ತಂದೆಟ್ಟುಕೊಂಡಿದ್ದು ಅದರ ಉಪಯೋಗವನ್ನು ಸಾಧ್ಯವಾದಮಟ್ಟಿಗೆ ಬಾಲಕರಿಂದಹೇಳಿಸಬೇಕು.

(b) ದನಕರುಗಳಿಗೆ ತಿನ್ನಿಸುತ್ತಾರೆ. ಇವುಗಳು, ಉಪ್ಪಿನ ಊಟೆಗಳಲ್ಲಿ ನೀರು ಕುಡಿಯುವದಕ್ಕೆ ಪದೇಪದೇ ದೂರಪ್ರಯಾಣ ಮಾಡುವದುಂಟು

(c) ಕಾಯಿಯನ್ನು, ಮಾಂಸವನ್ನು ಕೆಡದಂತೆ ಕೆಲವುಕಾಲ ಇಟ್ಟಿರಬೇಕಾದರೆ, ಅವಕ್ಕೆ ಉಪ್ಪು ಹಾಕುತ್ತಾರೆ.

(d) ಕೆಲವು ಭೂಮಿಗಳಿಗೆ ಗೊಬ್ಬರಕ್ಕೆ ಬದಲಾಗಿ ಉಪ್ಪುಹಾಕುವದರಿಂದ ಅವು ಫಲವತ್ತಾಗುತ್ತವೆ.

(e) ಆಫ್ರಿಕಾ, ಅರೇಬಿಯಾ, ದೇಶಗಳಲ್ಲಿ ಮನೆಗಳನ್ನು ಕಟ್ಟುವದಕ್ಕೆ ಉಪ್ಪಿನ ಚಪ್ಪಡಿಗಳನ್ನು ಉಪಯೋಗಿಸುತ್ತಾರೆ. ಈದೇಶದಲ್ಲಿ ಕಲ್ಲಿನ ಚಪ್ಪಡಿಯನ್ನುಪಯೋಗಿಸುವಂತೆ.

ವಿಶೇಷವಿಷಯಗಳು.

(1) ಈ ದೇಶದಲ್ಲಿ ಉಪ್ಪು ಬಹುಚಿಗ್ಗ; ಆದರೆ ಕೆಲವು ದೇಶಗಳಲ್ಲಿ ಬಹು ಪ್ರಿಯವಾದ್ದರಿಂದ ಉಪ್ಪು ತಿನುವವರು ಐಶ್ವರ್ಯವಂತರೆಂದು ಭಾವಿಸಲ್ಪಡುತ್ತಾರೆ.

(2) ಪೂರ್ವದೇಶಗಳಲ್ಲಿ ಅತಿಥಿಗಳನ್ನು ಊಟಕ್ಕೆ ಕೂಡಿಸುವ ದರಲ್ಲಿ ಒಂದು ಪದ್ಧತಿಯುಂಟು. ಅದೇನಂದರೆ :—ಭೋಜನದ ಮೇಜಿನಮೇಲೆ ಮಧ್ಯದಲ್ಲಿ ಸರಿಯಾಗಿ ಒಂದು ಉಪ್ಪಿನ ಪಾತ್ರೆಯನ್ನಿಟ್ಟು, ಮೇಜಿನಮೊದಲರ್ಧದಲ್ಲಿ, ದೊಡ್ಡಪದವಿಯಲ್ಲಿರತಕ್ಕವರನ್ನೂ, ಎರಡನೇ ಅರ್ಧದಲ್ಲಿ ಇತರರನ್ನೂ ಕೂಡಿಸುತ್ತಾರೆ.

(3) ಪೋಲೆಂಡಿನಲ್ಲಿರುವ 'ವಿಯಲಿಚ್‌ಕಾ' ಎಂಬ ಊರಿನ ಹತ್ತಿರ ಪ್ರಖ್ಯಾತವಾದ ಒಂದು ಉಪ್ಪಿನ ಗಣಿಯಿದೆ. ಅಲ್ಲಿನ ಉಪ್ಪು ಭೋಜನಕ್ಕೆ ಯೋಗ್ಯವಾದದ್ದು, ಆ ಗಣಿಯು 1 ಮೈಲಿ ಉದ್ದವೂ ಅರ್ಧಮೈಲಿ ಅಗಲವೂ ಉಳ್ಳದ್ದಾಗಿದೆ. ಗಣಿಯೊಳಗೆ ಉಪ್ಪಿನಲ್ಲೇ ಕೊರೆಯಲ್ಪಟ್ಟ ಬೀದಿಗಳೂ, ದೇವಸ್ಥಾನಗಳೂ, ವಿಗ್ರಹಗಳೂ, ಇರುವದರಿಂದ ಇದು ಪಾತಾಳಲೋಕದ ಪಟ್ಟಣವೆನ್ನುವಹಾಗೆ ಇದೆ. ದೀಪಗಳನ್ನು ಹತ್ತಿಸಿದಾಗ ಈ ಗಣಿಯು ಅತಿ ರಮಣೀಯವಾಗಿ ಕಾಣುವದು.

ಪ್ರಸಿದ್ಧಪತ್ರಿಕಾ.

'ಬಾಲಸಖಾ' [Children's Friend] ಎಂಬ ಇಂಗ್ಲಿಷ್ ಗ್ರಂಥದಲ್ಲಿ

1. The Miss deceived by her Maid
2. The man who rose to sudden fortune
3. Robin*
4. Joseph
5. The self-corrected Liar.
6. Canary bird
7. Arthur
8. The Three Cakes
9. The silk slip (To be made a Vehicle against ornaments)
10. The Black-Smith
11. The Dirty Boots
12. The Farmer*
13. Pascal
14. The Salven
15. Obligingness and Complaisance
16. Receipt to be always pleased
17. The Lamb
18. The Masons on the Ladder
19. Abel*
20. The Two Apple Trees

21. Philip
22. Alfred and Dorinda
23. The pleasures of Work
24. Old Colin
25. The wild Geese*
26. Julian and Rosina
27. The Vine-Stump
28. Caroline (Part I only)*
29. The Little Brother
30. The Four Seasons
31. The Tattler
32. James
33. The Children who would be their own masters*
34. The Young Sparrows
35. The Cherries*
36. Little Jack.

ಈ ಕಥೆಗಳ ಉತ್ತಮವಾದ ಕನ್ನಡ ತರ್ಜುಮೆಗೆ, ಧಾರ್ವಾಡದ ಕರ್ಣಾಟಕವಿದ್ಯಾವರ್ಧಕಸಂಘದಿಂದ ೧೦೦ ರೂಪಾಯಿ ಬಹುಮಾನ ಕೊಡಲ್ಪಡುವದು. ನೂತನತೆ, ಹೆಚ್ಚುತ್ತಲಿರುವ ತಿಳುವಳಿಕೆಗನುಗುಣವಾದ ಅನುಭವ ಮುಂತಾದ, ಮೂಲಗ್ರಂಥದಲ್ಲಿರುವ ರಸಕ್ಕೆ ಲೋಪಬಾರದಂತೆ, ನಮ್ಮ ಜನಗಳ ಆಚಾರವ್ಯವಹಾರ ಮುಂತಾದ್ದಕ್ಕೆ ಹೊಂದುವಂತೆ ಬೇಕಾದ ತಿದ್ದುಪಾಟುಗಳನ್ನು ಮಾಡಿಕೊಳ್ಳಬಹುದು. ೮ವರ್ಷಮೊದಲು ೧೫ವರ್ಷದ ಬಾಲಿಕಾ ಬಾಲಕರಿಗೆ ಉಪಯೋಗವಾಗಬೇಕಾದ್ದರಿಂದ ಸುಲಭವಾಗಿ ಅಭಿಪ್ರಾಯವಾಗುವಂತೆ ಸರಳವಾಕ್ಯಗಳನ್ನೇ ಪ್ರಯೋಗಿಸಬೇಕು. ಇಚ್ಛೆಯುಳ್ಳವರು (*) ಈ ಗುರ್ತುಮಾಡಿರುವ ಕಥೆಗಳನ್ನು ಮಾಡಲು ತರ್ಜುಮೆ ಮಾಡಿ ಕಾಗದದ ಒಂದು ಪಕ್ಕದಲ್ಲೇ ಸ್ಪಷ್ಟವಾಗಿ ಬರೆದು ೧೫ನೇ ಅಕ್ಟೋಬರ್ § ಅಖೈರಿನೊಳಗಾಗಿ ಕೆಳಗೆ ರುಜು ಮಾಡಿರುವವರಿಗೆ ಕಳುಹಿಸಬೇಕು. ಹೀಗೆ ಬಂದವುಗಳನ್ನೆಲ್ಲಾ ಪರಿಶೋಧಿಸಿ, ಉತ್ತಮವಾದದನ್ನು ನಿರ್ಧರಿಸಿದಮೇಲೆ ಅಂತವರು ಉಳಿದದ್ದನ್ನು ತರ್ಜುಮೆ ಮಾಡಬಹುದು. ಪೂರೈಸಿದ ನಂತರ ಶ್ಲಾಘ್ಯವಾದದ್ದಾಗಿ ತೋರಿದರೆ ಬಹುಮಾನ ಕೊಡಲ್ಪಡುವದು. ಹೀಗೆ ಬಹುಮಾನವನ್ನು ಪಡೆದ ತರ್ಜುಮೆಯು ಸರ್ವವಿಧದಲ್ಲೂ ಸಂಘದವರಿಗೇ ಸೇರಿದ್ದಾಗಿರುತ್ತೆ.

ನಾರಾಯಣ ಗುರುನಾಥ್,
ಸ್ಪೀಡರ್. ಆನರೆರಿ ಸೆಕ್ರೆಟೆರಿ
ಕ| ವಿ| ಸಂ|

ಧಾರ್ವಾಡ,
೫-೯-೧೭.

§ ಈಗ ಕಾಲಾತೀತವಾದುದರಿಂದ, ಭಾಷಾಂತರೀಕರಿಸುವವರು ಸಂಘದವರ ಅಪ್ಪಣೆಯನ್ನು ಪಡೆದು ಭಾಷಾಂತರವನ್ನು ಕಳುಹಿಸುವುದು.

Popular Tales :—(೧) Out of Debt out of Danger. (೨) The Lottery (೩) Murad the Unlucky. Parents' Assistant : (೪) Lazy Lawrence (೫) The Birth-day Present. (೬) The Little Merchants (೭) Tarlton.

ಈ ಕಥೆಗಳ ಉತ್ತಮಕನ್ನಡ ತರ್ಜುಮೆಗೆ ಧಾರವ್ವಾಡದ ಡಿ। ಕೊ। ಪ್ಲೀಡರ್ ಮೆ। ಗುರುನಾಥರಾಯರು ೭೫ ರೂಪಾಯಿ ಬಹುಮಾನ ಕೊಡುತ್ತಾರೆ. ಇಚ್ಛೆಯುಳ್ಳವರು ಮೊದಲು ೧ನೇ ವರಲ್ಲಿ ೧ನೇ ಅಧ್ಯಾಯ (೨) ನೇದರಲ್ಲಿ ೪ನೇ ಅಧ್ಯಾಯ (೪) ನೇದರಲ್ಲಿ ಮೊದಲು ೨೦ ಪುಟ (೬)ರಲ್ಲಿ ೬ ಪುಟ (೭) ರಲ್ಲಿ ೨೦ ಪುಟಗಳನ್ನು ತರ್ಜುಮೆಮಾಡಿ ೧೯೧೯ ಅಕ್ಟೋಬರ್ * ಅಷ್ಟರೊಳಗಾಗಿ ಕೆಳಗೆ ರುಜುವಾಡಿರುವವರಿಗೆ ಕಳುಹಿಸಬೇಕು. ಬಹುಮಾನವನ್ನು ಹೊಂದಿದ ತರ್ಜುಮೆಯ ವಿಶಿಷ್ಟ ಹಕ್ಕನ್ನೂ ಬಹುಮಾನ ಕೊಟ್ಟವರು ಇಟ್ಟುಕೊಳ್ಳುತ್ತಾರೆ. ಆದರೆ ಸರ್ಕಾರದಿಂದ ಸಹಾಯ ದೊರತಲ್ಲಿ ಅದರಲ್ಲರ್ಧವು ಮೊದಲನೇ ಧಾಪೆಯಲ್ಲಿ ಬಂಡಲಾಭದಲ್ಲವಾತ್ರ ಶೇ। ೧೦ರ ಮೇರೆಯೂ ತರ್ಜುಮೆ ಮಾಡಿದವರಿಗೆ ದೊರೆಯುವದು ಉಳಿದ ಅಂಶಗಳೆಲ್ಲಾ ಮೇಲಿನ ಪ್ರಸಿದ್ಧಪತ್ರಿಕೆಯಲ್ಲಿ ಹೇಳಿರತಕ್ಕ ವಿಧಿಗಳೇ ಇದಕ್ಕೂ ಅನ್ವಯಿಸುತ್ತದೆ

ಧಾರವ್ವಾಡ,
೧೦-೯-೧೯.

ತಿರುಮಲರಾವ್,
ಮಂಗಳವಾರಪೇಟೆ.

ಪ್ರಶ್ನೆಪತ್ರಿಕೆ

ನಾರ್ಮಲ್‌ಸ್ಕೂಲ್—ಕನ್ನಡ ಭಾಷೆ

I. (೧) ನಳಚರಿತ್ರೆಯನ್ನು ಮೊದಲು ಯಾರು ಯಾರಿಗೆ ಹೇಳಿದರು ? (೨) ಅ ಇಂದ್ರಖಂಡಲವೇಕಂಡಶುಂಡಾಪ್ರಕಾಂಡ ನಿಭದೋರ್ದಂಡ ಮಂಡಿತ ಚಂಡತರ ಕುಂಡಲೀಕೃತ ಕೋದಂಡ ಕಾಂಡಖಂಡಿತ ರಿಪುಮಂಡಲೀಂದ್ರ ಮಂಡಲೀಶಿರಃಪ್ರಂಡರೀಕ

* ಕಾಲಾಶ್ಚೀತವಾದುದರಿಂದ ತರ್ಜುಮೆ ಮಾಡತಕ್ಕವರು ಮ ॥ ರಾ ॥ ತಿರುಮಲರಾಯರಿಗೆ ಬರೆದು ಅವರನುಮತಿಯನ್ನು ಪಡೆದು, ತರ್ಜುಮೆ ಮಾಡಿ ಅವರಲ್ಲಿಗೆ ಕಳುಹಿಸುವುದು.

ಕಲಿತ ತಾಂಡವಾಲೋಕನ ಸ್ತಬ್ಧವಾರ್ತಡನುಂ ॥ ಅಪ್ರತಿಮ ನಿಜಭುಜಪ್ರತಾಪ ಪ್ರವಾಳಸ್ತಂಭಸಮುತ್ತಂಭಿತ ವಿಪ್ರುಳವಿಮಳ ಕೀರ್ತಿಮುಕ್ತಾಮಯ ಕಾಯಮಾನಚ್ಛಾಯ ಶೀತಳೀಕೃತಸಂಕಲ ಭೂತಳನುಂ ? ಇವುಗಳಿಗೆ ಪ್ರತಿಪದಾರ್ಥವನ್ನು ಬರೆದು ಎರಡನೆಯುಪದದಲ್ಲಿ ಎಲ್ಲೆಲ್ಲಿ ಯಾವಯಾವ ಸಮಾಸಗಳಿವೆ ಹೇಳಿರಿ ?

II. (1) ದಮಯಂತಿಯೆಂಬ ಹೆಸರು ಈಕೆಗೆ ಬರುವುದಕ್ಕೆ ಕಾರಣವೇನು ? ಈಕೆಯ ಸಹೋದರರು ಯಾರು ? (2) ವರವ್ಯಪಸಾಹಂ, ಸೂರ್ಯಾದೃತಂ, ಅಪ್ರರಾಜ ಸುಧರ್ಮತ್ವಕಲಿತಂ, ಅರಿದರಕರಂ ಶುಚಿಹಿತಂ, ಕೃಷ್ಣಾಂತಭಾಸುರಂ, ಇವುಗಳ ಅರ್ಥವ್ಯುತ್ಪತ್ತಿಯನ್ನು ಆಯಾವಿಶೇಷ್ಯಗಳೊಡನೆ ಬರೆವುದು? (3) ಕನ್ನಯೇ ಕಣ್ಣಾಗಿಸಲಪ್ರತ್ತಿರೆ- ಇದರ ತಾತ್ಪರ್ಯವೇನು ?

III. (1) ಕಂಗೊಳಿಸಿದತ್ತಕಾಲದೆ ಬಾಯ್ದೆರೆದ ಸಜಲಶುಕ್ತಿಪುಟಂಬೊಲ್-ಹೀಗೆ ಕಂಗೊಳಿಸದುದಾವುದು? ಅಕಾಲದೆಬಾಯ್ದೆರದ ಎಂಬವಿಶೇಷಣಕ್ಕೆ ಪ್ರಯೋಜನವೇನು ? (2) ಮರಕತದರಳೆಲೆವೆರೆದ ದಮಯಂತಿಯ ಮುಖಮೆಂತಿರ್ದುದು ? (3) ಬಾರದೆವಾಮರಕ್ಕೆ ಪೊಸಕೆಂದಳಿರಿಂದುಗೆಬಾರದಾಳ್ಗದಿರ್ । ಬಾರದೆವೊಗ್ಗೆ ಮೂದವಿಗೆ ಬಾರದೆಕೋಗಿಲೆಗಳ್ಗೆನುಣ್ಗರಂ ॥ ಬಾರದೆಮೊರುತಂಗೆನರುಗದಪ್ಪವಿಯೋಗಿಜನಕ್ಕೆದಂದುಗಂ । ಬಾರದದೊಂದೆ ಬಂದುದೆವಿರಕ್ತ ದುರಂತವಸಂತವಾಸರಂ॥ ಇದರ ಅರ್ಥವನ್ನು ವಾಕ್ಯರೂಪವಾಗಿ ಬರೆವುದು ?

IV. (1) ರಾಜನೈಪನ ರಾಯಭಾರಿಯು ಶ್ರೀರಂಗಪಟ್ಟಣದಿಂದ ಕಳುಹಿದ ಕಾಗದದಲ್ಲಿದ್ದ ಸಂಗತಿಯೇನು ? (2) ತಿರುಮಲರಾಜನಿಗೂ ರಾಜನೈಪನಿಗೂ ಜಗಳ ಹುಟ್ಟಿದ್ದು ಹೇಗೆ ? (3) ಪದಿನಾಲುನಂಜರಾಜ, ನರಸರಾಜ, ಇವರ ವಿಷಯವಾಗಿ ಇಲ್ಲಿ ಬಂದಿರುವದೇನು ? (4) ರಾಜನೈಪನು ತನ್ನವಸಾನದಲ್ಲಿ ಮಾಡಿದ ರಾಜ್ಯದ ವಿಭಾಗಕ್ರಮವಾವುದು ? (5) ಮೂವಂತಿನ ಕೊಂಬು, ಸೂಡುಪಾಡು, ಕಣ್ಣರ್ದ್ದಿಗಳೆದ, ಬಣಂಜು, ಜಕ್ಕಂದೊಳಲಿ, ಎಕ್ಕಲ, ಕೌಳುಡೆ, ನನೆಕೊನೆ, ಕಪ್ಪಕಾಣ್ಕೆ, ನಾಪೀ, ಕೂಪ, ಬೇಡಗೆ, ಬಿಡಾರ, ಜಾಂಬಿಲ, ಇವುಗಳ ಅರ್ಥವೇನು ?

V. (1) ಕೌರವರು ಪಾಂಡವರಿಗೆ ಮಾಡಿರುವ ಅಪಕಾರಗಳು ಯಾವುವು ? (2) ಸ್ತ್ರೀಸ್ವಭಾವದಲ್ಲಿದ್ದರೂ ನೀನೇ ಶ್ರೇಷ್ಠಳು, ಮಹಾರಾಜನಲ್ಲ—ಇದನ್ನು ಯಾರು ಯಾವಸಂದರ್ಭದಲ್ಲಿ ಹೇಳಿದರು ? ಶ್ರೇಷ್ಠತಾಶ್ರೇಷ್ಠತೆಗಳನ್ನು ವಿವರಿಸು

ವುದು ? (3) ಶಲಂತಿಕಾಕತಾಳಿಯಂ—ಇವು ಯಾವುವು ? (4) ಈ ನಾಟಕದಲ್ಲಿ ಬಾರತದ ಕಥೆ ಎಲ್ಲಿಂದ ಪ್ರಾರಂಭಿಸಲ್ಪಟ್ಟಿದೆ ? ಅದನ್ನು ತಿಳಿಸುವುದುಹೇಗೆ ?

VI. (1) ದುರ್ಯೋಧನ—ಈ ಮಾತು ಎಲ್ಲರಿಗೂ ಸೂಕ್ತವಾಗಿರುವುದು—ಯಾವ ಮಾತು ? (2) ಕಂ। ಒಡಹುಟ್ಟಿದರಿಂ, ಎಂಬುದು ವ್ಯತ್ಯಾಸವಾಗಿ ಹೇಳಲ್ಪಟ್ಟಿತು—ಇಲ್ಲಿ ವ್ಯತ್ಯಾಸವೇನು ? ಅದನ್ನು ಮಾತ್ರಸರವಾಡುವುದು. (3) ಪ್ರವೇಶಕಲಕ್ಷಣವೇನು ? ಇಲ್ಲಿನ ಪ್ರವೇಶದಲ್ಲಿ ಆ ಲಕ್ಷಣವಿದೆಯೆ ? ತೋರಿಸುವುದು. (4) ಬಹುಮುಧುರವಾದಲತೆಯುಂ । ಕಹಿಯಪ್ಪುದುವಿಷಮಮಹೀಜನಾಶ್ರಯದಿಂದಂ ॥ ಇದಕ್ಕೆ ಉಪಮೇಯವಾವುದು ?

VII. (1) ದ್ರೋಣನು ಶಸ್ತ್ರಪರಿತ್ಯಾಗ ಮಾಡುವುದಕ್ಕೆ ವಾಸ್ತವವಾದ ಕಾರಣವಾವುದು ? ಕರ್ಣನು ಕಲ್ಪಿಸಿದುದು ಏನು ? ಹಾಗೆ ಕಲ್ಪಿಸುವದಕ್ಕೆ ನಿಮಿತ್ತವೇನು ? ವಿಶದವಾಗಿ ಹೇಳುವುದು ? (2) ದಹಿಸಾಧರ್ಮ್ಯತನೂಜನಂ ಬಂದೆಯೇಬಲ್ಲೆಯದುವೊತ್ತೆನ್ನುಮಂ—ಇಂತಹ ಸೇವೆಯನ್ನು ಮಾಡುವ ವಿಷಯದಲ್ಲಿ ಇವನು ಅಭ್ಯಾಸವಿಲ್ಲದವನು ; ದಿಟದತ್ತಣಿಂದವೊಳ್ಳಿತು । ಸಟೆ—ಇವುಗಳನ್ನು ಯಾರು ಯಾವ ಸಂದರ್ಭದಲ್ಲಿ ಹೇಳಿದರು—(3) ಜನಕಶಿರದೆಮುಟ್ಟಲ್ವೇರಿಗಳ್ವರ್ಶನಾಮಂ । ಕನಲ್ದುನೆಗಳ್ದುದಂ ನೀಂ ಕೇಳ್ದುದಿಲ್ಲೇನಿದೀಗಳ್ ॥ ಅಶ್ವತ್ಥಾಮನಾಕಜ್ಜಮಂಮೊಳ್ದುದಿಲ್ಲೇಂ । ಇಲ್ಲಿಲ್ಲಿಗೆ ಬೇಕಾಪಮ್ಟ್ಟು ಪೂರ್ವಕಥೆಯನ್ನು ಹೇಳಿ ಅಶ್ವತ್ಥಾಮನು ತನ್ನ ಹೆಸರನ್ನು ತಾನೇ ಹೇಳಿಕೊಂಡಿರುವನೆಷ್ಟೆ ? ಇದು ಸರಿಯೆ ? ಗುರುತುಮಾಡಿರುವಲ್ಲಿ ವ್ಯಾಕರಣ ವಿಷಯವೇನು ?

ಕನ್ನಡ ವ್ಯಾಕರಣ

I. (1) ಸತ್ಯಣಾಭ್ಯವಹಾರಿಗಳ್, ಅರೋಚಿಗಳ್, ವಾಕ್ಯವೇಷ್ಟನ, ವಾಚ್ಯಲಿಂಗ-ಇವುಗಳ ಅರ್ಥವೇನು ? (2) ಕನ್ನಡದಲ್ಲಿ ಅಕ್ಷರಗಳೆಷ್ಟು ? ಅವ್ಯಯಾವವು ? (3) ನಿತ್ಯಬಿಂದು, ನಿತ್ಯದ್ವಿತ್ವ, ಸಹಜಮಹಾಪ್ರಾಣ, ಸಹಜಶಿಥಿಲ ಇದಕ್ಕೆ ಎರಡೆರಡು ಉದಾಹರಣೆಯನ್ನು ಕೂಡುವುದು.

II. (1) ಅಕ್ಕುಂಕೂಡೆ ತುಕಾರಾಂತಕ್ಕೆ ತೃತೀಯತ್ವವುವು ವಿನಾದಿಗೆ ಲೋಪಂ॥ ವಿಕ್ಕಾ ಸ್ತ್ರೀಪುಲ್ಲಿಂಗದೊಳಕ್ಕುವಿರರ್ದಿರ್ವಿರೆಂದು ಲೋಕೊಕ್ತಿಗಳೊಳ್॥ ಒದವುವುದ ದಂತ ಪುಲ್ಲಿಂಗದೊಳ್ಗೆಯೆಂದಾದಿಬಿಂದುವಿಂದ್ವಿತ್ವಂಮೇ ॥ ನೊದವ್ವವುದು ನಪುಂಸಕ ಲಿಂಗದೋಳ್ಬ ತುರ್ಥಿಗೆಗೆಯಕ್ಕು ಮುಳಿದೆಡೆಗೆಲ್ಲಂ-ಈ ಸೂತ್ರಗಳ ಅರ್ಥವನ್ನು ಉದಾಹರಣೆಗಳೊಡನೆ ಸ್ಪಷ್ಟವಾಗಿ ಹೇಳಿ. (2) ಕನ್ನಡದಲ್ಲಿ ದ್ವಿವಚನವನ್ನು ತಿಳಿಯುವದು ಹೇಗೆ?

III. (1) ತ್ರಿಲಿಂಗಕ್ಕೂ ವಾಚ್ಯಲಿಂಗಕ್ಕು ಭೇದವೇನು? (2) ಲಿಂಗವಿಷಯದಲ್ಲಿ ಕನ್ನಡಕ್ಕೂ ಸಂಸ್ಕೃತಕ್ಕೂ ಇರುವ ವ್ಯತ್ಯಾಸವೇನು? (3) ಸಂಸ್ಕೃತವ್ಯಂಜನಾಂತಶಬ್ದಿಗಳನ್ನು ಕನ್ನಡಕ್ಕೆ ಲಿಂಗವಾಗಿ ಮಾಡುವದು ಹೇಗೆ ಉದಾಹರಣೆಯೊಡನೆ ವಿವರಿಸುವದು?

IV. (1) ಏನೆಂಬುದಕ್ಕೂ ಒಳ್ಳಿತು ಎಂಬುದರಪುಲ್ಲಿಂಗೈಕವಚನದಲ್ಲೂ ಎಲ್ಲಾ ವಿಭಕ್ತಿರೂಪಗಳನ್ನು ಬರೆವುದು. (2) ಗೊರವನಲ್ಲಪೊಗಳಿಂ, ಪೊನ್ನಲಿಂದಳಂ, ಬರಿಗಿಪ್ರಧಾನರಂ, ಕೆರೆಯತ್ತಣ್, ಮೇಲಾದರ್ದು ಸೆರಂಗಂ, ಆಯತಕರಕಡೆಗಣ್ಣಿಂದೆ-ಇವುಗಳನ್ನು ಏತಕ್ಕೆ ಉದಾಹರಿಸಿರುವನು? (3) ಇರೆಯಲರಹಿತವ್ಯಂಜನ, ಪರವಾಗಿ ಸಕಾರವಲ್ಲಿ ಬಹುಳಂಚತ್ವಂ—ಇಲ್ಲಿ ಬಹುಳಂ ಎಂಬುದಿಲ್ಲದಿದ್ದರೆ ದೋಷವೇನು? ಸ್ಪಷ್ಟವಾಗಿ ಹೇಳಿ. (4) ವಧು + ಇವಳ್, ಮಾತು + ಎಲ್ಲಂ, ಮಡು + ಇದು, ಗಳಗಳ + ಎನುತುಂ—ಇವುಗಳನ್ನು ಸಂಧಿಮಾಡಿ ಬರೆವುದು. (5) ಪಲ್ಲಿಗೆ, ಡವಾಳಂದಳಿಗೆ, ಮಲ್ಲಲ್ಲಿ, ಪಲ್ಲಿ, ಸೊಲ್ಲಿಡೆ, ಪೇಳಿ, ಪೊಂಪುಲ್ಲಿ-ಇವುಗಳ ಅರ್ಥವೇನು?

ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು.

ತುಮಕೂರು ಡಿಸ್ಟ್ರಿಕ್ಟ ಕನ್ನಡ ಸ್ಕೂಲುಗಳು.

ತುಮಕೂರು ತಾಲ್ಲೂಕ್ ಕನ್ನಡಸ್ಕೂಲಿನಲ್ಲಿ ೨೩೫ ಮಂದಿ ವಿದ್ಯಾರ್ಥಿಗಳು ಇದ್ದರು. ಹದಿನಾಲ್ಕುಮಂದಿ ಕನ್ನಡ ಲೋವರ್ ಸೆ| ಪರೀಕ್ಷೆಗೆ ಹೋಗಿದ್ದವ ಹನ್ನೆರಡುಮಂದಿ ತೇರ್ಗಡೆಯಾದರು. ಸ್ಕೂಲಿಗೆ ಸ್ಥಳ ಸಾಲದು. ಪಾಪಗಡ

ತಾಲೊಕ್ಲಾಕ್ ಕನ್ನಡಸ್ಕೂಲಿನಲ್ಲಿ ೧೧೪ ಮಂದಿ ವಿದ್ಯಾರ್ಥಿಗಳಿದ್ದರು. ಸಾಧಾರಣವಾಗಿ ತೃಪ್ತಿಕರವಾದಸ್ಥಿತಿಯಲ್ಲಿತ್ತು. ಈ ಸ್ಕೂಲಿನಿಂದ ನಾಲ್ಕುಮಂದಿ ಕ| ಲೊ| ಸೆ| ಪರಿಕ್ಷೆಯಲ್ಲಿ ತೇರ್ಗಡೆಯಾದರು. ತುರವೆಕೆರೆ ಸ್ಕೂಲಿನಲ್ಲಿ ೧೦೫ ಮಂದಿ ವಿದ್ಯಾರ್ಥಿಗಳು. ಇವರಲ್ಲಿ ೧೪ ಮಂದಿ ಬಾಲಕಿಯರು. ಲೊ| ಸೆ| ಪರಿಕ್ಷೆಗೆ ಹೋದ ಮುವ್ವರಲ್ಲಿ ಇಬ್ಬರು ತೇರ್ಗಡೆಯಾದರು. ಹುಳಿಯಾರದ ತಾಲೊಕ್ಲಾಕ್ ಸ್ಕೂಲಿನಲ್ಲಿ ೭೯ ಮಂದಿ ವಿದ್ಯಾರ್ಥಿಗಳು. ಸ್ಕೂಲು ಒಳ್ಳೆ ಅಭಿವೃದ್ಧಿಸ್ಥಿತಿಯಲ್ಲಿತ್ತು. ತಾಲೊಕ್ಲಾಕ್ ಬ್ರಾಂಚ್ ಸ್ಕೂಲು ಬೆಳ್ಳಾವಿಯಲ್ಲಿ ೧೩೦ ಮಂದಿ ವಿದ್ಯಾರ್ಥಿಗಳು. ಸ್ಕೂಲು ತುಂಬಾ ತೃಪ್ತಿಕರವಾದ ಸ್ಥಿತಿಯಲ್ಲಿತ್ತು. ಈ ಸ್ಕೂಲಿನಿಂದ ಇಬ್ಬರು ಲೊ| ಸೆ| ಪರಿಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದರು. ಎರಡು ಬಾಡಿಗೆ ಮನೆಯಲ್ಲಿ ಸ್ಕೂಲನ್ನು ಯಿಟ್ಟಿರುವರು. ಸ್ಥಳ ಸಂಕೋಚವು ಬಹಳ. ಅಮೃತೂರು ತಾಲೊಕ್ಲಾಕ್ ಬ್ರಾಂಚ್ ಸ್ಕೂಲಿನಲ್ಲಿ ೧೧೬ ಮಂದಿ ವಿದ್ಯಾರ್ಥಿಗಳಿದ್ದರು. ಸ್ಕೂಲು ಸಾಧಾರಣವಾದ ಅಭಿವೃದ್ಧಿಸ್ಥಿತಿಯಲ್ಲಿತ್ತು. ಮೇಲಣ ತರಗತಿಯ ಬಾಲಕರು ಫುಟ್‌ಬಾಲನ್ನು ಆಡುವರು. ಸ್ಕೂಲಿಗಾಗಿ ಒಂದು ಕಟ್ಟಡವು ತಯಾರಾಗುತ್ತಿರುವುದು. ನೊಣವಿನಕೆರೆ ತಾಲೊಕ್ಲಾಕ್ ಬ್ರಾಂಚ್ ಸ್ಕೂಲಿನಲ್ಲಿ ೧೦೩ ಮಂದಿ ವಿದ್ಯಾರ್ಥಿಗಳು ಓದುತ್ತಿದ್ದರು. ಲೊ| ಸೆ| ಪರಿಕ್ಷೆಗೆ ಹೋಗಿದ್ದ ಹನ್ನೆರಡುಮಂದಿಯಲ್ಲಿ ಏಳುಮಂದಿ ತೇರ್ಗಡೆಯಾದರು. ಸ್ಕೂಲಿನ ಸ್ಥಿತಿ ತೃಪ್ತಿಕರ. ಹೊನ್ನವಳ್ಳಿ ತಾಲೊಕ್ಲಾಕ್ ಬ್ರಾಂಚ್ ಸ್ಕೂಲಿನಲ್ಲಿ ೫೯ ಮಂದಿ ವಿದ್ಯಾರ್ಥಿಗಳು. ಸ್ಕೂಲನ್ನು ಅಭಿವೃದ್ಧಿಸ್ಥಿತಿಗೆ ತರಬೇಕಾಗಿದೆ. ಈ ಸ್ಕೂಲಿರುವ ಬಾಡಿಗೆಮನೆಯು ಸ್ಕೂಲನ್ನು ಮಾಡುವುದಕ್ಕೆ ಅನುಪಯುಕ್ತವಾದ ಕಟ್ಟಡ.

ತುಮಕೂರು ಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿದೆ. ೧೫೦ ಮಂದಿ ಬಾಲಕರು ಓದುತ್ತಾರೆ. ಈ ಸ್ಕೂಲಿನಿಂದ ಯಾವವಿದ್ಯಾರ್ಥಿಯೂ ಲೋ| ಸೆ| ಪರಿಕ್ಷೆಗೆ ಹೋಗಿರಲಿಲ್ಲ. ತುಮಕೂರು ಕೋಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯಲ್ಲಿ ೧೧೩ ಮಂದಿ ವಿದ್ಯಾರ್ಥಿಗಳಿರುವರು. ಸ್ಕೂಲು ಸ್ವಲ್ಪ ಅಭಿವೃದ್ಧಿಸ್ಥಿತಿಯಲ್ಲಿತ್ತು. ಗುಬ್ಬಿಯಲ್ಲಿರುವ ವೆಸ್ಲಿಯನ್ ಮಿಷನ್ ಬಾಲಕರ ಕನ್ನಡಸ್ಕೂಲ ರಿಜಿಸ್ಟರಿನಲ್ಲಿ ೧೦೯ ಮಂದಿ ವಿದ್ಯಾರ್ಥಿಗಳ ಸಂಖ್ಯೆ ಇರುವುದು. ಸ್ಕೂಲು ಸ್ವಲ್ಪ ಅಭಿವೃದ್ಧಿಸ್ಥಿತಿಯಲ್ಲಿದ್ದರೂ ಲೋ| ಸೆ| ಪರಿಕ್ಷೆಯಲ್ಲಿ ಒಬ್ಬರೂ ತೇರ್ಗಡೆಯಾಗಲಿಲ್ಲ. ತಾಲೊಕ್ಲಾಕ್‌ಸ್ಕೂಲು ಎಷ್ಟರಮಟ್ಟಿಗೆ ಇರಬೇಕೋ ಅಷ್ಟರಮಟ್ಟಿಗೆ ಇದು [redacted]

ರತಕ್ಕ ಜನರಿಗೆ ತೃಪ್ತಿಕರವಾಗಿಲ್ಲ. ತಯಾರಾದ, ಯೋಗ್ಯರಾದ ಉಪಾಧ್ಯಾಯರು ಇಲ್ಲಿ ಇದ್ದರೆ ಹುಡುಗರು ಲೋ। ಸೆ। ಪರಿಕ್ಷೆಯಲ್ಲಿ ತೇರ್ಗಡೆಯಾಗುತಿದ್ದರು. ಮಿರ್ಜಿ ನವರು, ಈ ಸ್ಕೂಲನ್ನು ಒಳ್ಳೇಸ್ಥಿತಿಗೆ ತರುತ್ತಾರೆಂದು ನಂಬಿರುತ್ತೇವೆ. ಕಡಬದಲ್ಲಿರುವ ವೆಸ್ಲಿಯ್ಯನ್ ಮಿಷನ್ ಸ್ಕೂಲಿನಲ್ಲಿ ೪೫ ಮಂದಿ ವಿದ್ಯಾರ್ಥಿಗಳು ಇರುವರು. ಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿತ್ತು. ಈ ಸ್ಕೂಲಿನಿಂದ ಒಬ್ಬ ಲೋ। ಸೆ। ಪರಿಕ್ಷೆಯಲ್ಲಿ ತೇರ್ಗಡೆಯಾದನು. ತುಮಕೂರಿನಲ್ಲಿ ಅನಾಥರಿಗಾಗಿ ಇಟ್ಟಿರುವ ವೆಸ್ಲಿಯ್ಯನ್ ಮಿಷನ್ ಸ್ಕೂಲಿನಲ್ಲಿ ೩೫ ಮಂದಿ ವಿದ್ಯಾರ್ಥಿಗಳಿದ್ದರು. ಅಭಿವೃದ್ಧಿಸ್ಥಿತಿಯಲ್ಲಿತ್ತು.

ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಒಟ್ಟು ಲೋ। ಸೆ। ಪರಿಕ್ಷೆಯಲ್ಲಿ ೪೦ ಮಂದಿ ವಿದ್ಯಾರ್ಥಿಗಳು ತೇರ್ಗಡೆಯಾದರು. ಕನ್ನಡ ಸ್ಕೂಲುಗಳು ತೃಪ್ತಿಕರವಾದ ಸ್ಥಿತಿಯಲ್ಲಿದ್ದವು.

ಸೂಚನೆಗಳು ಮತ್ತು ಸಮಾಚಾರಗಳು.

ಮು॥ ಸಾ॥ ಡೆಪ್ಯುಟಿ ಇನ್‌ಸ್ಪೆಕ್ಟರ್ ಮೆ॥ ಎಂ. ಶ್ರೀನಿವಾಸರಾವ್ ಬಿ. ಎ. ಯವರು ೧೮೯೯ನೇ ಮಿಸವಿ ಜನವರಿ ೩೦ ಲಾಗಾಯಿತು ಡೆಪ್ಯುಟಿ ಇನ್‌ಸ್ಪೆಕ್ಟರ್ ಮೆ॥ ಬಿ ದೇಶಕಾಚಾರ್ಯರು ನೋಡುತಲಿರುವ ಸರ್ಕಲಿನ ಛಾರ್ಜನ್ನು ವಹಿಸುವರು. ಮೆ॥ ಬಿ. ದೇಶಿಕಾಚಾರ್ಯರು ನಾರ್ತ್ ಸರ್ಕಲ್ಲಿಗೆ ಬರುವರು.

***

ಡೆಪ್ಯುಟಿ ಇನ್‌ಸ್ಪೆಕ್ಟರವರಾದ ಮು॥ ರಂಗಾಚಾರ್ಯರನರು ಕಾಯಿಲೆಸಬಬು ರಜಾದಮೇಲೆ ಇರುವುದರಿಂದ ಅವರು ಶಿವಮೊಗ್ಗಾ ಡಿಸ್ಟ್ರಿಕ್ಟ್‌ನ ಛಾರ್ಜನ್ನು ವಹಿಸುವವರಿಗೆ ಶಿವಮೊಗ್ಗಾ ಕಾಲೇಜ್, ಅಸಿಸ್ಟೆಂಟ್ ಮ್ಯಾಸ್ಟರವರಾದ ಮೆ॥ ಹೆಚ್. ಆರ್. ಕೃಷ್ಣಮೂರ್ತಿರಾವ್ ಬಿ. ಎ. ಯವರು ಚಾಲತಿಕೆಲಸದಲ್ಲಿರತಕ್ಕದ್ದು.

***

ಚಿಂತಾಮಣಿಸ್ಕೂಲು ಇಂಗ್ಲಿಸ್ ಮ್ಯಾಸ್ಟರ್ ಮು॥ ರಾ॥ ಎಸ್. ರಾಮರಾಯರವರನ್ನು ನೆಲಮಂಗಲದ ಆಂಗ್ಲೊ ವರ್ನಾಕ್ಯುಲರ್ ಸ್ಕೂಲು ಹೆಡ್ಮಾಸ್ಟರಾಗಿಯೂ ಅಲ್ಲಿನ ಹೆಡ್ಮಾಸ್ಟರನರು ಕಾನಕಾನಹಳ್ಳಿ ಸ್ಕೂಲಿನಲ್ಲಿ ಅಸಿಸ್ಟೆಂಟ್ ಮ್ಯಾಸ್ಟರಾಗಿಯೂ ಇರತಕ್ಕದ್ದು.

***

ಮೈಸೂರಲ್ಲಿ ಆಗುವ ಕನ್ನಡ ಲೋವರ್ ಸೆಕೆಂಡರಿ ಪರಿಕ್ಷೆಗಾಗಿ ಪರಸ್ಥಳದಿಂದ ಬಂದಿದ್ದ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಇಳಿಯುವದಕ್ಕೆ ಅನುಕೂಲವಾದ ಸ್ಥಳವೂ, ಆ

ಹಾರಕ್ಕೆ ತಕ್ಕ ಭೋಜನವೂ ಸಿಕ್ಕದೆ ಇದ್ದುದರಿಂದ ಪರಿಕ್ಷೆಯಕಾಲದಲ್ಲಿ ಬಹಳತೊಂದರೆಯನ್ನು ಪಟ್ಟರು. ಪರಸ್ಥಳದಿಂದ ಬಾಲಕರನ್ನು ಕಳುಹಿಸತಕ್ಕ ಉಪಾಧ್ಯಾಯರೇ ಆಗಲಿ, ಬಾಲಕರ ಪೋಷಕರಾಗಲಿ ವಿದ್ಯಾರ್ಥಿಗಳಿಗಾಗಿ ಸರ್ಕಾರದಿಂದ ಏರ್ಪಡಿಸಿರುವ ಸ್ಟೂಡೆಂಟ್ಸ್‌ಹೋಂ ಸೆಕ್ರೆಟರಿಗಳಿಗೆ ಬರೆದುಕೊಂಡರೆ ಅವರು ತಕ್ಕ ಅನುಕೂಲಗಳನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಿಕೊಡುವರೆಂದು ನಂಬಿರುತ್ತೇವೆ

***

ನವೀನ ಪುಸ್ತಕಗಳು

ಈ ತಿಂಗಳಲ್ಲಿ—ಮೆ॥ ಬಿ. ನರಸಿಂಹ್ಮಯ್ಯನವರಿಂದ ಕನ್ನಡದಲ್ಲಿ ರಚಿಸಲ್ಪಟ್ಟ ಶ್ರೀ ಸೂತಪುರಾಣವೂ; ಗೌರ್ನಮೆಂಟ್ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ಸಹಾಯೋಪಾಧ್ಯಾಯರಾದ ಮು ॥ ರಾ ॥ ಎಂ. ಹಿರಿಯಣ್ಣ ಬಿ.ಎ. ಎಲ್. ಟಿ. ಯವರಿಂದ ಬರೆಯಲ್ಪಟ್ಟ 'ವಿದ್ಯಾಭ್ಯಾಸಕ್ರಮ' ಎಂಬ ಪುಸ್ತಕವೂ, ಗ್ರಾಡ್ಯುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಮು॥ ರಾ॥ ಎಚ್. ಅಪ್ಪಣ್ಣ ಶೆಟ್ಟರವರಿಂದ ರಚಿಸಲ್ಪಟ್ಟ ಭಾವಚಿತ್ರದೊಡನೆ ಕೂಡಿದ ಹೈದರ್ ನಾಮವೆಂಬ ಪುಸ್ತಕವೂ ನಮ್ಮಲ್ಲಿಗೆ ಬಂದಿರುವವು. ಮುಂದೆ ಈ ಪುಸ್ತಕಗಳ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ತಿಳಿಸುವೆವು.

ಉಪವನ

ಲತೆಗಳು = ಬಳ್ಳಿಗಳು, ಶೀತಳ = ತಂಪು, ಆಲಾಪ = ಕೂಗು, ಉಲ್ಲಾಸ = ಮನೋಹರ.

ಉಪವನವನ್ನು ಹೊಕ್ಕು ನೋಡಿರುವಿರೋ? ಮರಗಳು ಫಲಭಾರದಿಂದ ನಮ್ರವಾಗಿ ಇರುತ್ತವೆ. ಲತೆಗಳೆಲ್ಲವೂ ಹೂತು ಶೃಂಗಾರವಾಗಿರುತ್ತವೆ. ಕಾಲುವೆಗಳಲ್ಲಿ ನೀರು ಹರಿಯುತ್ತಾ ಸ್ಥಳವನ್ನೆಲ್ಲಾ ಶೀತಳ ಮಾಡುತ್ತದೆ. ಘಾಳಿಯುಕೂಡ ಮೆಲ್ಲಗೆ ತಂಪಾಗಿ ಪುಷ್ಪಸುರಭಿಯುತವಾಗಿ ಸುಳಿಯುವದು ಆವ್ಹರಿಂದ ಇದು ಬಲು ಹಿತಕರವಾಗಿರುವದು.

ಎತ್ತನೋಡಿದರೂ ಕಣ್ಣಿಗೆ ಉಲ್ಲಾಸಕರವಾದ ಎಳೆದಳಿರೂ ಏನುಕೇಳಿದರೂ ವಿವಿಧಪಕ್ಷಿಗಳ ಮೃದುಮಧುರಾಲಾಪವೂ ಎಲ್ಲೆಲ್ಲಿ ವಿಹರಿಸಿದರೂ ಸುತ್ತಮುತ್ತ ಕಾಣುವ ಹಚ್ಚನೆ ಮೆತ್ತನೇ ಹುಲ್ಲು ಇವು ಎಲ್ಲವೂ ಮನಸನ್ನು ವಿಕಾಶಪಡಿಸುವವು.

ತೋಟದ ಅಚ್ಚುಕಟ್ಟು ಪಾತಿಗಳಲ್ಲಿರುವ ಶುಚಿತನವೂ ಬಹುಶ್ಲಾಘನೀಯವಾದವುಗಳಾಗಿ ವಿಶ್ರಾಂತಿಗೆ ಬಹು ಪ್ರಶಸ್ತವಾದ ಸ್ಥಳವಾಗಿರುವದು. ಅಲ್ಲಲ್ಲಿ ವಿನೋದಕ್ಕೆ ಕಟ್ಟಿರುವ ಜಗಲಿಗಳೋ ಪುಷ್ಪವಾಟಕಗಳೋ ಲತಾಮಂದಿರಗಳೋ ಬಹು ವಿಚಿತ್ರವಾಗಿ ಇರುವವು. ಒಬ್ಬ ಮನುಷ್ಯನಿಂದಾದ ಈ ತೋಟವೇ ಹೀಗಿರಬೇಕಾ

ದರೆ ದೇವರು ಮಾಡಿರುವ ಈ ಜಗತ್ತೆಂಬ ತೋಟದ ಲಕ್ಷಣವನ್ನು ಹೇಳಲಿಕ್ಕೆ ಆಧೀತೆ?

ತೋಟಕ್ಕೆ ಶೃಂಗಾರ ಒಂದರಿಂದಲೇ ಇಷ್ಟು ಭೂಷಣಬಂದಿಲ್ಲ. ಶೃಂಗಾರಕ್ಕೆ ತಕ್ಕ ಶಾಂತಿಯು ಗಾಂಭೀರ್ಯವು ಇರುವದರಿಂದ ಇದಕ್ಕೆ ವಾಸ್ತವಸ್ತ್ರ ಬಂದಿದೆ. ನೀವು ಕೂಡಾ ಶೃಂಗಾರಶಾಲಿಗಳಾದಮಾತ್ರಕ್ಕೇ ಎಂದಿಗೂ ಭೂಷಣವತಿಯರಾಗಲಾರಿರಿ. ನಿಮ್ಮಲ್ಲಿಯೂ ಗಾಂಭೀರ್ಯವೂ ಶಾಂತಿಯೂ ಇದ್ದರ ನೋಟಕ್ಕ ಉಪವನದಂತೆ ರಮ್ಯರಾಗಿಯೂ ವಿಶ್ರಾಂತಿಗಾಗಿ ನಿಮ್ಮ ಬಳಿಗೆ ಬರುವ ನಿಮ್ಮ ಒಡೆಯರಿಗೆ ಸುಖದಾಯಿಗಳು ಆಗುವಿರಿ. ಇದು ಸಿದ್ಧ.

ಪ್ರಶ್ನೆ-(೧) ಉಪವನವ್ರಹಿತವಾಗಿರುವದೇಕೆ. (೨) ಅಲ್ಲಿ ಯಾವಯಾವ ವಿಷಯಗಳಿಂದ ಮನೋವಿಕಾಸವಾಗುವದು. (೩) ಉಪವನವನ್ನು ಯಾಕೆ ಹೊಗಳಬೇಕು. (೪) ಭೂಷಣಕ್ಕೆ ಯಾವ ಎರಡು ಗುಣಗಳು ಅವಶ್ಯಕ.

ಶರೀಶುದ್ಧತ್ವ.

ವಿಮಳಂ = ನಿರ್ಮಲವು, ಕಾಂಕ್ಷೆ = ಅಪೇಕ್ಷೆ, ಆರ್ಜಿಸು = ಸಂಪಾದಿಸು, ಫಳಿಸಿಗೆ = ಕೂಡಿಹಾಕಿದ್ದವರಿಗೆ, ಚಳಕದಿ = ಜಾಗ್ರತೆಯುಂದ, ಮಗಿಲು = ಹೆಚ್ಚು

ಕಂ॥ ಗಮನಮಿಡನ್ಯಧನಂಗೊಳೆ।
ಕುಮತದಿಕೈಸೇರದಿರ್ಪತೆರದೋಳ್ ಮತ್ತುಂ॥
ಭ್ರಮೆಗೊಳ್ಳದೆಂದಿಗೆಂದುಂ।
ವಿಮಳಂತಾನಿರ್ಕ್ಕೆ ದೃಷ್ಟಿ ಎಚ್ಚರಿಕೆಯೊಳಂ॥

ಕಳುವದಿರುಚಿಕ್ಕದಾದೊಡಂ।
ನೆಳಸುತೆಮುಟ್ಟದಿರುಕಾಂಕ್ಷೆ ಎನಿತಿರ್ದೊಡಮದ॥
ಫಳಿಸಿದಗೇಸಿದರ್ಪರುಮಂ।
ಚೆಳಕದಿಕೈತಡದುಕಣ್ಣ ಬೈಚಿಡುನೀಂದಲ್॥

ಆರ್ಜಿಸಬಾರದುದಂನೀ।
ನಾರ್ಜಿಸದಿರ್ಪಲೆದವೂಗುಣವನೀವೊದಲಿಂ॥
ದಾರ್ಜಿಸುಧನಮಿತರರಿನಂ।
ದಾರ್ಜಿಪಕೈಕಂಗಳಿಗೆಬುದ್ಧಿಯನೊರೆನೀಂ॥

ಕೆ. ಶೇಷಿಯರ್ ಕಾಲೇಜ್ ಕನ್ನಡ ಪಂಡಿತರು.

ಕಲಂ ೪೭೦೦
ವಿದ್ಯಾದಾಯಿನಿ?೧೨
611
VI

ಒನೇ ಭಾಗ.

೧೮೯೪.

ಮೈಸೂರು.

ಗಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್.

ವಿಷಯಗಳನ್ನು ಬರೆದವರು.

೧ ಎಡಿಟರ್.

೨ ಮು॥ ರಾ॥ ಎಂ. ವೆಂಕಟಕೃಷ್ಣಯ್ಯ-ಹೆಡ್‌ಮಾಸ್ಟರ್.

೩ ,, ಕೆ. ಶಾಮಯ್ಯಂಗಾರ್. ಅಸಿಸ್ಟೆಂಟ್ ಕಸ್ಟೋಡಿಯರ್

೪ ,, ಎಂ. ಹಿರಿಯಣ್ಣ. ಬಿ. ಎ. ಎಲ್. ಟಿ

೫ ,, ಕೆ. ಲಕ್ಷ್ಮೀನಾರಣಪ್ಪ. ಬಿ. ಎ.

೬ ,, ಅಣ್ಣಾಜಿರಾವ್ ಸವದಿ.

೭ ,, ಕುಂಡಲಗಿರಾಚಾರ್ಯರು

೮ ,, ಬಿ. ವೆಂಕಟರಾಮಯ್ಯ-ಹೆ॥ಪಾ॥

೯ ,, ಹನುಮಂತರಾವ್-ಸ್ಕೂಲ್ ಪಾ॥

೧೦ ,, ಎಚ್. ಚಿದಂಬರಯ್ಯ-ಸ್ಕೂಲ್ ಪಾ॥

೧೧ ,, ಸಿ. ಡಿ. ಯಲ್ಲಪ್ಪ ಅ॥ ಉಪಾಧ್ಯಾಯಿನಿ

೧೨ ,, ಎಸ್. ಶ್ರೀನಿವಾಸಮೂರ್ತಿ-ವಿದ್ಯಾರ್ಥಿ

೧೩ ,, ವಿ. ನರಸಿಂಹಮೂರ್ತಿ-ಸ್ಕೂಲ್ ಪಾ॥ ಇವರೇ ಮುಂತಾದವರು.

— ವಿ ಷ ಯ ಸೂ ಚ ನೆ —

೧ ಎಡಿಟರವರ ನೋಟ್ಸು

೨ ಪ್ರಸಿದ್ಧಪುರುಷರು :—

ಪೆಸ್ಟಲಾಟ್ಸಿ—ಗ್ಲಾಡ್‌ಸ್ಟನ್— ಆಲ್‌ಫ್ರೆಡ್— ಮಹಾರಾಣಿ ಸುವರ್ಣಮಯಿ—ಪಂಡಿತ ಜಗದೀಶ ಚಂದ್ರಭೋಸ್—ಪಂಡಿತ ರಮಾಬಾಯಿ—ಡಾಕ್ಟರ್ ಆನಂದಬಾಯಿ ಜೋಷಿ—ವಿದ್ಯಾರಣ್ಯರು.

611

GOVERNMENT
MYSORE
ORIENTAL LIBRARY

ವಿದ್ಯಾದಾಯಿನಿ

ಭಾಗ ೬.] ಜನವರಿ ೧೯೯೪. [ಸಂಚಿಕೆ ೧.

ಎಡಿಟರವರ ನೋಟ್ಸ್.

ಕಳೆದ ಡಿಶಂಬರ್ ೧೩ರಲ್ಲಿ ಮೈಸೂರು ಗೌರ್ನಮೆಂಟ್ ನಾರ್ಮಲ್‌ಸ್ಕೂಲಿನಲ್ಲಿ ಒಂದು ದೊಡ್ಡಸಭೆಯು ಸೇರಿತ್ತು. ಸಭಾಮಂಟಪವು ಬಹಳ ಚೆನ್ನಾಗಿ ಅಲಂಕೃತವಾಗಿತ್ತು. ಮಹಾರಾಜರ ಕಾಲೀಜ್ ಹಿಸ್ಟರಿ ಪ್ರೊಫೆಸರಾದ ಮಿ|| ಟಿ. ಡೆಹಾಮ್ಯಂ ಎಂ. ಎ. ಯವರು ಅಗ್ರಾಸನವನ್ನು ಅಲಂಕರಿಸಿದ್ದರು. ಮಿ|| ಹೆಚ್. ಜಿ. ಭಾಭಾ ಸಾ|| ರವರು, ಡೆಪ್ಯುಟಿಇನ್‌ಸ್ಪೆಕ್ಟರುಗಳಾದ ಮ||ರಾ||ಶ್ರೀನಿವಾಸರಾಯರು, ದೇಶಿಕಾಚಾರ್ಯರು, ರಂಗಾಚಾರ್ಯರು, ಅಸಿಸ್ಟೆಂಟ್‌ಕಮಿಷನರ್ ಮಿ|| ಎಂ. ಶಾಮರಾವ್ ಎಂ. ಎ. ಯವರು, ಕಾಲಿಜ್ ಅಸಿಸ್ಟೆಂಟ್‌ಮಾಸ್ಟರ್ ಮ||ರಾ|| ಮಲ್ಲಾರಿರಾಯರು, ಇವರೇ ಮೊದಲಾದ ಇತರ ಅಸಿಸ್ಟೆಂಟ್‌ಮಾಸ್ಟರುಗಳು, ಅಡ್ವೋಕೇಟರು ಸಭೆಯನ್ನು ಅಲಂಕರಿಸಿದ್ದರು.

***

ಈ ಸಭೆಯಲ್ಲಿ ನಾರ್ಮಲ್‌ಸ್ಕೂಲ್ ಹೆಡ್‌ಮಾಸ್ಟರಾದ ಮ|| ರಾ|| ಕೆ. ನಾರಣ್ಯೆಯ್ಯಂಗಾರ್ ಬಿ. ಎ ಯವರು ೧೯೯೩-೯೪ನೆಯ ವರ್ಷದ ರಿಪೋರ್ಟನ್ನು ಓದಿದರು. ಈ ರಿಪೋರ್ಟಿನಲ್ಲಿ ಪಂಡಿತಪರೀಕ್ಷೆಗೆ ಓದಿ ಪರೀಕ್ಷೆಯನ್ನು ಕೊಡತಕ್ಕವರು ಮದ್ರಾಸ್ ಯೂನಿವರ್ಸಿಟಿ ಎಂ. ಎಂ ಪರೀಕ್ಷೆಗೆ ಇಟ್ಟಿರುವ ಪಾಠಗಳಿಗೇನೂ ಕಡಿಮೆಯಾಗಿಲ್ಲವೆಂತಲೂ, ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ ಓದತಕ್ಕವರು ಮೆಟ್ರಿಕ್ಯುಲೇಷನ್‌ಪರೀಕ್ಷೆಗೆ ಸಮನಾಗಿರುವರು ಎಲ್ಲವೆ—ಇಂಗ್ಲಿಷ್ ಮೆಟ್ರಿಕ್ಯುಲೇಷನ್ ತರಗತಿಯಲ್ಲಿ ನೇಳುವ ಪಾಠಗಳಿಗಿಂತ ಹೆಬ್ಬಾಗಿ ಆರೋಗ್ಯಶಾಸ್ತ್ರ, ವ್ಯವಸಾಯಶಾಸ್ತ್ರ, ಭೂಗರ್ಭಶೋಧನಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಶಾಲಾಕ್ರಮ ಕಿಂಡರ್‌ಗಾರ್ಟನ್, ವಸ್ತು

ವನಸ್ಪತಿಶಾಸ್ತ್ರ

ತಂಗಿನಗಿಡ, ಬಾಳೆ, ಬತ್ತದಪೈರು

ಜಾತಕ್ರಮ —

ಬಂಗಾರ್ಪ್ಪನವರಿಗೆ ಮೋಣದಬತ್ತಿ, ಸೂಜಿ, ಕನ್ನಡಿ, ಗುಲಾಬಿಹೂವ್ವು, ಲೆಕ್ಕ, ಗುಣಾಕಾರ ಮಾಡುವುದಕ್ಕೆ ಬಾಂಬೇರೆ ವಿದಗಳು.

೫ ವಿದ್ಯಾವಿಷಯಗಳು—(ಪರೀಧನಕ್ರಮ)

ಪಾಠಶಾಲೆಯ ಶಿಕ್ಷಕ ಪದ್ಧತಿ, ಬಹುಮಾನ ಮತ್ತು ದಂಡನೆ, ಸಾಮಾನ್ಯನಿಯಮಗಳು ಶಿಕ್ಷಣವಿಷಯ. ಉತ್ಕ್ರಮಣ.

೬ ಕಿಂಡರ್‌ಗಾರ್ಟನ್: —ಮಕ್ಕಳ ಸ್ವಭಾವ ಮಕ್ಕಳ ವಿಹಾರ ವನ. ಕಥೆಗಳು :—

ಕರೋನಾಯಿ ಮತ್ತು ಬಿಳೇನಾಯಿ. ಕೋಳಿಯೂ ರತ್ನವೂ. ಕೋಳಿ ಮತ್ತು ಕೂಕ್ಕರೆ. ತೋಲವೂ ಆಮೆಯೂ. ನಾಯಿಯೂ ಮಾಂಸದ ತುಂಡು.

೭ ಶಾಸ್ತ್ರ —ಆರೋಗ್ಯಶಾಸ್ತ್ರ, ಸಂಪತ್ತಿಶಾಸ್ತ್ರ, ಸಾಧಕ, ನೀರಿನ ಉಪಯೋಗ, ಮಾನವನಾಯು ಪ್ಲೇಗ್ (ಮಹಾವಾರಿ ರೋಗ)

ಮೈಸೂರು ದೇಶೀಯ ಪರೀಕ್ಷಕರು.

ಶಾಂತ. ಮತ್ತು ಭೂಗೋಳ :—

೧೦ ಪ್ಲಾಸಕದನ, ಏಷಿಯಾಖಂಡ, ತೀರ್ಥಹಳ್ಳಿ, ಚೀನರು.

೧೧ ವಿದ್ಯಾಭ್ಯಾಸದ ಇಲಾಖೆಯ ಸರ್ಕ್ಯೂಲರ್.

೧೨ ಗ್ರಾಂಡವಿಸರ್ಚ್.

೧೩ ಪಾಠಶಾಲೆ ರಿಪೋರ್ಟು.

೧೪ ಉಪಾಧ್ಯಾಯ ಸಂಘ.

೧೫ ಹಾಡು. ಇತರ ವಿಷಯಗಳು :—

— ಚಿತ್ರವಿಚಿತ್ರಗಳು —

(೧) ಬಾತು. (೨) ತೋಲವೂ, ಆಮೆಯೂ. (೩) ಕೋಳಿಯೂ, ರತ್ನವೂ (೪) ನಾಯಿಯೂ, ಮಾಂಸದತುಂಡು. (೫) ತೋಳವೂ, ಮತ್ತು ಕೂಕ್ಕರೆಯೂ. (೬) ಮೋಣದಬತ್ತಿ. (೭) ತೆಂಗಿನಗಿಡ.

ಗ್ರಂಥಗಳನ್ನು ತಿಳಿಯುಲು ಸಾಧ್ಯವಿಲ್ಲವೆಂದು ಯೋಚಿಸಿ ಸಂಸ್ಕೃತಭಾಷೆಗೆ ಪಾಶ್ರಮು ಖ್ಯತೆಯನ್ನು ಕೊಟ್ಟು ಕನ್ನಡ ವಿದ್ಯಾರ್ಥಿಗಳನ್ನು ಇಲ್ಲಿ ತಯಾರ್ಮಾಡುವರು.

***

ವ್ಯವಸಾಯಶಾಸ್ತ್ರ, ಭೂಗರ್ಭಶಾಸ್ತ್ರ, ಪಾಠಕ್ರಮ, ಶಾಲಾಕ್ರಮ ಇವುಗಳನ್ನು ಪುಸ್ತಕಪಾಠಮಾತ್ರ ಮಾಡದೆ ವ್ಯವಸಾಯಮಾಡುವುದರಲ್ಲಿಯೂ, ಭೂಮಿಯನ್ನು ಶೋಧಿಸುವುದರಲ್ಲಿಯೂ, ಪಾಠವನ್ನು ಹೇಳುವುದರಲ್ಲಿಯೂ ಅಭ್ಯಾಸಮಾಡಿಸುವರು. ವಿದ್ಯಾರ್ಥಿಗಳು ಪಾಠಶಾಲೆಗೆ ಸೇರಿದ ಭೂಮಿಯಲ್ಲಿ ಸಾಧ್ಯವಾದ ಪೈರುಗಳನ್ನು ಬೆಳೆಯುವರು. ನಾರ್ಮಲ್ ಸ್ಕೂಲಿಗೆ ಸೇರಿರುವ ಗೌರ್ನಮೆಂಟ್ ಕನ್ನಡಸ್ಕೂಲಿನಲ್ಲಿ ಪಾಠಹೇಳುವ ಕ್ರಮವನ್ನು ಅಭ್ಯಾಸಮಾಡುವರು.

***

ವಿದ್ಯಾರ್ಥಿಗಳಿಂದ ಶಿಕ್ಷಿತರಾದ ಕೆಲವು ಬಾಲಕರಿಂದ ಹಾಡನ್ನು ಸಭೆಯಲ್ಲಿ ಹೇಳಿಸಿದರು. ಹುಡುಗರು ಬಹಳ ಚೆನ್ನಾಗಿ ಹೇಳಿ ನೆರೆದಿದ್ದ ಸಭಿಕರ ಮನಸ್ಸನ್ನೆಲ್ಲಾ ಬಹಳ ಸಂತೋಷಪಡಿಸಿದರು. ನಾರ್ಮಲ್ ಸ್ಕೂಲು ವಿದ್ಯಾರ್ಥಿಗಳು ಸಭಾಮಂಟಪಕ್ಕೆ ಸಭಿಕರೆಲ್ಲರೂ ಪ್ರವೇಶಿಸುವುದಕ್ಕೆ ಮುಂದಾಗಿ, ಕವಾಯಿತುಮಾಡಿದರು. ಕವಾಯತನಲ್ಲಿ ಚೆನ್ನಾಗಿ ಶಿಕ್ಷಿತರಾಗಿದ್ದಂತೆ ತೋರಿಬಂತು.

***

ಸಭೆಯನ್ನು ಅಲಂಕರಿಸಿದ್ದ ಮಿ॥ ಟಿ. ಡೆನ್‌ಹ್ಯಾಂಸಾಹೇಬರವರು ಬಹಳ ಉಪಯುಕ್ತವಾದ ಒಂದು ಉಪನ್ಯಾಸವನ್ನು ಹೇಳಿದರು. ಇವರು ಹೇಳಿದ ಉಪನ್ಯಾಸವನ್ನು ಉಪಾಧ್ಯಾಯರೆಲ್ಲರೂ ಗ್ರಹಿಸತಕ್ಕದ್ದಾಗಿದೆ.

***

ಉಪಾಧ್ಯಾಯರಾದಮೇಲೆ ಓದತಕ್ಕದ್ದು ಏನೂ ಇಲ್ಲವೆಂದು ಭಾವಿಸಿ ಉಪಾಧ್ಯಾಯರು ಓದುವುದನ್ನು ಬಿಡುವರು. ಇದರಮೇಲೆ ಮೂರುನಾಲ್ಕುವರ್ಷ ಭೋಧಿಸಿ ಅನುಭವವಾದ ಉಪಾಧ್ಯಾಯರುಗಳು, ಇನ್ನು ನಾವು ಓದಿ ಪಾಠಹೇಳತಕ್ಕದ್ದೇನಿದೆ ಎಂದು ಉದಾಸೀನಭಾವದಿಂದ ಓದುವುದನ್ನು ಬಿಟ್ಟು, ಹಿಂದೆ ಓದಿದ್ದನ್ನು ಮರೆತು, ಹೇಳಿದ್ದನ್ನೇ ಹೇಳಬೇಕೆಂದು ಜುಗುಪ್ಸಿತರಾಗಿ, ಉಪಯೋಗವಿಲ್ಲದಂತೆ ಆಗುವರು. ಇದರಿಂದ ಬಹಳ ಕೇಡು ಸಂಭವಿಸುವುದು.

ಪಾಠ, ಪಾಠಕ್ರಮ, ಚಿತ್ರಬರೆಯುವುದು, ಕವಾಯಿತುಮಾಡುವ್ರದು, ಕಪ್ಪುಹಲಿಸೆಯ ಮೇಲೆ ಬರೆಯತಕ್ಕ ಅಭ್ಯಾಸ, ಮಾದರಿಯಪಾಠ, ಪಾಠಹೇಳುವ್ರದು ಇವೇಮೊದಲಾಗಿ ಉಪಾಧ್ಯಾಯರಾಗತಕ್ಕವರಿಗೆ ಅತ್ಯಂತ ಉಪಯುಕ್ತವಾದ ಪಾಠಗಳನ್ನು ಬೋಧಿಸುವರು.

***

ಹೆಡ್ಮಾಸ್ಟರವರು ಹೇಳುವಂತೆಯೇ ಮೆಟ್ರಿಕ್ಯುಲೇಷನ್ ತರಗತಿಯಲ್ಲಿ ಹೇಳತಕ್ಕ ಪಾಠಗಳಿಗಿಂತ ಹೆಚ್ಚಾಗಿ ಅಪ್ಪರ್‌ಸೆಕೆಂಡರಿ ವಿದ್ಯಾರ್ಥಿಗಳು ಯೋಗ್ಯತೆಯುಳ್ಳವರೆಂದು ಧಾರಾಳವಾಗಿ ಹೇಳಬಹುದು.

***

ಈ ಪಾಠಶಾಲೆಯಿಂದ ಪಂಡಿತಪರೀಕ್ಷೆ, ಅಪ್ಪರ್ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಗಳಲ್ಲಿ ಇದುವರೆಗೆ ಒಟ್ಟು ೧೬೯ ಮಂದಿ ವಿದ್ಯಾರ್ಥಿಗಳು ತೇರ್ಗಡೆಯನ್ನು ಹೊಂದಿರುವರು. ಇವರಲ್ಲಿ ಎಂಟುಮಂದಿ ಪಂಡಿತರು, ಹನ್ನೆರಡುಮಂದಿ ವಿದ್ಯಾರ್ಥಿಗಳು ಉತ್ತಮತರಗತಿಯಲ್ಲಿ ತೇರ್ಗಡೆಯನ್ನು ಹೊಂದಿರುವರು. ಈ ಪಾಠಶಾಲೆಯಲ್ಲಿ ೨೦೩ ಮಂದಿಯುವರೆಗೆ ಪಾಠಹೇಳುವುದರಲ್ಲಿ ಚೆನ್ನಾಗಿ ಶಿಕ್ಷಿತರಾಗಿರುವರು.

***

ಹೀಗೆ ಶಿಕ್ಷಿತರಾದ ಉಪಾಧ್ಯಾಯರುಗಳಿಗೆ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಮೆ॥ ಹೆಚ್. ಜೆ ಭಾಭಾಸಾಹೇಬರವರು ಚೆನ್ನಾಗಿ ಪ್ರೋತ್ಸಾಹಪಡಿಸುತಲಿರುವರು. ಪಂಡಿತಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಲ್ಲಿ ಕೆಲವರನ್ನು ಕಾಲೀಜುಗಳಲ್ಲಿ ಪಂಡಿತರಾಗಿ ನಿಯಮಿಸಿರುವರು. ಸಂಸ್ಥಾನದಲ್ಲಿ ಒಟ್ಟಿರತಕ್ಕ ೨೫೦ ಮಂದಿ ಉಪಾಧ್ಯಾಯರುಗಳಲ್ಲಿ ಬಹಳ ಸ್ವಲ್ಪಮಂದಿಮಾತ್ರ ಶಿಕ್ಷಿತರಾಗಿರುವರು. ಹೀಗೆ ಶಿಕ್ಷಿತರಾದ ಉಪಾಧ್ಯಾಯರುಗಳು ಚೆನ್ನಾಗಿ ಶ್ರದ್ಧೆಯಿಂದ ಕೆಲಸಮಾಡುತ್ತಾರೆಂದು ಡೆಪ್ಯುಟಿಇನ್‌ಸ್ಪೆಕ್ಟರುಗಳು ಅಭಿಪ್ರಾಯಪಟ್ಟಿರುವರು. ಮೈಸೂರು, ಶಿವಮೊಗ್ಗ ಕೋಲಾರದಲ್ಲಿ ನಾರ್ಮಲ್‌ಸ್ಕೂಲುಗಳನ್ನು ಏರ್ಪಡಿಸಿರುವುದರಿಂದ ಸ್ವಲ್ಪಕಾಲದಲ್ಲಿಯೆ ಅನೇಕಮಂದಿ ಉಪಾಧ್ಯಾಯರುಗಳು ಶಿಕ್ಷಿತರಾಗಿ—ಶಿಕ್ಷಿತರಾದ ಉಪಾಧ್ಯಾಯರುಗಳ ಸಂಖ್ಯೆಯು ಸಂಸ್ಥಾನದಲ್ಲಿ ಹೆಚ್ಚಾಗುವದೆಂದು ನಂಬುತ್ತೇವೆ.

ಮಾತೃಭಾಷೆಯಾದ ಸಂಸ್ಕೃತಸಹಾಯವಿಲ್ಲದೆ, ಕನ್ನಡಭಾಷೆಯ ಅನೇಕ

ಈ ಪಾಠಶಾಲೆಗೆ ಸೇರಿದ ಬಾಲಕರು ಓದುವ ಪಾಠಶಾಲೆ ಇರತಕ್ಕ ಕಟ್ಟಡವು ಶುದ್ಧವಾಗಿ ಅನರ್ಹವಾದುದು. ಚರಿತ್ರೆಯಲ್ಲಿ ಪ್ರಸಿದ್ಧವಾಗಿರುವ 'ಕಲ್ಕತ್ತಾ ಬ್ಲಾಕ್ ಹೋಲಿಗೆ ಸಮಾನವಾಗಿರುವುದು.' ಸರ್ಕಾರದವರು ಶೀಘ್ರವಾಗಿ ಒಂದು ಶ್ಲಾಘ್ಯವಾದ ಕಟ್ಟಡವನ್ನು ಕಟ್ಟಿಸುವರೆಂದು ನಂಬಬಹುದು.

***

ಈ ಪಾಠಶಾಲೆಯ ಅಧ್ಯಕ್ಷರಾದ ಮಾ|| ರಾ|| ಕೆ. ನಾರಣ್ಯೆಯಂಗಾರವರೂ, ಸಾಹಾಯೋಪಾಧ್ಯಾಯರುಗಳೂ ಬಹಳ ಶ್ರಮಪಟ್ಟು ಕೆಲಸ ಮಾಡುತಿರುವರೆಂದು ಶ್ಲಾಘಿಸಿ ಈ ಪಾಠಶಾಲೆಯು ಉತ್ತರೋತ್ತರ ವೃದ್ಧಿಯನ್ನು ಹೊಂದುತಾ ಬರಲೆಂದು ಹರಸಿ ಉಪನ್ಯಾಸವನ್ನು ಉಪಸಂಹಾರ ಮಾಡಿದರು.

***

ಗೌರ್ನಮೆಂಟಿನವರು ಈವರ್ಷ ಸ್ಕೂಲುಮಾಡತಕ್ಕ ಮನೆಗಳ ಬಾಡಿಗೆಗಾಗಿಯೂ ಇತರ ಚಿಲ್ರೆ ಖರ್ಚಿಗಾಗಿಯೂ ೧೫೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುವರು. ಇದರಿಂದ ಕೇವಲ ಅನರ್ಹವಾದ ಮನೆಗಳಲ್ಲಿ ಈಗ ಕೆಲವ್ಹಕಡೆ ಸ್ಕೂಲುಮಾಡುತಿರುವುದನ್ನು ತಪ್ಪಿಸಿ ಹೆಚ್ಚಾಗಿ ಬಾಡಿಗೆಕೊಟ್ಟು ಗಾಳಿ ಜೆಳಕು ಇರುವ ಮನೆಗಳಲ್ಲಿ ಸ್ಕೂಲು ಮಾಡುವರೆಂದು ನಂಬುತ್ತೇವೆ.

ಕಿಂಡರ್‌ಗಾರ್ಟ್ನ್.

ಕಡ್ಡಿಯನ್ನು ಜೋಡಿಸುವಿಕೆ. (Stick Placing)

ಮಕ್ಕಳಿಗೆ ದೊಡ್ಡವರಂತೆ ಆಚರಿಸಬೇಕೆಂಬ ಕುತೂಹಲವಿರುವದು ಸ್ವಭಾವವೆಂದು ತಿಳಿದಿದೆಯಷ್ಟೆ. ಹಾಗೆ ಸ್ವಭಾವನಾಗಿ ಆಚರಿಸುವ ಅಭಿಪ್ರಾಯಗಳನ್ನು ತಿದ್ದಿ ಪಾಟುಮಾಡಿ ಕ್ರಮಪಡಿಸೋಣದರಿಂದ ಉಪಯೋಗವುಂಟು. ಹೀಗೆ ಕ್ರಮಪಡಿಸತಕ್ಕಭಾಗವು ಬಾಲಬೋಧಕರದಾಗಿರುತ್ತೆ. ಇಂಥಾ ಬೋಧಕರೆ ಕಿಂಡರ್‌ಗಾರ್ಟ್ನ್ ಪಾಠಬೋಧಕರೆನ್ನಿಸಿಕೊಳ್ಳುವರು.

ಮನೆ ಕಟ್ಟುವುದರಲ್ಲಿ ಮಕ್ಕಳಿಗೆ ಅಭಿಲಾಷೆಯು. ಇದರಿಂದ (ಈ ಲೇಖದ

ಉಪಾಧ್ಯಾಯರುಗಳು ಓದುತಾ ಓದುತ್ತಾ ಜ್ಞಾನಾಭಿವೃದ್ಧಿಮಾಡಿಕೊಂಡಹಾಗೆಲ್ಲಾ ವಿದ್ಯಾರ್ಥಿಗಳಿಗೂ, ಇತರರಿಗೂ ಅವರಲ್ಲಿ ಗೌರವವೂ, ವಿಶ್ವಾಸವೂ ಹೆಚ್ಚುವುದು. ಉಪಾಧ್ಯಾಯರುಗಳು ಹೆಚ್ಚುಹೆಚ್ಚಾಗಿ ಓದಿದಹಾಗೆಲ್ಲಾ ವಿಶೇಷವಾಗಿ ಅನುಭವ ಉಂಟಾದ ಹಾಗೆಲ್ಲಾ ಬೋಧಿಸುವುದರಲ್ಲಿ ಸುಲಭೋಪಾಯಗಳನ್ನು ಕಂಡುಹಿಡಿದು, ಬಾಲಕರಿಗೆ ವಿದ್ಯಾನ್ಯಾಸಂಗದಲ್ಲಿ ಅಭಿರುಚಿಯನ್ನೂ ಪ್ರೋತ್ಸಾಹವನ್ನೂ ಪಡಿಸಬಹುದು.

***

ಉಪಾಧ್ಯಾಯರುಗಳು ಓದುವ ಪದ್ಧತಿಯನ್ನು ಬಿಡದಂತೆ ಭೂಗೋಳ, ವ್ಯವಸಾಯ, ಭೂಗರ್ಭಶಾಸ್ತ್ರದಲ್ಲಿ ಆದರವಿಟ್ಟು ವಿಷಯಶೋಧನೆಯನ್ನು ಮಾಡುತಿರಬೇಕು. ತಾವು ಸಂಗ್ರಹಿಸಿದ ವಿಷಯಗಳನ್ನು ವರ್ಷಕೊಂದಾವರ್ತಿ ಸಭೆಗೂಡಿ ಅಲ್ಲಿ ಚರ್ಚಿಸಬೇಕು. ಉಪಾಧ್ಯಾಯರುಗಳೆಲ್ಲರೂ ಸೇರಿ 'ವಿದ್ಯಾಭಿವೃದ್ಧಿಸಂಘ' ವೆಂಬ ಒಂದು ಸಮಾಜವನ್ನು ಮಾಡಿ, ಮೈಸೂರು ರಾಜಧಾನಿಯಲ್ಲಿ ಸೇರಿ, ಉಪನ್ಯಾಸಗಳ ಮೂಲಕವೂ, ಸಂಭಾಷಣೆಯ ಮೂಲಕವೂ ತಮ್ಮತಮ್ಮ ಅಭಿಪ್ರಾಯಗಳನ್ನು ಅನುಭವವನ್ನು ಪರಸ್ಪರ ತಿಳಿಸುವುದರಿಂದ ಜ್ಞಾನವೃದ್ಧಿಯಾಗುವುದಲ್ಲದೆ ದೇಶೋನ್ನತಿಗೂ ಕಾರಣವಾಗುವುದು. ಕ್ರಮಕ್ರಮೇಣ ಮೈಸೂರಿನಲ್ಲಿ ಒಂದು ಯೂನಿವರ್ಸಿಟಿ ಸರ್ವವಿದ್ಯಾಶಾಲೆನ್ನು ಸ್ಥಾಪಿಸಬಹುದು.

***

ಬಾಲಕರನ್ನು ವಿದ್ಯಾವಿನಯಸಂಪನ್ನರನ್ನಾಗಿ ಮಾಡುವುದಕ್ಕೋಸ್ಕರ ತಮ್ಮ ಆಯುಸ್ಸನ್ನೇ ಕಳೆಯುವ ಉಪಾಧ್ಯಾಯರುಗಳು ಲೋಕವ್ಯಾಪಾರವನ್ನು ಜೆನ್ನಾಗಿ ಅರಿತವರಾಗಬೇಕು. ಲೌಕಿಕಜ್ಞಾನವನ್ನು ಸಂಪಾದಿಸಲು ಇತರರೊಡನೆ ಬೆರೆಯಬೇಕು. ಹೀಗೆ ಶ್ರಮಪಟ್ಟು ಬಾಲಕರನ್ನು ಶಿಕ್ಷಿಸುವ ಉಪಾಧ್ಯಾಯರುಗಳಿಗೆ ಸರ್ಕಾರದವರು ಬಹು ಆದರದಿಂದ ನೋಡಿಕೊಳ್ಳತಕ್ಕದ್ದು ಅವರ ಧರ್ಮವು.

ಇಲ್ಲಿನ ವಿದ್ಯಾರ್ಥಿಗಳು ವ್ಯವಸಾಯಶಾಸ್ತ್ರ, ಭೂಗರ್ಭಶೋಧನೆಯಶಾಸ್ತ್ರ ಸಮ್ಮತಿಗಳನ್ನು ಅನುಭವ ಮೂಲಕವಾಗಿ ತಿಳಿಯಲುದ್ದಿಶ್ಯ ಕೆಲಕೆಲಸ್ಥಳಕ್ಕೆ ಹೋಗಿ ಬರುವ ಪದ್ಧತಿಯು ಸರ್ವೋತ್ಕೃಷ್ಟವಾದುದು. ಇದನ್ನು ಆಚರಣೆಯಲ್ಲಿ ತರತಕ್ಕದ್ದು ಅತ್ಯವಶ್ಯಕವು.

ಇದಲ್ಲದೆ ಕಿಂಡರ್‌ಗರ್ಟ್ನನ್ನು ಬೋಧಿಸುವುದರಲ್ಲಿ ಕಡ್ಡಿಯನ್ನು ಜೋಡಿಸುವ ಪ್ರಕರಣನನ್ನು ಬೋಧಿಸಲು ವಿಶೇಷ ಖರ್ಚು ಇಲ್ಲ. ತೊಂದರೆಯು ಇಲ್ಲ. ಇದಕ್ಕಾಗಿ ಮುಖ್ಯವಾಗಿ ಬೇಕಾದುದು ತೆಳ್ಳಗೆ ಉದ್ದಕ್ಕೆ, ಡೊಂಕನಾಗಿಲ್ಲದ, ಸಣ್ಣದು, ದೊಡ್ಡದು ಕಡ್ಡಿಯ ತುಂಡುಗಳು. ಬಿದರಿನ ದೆಬ್ಬೆಯಾಗಲಿ, ಮರದ ಚೂರಾಗಲಿ, ಇವು ಯಾವದೂ ಅನುಕೂಲವಿಲ್ಲದಿದ್ದರೆ ದಪ್ಪ ಹಂಚಿಕಡ್ಡಿಯತುಂಡನ್ನಾಗಲಿ ಉಪಯೋಗಿಸಬಹುದು.

ಹೀಗೆ ಕಡ್ಡಿಯಚೂರುಗಳನ್ನು ಉಪಾಧ್ಯಾಯನು ಸಂಪಾದಿಸಿಕೊಂಡು, ಅವುಗಳನ್ನು ಯಾವಯಾವ ತರಹದಲ್ಲಿ ಜೋಡಿಸಬಹುದೋ, ಯಾವಯಾವ ಮಾರ್ಗವು ಸುಲಭವಾಗಿಯೂ ಚೆನ್ನಾಗಿಯೂ ಕಾಣುತದೆಯೋ ಅದನ್ನು ನೋಡಿಕೊಂಡು ಅನಂತರ ಮಕ್ಕಳಿಗೆ ಬೋಧಿಸಲು ಆರಂಭಿಸಬೇಕು. ಯಾವ ತರಗತಿಗೆ ಆಗಲಿ ಎಷ್ಟುಸುಲಭವಾದ ಪಾಠವನ್ನು ಬೋಧಿಸಬೇಕೇ ಆಗಲಿ, ಬಾಲಕರಿಗೆ ಬೋಧಿಸಲುಪಕ್ರಮಿಸುವುದಕ್ಕೆ ಮುಂದಾಗಿಯೇ ಅದನ್ನು ಉಪಾಧ್ಯಾಯನು ಚೆನ್ನಾಗಿ ನೋಡಿಕೊಂಡು ಯಾವ ಮಾರ್ಗದಲ್ಲಿ ಬೋಧಿಸಿದರೆ ಬಾಲಕರಿಗೆ ಸುಲಭನಾಗಿರುವುದು, ಇಷ್ಟವಾಗಿರುವುದು ಚೆನ್ನಾಗಿ ಮುಂದಟ್ಟಾಗುವುದು ಎಂಬತಕ್ಕ ಭಾಗವನ್ನು ಕೆಲವುಕಾಲ ಚೆನ್ನಾಗಿಯೋಚಿಸಿ, ಬೋಧಿಸಲು ಆರಂಭಿಸಬೇಕು. ಬೋಧಿಸಲು ಮೊದಲು ಮಾಡುವುದಕ್ಕೆ ಪೂರ್ವದಲ್ಲಿಯೇ ಈರೀತಿಯಾಗಿ, ಈ ಮಾರ್ಗವನ್ನು ಅನುಸರಿಸಿ ಈ ಪಾಠವನ್ನು ಇವತ್ತು ಹೇಳಿಕೊಡುತ್ತೇನೆಂದು ನಿಷ್ಕರ್ಷೆಪೂಡಿಕೊಳ್ಳಬೇಕು. ಹೇಳಿದ್ದನ್ನೇ ಪದೇಪದೇಹೇಳೋಣದರಿಂದ, ಆ ಪಾಠವು ಉಪಾಧ್ಯಾಯನಿಗೆ ಎಷ್ಟು ಕೃದ್ಘಟವಾಗಿದ್ದರೂ, ಪುನಃಪುನಃ ಓದಿ ಯೋಚಿಸಿಕೊಂಡು, ಬೋಧಿಸಲು ಉಪಕ್ರಮಿಸುವುದು ಅತ್ಯವಶ್ಯವು ಇದು ಬೋಧಕನ ಕರ್ತವ್ಯವು. ಆದುದರಿಂದ ಉಪಾಧ್ಯಾಯನು ತಾನು ಮುಂದಾಗಿ ಕೆಲವು ಆಕಾರಗಳು ತೋರಿಬರುವಂತೆ ಆ ಕಡ್ಡಿಯ ಚೂರುಗಳನ್ನು ಜೋಡಿಸಿ ತರುವಾಯ ಕ್ರಮವಾಗಿ ಅವುಗಳನ್ನು ಬೇರೆಬೇರೆಯಾಗಿ ತೆಗೆದು ಕಂತೆಕಂತೆಗಳಾಗಿ ಕಟ್ಟಿಕೊಂಡು ಕ್ಲಾಸಿಗೆ ತೆಗೆದುಕೊಂಡು ಹೋಗತಕ್ಕೆಕು. ಒಂದು ತರಗತಿಯಲ್ಲಿ ಹತ್ತು ಮಂದಿ ಬಾಲಕರಿದ್ದರೆ ಐದುಮಂದಿಗೆ ಮಾತ್ರ ಕಡ್ಡಿಯ ಚೂರುಗಳನ್ನು ಕೊಟ್ಟು, ಕಟ್ಟೆಯಂದು ಹೇಳಿ ಬಾಕಿ ಮಕ್ಕಳನ್ನು ಸುಮ್ಮನೆ ಇರಿ ಎಂದು ಗದರಿಕೊಳ್ಳುವುದು ಶುದ್ಧ ಅಸಂಗತವು. ಮುಂದಾಗಿಯೆ, ಆ ತರಗತಿಯಲ್ಲಿ ಎಷ್ಟುಮಂದಿ ಬಾಲಕರಿರು

ಲ್ಲಿರುವ ಮಕ್ಕಳಿಗೆ ಈದು ಸುಲಭವಾಗಿ ಶಿಕ್ಕತಕ್ಕ ಪದಾರ್ಥ) ಮಕ್ಕಳು ಬೀದಿಯಲ್ಲಿ ಬಿದ್ದಿರುವ ಹಂಚಿ ಬಕ್ಕರೆ ಕಲ್ಲು ಮಣ್ಣು ಹಂಚಿಕಡ್ಡಿ ತಂದುಹಾಕಿಕೊಂಡು, ಏನೋ ಒಂದುವಿಧವಾಗಿ ಆಟದ ಮನೆಯನ್ನು ಕಟ್ಟುವೆವೆಂದು, ಬಕ್ಕರೆರಾಸಿಯನ್ನ ಹಂಚೆಂತಲೂ ಮಣ್ಣಿನರಾಶಿಯೆ ಗೋಡೆಯುಂತಲೂ, ಹಂಚಿಕಡ್ಡಿಯನ್ನು ಅಲ್ಲಲ್ಲಿ ನೆಡೋಣವೇ ಕಂಭವೆಂತಲೂ, ಮಾಡಿ ಮನೆಯನ್ನು ಪೂರೈಸುವರು. ಹೀಗೆ ಮನೆಯನ್ನು ಕಟ್ಟುವ ಮಕ್ಕಳಿಗೆ ತಕ್ಕಹಾಗೆ ಉಪಯೋಗಕ್ಕೆ ಬರುವ ಕಡ್ಡಿಯ ಚೂರುಗಳನ್ನು ಕೊಟ್ಟು ಅವುಗಳನ್ನು ಈ ಕೆಳಗೆ ಉದಹರಿಸುವ ಪದ್ಧತಿಯಮೇರೆಗೆ ಆ ಚೂರುಗಳನ್ನು ಜೋಡಿಸುವ ರೀತಿಯನ್ನು ಮಕ್ಕಳಿಗೆ ತಿಳಿಸೋಣವಲ್ಲಿ ಬಹಳ ಪ್ರಯೋಜನ ಉಂಟು. ಕಡ್ಡಿಯ ಚೂರುಗಳೆಲ್ಲವೂ ಉದ್ದವಾಗಿರೋಣವರಿಂದ, ಗುಂಡಾಗಿರುವ ಪದಾರ್ಥಗಳಂತೆ ಅವುಗಳನ್ನು ಜೋಡಿಸಲು ಸಾಧ್ಯವೆಲ್ಲವೆಂಬುದಂತು ಸ್ಪಷ್ಟವೆಸರಿ. ಆಕಾರವನ್ನು ಮಾಡಿತೋರಿಸಲು ಈ ಕಡ್ಡಿಯ ಜೋಡನೆಯಿಂದ ಸಾಧ್ಯವು. ಕಡ್ಡಿಯ ಜೋಡನೆಯನ್ನು ಕಲಿಸುವುದರಿಂದ ಮಕ್ಕಳ ದೃಷ್ಟಿಸಾಟವವು ಚೆನ್ನಾಗಿ ಆಗುವುದು. ಆಕಾರವನ್ನು ಗ್ರಹಿಸತಕ್ಕ ಶಕ್ತಿಯುಂಟಾಗುವುದು ಚಿತ್ರವನ್ನು ಬರೆಯಲು ಕಲಿತುಕೊಳ್ಳುವದಕ್ಕೆ ಇದರಿಂದ ಸುಲಭವಾಗುವುದು. ನಾಜೂಕಾದ ಕೆಲಸವನ್ನು ಮಾಡುವುದಕ್ಕೆ ಬೆರಳುಗಳು ತಯಾರಾಗುವುವು. ಒಂದು ಕಡ್ಡಿಯಮೇಲೆ ಇನ್ನೊಂದು ಕಡ್ಡಿಯನ್ನು ಅಡ್ಡಲಾಗಿಡಲು ಬಹಳಸೂಕ್ಷ್ಮವಾಗಿ, ಸರಿನೋಡಿಕೊಂಡು ಇಡಬೇಕು. ಸ್ವಲ್ಪ ಹೆಚ್ಚು ಕಡಮೆಯಾದರೆ ಕೆಳಗೆ ಬಿದ್ದುಹೋಗುವುದು. ಸ್ವಲ್ಪ ಕೈ ಸೋಂಕಿದರೆ ಕಡ್ಡಿಯು ಓಲಾಡುವುದು. ಇದನ್ನು ಸರಿಯಾಗಿ ಇಡಲು ಬೇಕಾದಷ್ಟು ಸೂಕ್ಷ್ಮರೀತಿಯನ್ನು ಮಕ್ಕಳು ಬಹಳ ಶೀಘ್ರವಾಗಿ ಕಲಿತುಕೊಳ್ಳುವುವು ಯಾವದಾದರು ಒಂದು ತರಹವನ್ನ ಕಟ್ಟಿಕೊಟ್ಟು ತೋರಿಸಿಕೊಟ್ಟರೆ ಮಕ್ಕಳು ಅದರಂತೆಯೆ ಕಡ್ಡಿಯನ್ನು ಜೋಡಿಸಿ ಕಟ್ಟುವುದನ್ನು ಕಲಿತುಕ್ಕೊಳ್ಳುವುವಲ್ಲದೆ ಆದರಮೇಲೆ ಹೊಸಹೊಸದಾದ ಆಕಾರ ಬರುವಂತೆ ಜೋಡಿಸುವುದನ್ನು ಅಭ್ಯಾಸಿಸುವುವು. ಇದಲ್ಲದೆ ಉಪಾಧ್ಯಾಯನಿಗೂ ಇದನ್ನು ಹೇಳಿಕೊಡುವುವರಲ್ಲಿ ಸ್ವಲ್ಪ ವಿರಾಮ ಉಂಟು. ಒಂದಾವರ್ತಿ ಒಂದು ಆಕಾರದಂತೆ ಕಟ್ಟುವುದನ್ನುತೋರಿಸಿ, ಅದರಂತೆ ಜೋಡಿಸುವಂತೆ ಬಾಲಕರಿಗೆ ಹೇಳಿ, ಅವರು ಆ ರೀತಿಯಲ್ಲಿ ಕಟ್ಟುತಿರುವಾಗ ಉಪಾಧ್ಯಾಯನು ಸುಲಭವಾಗಿ ಬೇರೆ ಕೆಲಸವನ್ನು ಮಾಡಲಿಕ್ಕೆ ಗಮನ ಕೊಡಬಹುದು.

ಇರಲಿ. ಲೋಕೋಪಕಾರವನ್ನು ಮಾಡುವ ಶಕ್ತಿಯುಳ್ಳ ಸತ್ಯಸಂಧತೆಯುಳ್ಳ ಜನರನ್ನಾದರು ಜಗದೀಶ್ವರನು ಆಗಾಗ್ಗೆ ಸೃಷ್ಟಿಸುವನೆಂಬುವದಕ್ಕೆ ಯಾವಸಂಶಯವೂ ಇಲ್ಲ. ಲೋಕೋಪಕಾರಿಗಳು ಇಂಥಾ ಕುಲದಲ್ಲೇ ಅಥವಾ ಇಂಥಾ ವರ್ಣಾಶ್ರಮಗಳಲ್ಲೇ ಹುಟ್ಟುವರೆಂದು ಹೇಳುವದಕ್ಕೆ ಆಗುವದಿಲ್ಲ. ಮಹಾತ್ಮರ ಜನನಗಳಾದ ದುಷ್ಟವಾದ ಕುಲಗಳು ಪವಿತ್ರವಾಗುವವು. ದುರಾತ್ಮರಾದ ಜನರ ಜನನದಿಂದ ಪವಿತ್ರವಾದ ವರ್ಣಾಶ್ರಮಗಳು ಅಪವಿತ್ರವಾಗಿ ಪರಿಣಮಿಸುವವು. ಈ ವಿಷಯವು ಪುರಾಣಪ್ರಸಿದ್ಧವಾಗಿಯೂ, ಅನುಭವಸಿದ್ಧವಾಗಿಯೂ ಇದೆ. ಮಹಾರಾಣಿ ಸುವರ್ಣಮಯಿಯವರು ವಾಣಿಜ್ಯದಿಂದ ಜೀವಿಸುತ್ತಿದ್ದ ಒಂದು ಶೂದ್ರವಂಶದಲ್ಲಿ ೧೯೦೬ ರಲ್ಲಿ ಜನಿಸಿದರು. ಇವರ ಜನ್ಮಸ್ಥಾನವು ಬರಡ್ವಾನ್ ಡಿಸ್ಟ್ರಿಕ್ಟಿಗೆ ಸೇರಿದ ಭಾತಕಲಾಲ್ಲಗಿತ್ತು. ೧೯೩೪ ನೇ ಇಸವಿಯಲ್ಲಿ ಇವರು ರಾಜಕೃಷ್ಣನಾಥ ರಾಯಬಹದೂರಿಗೆ ವಿವಾಹವಾಡಲ್ಪಟ್ಟರು. ಈ ಕೃಷ್ಣರಾಯಬಹದೂರವರು ಬಹಳ ಕೋಪಪರವಶರಾಗಿ ಒಬ್ಬ ಭೃತ್ಯನನ್ನು ಹೊಡೆದರು ಅವನು ಅದರಿಂದ ಸತ್ತನು. ಇದರಿಂದ ಉಂಟಾದ ಅನುತಾಪದಿಂದ ಕೃಷ್ಣನಾಥರವರು ಆತ್ಮಹತ್ಯವನ್ನು ಮಾಡಿಕೊಂಡರು. ಈ ದುಃಖದಿಂದ ಪರವಶರಾಗಿ ಕೆಲವು ಕಾಲವನ್ನು ಕಳೆದು ಸುವರ್ಣಮಾಯಿರವರು, ಧರ್ಮಮಾರ್ಗವಲಂಬನೆಯಿಂದ ಜನ್ಮವನ್ನು ಸಾರ್ಥಿಕ್ಯಮಾಡಿಕೊಳ್ಳಬೇಕೆಂದು ನಿಶ್ಚಯಿಸಿ ಈ ರೀತಿ ಮಾಡುವದಕ್ಕೆ ಪ್ರಥಮತಃ ದ್ರವ್ಯವು ಸಾಧಕವೆಂದು ಗೊತ್ತುಮಾಡಿ ತಮ್ಮ ಜವಿರ್ದಾರಿಯನ್ನು ರೂಢಿಸುವದಕ್ಕೆ ಉಪಕ್ರಮಿಸಿದರು. ಇದಕ್ಕೆ ಅನುಸಾರವಾಗಿಯೇ ವಿದ್ಯಾವಂತರಾಗಿಯು, ನಿಸರ್ಗವಾದ ರಾಜಭಕ್ತಿಯುಳ್ಳವರಾಗಿಯೂ, ಅನುಭವಶಾಲಿಗಳಾಗಿಯೂ, ಸ್ವಾಮಿಕಾರ್ಯದಕ್ಷರಾಗಿಯೂ ಇದ್ದ ರಾಜಾಲಸೋಜಿರಾಯರವರು ದಿವಾನಪದವಿಗೆ ನೇಮಿಸಲ್ಪಟ್ಟರು. ಈ ಜವಿರ್ದಾರಿಯು ಇವರ ವಶವಾದಾಗ ಅನೇಕ ಸಾಲಗಾರರಿಗೆ ಈಡಾಗಿತ್ತು. ಕೆಲವು ವರ್ಷಗಳಲ್ಲೇ ಇವರ ವೇಲುವಿಚಾರಣೆಯಿಂದ ಉತ್ಪತ್ತಿಯು ಬಹಳ ಅಧಿಕವಾಯಿತು. ಇದರಿಂದಲೇ ಸಾಲವು ತೀರಿಸಲ್ಪಟ್ಟಿತು. ಸುವರ್ಣಮಯಿರವರು ಸಾಲ ತೀರಿದಕೂಡಲೆ, ಖರ್ಚು ಕಳೆದು ಬರುವ ಹುಟ್ಟುವಳಿಯಿಂದ ಜವಿರ್ದಾರಿಯನ್ನು ವೃದ್ಧಿಪಡಿಸುತ್ತಾ ದಾನಧರ್ಮಪರೋಪಕಾರಗಳನ್ನು ಮಾಡುತ್ತಾ ಬಂದು ಕಳೆದ ೪೦ ವರುಷಗಳಿಂದ ಇವರು ಮಾಡಿದಷ್ಟು ದಾನಧರ್ಮಗಳನ್ನು ಇಂಡಿಯಾದೇಶದಲ್ಲಿ ಯಾರೂ ಮಾಡಲಿಲ್ಲ. ಅವರು ಮಾಡಿರುವ ಧರ್ಮ

ವರೋ ಅಷ್ಟುಮಂದಿಗೆ ಬೇರೆಬೇರೆ ಕಡ್ಡಿಯ ಕಂತೆಗಳನ್ನು ಕಟ್ಟಿಕೊಟ್ಟು ಬೋಧಿಸಲು ಆರಂಭಿಸಬೇಕು. ಒಂದೊಂದು ವಿಧವಾದ ಆಕಾರವನ್ನು ತೋರಿಸುವ್ರದಕ್ಕೆ ಕಡ್ಡಿಯಚೂರುಗಳು ಬೇರೆಬೇರೆಯಾಗಿರಬೇಕು. ಆಯಾಯಾರೀತಿಯಲ್ಲಿಯೆ ಆಯಾಆಯಾ ಆಕಾರವನ್ನು ಕಟ್ಟಲು ಅನುಕೂಲವಾಗುವಂತೆ ಕಂತೆಗಳನ್ನಾಗಿ ಕಟ್ಟಬೇಕು-ಒಂದೊಂದು ಕಂತೆಯನ್ನು ಒಂದೊಂದು ಮಗುವಿನಕೈಗೆ ಕೊಟ್ಟಿದ್ದು ಪಾಠವು ಪೂರೈಸಿದನಂತರ ಮಕ್ಕಳಿಗೆ ಅವರುಅವರು ಉಪಯೋಗಿಸುತಲಿರುವ ಕಡ್ಡಿಯ ಚೂರುಗಳನ್ನೆಲ್ಲಾ ಬೇರೆ ಬೇರೆಕಂತೆಯಾಗಿ ಕಟ್ಟಿಯಂದು ಹೇಳಿ ಅನೇಲೆ ಪ್ರತಿಯೊಬ್ಬ ಬಾಲಕನಿಂದಲೂ ಕಂತೆಗಳನ್ನು ತರಿಸಿ ಒಟ್ಟುಸೇರಿಸಿ ದೊಡ್ಡ ಕಂತೆಯನ್ನಾಗಿ ಮಾಡಿ ಕಟ್ಟಿರಸಬೇಕು.

ಕಡ್ಡಿಯಿಂದ ಮನೆ, ಕೊಳ, ಮುಂತಾದ ಆಕಾರಗಳನ್ನು ಕಟ್ಟಿಸುವುದಕ್ಕೆ ಮುಂಚೆ ಮಕ್ಕಳಿಗೆ 'ಉದ್ದವಾಗಿಡು' 'ಅಡ್ಡವಾಗಿಡು' ಎಂದರೆ। — ಈ ರೀತಿಯಾಗಿ ಇಡಬೇಕೆಂಬ ಜ್ಞಾನವು ಚೆನ್ನಾಗಿರಬೇಕು. ಉದ್ದವಾಗಿ, ಅಡ್ಡವಾಗಿ ಎಂಬ ಜ್ಞಾನವು ಸ್ಪಷ್ಟವಾಗಿ ತಿಳಿಯಬೇಕಾದರೆ, ನಿಲ್ಲು, ಮಲಗು, ಎಂದರೆ ಯಾವರೀತಿಯಲ್ಲಿ ಅಜರಿಸುವರೋ ಆ ರೀತಿಯಲ್ಲಿ ಎಂಬುದನ್ನು ಬೋಧಿಸಬೇಕು. ಕಡ್ಡಿಯನ್ನು । ಈ ರೀತಿಯಾಗಿ ಹಿಡಿದು ನಾವು ನಿಂತಿರುವಂತೆ ಇದು ಉದ್ದವಾಗಿರುತ್ತೆ. — ಇದು ಕೆಳಗೆ ಬಿದ್ದಂತೆ, ಮಲಗಿಕೊಂಡಿರುವಂತೆ ಅಡ್ಡವಾಗಿರುವುದು, ಎಂದು ಹೇಳಿ, ಉದ್ದ, ಅಡ್ಡ, ಎಂಬ ಪದಗಳ ಅರ್ಥವನ್ನು ಸ್ಪಷ್ಟಮಾಡಬೇಕು. ಈ ಪದಗಳ ಅರ್ಥವು ಮಕ್ಕಳಿಗೆ ಸ್ಪಷ್ಟವಾದಹೊರತು ಕಡ್ಡಿಯನ್ನು ಉಪಯೋಗಿಸಲು ಸಾಧ್ಯವಿಲ್ಲ ಉಪಾಧ್ಯಾಯನು ಮುಂದಣ ಪಾಠಗಳನ್ನು ಹೇಳಲು ಬಹಳ ಶ್ರಮ. ಆದಕಾರಣ ಕಡ್ಡಿಯಜೋಡಣೆಯಲ್ಲಿ ವಿಶೇಷಭಾಗವನ್ನು ತಿಳಿಸಲಿಕ್ಕೆ ಮುಂಚೆ ಮೊದಲನೆಯ ಪಾಠದಾದ ।। ಉದ್ದ' 'ಅಡ್ಡ' ಎಂಬ ಪದಗಳ ಅರ್ಥಜ್ಞಾನವನ್ನು ಚೆನ್ನಾಗಿ ತಿಳಿಸಬೇಕು.

ಮಹಾರಾಣಿ ಸುವರ್ಣಮಾಯಿ.

ಲೋಕಕ್ಕೆ ಪ್ರಬಲವಾದ ಸಂಕಟಗಳು ಬಂದಾಗ ಲೋಕಾನುಗ್ರಹಾರ್ಥವಾಗಿ ದೇವರು ಅವತರಿಸುವನೆಂದು ಹಿರಿಯರು ಹೇಳುವರು. ಅದು ಹ್ಯಾಗಾದರೂ

ಇರತಕ್ಕವೇ ಅಪೂರ್ವ. ಇವರಿಗೆ ಬ್ರಾಹ್ಮಣರಲ್ಲಿ ನಿಸರ್ಗವಾದ ವಿಶ್ವಾಸವಿತ್ತು. ವೇಷಧಾರಿಗಳಲ್ಲದೆ ಮನೋವಾಕ್ಕಾಯಗಳಲ್ಲಿಯೂ ಧರ್ಮವಾಗಿ ನಡೆಯುತ್ತಿದ್ದ ಅನೇಕ ಬ್ರಾಹ್ಮಣರಿಗೆ ತಾಪತ್ರಯವಿಲ್ಲದಂತೆ ಜೀವನಗಳನ್ನು ಕಲ್ಪಿಸಿ ಇಧಾರೆ. ಅಂಥಾ ಜನರ ಅನಾಥರಾದ ಬಾಲಕರಿಗೆ ಉಪನಯನವನ್ನೂ ಮಾಡಿಸಿ ಇಧಾರೆ. ಇವರು ಕಳೆದ ಆಗಮ್ಮ ಂಠರಲ್ಲಿ ಸ್ವರ್ಗಸ್ಥರಾದರು. ಇದರಿಂದ ಉತ್ತರದೇಶದಲ್ಲಿ ಉಂಟಾದ ದುಃಖಾತಿಶಯವು ಅನಿರ್ವಚನೀಯವಾಗಿದೆ. ಇವರ ಧರ್ಮದಿಂದ ಕ್ಷಾಮಕಾಲದಲ್ಲಿ ಬದುಕಿದವರು ಮಾತಾಪಿತೃಗಳನ್ನು ಕಳೆದುಕೊಂಡಂತೆಯೂ ದುರ್ನಿವಾರ್ಯವಾದ ವಿಪತ್ತು ಬಂದಂತೆಯೂ ಭಾವಿಸುತ್ತಲಿಧಾರೆ. ಕಳೆದ ಭೂಕಂಪದಲ್ಲಿ ಮನೇಮಠಗಳನ್ನು ಹೋಗಲಾಡಿಸಿಕೊಂಡು ಹೀನಸ್ಥಿತಿಗೆ ಬಂದು ಇವರ ಸಹಾಯದಿಂದ ಪುನಃ ಮನೇಮಠಗಳನ್ನು ಕಟ್ಟಿಕೊಂಡು ಅನೇಕರು ಜೀವಿಸುತಲಿಧಾರೆ. ಇವರೆಲ್ಲರೂ ಅತ್ಯಂತ ಪುತ್ರವಾತ್ಸಲ್ಯವುಳ್ಳ ಮಾತೃವಿನ ವಿಯೋಗವನ್ನು ಹೊಂದಿದಂತೆ ದುಃಖಿಸುತ್ತಲಿಧಾರೆ. ಸುವರ್ಣವಾಯಿಯವರ ಜೀವನವೇ ಜೀವನ. ಇಂಥಾ ತ್ಯಾಗವೇ ಆರ್ಜನೆಗೆ ಸಾಫಲ್ಯ. ಜನರು ಹುಟ್ಟುವಾಗ ಏನೂ ತೆಗೆದುಕೊಂಡು ಬರುವೆದಿಲ್ಲ. ಕಾಲಾಧೀನರಾಗುವಾಗ ತಾವು ಆರ್ಜಿಸಿದ್ದರಲ್ಲಿ ಏನೂ ತೆಗೆದುಕೊಂಡುಹೋಗುವದಿಲ್ಲ. ಬದುಕಿರತಕ್ಕ ವೇಳೆಯಲ್ಲಿ ಧರ್ಮದಿಂದ ಆರ್ಜಿಸಿದ ದ್ರವ್ಯವನ್ನು ಆತ್ಮಹಿತಾರ್ಥವಾಗಿಯೂ ವಿನಿಯೋಗಿಸಿ ಇಹಪರಗಳನ್ನು ಸಂಪಾದಿಸುವದರಲ್ಲಿ ಮಹಾರಾಣಿ ಸುವರ್ಣವಾಯಿಯವರಂತೆ ಕೃತಕೃತ್ಯರಾದವರು ಬಹಳ ವಿರಳರಾಗಿ ಇರುತ್ತಾರೆ. ಇವರು ಸ್ವರ್ಗಸ್ಥರಾದದ್ದರಿಂದ ಇವರ ಜವಿರ್ಾದಾರಿಯೂ ಇವರ ಅತ್ತೆಯವರಾದ ರಾಣೀಹರಿಸುಂದರಿಯವರಿಗೆ ಸೇರಿತು. ಆವರ ನಂತರ ಬಾಬೂ ಮುನೀಂದ್ರನಾಥನಂದೀಯವರಿಗೆ ಸೇರುವದು. ಲೋಕದಲ್ಲಿ ಇವರ ಜವಿರ್ಾದಾರಿಗಿಂತಲೂ ದೊಡ್ಡದಾಗಿಯೂ ವಿಶೇಷ ಆಯತಿಯುಳ್ಳದ್ದಾಗಿಯೂ ಇರತಕ್ಕ ಜವಿರ್ಾದಾರಿಗಳನ್ನು ರಾಜ್ಯಗಳನ್ನು ಅನೇಕರು ಹೊಂದಿ ಇದಾರೆ. ಆದರೆ ಇವರಂತೆ ಯಶಸ್ಸನ್ನು ಸಂಪಾದಿಸುವದಕ್ಕೆ ಅವರಿಂದಲೆಲ್ಲಾ ಆಗುವದೇ? ಯಶಸ್ಸುಬರಬೇಕಾದರೆ ಪುಣ್ಯವಿರಬೇಕು. ಇದಲ್ಲದೆ ಧರ್ಮಬುದ್ಧಿಯೂ ಇರಬೇಕು. ಮಹಾರಾಣಿ ಸುವರ್ಣವಾಯಿಯವರು ಶಾಕಿರತಕ್ಕ ಮೇಲುಪಜ್ಞೆಯನ್ನು ನೋಡಿ ಯಶಃಕಾಮಿಗಳಾಗಿ ಮುಂದೆ ಅನೇಕರು ಅದನ್ನು ಅನುಸರಿಸಿ ಇಹಪರ ಸಾಧನೆಗಳನ್ನು ಮಾಡಿಕೊಳ್ಳುವರೆಂದು ನಾವು ಕೋರುತ್ತೇವೆ.

ಗಳು ಅಸಂಖ್ಯಾತವಾಗಿರುತ್ತವೆ. ಅವರು ಪ್ರತಿಷ್ಠೆಗೋಸ್ಕರ ಧರ್ಮಮಾಡಿದವರಲ್ಲ. ಫಲಾಭಿಸಂಧಿಯಿಲ್ಲದೆ ಅನೇಕಲಕ್ಷ ರೂಪಾಯಿಗಳನ್ನು ಸತ್ಪಾತ್ರದಲ್ಲಿ ದಾನಮಾಡಿದಾರೆ. ಮೃತ್ಯುವು ಮುಂದಲೆಯನ್ನು ಹಿಡಿದು ಎಳೆಯುತ್ತಿದ್ದರೆ ಆ ಕಾಲದಲ್ಲಿ ಧರ್ಮವನ್ನಾಚರಿಸಬೇಕೆಂದು ತೋರುವದೆಂಬದಾಗಿಯೂ, ಅದಕ್ಕೆ ಪೂರ್ವ ಜನರು ಧರ್ಮಮಾರ್ಗದಲ್ಲಿ ಪ್ರವರ್ತಕರಾಗುವದು ಅಪೂರ್ವವೆಂಬದಾಗಿಯೂ ಜನರು ಹೇಳುವರು. ಮಹಾರಾಣಿ ಸುವರ್ಣಮಯಿಯವರು ಪೂರ್ವಮಯಸ್ಸಿನಿಂದಲೂ ಧರ್ಮಮಾರ್ಗೈಕಪರಾಯಣರಾಗಿಯೇ ಕಾಲಹರಣಮಾಡಿದರು. ಇವರು ಪ್ರಾಯಕವಾಗಿ ಪ್ರತಿನಿತ್ಯದಲ್ಲಿಯೂ ಸೂರ್ಯೋದಯವಾದಕೂಡಲೇ ಸ್ನಾನವನ್ನು ಮಾಡಿ ದೇವತಾರಾಧನೆಯನ್ನು ಮಾಡಿಕೊಂಡು ರೋಗದಿಂದಲೂ ಕಷ್ಟನಿಷ್ಠೂರಗಳೇ ಮೊದಲಾದ ತಾಪತ್ರಯಗಳಿಂದಲೂ ಸಂಕಟಪಡುತ್ತಿದ್ದ ಬಡಬಗ್ಗರ ಮನೆಗಳಿಗೆ ಹೋಗಿ ಅವರಿಗೆ ಔಷಧಾದಿಗಳನ್ನು ಕೊಡಿಸಿ ಅನ್ನಪಾನಗಳಿಗೆ ಏರ್ಪಾಡುಮಾಡಿ ಕೃತಕೃತ್ಯಳಾದೆನೆಂದು ಭಾವಿಸುತ್ತಿದ್ದರು. ಇವರ ಬಳಿಗೆ ಹೋದ ಅತಿಥಿಗಳು ಸಂತುಷ್ಟರಾಗದೇ ಹಿಂದಕ್ಕೆ ಹೋದದಿವಸವೇ ಇಲ್ಲ. ಅನೇಕ ವಿದ್ವಾಂಸರೂ, ವಿದ್ಯಾರ್ಥಿಗಳೂ ಇವರಿಂದ ಜೀವಿಸುತ್ತಿದ್ದರು. ಅನೇಕ ಉಪಾಧ್ಯಾಯರುಗಳು ಇವರ ಪ್ರೋತ್ಸಾಹದಿಂದ ಸುಖವಾಗಿ ಜೀವಿಸುತ್ತಿದ್ದರು. ಅನೇಕ ಅನಾಥರು ಇವರ ಸಹಾಯದಿಂದ ವಿದ್ಯಾಬುದ್ಧಿಗಳನ್ನು ಹೊಂದಿ ಸ್ವಶಕ್ತಿಯಿಂದ ಜೀವಿಸತಕ್ಕ ಶಕ್ತಿಯನ್ನು ಹೊಂದಿದರು. ಬಂಗಾಳಾಸಂಸ್ಥಾನದಲ್ಲಿ ಕಲ್ಕತ್ತೆಯೇ ಮೊದಲಾದ ಅನೇಕ ಸ್ಥಳಗಳಲ್ಲಿ ಇವರು ಅನೇಕ ಪುಸ್ತಕಭಂಡಾರಗಳನ್ನು ಏರ್ಪಡಿಸಿದರು. 'ಸಾಂತಾಲ್‌ಫರ್‌ಫುನಾಸ್' ಮೊದಲಾದ ಸ್ಥಳಗಳಲ್ಲಿ ಅನೇಕ ವಿದ್ಯಾಶಾಲೆಗಳನ್ನು ಕಟ್ಟಿಸಿದರು. ಕಲ್ಕತ್ತೆಯೇ ಮೊದಲಾದ ಅನೇಕ ಸ್ಥಳಗಳಲ್ಲಿ ಅನೇಕ ಕಾಲೇಜುಗಳು ಆಸ್ಪತ್ರೆಗಳು ಇವರ ಸಹಾಯದಿಂದ ಅತ್ಯಂತ ವೃದ್ಧಿಗೆ ಬಂದವು. ಇವುಗಳಲ್ಲಿ ಮುಖ್ಯವಾದವುಗಳು ಕಲ್ಕತ್ತೆಯಲ್ಲಿರತಕ್ಕ ಈಡನ್ ಹಾಸ್ಪಿಟಲ್ ಬರ್‌ಹ್ಯಾಂಪೂರಿನ ಆಸ್ಪತ್ರೆ ಇತ್ಯಾದಿಮೊದಲಾದವುಗಳಾಗಿರುತ್ತವೆ. ಉತ್ತರದೇಶದ ಕ್ಷಾಮದಲ್ಲಿ ಇವರು ಮಾಡಿದ ಉಪಕಾರವು ಎಂದಿಗೂ ಮರೆಯಲ್ಪಡತಕ್ಕದ್ದಲ್ಲ. ಅನ್ನೋದಕಗಳಿಗೆ ಇಲ್ಲದೆ ತಾಪತ್ರಯಪಡುತಿದ್ದ ಕೋಟ್ಯಾಂತರ ಜನರು ಇವರ ಔದಾರ್ಯದಿಂದ ಬದುಕಿದ್ದರು. ಈಗಲೂ ಉತ್ತರದೇಶದಲ್ಲೆಲ್ಲಾ ಪ್ರತಿಯೊಂದು ಮನೆಯಲ್ಲಿಯೂ ಪ್ರತಿನಿತ್ಯದಲ್ಲಿಯೂ ಇವರನ್ನು ಸ್ಮರಿಸದೇ

ಗುಬ್ಬಾ:—[ಪ್ರತ್ಯಕ್ಷವಾಗಿ ಮತ್ತೊಂದುಭಾಗದಲ್ಲಿ] ನಮ್ಮ ಗತಿಯೇನು? ಅಹಹ! ಎಲೈ ಕುಟುಂಬಿನಿ, ನಿನ್ನ ನಾಲಿಗೆಯು ನಮ್ಮನ್ನು ಮುಳುಗಿಸಿತು!

ಗ್ಯಾಂಡರ್ಲಿ:—ಓ, ಪ್ರಯುಕ್ತಾಂತನೆ, ನಮಗೆ ಶೂಲಪ್ರಾಪ್ತಿಯು ತಪ್ಪಿದ್ದಲ್ಲಂ. ಆದರೆ ಇವನು ದೊರೆಯೆಂದು ಯಾರಿಗೆತಾನೆ ಗೊತ್ತಾಗುತ್ತಿತ್ತು?

(ಸಶೇಷ;)

ಭೂವಿವರಣೆ.

ಏಷಿಯಾ ಖಂಡ.

ಏಷಿಯಾಖಂಡವು ಭೂಗೋಳದಲ್ಲಿರತಕ್ಕ ಭೂಖಂಡಗಳಲ್ಲೆಲ್ಲಾ ವಿಸ್ತೀರ್ಣದಲ್ಲಿ ಅತ್ಯಂತ ದೊಡ್ಡದಾಗಿಯೂ, ಔನ್ನತ್ಯದಲ್ಲಿ ಮೊದಲಾಗಿಯೂ ಇದೆ. ಇದಲ್ಲದೆ ಈ ಖಂಡವು ಉಳಿದ ಎಲ್ಲಾ ಖಂಡಕ್ಕೂ ಸೇರಿದಂತೆ ಇದೆ: ಯೂರೋಪ್ ಖಂಡವೂ, ಆಫ್ರಿಕಾಖಂಡವೂ ಇದಕ್ಕೆ ಸೇರಿದ ಭೂಭಾಗವಾಗಿಯೂ, ಉತ್ತರ ಅಮೆರಿಕಾಖಂಡವು ಇದರ ಈಶಾನ್ಯದಿಕ್ಕಿನ ಎಲ್ಲೆಯನ್ನುವ ಮಟ್ಟಿಗೆ ಸವಿಾಪವಾಗಿಯೂ ಇರುವವು.

ಈ ಖಂಡದಲ್ಲಿ ಪ್ರಪಂಚದ ಎಲ್ಲಾ ಭಾಗಕ್ಕಿಂತಲೂ ಅತ್ಯುನ್ನತವಾದ ಭಾಗವೂ, ಅತ್ಯಂತ ತಗ್ಗಾದ ಪ್ರದೇಶವೂ ಇರುವವು. ಅತ್ಯಂತ ಉಷ್ಣವಲಯದಲ್ಲಿಯೂ, ಅತಿಶೀತವಲಯದಲ್ಲಿಯೂ ಈ ಖಂಡಕ್ಕೆ ಸೇರಿದ ಭೂಭಾಗವು ಇರುವುದ. ಜನಶೂನ್ಯವಾದಿಂದ ನಿಬಿಡವಾದ ದೇಶಗಳೂ, ಭಯಂಕರವಾದ ಮೃಗಗಳಿಂದ ಕೂಡಿದ ಕಾಡುಪ್ರದೇಶಗಳೂ, ಸುವರ್ಣ, ರಜಿತ, ತಾಮ್ರ ಭರಿತವಾದ ಮಹಾಪರ್ವತಗಳೂ, ಯಾಂಗ್‌ಟಿಸಿಕಿಯಾಂಗ್, ಬ್ರಹ್ಮಪುತ್ರ, ಸಿಂಧೂ, ಗಂಗಾನದಿಗಳಿಂದ ಫಲವತ್ತಾದ ಭೂಪ್ರದೇಶಗಳೂ, ಬೇರೆಬೇರೆಮತವನ್ನು ಅವಲಂಬಿಸಿ, ನಾನಾತೆರನಾದ ಭಾಷೆಗಳನ್ನು ಆಡುವ ಜನವೂ ಈಖಂಡದಲ್ಲಿ ಶೋಭಿಸುವವು. ಇಷ್ಟೆಅಲ್ಲ. ಈ ಖಂಡವೇ ಆದಿಯಲ್ಲಿ ಜನಕ್ಕೆ ಜನ್ಮಭೂಮಿಯೆಂತಲೂ, ಮತಸ್ಥಾಪಕರಿಗೆ ಪೂರ್ವಸ್ಥಾನವೆಂತಲೂ,

ಕಿಂಡರ್‌ಗಾರ್ಟ್ನ ಕಥೆ.

ನಾಯಿಯ ಜ್ಞಾಪಕಶಕ್ತಿ.

ಬೊಂಬಾಯಿಪಟ್ಟಣದಲ್ಲಿ ಒಬ್ಬ ಸಾಹುಕಾರನ ಬಳಿ ಒಂದು ನಾಯಿ ಇತ್ತು. ಆ ನಾಯಿಗೆ ರೋವರ್ ಎಂದು ಕರೆಯುತ್ತಿದ್ದನು. ಈ ಸಾಹುಕಾರನು ಒಂದು ಕೆಲಸಕ್ಕಾಗಿ ಮದಾಸಿಗೆ ಬರಲು ಜೊತೆಯಲ್ಲಿ ರೋವರನ್ನು ಕರೆದುಕೊಂಡು ಬಂದನು. ಈ ನಾಯಿಯನ್ನು ರೈಲಿನಲ್ಲಿ ಬೇರೆ ಬಂಡಿಯಲ್ಲಿ ಇಟ್ಟಿದ್ದುದರಿಂದ ಮದಾಸು ಸ್ಟೇಷನ್ನಲ್ಲಿ ರೈಲು ಜವಾನನು, ಬಂಡಿಯ ಬಾಗಿಲನ್ನು ತೆಗೆದು ನಾಯಿಯ ಕುತ್ತಿಗೆಗೆ ಸರಪಳಿಯನ್ನು ಪಟ್ಟಿಯನ್ನು ಹಾಕಿ ಅದರ ಯಜಮಾನನ ಬಳಿಗೆ ತೆಗೆದುಕೊಂಡುಹೋಗಬೇಕೆಂದಿರುವಾಗ್ಯೆ ನಾಯಿಯು ತನ್ನ ಯಜಮಾನನನ್ನು ನೋಡಬೇಕೆಂಬ ಆತುರದಿಂದ ಪಟ್ಟಿಯಿಂದ ತಲೆಯನ್ನು ನುಣಿಚಿಸಿಕೊಂಡು, ಜವಾನನ ಕೈಗೆ ಸಿಕ್ಕದಂತೆ ತಪ್ಪಿಸಿಕೊಂಡು ಓಡಿತು. ರೈಲುಸ್ಟೇಷನ್ನಲ್ಲಿ ಬಹಳ ಗದ್ದಲವಾಗಿದ್ದುದರಿಂದ ಯಜಮಾನನು ಇದಕ್ಕೆ ಸಿಕ್ಕಲಿಲ್ಲ. ಅಷ್ಟರಲ್ಲಿಯೇ ಯಜಮಾನನು ನಾಯಿಯನ್ನು ಕೂಡಿಯಿದ್ದ ಬಂಡಿಯ ಬಳಿಗೆ ಬಂದು ವಿಚಾರಿಸಲು ಅಲ್ಲಿದ್ದ ಜವಾನನು ಇದ್ದದ್ದು ಇದ್ದಂತೆ ಸರಿಯಾಗಿ ಹೇಳಲು ಯಜಮಾನನು 'ಹೊರಗೆಲ್ಲೊ ನಿಂತಿರುವುದು. ನಾನು ಹೋದೊಡನೆಯೇ ಬರುವುದು' ಎಂದು ಹೇಳಿಕೊಂಡು ತನ್ನ ಸಾಮಾನನ್ನೆಲ್ಲಾ ಸರಿಯಾಗಿ ನೋಡಿಕೊಂಡು, ಕುದುರೆಬಂಡಿಯಲ್ಲಿ ಏಣಿಸಿ ಇಟ್ಟುಕೊಂಡು ತನಗೆ ಬೇಕಾದ ಒಬ್ಬ ಸ್ನೇಹಿತನಮನೆಯ ಹತ್ತಿರ ನಿಲ್ಲಿಸುವಂತೆ ಇಂಥಾ ಬೀದಿಗೆ ಹೊಡೆ ಎಂದು ಬಂಡಿಯವನಿಗೆ ಹೇಳಿ ಹೊರಟನು. ಬೇಸಿಗೆಕಾಲವು ಸವಿಾಪವಾಗುತ್ತಿದ್ದುದರಿಂದ ನಾಯಿಗಳಿಗೆ ಹುಚ್ಚುಹಿಡಿದು ಸಿಕ್ಕಿದಹಾಗೆ ಜನಗಳನ್ನು ಕಚ್ಚುದಂತೆ ಯಾರೂ ಗೊತ್ತಾಗಿ ಸಾಕದೆ ಬೀದಿಯಲ್ಲಿ ಅಲೆಯುವ ಸ್ಥೂಲನಾಯಿಗಳನ್ನೂ, ಕೊರಳಲ್ಲಿ ಪಟ್ಟಿಯಿಲ್ಲದ ನಾಯಿಗಳನ್ನೂ ಹೊಡೆದುಹಾಕುತ್ತೇವೆಂದು ದೊಡ್ಡ ದೊಡ್ಡ ಅಕ್ಷರದಲ್ಲಿ ಬರೆದುಇದ್ದುದನ್ನು ನೋಡಿ ಬಹಳ ಗಾಬರಿಯಿಂದ ಆ ಸಾಹುಕಾರನು, ಅಲ್ಲಿಗೆ ಸವಿಾಪವಾಗಿದ್ದ ತನ್ನ ಪರಿಚಯಸ್ಥರ ಒಬ್ಬರಮನೆಯಲ್ಲಿ ಇಳಿದು ಗಂಟನ್ನು ಇಟ್ಟು, ತನ್ನ ನಾಯಿಯು ತಪ್ಪಿಸಿಕೊಂಡು ಹೋಗಿರುವುದು. ಹುಡುಕಿಕೊಂಡು ಬರುವೆನೆಂದು ಹೇಳಿ ಗಾಡಿಯವೇಲೆ

ಲರ್ ಸ್ಕೂಲ್ ಇಂಗ್ಲಿಷ್ ಅಸಿಸ್ಟೆಂಟ್ ಮ್ಯಾಸ್ಟರನ್ನಾಗಿ, ೧೫ ರೂ. ನಿಂದ ೨೦ ರೂ ಪಾಯಿ ಬಡ್ತಿ ಸಂಬಳದಿಂದ ವರ್ಗಮಾಡಿರುವರು.

ಚಿಕ್ಕಮಗಳೂರು ಹೈಸ್ಕೂಲು ರೈಟರ್ ಮು॥ ರಾ॥ ಎಸ್. ವೆಂಕಟರಮಣ್ಯೆಯ್ಯನವರನ್ನು, ಕಡೂರು ಆಂಗ್ಲೋವರ್ನಾಕ್ಯುಲರ್ ಸ್ಕೂಲು ಇಂಗ್ಲಿಷ್ ಮ್ಯಾಸ್ಟರನ್ನಾಗಿ ಕಳುಹಿಸಿರುವರು.

***

ಮೊಳಕಾಲುಮುರುವಿನಲ್ಲಿದ್ದ ಇಂಗ್ಲಿಷ್ ಕ್ಲಾಸನ್ನು ತೆಗೆದುಹಾಕಿ, ಚಿತ್ರದುರ್ಗದ ಡಿಸ್ಟ್ರಿಕ್ಟ್ ಜೆಳ್ಳಿಕೆರೆಯ ಕನ್ನಡ ಸ್ಕೂಲಿಗೆ ಸೇರಿಸಿರುತ್ತೆ.

***

ಮೇಲುಕೋಟೆಯಲ್ಲಿರುವ ಸಂಸ್ಕೃತಪಾಠಶಾಲೆಗೆ ಸರ್ಕಾರದಿಂದ ಕೊಡುತ್ತಲಿರುವ (ಗ್ರಾಂಟ್) ಸಹಾಯದ್ರವ್ಯವನ್ನು ೭೩ ರೂ. ನಿಂದ ೧೦೩ ರೂಪಾಯಿಗೆ ಹೆಚ್ಚಿಸಿರುವರು. ಅಲ್ಲದೆ ಇನ್ನುಮೇಲೆ ಈ ಪಾಠಶಾಲೆಗೆ ಸಂಸ್ಕೃತ ಕಾಲಿಜ್ ಎಂದು ಹೆಸರಿಟ್ಟು ಇರುವರು.

***

ಹೊಸದಾಗಿ ಏರ್ಪಾಡಾಗಿರುವ ತುಮಕೂರು 'ಸ್ಟೂಡೆಂಟ್ಸ್ ಹೋಂ' ಗೆ ಮಾಹೆಯಾನವೆ ೨೫ ರೂಪಾಯಿ ಸಹಾಯಮಾಡುವಂತೆ ಸರ್ಕಾರದವರು ಅಭಿಪ್ರಾಯಪಟ್ಟಿರುವರು.

***

ಕುಮುಖನ್ ಕವಿಮಿತ್ರರಾದ ಕರ್ನಲ್ ಇ. ಇ. ಗ್ರಿಗ್ ಸಾ॥ ರವರು ರ್ಯಾಂಸೆ ಪಾಠಶಾಲೆಯ ಬಾಲಕರಿಗೆ ಬಹುಮಾನವನ್ನು ಕೊಡುವಾಗ ಬಹಳ ಅತೃಪ್ತಿಯಿಂದ ಹಿಂದೂಸ್ಥಾನದಲ್ಲಿ ಹೆಸರಿಲ್ಲದ ಅರ್ಜಿಯನ್ನು ಬರೆಯುವುದನ್ನು ಕುರಿತು ಕೇವಲ ಆಸವಾಧಾನೋಕ್ತಿಗಳನ್ನು ಆಡಿದರು. ಈ ಹೆಸರಿಲ್ಲದ ಅರ್ಜಿಗಳಲ್ಲಿ ಹೇಳಲಸಾಧ್ಯವಾದ ಸಂಗತಿಗಳು ತುಂಬಿರುವವೆಂತಲೂ ಇಂಥಾ ಅರ್ಜಿಗಳನ್ನು ಬರೆಯತಕ್ಕವರು ಧೈರ್ಯವಿಲ್ಲದ ಹೇಡಿಗಳೆಂತಲೂ, ಕೇವಲ ಅಲ್ಪರೆಂತಲೂ, ಈ ದುರ್ನಡತೆಯನ್ನು ಹಿಂದುಸ್ಥಾನದಲ್ಲಿ ಉತ್ತರೋತ್ತರ ಪ್ರವೃದ್ಧವಾನಕ್ಕೆ ಬರತಕ್ಕ ಬಾಲಕರಿಗೆ ಅದರೂ ಕಲಿಯದಂತೆ ಉಪಾಧ್ಯಾಯರು ಮಾಡಬೇಕಾದ್ದು ಅವಶ್ಯವೆಂಬ ಅಭಿಪ್ರಾಯವನ್ನು ಪಟ್ಟರು. ಈ ವಿಷಯವನ್ನು ಈ ಪತ್ರಿಕೆಯನ್ನು ಓದತಕ್ಕ ವಿದ್ಯಾರ್ಥಿಗಳು, ಉಪಾಧ್ಯಾಯರೇ ಮೊದಲಾದವರು ಅವಶ್ಯ ಮನಸ್ಸಿಗೆ ತಂದುಕೊಂಡು ಇಂಥಾ ಅಪವಾದಕ್ಕೆ ಎಂದೆಂದಿಗೂ ಗುರಿಯಾಗದಂತೆ ಇರುವರೆಂದು ಕೋರುತ್ತೇವೆ.

ವಿದ್ಯಾದಾಯಿನಿ.

ಭಾಗ ೬.] ಮಾರ್ಚ್ ೧೯೧೧. [ಸಂಚಿಕೆ ೩.

ಎಡಿಟರವರ ನೋಟ್ಸ್.

ಲೆಫ್ಟ್‌ನೆಂಟ್ ಗೌರ್ನರಾದ ಸರ್ ವಿಲಿಯಂ ಮ್ಯಾಕ್‌ವರ್ತ್‌ಯಂಗ್‌ರವರು ಪಂಜಾಬ್ ಯೂನಿವರ್ಸಿಟಿ (ಸಕಲಕಲಾಶಾಲೆ) ಯ ಕಾರ್ಪೋರೇಷ್ (ವಿದ್ವತ್ ಸಮೂಹಮದಲ್ಲಿ) ಪದ್ಧತಿಯುಮೇರೆ ಅಲ್ಲಿ ನೆರೆದಿದ್ದ ವಿದ್ವನ್ಮಹಾನುಂಡಲಿಯಲ್ಲಿ ಬಹಳ ಉಪಯುಕ್ತವಾದ ಒಂದು ಉಪನ್ಯಾಸವನ್ನು ಮಾಡಿದರು.

***

ಈ ಉಪನ್ಯಾಸದಲ್ಲಿ ಪಂಜಾಬ್ ಯೂನಿವರ್ಸಿಟಿಯನ್ನು ಸ್ಥಾಪಿಸಿದವೊದಲು ಈ ದೇಶದಲ್ಲಿ ವಿದ್ಯಾಭಿವೃದ್ಧಿಯು ಬಹಳ ಜೆನ್ನಾಗಿದೆಯಂತಲೂ ಆದರೆ ಇಂಗ್ಲಿಷ್ ಭಾಷೆಯನ್ನು ಅಭ್ಯಾಸಿಸಿ ತನ್ಮೂಲಕ ಭಾಷಾಂತರದಿಂದ ಇಂಗ್ಲಿಷ್ ಗ್ರಂಥಗಳ ಸಾರಾಂಶವನ್ನು ಪ್ರಚುರಗೊಳಿಸಲು ಈ ಯೂನಿವರ್ಸಿಟಿಯು ಪ್ರೋತ್ಸಾಹಪಡಿಸದೆ ಇರುವದರಿಂದ ಸ್ವಲ್ಪ ಕೊರತೆಗೊಂಡಿದೆಯಂತಲೂ, ಈ ಕೊರತೆಯನ್ನು ಯೂನಿವರ್ಸಿಟಿಯಲ್ಲಿ ಪ್ರಸಿದ್ಧಿಗೊಂಡ ವಿದ್ವಾಂಸರುಗಳು, ಹೋಗಲಾಡಿಸಬೇಕೆಂತಲೂ ಅಭಿಪ್ರಾಯಪಟ್ಟರು.

ಭಾಷಾಂತರದಲ್ಲಿ ಮೂಲದ ಸ್ವಾರಸ್ಯವನ್ನು ಸಂಪೂರ್ಣವಾಗಿ ತೋರ್ಪಡಿಸಲು ಸಾಧ್ಯವಲ್ಲದುದರಿಂದ ಸಾರಕಡಿಮೆಯೆಂದು ಜನರು ಮೂಲವನ್ನು ಅಪೇಕ್ಷಿಸುವರಲ್ಲದೆ ಭಾಷಾಂತರವನ್ನು ಅಪೇಕ್ಷಿಸರು, ಎಂದು ಬರತಕ್ಕ ಆಕ್ಷೇಪಣೆಗೆ ಮ್ಯಾಕ್‌ವರ್ತ್ ಯಂಗ್‌ರವರು, ಮೂಲವನ್ನು ಓದಿ ಗ್ರಹಿಸಲು ಸಾಮರ್ಥ್ಯವೂ ಇಷ್ಟವೂ ಉಳ್ಳವರು

ಕೂತು ಆ ಪಟ್ಟಣದ ದೊಡ್ಡ ದೊಡ್ಡ ಬೀದಿಯನ್ನೆಲ್ಲಾ ಅಲೆದು, ಸಾಕಾಗಿ ಕೊನೆಗೆ ಎಲ್ಲೂ ಸಿಕ್ಕದೆ ಬೇಜಾರಾದ್ದರಿಂದಲೂ, ಬಹಳಹೊತ್ತು ಆಗಿದ್ದುದರಿಂದಲೂ, ಹಸಿವನ್ನು ತಡೆಯಲಾರದೆ ತಾವಿದ್ದ ಸ್ಥಳಕ್ಕೆ ಹತ್ತಿರದಲ್ಲಿದ್ದ ತನಗೆ ಬೇಕಾದವನೊಬ್ಬನೊಬ್ಬನ ಮನೆಗೆ ಹೋಗಲು ಅಲ್ಲಿ ತನ್ನ ನಾಯಿ ಮಲಗಿದ್ದುದನ್ನು ನೋಡಿ ಬಹಳ ಸಂತೋಷವನ್ನೂ, ಆಶ್ಚರ್ಯವನ್ನೂ ಪಟ್ಟು, ಒಳಗೆ ಹೋಗಲು ತನ್ನ ಸ್ನೇಹಿತನು ಮುಂದಾಗಿ ಈ ನಾಯಿಯನ್ನು ನೋಡಿ ತಾನು ಬರಬಹುದೆಂದು ತಿಳಿದು ಎಲ್ಲಾ ಸಿದ್ಧ ಮಾಡಿಕೊಂಡಿದ್ದುದನ್ನು ನೋಡಿ ಭೋಜನಮಾಡುತ್ತಾ, ಈ ನಾಯಿ ಯಾವಾಗ ಬಂತು? ನೀನು ಈ ನಾಯಿ ನಂದೆಂದು ಹ್ಯಾಗೆ ತಿಳಿದೆ ಎಂದು ಕೇಳಲು, ಆಗ ಆ ಸ್ನೇಹಿತನು ಈ ನಾಯಿಯು ಅರ್ಧಘಂಟೆಯ ಮುಂಚೆ ಬಂತು ಈಗ ಸುಮಾರು ಎರಡು ವರ್ಷದ ಹಿಂದೆ ನೀನು ಈ ಊರಿಗೆ ಬಂದಾಗ ನನ್ನ ಮನೆಯಲ್ಲಿಯೇ ಇಳಿದಿದ್ದೆ. ಒಂದು ವಾರ ಇದ್ದೆ ಈನಾಯಿಯನ್ನು ಆಗ ಕರೆದುಕೊಂಡುಬಂದಿದ್ದೆ. ಅದರಿಂದ ನೀನು ಇಲ್ಲಿಗೇನೆ ಬಂದಿರಬಹುದು; ಈ ಮನೆಯಹತ್ತಿರ ಮಾತನಾಡುತ ನಿಂತಿದ್ದು ಮುಂದೆ ಹಾಗೆಯೇ ಹೋಗಿರಬಹುದು; ನಾಯಿಯನ್ನು ಮಾತ್ರ ಇಲ್ಲಿಯೇ ಇರುವಂತೆ ಬಿಟ್ಟುಹೋಗಿದ್ದಿ ಎಂದು ಊಹಿಸಿ ನಾವು ಸಿದ್ಧ ಮಾಡಿಕೊಂಡೆವು ಎಂದನು. ಇದಕ್ಕೆ ಸಾಹುಕಾರನು ಬಹಳ ಆಶ್ಚರ್ಯಪಟ್ಟು ತಾನು ಈಗ ಬಂದವಿಚಾರವನ್ನೆಲ್ಲಾ ಹೇಳಿ, ಆ ನಾಯಿಯು ಜ್ಞಾಪಕಶಕ್ತಿಯನ್ನು ಕೊಂಡಾಡಿದನು.

ಮೇರಾ—ಉಪಾಧ್ಯಾಯರು ಈ ಕಥೆಯಲ್ಲಿರುವ ಕಠಿಣವಾದ ಮಾತಿಗೆಅರ್ಥವನ್ನು ಬಾಲಕರಿಗೆ ತಿಳಿಸುವುದಲ್ಲದೆ ಬೊಂಬಾಯಿ, ಮದ್ರಾಸ್ ಪಟ್ಟಣಗಳನ್ನು ಭೂಪಠದಲಿ ತೋರಿಸುವುದು. ರೈಲಿನಲ್ಲಿ ನಾಯಿ, ಕೋಳಿ, ಕುದುರೆ, ಸಸಿಗಳು, ಬಂಡಿ ಇವುಗಳಿಗೆ ಬೇರೆಬೇರೆ ಬಂಡಿ ಇರುವುದೆಂಬುವ ಸಂಗತಿಯನ್ನೂ ನಾಯಿಯನ್ನು ಹೊಡೆದುಹಾಕುವ ಪದ್ಧತಿಯನ್ನೂ ಬಾಲಕರಿಗೆ ತಿಳಿಸಬೇಕು.

ಇದರಮೇಲೆ ಕೇಳತಕ್ಕ ಪ್ರಶ್ನೆಗಳು—

ಸಾಹುಕಾರನು ಎಲ್ಲಿದ್ದನು? ಅವನು ಎಲ್ಲಿಗೆ ಹೋಗಿದ್ದನು? ಜೊತೆಯಲ್ಲಿ ಯಾವದನ್ನು ಕರೆದುಕೊಂಡು ಹೋಗಿದ್ದನು? ಅದು ಹ್ಯಾಗೆ ತಪ್ಪಿಸಿಕೊಂಡಿತು? ಎಲ್ಲಿ ಸಿಕ್ಕಿತು?

ಧ್ಯಾಯರು ಉಕ್ತಲೇಖನಕ್ಕಾಗಿರುವ ಕಾಲಕ್ಕೆ ಮುಂಚೆಯೇ ನಿಶ್ಚಯಿಸಿಕೊಂಡಿರ ಬೇಕು. ಆ ವಾಕ್ಯಗಳು ಬಾಲಕರಿಗೆ ಸಾವಧಾನ್ಯವಾಗಿ ಅರ್ಥವಾಗುವಂತಿರಬೇಕು. ಅತಿ ಕಠಿಣವಾದ ಪದಗಳುಳ್ಳ ವಾಕ್ಯಗಳನ್ನು ಬರೆಯಿಸಿ ಪ್ರಯೋಜನವಿಲ್ಲ. ಅಂಥ ಪದಗಳು ಬಾಲಕರಿಗೆ ಬಳಕೆಯಾಗಿರುವುದಿಲ್ಲವಾದುದರಿಂದ ಅವುಗಳ ವರ್ಣಕ್ರಮ ವನ್ನು ಗಟ್ಟಿಮಾಡಿಸಿದರೂ ಶೀಘ್ರವಾಗಿ ಮರೆತುಹೋಗುವುದು. ಉಚಿತವಾದ ಕೆಲವು ವಾಕ್ಯಗಳನ್ನು ಬರೆಯಿಸುವುದರ ಜತೆಗೆ ಕೆಲವು ಪದಗಳನ್ನೂ ಬರೆಯಿಸುವುದು ಒಳ್ಳೆಯದು. ಆದರೆ ಅವು ಅತಿ ಕಠಿಣವಾಗಿರಬಾರದು. 'ತತ್ವಜ್ಞಾನಿ' 'ವೈದುಷ್ಯ' 'ವಿಚ್ಛಿತ್ತಿ' ಇಂಥ ಪದಗಳನ್ನು ಚಿಕ್ಕತರಗತಿಗಳಲ್ಲಿ ಬರೆಯಿಸಿ ಪ್ರಯೋಜನವಿಲ್ಲ. ಬರಸಬೇಕಾದ ಮಾತುಗಳು ಬಾಲಕರಿಗೆ ಬಳಕೆಯಾಗಿಯೂ ಮತ್ತು ಸಾಮಾನ್ಯ ವಾಗಿ ತಪ್ಪಾಗಿ ಬರೆಯುವುದಾಗಿಯೂ ಇರಬೇಕು. 'ಒಂದು' 'ಎರಡು' 'ಪುನಃ' ಇಂಥ ಪದಗಳನ್ನು ಇದಕ್ಕೆ ಉದಾಹರಣೆಯಾಗಿ ಹೇಳಬಹುದು. ಉಕ್ತಲೇಖನಕ್ಕಾ ಗಿರುವ ಘಂಟೆಯಲ್ಲಿಸೊದಲು ಬಾಲಕರನ್ನು ಸರಿಯಾಗಿ ವಿಂಗಡಿಸಿ ನಿಲ್ಲಿಸಬೇಕು. ಇದರಲ್ಲಿ ಮುಖ್ಯನಾಗಿ ಒಬ್ಬನನ್ನು ನೋಡಿಕೊಂಡು ಇನ್ನೊಬ್ಬನು ಬರೆಯುವುದಕ್ಕೆ ಅವಕಾಶಕೊಡದಂತೆ ನೋಡಿಕೊಳ್ಳಬೇಕು. ಅನಂತರದಲ್ಲಿ ಬರೆಯಿಸುವುದಕ್ಕೆ ಪ್ರಾರಂ ಭಿಸಬೇಕು. ಮಾತುಗಳನ್ನು ಒಂದೇಸಲ ಹೇಳಬೇಕು. ಈಗಿನಂತೆ ಮೂತುಗಳನ್ನು ಎರಡುಮೂರುಸಲ ಹೇಳುತಬಂದರೆ ಬಾಲಕರಿಗೆ ಅಲಕ್ಷ್ಯವನ್ನು ಉಪಾಧ್ಯಾಯರೇ ಹೇಳಿಕೊಟ್ಟಂತಾಗುವುದು. ಆದುದರಿಂದ ಉಕ್ತಲೇಖನಕ್ಕಾಗಿ ವಾಕ್ಯಗಳನ್ನಾಗಲಿ ಪದಗಳನ್ನಾಗಲಿ ಬರಸುವಾಗ ಅವುಗಳನ್ನು ಅನೇಕಾವೃತ್ತಿ ಹೇಳುವುದು ತಪ್ಪು. ಬರಸಿದನಂತರದಲ್ಲಿ ಬಾಲಕರ ಸ್ಲೇಟುಗಳನ್ನೆಲ್ಲಾ ತರಿಸಿ ಇಟ್ಟುಕೊಳ್ಳಬೇಕು. ಬಾಲ ಕರ ಸ್ಥಾನಕ್ಕೆ ಹೋಗಿ ಸರಿನೋಡುವುದರಿಂದ ಇತರಬಾಲಕರು ಬೇರೆವಿಧವಾಗಿ ಗಮ ನವಿಡುವುದಕ್ಕೆ ಅವಕಾಶವುಂಟಾಗುವುದು. ಆದುದರಿಂದ ತಮ್ಮ ಸ್ಥಾನಕ್ಕೆ ಸ್ಲೇಟು ಗಳನ್ನು ತರಿಸಿ ಇಟ್ಟುಕೊಳ್ಳಬೇಕು. ಅವುಗಳನ್ನು ಸರಿನೋಡುವುದಕ್ಕೆ ಮುಂಚೆ ಆ ದಿನ ಬರೆಸಿದ ಪದಗಳ ಮತ್ತು ವಾಕ್ಯಗಳಲ್ಲಿನ ಕ್ಲಿಷ್ಟಪದಗಳ ವರ್ಣಕ್ರಮವನ್ನು ಬಾ ಲಕರಿಂದ ಹೇಳಿಸುತ್ತ ಹಲಗೆಯಮೇಲೆ ಬರೆಯಬೇಕು. ಅನಂತರದಲ್ಲಿ ಬಾಲಕರು ಬರೆದಿರುವುದನ್ನು ಸರಿನೋಡುವುದು. ಒಬ್ಬನ ಸ್ಲೇಟನ್ನು ಸರಿನೋಡುವಾಗ ಬಾ ಲಕರಿಂದ ಹಲಗೆಯಮೇಲೆ ಬರೆದಿರುವ ಪದಗಳ ವರ್ಣಕ್ರಮವನ್ನು ಹೇಳಿಸುತ್ತಿರಬೇಕು.

ಬಾಲಕರು ತಪ್ಪಾಗಿ ಬರೆದಿರುವರು ಮಾತುಗಳನ್ನು ಸರಿಯಾಗಿ ಮೂರುನಾಲ್ಕುಸಲ ಬರೆಯುವಂತೆ ಮಾಡುವರು. ಹೀಗೆ ಮಾಡುವುದರಿಂದ ಬಾಲಕರು ಪುನಃ ಅದೇ ತಪ್ಪುಗಳನ್ನು ಮಾಡದಂತಾಗುವುದು. ಆದರೆ ಇಂಥ ಉಪಾಧ್ಯಾಯರ ಸಂಖ್ಯೆಯು ಸದ್ಯಕ್ಕೆ ಬಹಳ ಕಡಮೆಯಾಗಿರುವುದು. ಅಂದರೆ ಈಗ ಸಾಮಾನ್ಯವಾಗಿ ಮಾಡಿಕೆಯಾಗಿರುವಂತೆ ಉಪಾಧ್ಯಾಯರು ಉಕ್ತಲೇಖನಕಾಲದಲ್ಲಿ ಬಾಲಕರ ಯೋಗ್ಯತೆಯನ್ನು ಪರೀಕ್ಷಿಸುವ ದೇಹೊರತು ಅವರಿಗೆ ವಿಶೇಷವಾಗಿ ಯಾವ ಅಂಶಗಳನ್ನೂ ಬೋಧಿಸುವುದಿಲ್ಲ. ಇದು ಸರಿಯಲ್ಲ. ಉಪಾಧ್ಯಾಯರ ಕೆಲಸವು ಪರೀಕ್ಷೆಮಾಡುವುದುಮಾತ್ರವಲ್ಲ.

ಉಕ್ತಲೇಖನವನ್ನು ಈಗ ಮಾಡಿಕೆಯಾಗಿರುವ ಕ್ರಮದಂತೆ ಮಾಡಿಸುವುದರಿಂದ ಬೇರೆವಿಧವಾದ ಅನನುಕೂಲಗಳೂ ಉಂಟಾಗುವುವು. ಅವುಗಳಲ್ಲೊಂದನ್ನು ಇಲ್ಲಿ ಹೇಳಬಹುದು. ಒಬ್ಬ ಬಾಲಕನು ಬರೆದಿರುವುದನ್ನು ಸರಿನೋಡುವಾಗ್ಗೆ ಇತರ ಬಾಲಕರಿಗೆ ಸರಿಯಾಗಿ ಕೆಲಸ ಕೊಟ್ಟಿರುವುದಿಲ್ಲವಾದುದರಿಂದ ಅವರು ಆ ಕಾಲದಲ್ಲಿ ತಮಗೆ ಸ್ವಾಭಾವಿಕವಾಗಿ ವಿಶೇಷನಾಗಿರುವ ಚಟುವಟಿಕೆಯನ್ನು ಹೊರಪಡಿಸುವರು. ಇದನ್ನು ಉಪಾಧ್ಯಾಯರು ಜೇಷ್ಟೆಯೆಂದು ಭಾವಿಸಿ ಅವರನ್ನು ದಂಡಿಸುವರು. ಇದರಿಂದ ಬಹಳವಾದ ಅಪಾಯಗಳುಂಟು. ಬಾಲಕರಿಗೆ ಉಪಾಧ್ಯಾಯರಲ್ಲಿ ಪ್ರೀತಿ ಕಡಮೆಯಾಗುವುದುಮಾತ್ರವಲ್ಲ ಪಾಠಶಾಲೆಯಲ್ಲೇ ಅನಾದರವೂ ಭಯವೂ ಹೆಚ್ಚುವುದು. ಹೀಗೆ ಅನನುಕೂಲಗಳಿರುವುದನ್ನು ತಪ್ಪಿಸಿ ಉಕ್ತಲೇಖನ ಕಾಲದಲ್ಲಿ ಬಾಲಕರ ಯೋಗ್ಯತೆಯನ್ನು ಪರೀಕ್ಷಿಸುವುದುಮಾತ್ರವಲ್ಲದೆ ಅವರಿಗೆ ಬೋಧನೆಯು ನಡೆಸುವುದೂ ಒಂದೇಕ್ರಮದಿಂದ ಸಾಧ್ಯವಾದರೆ ಆ ಕ್ರಮವನ್ನು ಅನುಸರಿಸುವುದೂ ಸರ್ವೋತ್ತಮವೆಂಬುದರಲ್ಲಿ ಸಂಶಯವಿಲ್ಲ.

ಹೀಗೆ ಉಕ್ತಲೇಖನವನ್ನು ನಡೆಯಿಸುವುದು ಬಾಲಕರ ವಯೋನುಗುಣವಾಗಿ ಸ್ವಲ್ಪಮಟ್ಟಿಗೆ ಬದಲಾಯಿಸುವುದರಿಂದ ಅದನ್ನು ಎರಡುಭಾಗವಾಗಿ ವಿಂಗಡಿಸಿ ಇಲ್ಲಿ ಬರೆಯುವೆವು ಇವೆರಡರಲ್ಲಿ ಮೊದಲನೆಯದು ಮೂರನೇ ತರಗತಿ ಅಂದರೆ ಲೋ ಅಂಡ್ ವರ್ತು ಅಪ್ಪರ್‌ಪ್ರೈಮರಿ ಪಾಠಶಾಲೆಗಳಲ್ಲಿನ ಬಾಲಕರಿಗೆ ಬೋಧಿಸುವಕ್ರಮ; ಎರಡನೆಯದು ಮೂರುನಾಲ್ಕನೇ ತರಗತಿಗಳಲ್ಲಿ ಅಂದರೆ ಲೊಅರ್ ಸೆಕೆಂಡರಿ ಸ್ಕೂಲುಗಳಲ್ಲಿ ಬಾಲಕರಿಗೆ ಬೋಧಿಸುವಕ್ರಮ.

ಮೊದಲನೆಯ ಕ್ರಮ—ಈ ವಾಕ್ಯಗಳನ್ನು ಬರೆಯಿಸಬೇಕೆಂಬುದನ್ನು ಉಪಾ

ರಿಗೆ ತಾವು ಸರಿಯಾಗಿ ಬರೆಯುವುದುಮಾತ್ರವಲ್ಲದೆ ಇತರರು ಬರೆದಿರಬಹುದಾದರಲ್ಲಿ ತಪ್ಪುಸೆ ಪ್ಪುಗಳನ್ನು ಗೊತ್ತುಮಾಡುವುದೂ ಸ್ವತಂತ್ರವಾಗಿ ಕೆಲಸಮಾಡುವುದೂ ಅಭ್ಯಾಸವಾಗುವುದು.

ವಿದ್ಯಾರಣ್ಯರ ಚರಿತ್ರೆಯು.

ಬಲ್ಲಾಳ ವಂಶದ ಅರಸರು ಳಿಯುತ್ತಿದ್ದ ಓರಗಲ್ಲೆಂಬ ಹಿಂದೂ ರಾಜ್ಯವು ಸುಮಾರು ಕ್ರಿ. ಶ. ೧೩೨೩ ರಲ್ಲಿ ಮಹಮ್ಮದೀಯರು ದಂಡೆತ್ತಿ ಬಂದುದರಿಂದ ಓಡಿದು ಹೋಗಲಾಗಿ ಅಲ್ಲಿನ ಮುಖ್ಯ ಸರದಾರರಾದ ಕ್ಷತ್ರಿಯವಂಶದ ಬುಕ್ಕ ಮತ್ತು ಹರಿಹರರೆಂಬ ಅಣ್ಣತಮ್ಮಂದಿರು ತಮ್ಮ ಸಂಪತ್ತನ್ನು ಮತ್ತೊಂದು ಕಡೆಯಲ್ಲಿ ದೊರಕಿಸಿಕೊಳ್ಳುವ ಅಭಿಲಾಷೆಯಿಂದ ಕೆಲವು ಮಂದಿ ಪರಿವಾರಜನರೊಡನೆ ಆ ದೇಶವನ್ನು ಬಿಟ್ಟು ಹೊರಟು ಪೂರ್ವದಲ್ಲಿ ಶ್ರೀರಾಮನು ವಾಸಿಸುತ್ತಿದ್ದುದರಿಂದ ಪರಿಶುದ್ಧವೆನಿಸಿದ ಪಂಪಾಸರೋವರದ ಬಳಿ ಇರುವ ತುಂಗಭದ್ರಾನದಿಯ ದಡವನ್ನು ಬಂದು ಸೇರಿದರು. ಅಲ್ಲಿ ಅವರು ಅತ್ಯಂತ ಕುಶಲಬುದ್ಧಿಯುಳ್ಳ ಮೂಧವಾಚಾರ್ಯರೆಂಬ ಬ್ರಾಹ್ಮಣಪಂಡಿತರ ಆಶ್ರಯ ಹೊಂದಿ ಸುಮಾರು ಕ್ರಿ. ಶ. ೧೩೩೬ ರಲ್ಲಿ ವಿಜಯನಗರ * ವೆಂಬ ಸಂಸ್ಥಾನವನ್ನು ಸ್ಥಾಪಿಸಿಕೊಂಡರು.

ಬುಕ್ಕರಾಯನು ಮೂಧವಾಚಾರ್ಯರು ತಮಗೆ ಮಾಡಿದ ವಿಶೇಷ ಉಪಕಾರ ಸ್ಮರಣೆಯಿಂದ ಅವರನ್ನೇ ತನ್ನ ಮಂತ್ರಿಯನ್ನಾಗಿ ನಿಯಮಿಸಿಕೊಂಡನು. ಅವರು ಮಂತ್ರಿತ್ವದಲ್ಲಿ ಬಹು ಖ್ಯಾತಿ ಪಡೆದರೆಂದು ಇಲ್ಲಿ ಹೇಳಬೇಕಾಗಿಲ್ಲ.

ಈ ಮೂಧವಾಚಾರ್ಯರು ತಾವು ರಚಿಸಿರುವ ಪರಾಶರಸ್ಮೃತಿ ನ್ಯಾಯ ವ್ಯಾಖ್ಯಾನೆ

---

* ಇದು ಈಗ ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿರುವ ಹಂಪೆಯ ಬಳಿ ತುಂಗಭದ್ರಾನದಿಯ ದಕ್ಷಿಣತೀರದಲ್ಲಿನ ಪುರಾತನ ಹಾಳುಪಟ್ಟಣವಾಗಿಯೂ ಅಲ್ಪಗ್ರಾಮವಾಗಿಯೂ ಇರುವದು. ಈಗಲೂ ಅಲ್ಲಿನ ಹಾಳುಪಟ್ಟಣಗಳನ್ನು ನೋಡಿ ಆ ರಾಜ್ಯದ ಸಂಪತ್ತನ್ನೂ ರಾಜನ ಪರಾಕ್ರಮವನ್ನೂ ಊಹಿಸಿ ವ್ಯಸನಪಡುವರ್ಯಾರು ?

$ ಶ್ರೀಮತೀ ಜನನೀ ಯಸ್ಯ ಸುಕೀರ್ತಿರ್ಮಾಯ ಣಃಪಿತಾ । ಸಾಯಣಸೋಮನಾಥಶ್ಚ ಮನೋಬುದ್ಧೀಸಹೋದರೌ ॥ ಯಸ್ಯ ಬೋಧಾಯನಂ ಸೂತ್ರಂ ಲಾಭಾ

ಹೀಗೆಮಾಡುವುದರಿಂದ ಅವರಿಗೆ ಗದ್ದಲಮಾಡುವುದಕ್ಕೆ ಅವಕಾಶಸಿಕ್ಕುವದಿಲ್ಲ. ಒಬ್ಬನು ಬರೆದಿರುವುದನ್ನು ನೋಡಿದನಂತರ ಅವನು ಹಲಗೆಯಮೇಲಿರುವುದನ್ನು ನೋಡಿಕೊಂಡು ತಪ್ಪಿರುವ ಮಾತುಗಳನ್ನು ಸರಿಯಾಗಿ ಬರೆಯುವಂತ ಹೇಳಬೇಕು. ಎಲ್ಲಾ ಸ್ಲೇಟುಗಳನ್ನು ನೋಡಿದನಂತರ ಎಲ್ಲರೂ ಅವರವರು ತಪ್ಪಿದ್ದ ಮಾತುಗಳನ್ನು ಸರಿಯಾಗಿ ಬರೆದಿರುವರೆಂಬುದನ್ನು ಪರೀಕ್ಷಿಸಿ ನಂಬರು ಕೊಡಬೇಕು.

ನಾಲ್ಕು ನಿದನೇ ತರಗತಿಗಳಲ್ಲಿ ಉಕ್ತಲೇಖನವನ್ನು ನಡೆಯಿಸಬೇಕಾದರೆ ಉಪಾಧ್ಯಾಯರು ಮೇಲೆ ಹೇಳಿರುವಂತೆಯೇ ಬರಸಬೇಕಾದ ವಾಕ್ಯಗಳನ್ನೂ ಪದಗಳನ್ನೂ ಮುಂಚಿತವಾಗಿ ನಿಶ್ಚಯಿಸಬೇಕು. ಬರಸುವಾಗ ಪದಗಳನ್ನು ಅನೇಕಾವೃತ್ತಿ ಹೇಳಬಾರದು. ಅನಂತರದಲ್ಲಿ ಸ್ಲೇಟುಗಳನ್ನು ತಾವೇ ಬದಲಾಯಿಸಿ ಒಬ್ಬರ ಸ್ಲೇಟನ್ನು ಮತ್ತೊಬ್ಬರು ತೆಗೆದುಕೊಳ್ಳುವಂತೆ ಹೇಳಬೇಕು. ಈಗ ಯಾವನಾದರೊಬ್ಬ ಸ್ಲೇಟನ್ನು ಉಪಾಧ್ಯಾಯರು ತೆಗೆದುಕೊಂಡು ಅವನ ಕೈಗೆ ಬರಸುವುದಕ್ಕೆ ತಂದಿದ್ದ ಕಾಗದವನ್ನು ಕೊಡಬೇಕು ಆ ಹುಡುಗನಿಂದ ಅವತ್ತು ಬರೆಸಿ ದೊರದಲ್ಲಿರುವುದರಲ್ಲಿ ಕ್ಲಿಷ್ಟಪದಗಳನ್ನು ಹಲಗೆಯಮೇಲೆ ಬರೆಯಬೇಕು. ಇದಕ್ಕಾಗಿ ಉಪಾಧ್ಯಾಯರು ಅವುಗಳನ್ನು ನಿಶ್ಚಯಿಸಿ ಗುರುತುಮಾಡಿರಬೇಕು. ಈ ಮಧ್ಯದಲ್ಲಿ ಉಪಾಧ್ಯಾಯರು ತಮ್ಮಲ್ಲಿರುವ ಸ್ಲೇಟಿನ್ನು ತಿದ್ದುತ್ತ ವರ್ಣಕ್ರಮವನ್ನು ಗಟ್ಟಿಯಾಗಿ ಹೇಳುತ್ತಹೋಗಬೇಕು. ಹುಡುಗರೆಲ್ಲರೂ ತಮ್ಮಲ್ಲಿರುವ ಸ್ಲೇಟುಗಳನ್ನು ತಿದ್ದಬೇಕು. ಅನಂತರದಲ್ಲಿ ಸ್ಲೇಟುಗಳು ಪುನಃ ಬದಲಾಯಿಸುವಂತೆ ಹೇಳಬೇಕ. ಬಾಲಕರು ತಿದ್ದಿರುವುದರಲ್ಲಿ ತಪ್ಪೇನಾದರೂ ಇದ್ದರೆ ಅದನ್ನು ಸರಿಮಾಡಿ ಬಾಲಕರೆಲ್ಲರೂ ಹಲಗೆಯನ್ನು ನೋಡಿಕೊಂಡು ತಪ್ಪಾದ ಮಾತುಗಳನ್ನು ಸರಿಯಾಗಿ ಬರೆಯುವಂತೆ ಹೇಳಬೇಕ.. ಹಾಗೆ ಅವರು ಬರೆದಿರುವುದನ್ನು ಪರೀಕ್ಷಿಸಿ ನಂಬರು ಕೊಡಬೇಕು.

ಈಪ್ರಕಾರವಾಗಿ ಉಕ್ತಲೇಖನವನ್ನು ನಡೆಯಿಸುವುದರಲ್ಲಿ ಈ ಮೂರು ಗುಣಗಳಿರುವುದೆಂಬುದು ಸ್ಪಷ್ಟವಾಗುವುದು. (೧) ಒಂದುಸಲ ಮಾಡಿದ ತಪ್ಪನ್ನು ಬಾಲಕರು ಪುನಃ ಮಾಡದಂತಾಗುವುದು. (೨) ಬಾಲಕರಿಗೆಲ್ಲ ಸರಿಯಾಗಿ ಕೆಲಸ ಕೊಟ್ಟಂತಾಗುವುದು. ಇದರಿಂದ ಬಾಲಕರ ಮನಸ್ಸು ಅನ್ಯಾಕ್ರಾಂತವಾಗುವುದಕ್ಕೆ ಅವಕಾಶವಿರುವುದಿಲ್ಲ. (೩) ಬಾಲಕರಿಗೆ ಪಾಠದಲ್ಲಿ ಗಮನವಿಡುವ ಸ್ವಭಾವಬರುವುದು. ಮತ್ತು ಮೇಲಿನ ತರಗತಿಗಳಲ್ಲಿ ಬಾಲಕರು ಸರಿನೋಡುವಂತೆ ಮಾಡುವುದರಿಂದ ಅವ

ರಲ್ಲಿ ಮಾಧವಾಚಾರ್ಯರು ಇಹಲೋಕದ ವ್ಯಾಪಾರದಲ್ಲಿ ತಮಗುಂಟಾದ ಬೇಸರಿಕೆಯಿಂದ ಸನ್ಯಾಸವನ್ನು ಸ್ವೀಕರಿಸಿದರು. ಅವರು ಸನ್ಯಾಸವನ್ನು ಸ್ವೀಕರಿಸಿದೊಡನೆಯೇ ಪುನರ್ಜನ್ಮವನ್ನು ಪಡೆದಂತೆ ಶಾಸ್ತ್ರವಿರುವದರಿಂದ ಅವರ ಪಾರ್ಥನೆಯು ನೆರವೇರಿದಂತಾಗಿ ಶೃಂಗೇರೀಮಠದ ವೈದಿಕಪೀಠದ ಮುಖ್ಯಸ್ಥರಾಗಿ ಮಾಡಲ್ಪಟ್ಟರು.

ನಾವು ಹಿಂದೆ ಹೇಳಿದ ಹಾಗೆ ಮಾಧವಾಚಾರ್ಯರು ಐಶ್ವರ್ಯ ಮತ್ತು ಮಹತ್ವದವಿಯನ್ನು ಬಯಸಿಯೇ ತಪಸ್ಸುಮಾಡಿದ್ದರೆ ಶೃಂಗೇರೀಮಠದ ಗುರುಪೀಠವನ್ನು ಏರುವದಕ್ಕೆ ಮೊದಲೇ ಅವರ ಕೋರಿಕೆಯು ನೆರವೇರಿದಂತಿದೆ. ಹ್ಯಾಗಂದರೆ,—ಇವರು ಅನೇಕವರ್ಷಗಳ ಪರಿಯಂತ ಏಳಿಗೆಯಲ್ಲಿದ್ದ ವಿಜಯನಗರವೆಂಬ ಚಿಕ್ಕಸಂಸ್ಥಾನದ ಮಂತ್ರಿಯಾಗಿದ್ದರು. ರಾಜನೀತಿಜ್ಞರೂ ವಿದ್ವಾಂಸರೂ ಆದ ಇವರ ದೂರಾಲೋಚನೆಯುಳ್ಳ ಮಂತ್ರಿತ್ವದ ಮಹತ್ತಿನಿಂದ ಆ ರಾಜ್ಯವು (ದಕ್ಷಿಣಹಿಂದೂಸ್ಥಾನ) ದಖನ್ನಿನ ಹಿಂದೂಸ್ಥಾನಗಳಲ್ಲಿ ಹಿರಿದೆನಿಸುವದಕ್ಕೆ ಕಾರಣವಾದ ಬೀಜಗಳು ಅಲ್ಲಿ ಬಿತ್ತಲ್ಪಟ್ಟವು ಪೂರ್ವಯುಗಗಳಲ್ಲಿ ಪ್ರಾಶಸ್ತ್ಯಹೊಂದಿದ್ದ ಮಾನವಾದಿಧರ್ಮಶಾಸ್ತ್ರಗಳಿಗಿಂತ 'ಕಲೌ ಪಾರಾಶರಸ್ಮೃತಿಃ' ಎಂಬ ವಾಕ್ಯ ರೀತಿಯಾಗಿ ಈ ಕಲಿಯುಗದಲ್ಲಿ ಪಾರಾಶರಸ್ಮೃತಿಯು ಪ್ರಾಮುಖ್ಯತೆಯುಳ್ಳದ್ದೆಂದು ಮಂತ್ರಿತ್ವದಲ್ಲಿರುವಾಗಲೇ ಅವರ ಮನಸ್ಸಿಗೆ ತೋರಿತು. ಆದ್ದರಿಂದ ಈ ಸ್ಮೃತಿಗೆ ಅಮೂಲ್ಯವಾದ ವ್ಯಾಖ್ಯಾನವನ್ನು ಜನಗಳ ಆಚಾರ ನಿಬಂಧನೆಯ ವಿಷಯವಾಗಿ ವ್ಯವಹಾರಮಾಧವೀಯವೆಂಬ ಹೆಸರಿನಿಂದ ರಚಿಸಿರುವರು.

ಅವರು ರಾಜಕಾರ್ಯವನ್ನು ನಿರ್ವಹಿಸುತ್ತಿರುವಾಗಲೂ ವಿದ್ಯಾರ್ಥಿಯ ಸ್ವಭಾ

ಉಳಿದುದನ್ನು ರಾಜನು ತೆಗೆದುಕೊಳ್ಳುವಂತೆಯೂ ಹೇಳಿದರು. ಇದೇ ಆ ರಾಜ್ಯದ ಅಧಿಕ ಸಂಪತ್ತಿಗೆ ಕಾರಣವಾಯಿತು.

(೨) ಇವರು ಕೆಲವು ಕಾಲ ಸಂಸಾರಸುಖವನ್ನನುಭವಿಸುತ್ತಿದ್ದು ಸ್ತ್ರೀಸಂತಾನವನ್ನುಂಟಾಗಿದ್ದರೆಂದು ತಿಳಿಯಬರುವದು.

೩ ಮಾಧವಾಚಾರ್ಯರು ಮಂತ್ರಿತ್ವದಲ್ಲಿರುವಾಗ ತಲಕಾಡಿಗೆ ಸವಿಾಪದಲ್ಲಿ ಕಾವೇರೀತೀರದಲ್ಲಿ ಒಂದು ದೊಡ್ಡ ಅಣೆಯನ್ನು ಕಟ್ಟಿಸಿ ಕಾಲುವೆಗಳನ್ನು ತೆಗಿಸಿ ವ್ಯವಸಾಯಕ್ಕೆ ಅನುಕೂಲಪಡಿಸಿದರು. ಆ ಅಣೆಯು ಈಗಲೂ ಮಾಧವಮಂತ್ರಿ ಅಣೆಯೆಂದು ಪ್ರಸಿದ್ಧಿಗೊಂಡಿರುವದು.—ಈ ವಿಧವಾಗಿ ಮತ್ತೊಂದು ಇತಿಹಾಸ ಉಂಟು.

ದಲ್ಲಿ ಹೇಳಿರುವಂತೆ ಸಾಯಣ ಮತ್ತು ಶ್ರೀಮತಿ ಎಂಬ ಬ್ರಾಹ್ಮಣದಂಪತಿಗಳ ಪುತ್ರರಾಗಿಯೂ ಭಾರದ್ವಾಜಗೋತ್ರ, ಬೋಧಾಯನಸೂತ್ರ, ಯಜುರ್ವೇದ ತೈತ್ತಿರೀಯ ಶಾಖಾಧ್ಯಾಯಿಗಳಾಗಿಯೂ ಇದ್ದರು. ಇವರಿಗೆ ಸಾಯಣ ಮತ್ತು ಭೋಗನಾಥ ರೆಂಬ ಇಬ್ಬರು ಸಹೋದರರು ಇದ್ದರು.

ಮಾಧವಾಚಾರ್ಯರು ಜನಿಸಿದ ಕಾಲವನ್ನು ನಿರ್ಧರಿಸಿ ಹೇಳುವದಕ್ಕಾಗುವದಿಲ್ಲ; ಆದರೆ ಕ್ರಿ. ಶ. ೧೪ ನೇ ಶತಮಾನದ ಆದಿಭಾಗದಲ್ಲಿ ಜನಿಸಿದರೆಂದು ಹೇಳಿದರೆ ಬಹಳ ವ್ಯತ್ಯಾಸವಾಗದೆ ಇರುವದು. ಇವರು ಬಾಲ್ಯವನ್ನು ದಾರಿದ್ರ್ಯದಲ್ಲಿ ಕಳೆದರೆಂದು ಇತಿಹಾಸ ಉಂಟು.

ಮಾಧವಾಚಾರ್ಯರೂ ಸಾಯಣಾಚಾರ್ಯರೂ ಚಿಕ್ಕಂದಿನಿಂದಲೂ ಒಂದೇ ಸ್ಥಳದಲ್ಲಿದ್ದು ಬೆಳೆದವರೆಂದು ತೋರುತ್ತೆ. ಇಂಥಾ ಸಹೋದರಪ್ರೀತಿಯ ಉದಾಹರಣೆಯು ಜಗತ್ತಿನ ಇತಿಹಾಸದಲ್ಲಿ ವಿರಳವಾಗಿ ಕಾಣಬರುವದು. ಇವರಿಬ್ಬರು ಜೊತೆಯಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡಿ ಗೀರ್ವಾಣಭಾಷೆಯ ವಿವಿಧಶಾಖೆಗಳಲ್ಲಿ ಸವೊನಪಂಡಿತರೆನಿಸಿ ಅವರುಗಳ ಹೆಸರಿನಲ್ಲಿ ಪ್ರಚಾರಗೊಂಡಿರುವ ಅನೇಕ ಗ್ರಂಥಗಳನ್ನು ಇಬ್ಬರೂ ಸೇರಿ ರಚಿಸಿರುವರು.

ಮಾಧವಾಚಾರ್ಯರು ಅಧಿಕ ಸಂಪತ್ತು ಮಹತ್ಪದವಿಗಳ ಬಯಕೆಯಿಂದ ಪಾರ್ವತಿಯನ್ನು ಕುರಿತು ಘೋರವಾದ ತಪಸ್ಸನ್ನು ಮಾಡುತ್ತಾ ಅನೇಕ ವರ್ಷಗಳನ್ನು ಕಳೆದರು. ಪಾರ್ವತಿಯು ಇವರ ಸ್ತೋತ್ರಕ್ಕೆ ಮೆಚ್ಚಿ ಸ್ವಪ್ನದಲ್ಲಿ ಕಾಣಿಸಿಕೊಂಡು ನೀನು ಈ ಜನ್ಮದಲ್ಲಿ ಬಡತನವನ್ನೇ ಅನುಭವಿಸಿ ಮುಂದಿನ ಜನ್ಮದಲ್ಲಿ ಶ್ರೀಮಂತನೂ ಖ್ಯಾತಿವಂತನೂ ಆಗುವಿ ಎಂದು ಹೇಳಿದಂತೆ † ಒಂದು ಇತಿಹಾಸ ಉಂಟು. ಇಷ್ಟ

ಯಸ್ಯಚ ಯಾಜುಷೀ । ಭಾರದ್ವಾಜಂ ಯಸ್ಯ ಗೋತ್ರಂ ಸರ್ವಶಸ್ಸಹಿಮಾಧವಃ ॥
ಭೋಗನಾಥ ಎಂದು ಸಾತಾತಂತರವಿರುವದು.

† ಪಾರ್ವತಿಯು ಮಾಧವಾಚಾರ್ಯರಿಗೆ ಪ್ರತ್ಯಕ್ಷಳಾಗಿ 'ನೀನು ಇತರರಿಗೆ ವರವನ್ನಿತ್ತರೆ ಅವರು ಭಾಗ್ಯಶಾಲಿಗಳಾಗಲಿ. ನಿನಗೆಮಾತ್ರ ಈಜನ್ಮದಲ್ಲಿ ಐಶ್ವರ್ಯವು ಭೋಗ್ಯವಾಗದು.' ಎಂದು ವರವಿತ್ತಳು. ಇಂಥವರನ್ನು ಪಡದುಕೊಂಡ ಮಾಧವಾಚಾರ್ಯರು ಬುಕ್ಕರಾಯನು ಸ್ಥಾಪಿಸಿದಸಂಸ್ಥಾನದಲ್ಲಿ ಸುವರ್ಣವೃಷ್ಟಿಯಾಗುವಂತೆ ಮಾಡಿ ಪ್ರಜೆಗಳು ತಮ್ಮತಮ್ಮ ಭೂಮಿಯಲ್ಲಿನ ಚಿನ್ನವನ್ನು ಅವರೇ ತೆಗದುಕೊಳ್ಳುವಂತೆಯೂ

ಅವರು ಕೈಕೊಂಡ ಅದ್ಭುತಕಾರ್ಯಕ್ಕೆ ತಕ್ಕ ಯೋಗ್ಯತೆಯು ಅವರಲ್ಲಿತ್ತೆಂಬುವದನ್ನು ವಿನಯದಿಂದ ತೋರಿಸುವದು. [ಸಶೇಷ]

ಮೈಸೂರು ದೇಶೀಯ ಲೋವರ್ ಸೆಕೆಂಡರೀ ಪರೀಕ್ಷೆ.

ಅಂಕಗಣಿತ.

1897 ನೇ ಡಿಶಂಬರ್ 3.

VI. ನೋಟ್ (1) 3 ನೇ ತೋಟದಲ್ಲಿ ಸಿಕ್ಕಿದ ಹೂವುಗಳ ಸಂಖ್ಯೆಯು 100 ಕ್ಕಿಂತ ಕಮ್ಮಿಯಾದದ್ದು.

ನೋಟ್ (2) 1, 2 ನೇ ತೋಟಗಳಲ್ಲಿ ಸಿಕ್ಕಿದ ಹೂವುಗಳ ಸಂಖ್ಯೆಗೆ 3 ನೇ ತೋಟದಲ್ಲಿ ಸಿಕ್ಕಿದವುಗಳ ಸಂಖ್ಯೆಯನ್ನು ಸೇರಿಸಿದರೆ ಲಬ್ಧವು 100 ರಿಂದ ನಿಶ್ಶೇಷವಾಗಿ ಭಾಗವಾಗುತ್ತದೆ.

ಈಗ 1 ನೇ ತೋಟದಲ್ಲಿ ಸಿಕ್ಕಿದ ಹೂವುಗಳು 2, 783

2 891

ಆದ್ದರಿಂದ ಎರಡು ತೋಟಗಳಿಂದ ಒಟ್ಟು .. 3674 ಅಥವಾ

3600 + 74.

ಈಗ 2 ನೇ ನೋಟಿನಂತೆ 74 ಕ್ಕೆ 3 ನೇ ತೋಟದ ಹೂವುಗಳ ಸಂಖ್ಯೆಯನ್ನು ಸೇರಿಸಿದರೆ 100 ಆಗುತ್ತೆ.

∴ 100—74 = 26 ಹೂವುಗಳು 3 ನೇ ತೋಟದಲ್ಲಿ ಸಿಕ್ಕಿದವು.

∴ 100—26 = 74 ಹುಡುಗರಿಗೆ 3ನೇ ತೋಟದಲ್ಲಿ ಹೂವು ಸಿಕ್ಕಲಿಲ್ಲ.

VII. ನೋಟ್ (1) 7 ದಿವಸಗಳು = ಒಂದುವಾರ; 365 ದಿವಸಗಳು ಒಂದು ವರ್ಷ.

ನೋಟ್ (2) ಒಂದು ವರ್ಷದ ಮೊದಲನೇ ದಿವಸ ಬುಧವಾರವಾದರೆ, ಆ ವರ್ಷದಲ್ಲಿ ಪ್ರತಿಯೊಂದು ವಾರದ ಮೊದಲನೇ ದಿವಸವೂ ಬುಧವಾರವಾಗುತ್ತದೆ

ವ್ಯುತ್ಪನ್ನರಾಗಿದ್ದು ಸಂಸ್ಕೃತ ಭಾಷೆಯ ಸಕಲ ಶಾಖೆಗಳ ಪರಿಚಯ ಹೊಂದುವದರಲ್ಲಿ ತಮ್ಮ ಅವಶಿಷ್ಟಕಾಲವನ್ನು ವಿನಿಯೋಗಿಸುತ್ತಿದ್ದರು. ಇವರ ಸಹೋದರರಾಗಿಯೂ ಎರಡನೇ ಆತ್ಮವಾಗಿಯೂ ಇದ್ದ ಸಾಯಣಾಚಾರ್ಯರು ಅಕೃತ್ರಿಮವಿದ್ಯಾರ್ಥಿಯ ಸ್ವಭಾವದಿಂದ ಗ್ರಂಥಾವಲೋಕನದಲ್ಲಿಯೇ ತಮ್ಮ ಕಾಲವನ್ನು ಕಳೆದರು; ಮಾಧವಾಚಾರ್ಯರಾದರೊ ತಮ್ಮ ಅದಿನದ ಕೆಲಸವು ತೀರಿದನಂತರ ಸಹೋದರರ ಜೊತೆಯಲ್ಲಿ ವಿದ್ಯಾಸಾಧನೆಯಿಂದ ಸಂತೋಷಪಡುತ್ತಿದ್ದರು. ಈಗ ಇದೇ ರೀತಿಯಲ್ಲಿ ವೃದ್ಧರಾದ ಮೆ॥ ಗ್ಲಾಡ್‌ಸ್ಟನ್ ಎಂಬ ಮಹಾಪುರುಷರೂ ಸ್ವದೇಶದಹಿತಕ್ಕಾಗಿ ಅರ್ಪಿಸಿರುವ ತಮ್ಮ ದೀರ್ಘೋದ್ಯೋಗದ ಜೀವನವಾನದಲ್ಲಿ ಅನೇಕ ವಿದ್ಯಾಸಂಬಂಧದ ವಿಷಯಗಳನ್ನು ಬರೆದು ಈ ಪ್ರಪಂಚವನ್ನು ವಿದ್ಯಾಸಂಪನ್ನತೆಯುಳ್ಳದ್ದನ್ನಾಗಿ ಮಾಡುವದಕ್ಕೂ ಸಮಯ ಉಳ್ಳವರಾಗಿರುತ್ತಾರೆಂಬುದನ್ನು ನಮ್ಮ ನಾಚಕರಿಗೆ ನೆನಪುಗೊಳಿಸಬೇಕಾಗಿಲ್ಲ.

ಈ ಕಾಲದಲ್ಲಿಯೇ ಮಾಧವಾಚಾರ್ಯರು ಪೂರ್ವವಿಮಾಂಸದ ಆಧಾರದಿಂದ ನ್ಯಾಯಮಾಲಾವಿಸ್ತಾರವೆಂಬ ಗ್ರಂಥವನ್ನು ಬರೆದರು; ಮತ್ತು ಅನೇಕ ಉಪನಿಷತ್ತುಗಳಿಗೂ ಇತರ ತತ್ವಶಾಸ್ತ್ರಗಳಿಗೂ ಭಾಷ್ಯವನ್ನು ಮಾಡಿದರು. ಬುಕ್ಕರಾಯನು ಈಗ ತನ್ನ ಮಂತ್ರಿಯನ್ನು ಕುರಿತು ಚತುರ್ವೇದಗಳಿಗೂ ಭಾಷ್ಯವನ್ನು ರಚಿಸಬೇಕೆಂತ ಬೇಡಿದನು. ಮಾಧವಾಚಾರ್ಯರು ತಮಗೆ ಪರಿಸಿಕೊಟ್ಟ ಈ ಅದ್ಭುತಕಾರ್ಯಕ್ಕೆ ಎದೆಗುಂದದೆ ತಮ್ಮ ಸಹೋದರರೊಡನೆ ಈ ಸರ್ವವಿದ್ಯಾಸಂಗ್ರಹಗ್ರಂಥರಚನಾ ಕಾರ್ಯವನ್ನು ಪಕ್ರಮಿಸಿದರು. ಈ ಕೆಲಸದ ಹೆಚ್ಚು ಭಾರವನ್ನು ಸಾಯಣಾಚಾರ್ಯರೇ ವಹಿಸಿರಬೇಕು. ಆದರೆ ಮಾಧವಾಚಾರ್ಯರು ವಿದ್ವಾಂಸರೂ ಲೌಕಿಕರೂ ಆಗಿದ್ದು ಜನರ ಪರಿಪಕ್ವನಾದ ಅನುಭವವೂ ವಿಸ್ತಾರವಾದ ವಿಸ್ತೃತ್ತೂ ಹತ್ತುವಂಥ ಗ್ರಂಥದಪೂರ್ಣಾಧಾರದ ಕೆಲವು ಸೂಚನೆಗಳನ್ನು ಕೊಟ್ಟು ತಮ್ಮ ಸಹೋದರರ ಕೆಲಸವನ್ನು ಪರೀಕ್ಷಿಸುವಷ್ಟು ಯೋಗ್ಯರಾಗಿದ್ದುದರಿಂದ ಅವರಭಾಗದ ಕೆಲಸವು ಬಹಳ ಘನವಾದದ್ದಿರಬೇಕು. ಈ ವಿವರಣವು ವೇದಾರ್ಥಪ್ರಕಾಶ ಎಂದು ಕರೆಯಲ್ಪಟ್ಟಿತು. ಇದಕ್ಕಾಗಿ ಅಧಿಕತಾಳ್ಮೆಯುಳ್ಳ ಪರಿಶೋಧನೆಯು ದೀರ್ಘಕಾಲ ನಡೆದಿರುವದು. ವೇದಾರ್ಥ ಪ್ರಕಾಶದ ಅನೇಕ ಭಾಗಗಳ ಪೀಠಿಕಾಶ್ಲೋಕಗಳಿಂದ ಈ ಗ್ರಂಥವು ಬುಕ್ಕರಾಯನ ಕೋರಿಕೆಯಂತೆ ರಚಿಸಲ್ಪಟ್ಟದ್ದಾಗಿಯೂ ಪೂರ್ವ ಮತ್ತು ಉತ್ತರವಿಮಾಂಸಗಳ ಭಾಷ್ಯವನ್ನು ಮಾಡಿದನಂತರ ಬರೆದದಾಗಿಯೂ ತಿಳಿಯಬರುವದು. ಈ ಕೆಲಸವು

ತೆಂಗಿನಮರ.

ವಿಷಯ.	ಬೋಧನಕ್ರಮ.
	ಉಪಾಧ್ಯಾಯನು ಒಂದು ತೆಂಗಿನಕಾಯನ್ನು ತಂದು, ಅದನ್ನು ಬಾಲಕರಿಗೆ ತೋರಿಸಿ, ಅದರ ಹೆಸರನ್ನು ಪ್ರಶ್ನೆಮೂಲಕ ಹೇಳಿಸಬೇಕು.
1 ದೊರೆಯುವೆಸ್ಥಳ.	ಈ ಸ್ಥಳಗಳನ್ನು ಭೂಪಠದಲ್ಲಿ ತೋರಿಸಿ, ಕಾಡಿನಲ್ಲಿ ತಾನಾಗಿ ಬೆಳೆಯುವ ತೆಂಗಿನ ಕಾಯಿಗಳು ಮನುಷ್ಯಕೃತವಾದ ತೋಟಗಳಲ್ಲಿ ಬೆಳೆಯುವ ಕಾಯಿಗಳಷ್ಟು ಶ್ರೇಷ್ಠವಾದುದಲ್ಲವೆಂಬುದನ್ನು ತಿಳಿಸಬೇಕು.
ಒಷೀನಿಯಾ ಖಂಡದ ಪೂರ್ವಭಾಗವಾದ ಪಾಲಿನೀಷಿಯಾ ದ್ವೀಪಗಳ ಕಾಡುಗಳಲ್ಲಿ ಈ ಮರಗಳು ಯಥೇಚ್ಛವಾಗಿ ಬೆಳೆಯುತ್ತವೆ ಸಿಂಹಳ, ಸುಮಾತ್ರಾ ಮತ್ತು ಜಾವಾದ್ವೀಪಗಳಲ್ಲಿ ತೆಂಗಿನ ವ್ಯವಸಾಯ ವಹಾಡುತ್ತಾರೆ ನಮ್ಮ ಇಂಡಿಯಾ ದೇಶದ ಮಲಬಾರ್‌ದಡದಲ್ಲೂ ಮೈಸೂರು ಸಂಸ್ಥಾನದ ತುಮಕೂರು ಡಿಸ್ಟ್ರಿಕ್ಟ್‌ನಲ್ಲೂ ವಿಶೇಷವಾಗಿ ಬೆಳೆಯುತ್ತವೆ	

ಈಗ 1897 ನೇ ಇಸವಿ ಡಿಶಂಬರ್ 1 ನೇ ತಾರೀಖು ಲಾಗಾಯಿತು 98 ನೇ ನವಂಬರ್ 30 ಕ್ಕೆ 365 ದಿವಸಗಳು.

ಈ ವರ್ಷದ ಮೊದಲು ದಿನ ಬುಧವಾರವಾದ್ದರಿಂದ ಈ ವರ್ಷದಲ್ಲಿ ಬುಧವಾರದಿಂದ ಮೊದಲಾಗುವ ವಾರಗಳ ಸಂಖ್ಯೆ $= \frac{365}{7} = 52 + \frac{1}{7}$ ಅಂದರೆ 365 ನೇ ದಿವಸವೇ 53ನೇ ವಾರದ ಮೊದಲುದಿನವಾದ್ದರಿಂದ ಅದು ಬುಧವಾರ.

[ನೋಟ್ 2]

∴ 1898 ನೇ ಡಿಶಂಬರ್ 1 ನೇ ತಾರೀಖು ಗುರುವಾರವಾಗುತ್ತದೆ.

VIII. ಇವನು ತೆಗೆದುಕೊಳ್ಳುವ 100 ಮಣಗಳು ಸಾಚಾ 105 ಮಣಗಳಿಗೆ ಸಮ.

... . 1 .. $\frac{105}{100} = \frac{21}{20}$ ..

,, ... 6 .. $\frac{21}{20} \times \frac{6}{1} = \frac{63}{10}$ ...

ಮತ್ತು ಇವನು ಮಾರುವ 7 ಮಣಗಳು ಸಾಚಾ $\frac{63}{10}$ ಮಣಗಳಿಗೆ ಸಮ.

∴ ... ... 1 .. $\frac{63}{10} \times \frac{1}{7} = \frac{9}{10}$ ಮಣಕ್ಕೆ ಸಮ

ರರು ಮಲಯಜಾತಿಯವರು ಕದಿಯುವದು ಈ ದ್ವೀಪದವರ ಸ್ವಭಾವವಾದುದರಿಂದ ಈ ಕಾವಲುಗಾರರು ಆಯುಧಪಾಣಿಗಳಾಗಿರುವರು.

ಯಾತಕ್ಕೆ? ಕಳ್ಳರಿಗೂ ಕಾಡು ಮೃಗಗಳಿಗೂ ಭಿಸ್ಪದವಿಲ್ಲದಂತೆ. ಮಲಯದ್ವೀಪದವರು ಸಿಂಹಳದ್ವೀಪದವರನ್ನು ಬಿಟ್ಟು ಅನ್ಯದೇಶದವರನ್ನು ಕಾವಲಿಡುವದರಿಂದ, ಸಿಂಹಳದವರನ್ನು ಎಷ್ಟುಮಟ್ಟಿಗೆ ನಂಬಬಹುದು.

ಇಂತಹ ತೋಟನೊಳಕ್ಕೆ ಹೋದರೆ ದಟ್ಟಿಯನ್ನು ಸುತ್ತಿಕೊಂಡು ದೊಡ್ಡಬಂದೂಕವನ್ನು ಹಿಡಿದಿರುವ ಮತ್ತೊಬ್ಬನನ್ನು ಕಾಣಬಹುದು ಅಲ್ಲದೆ ಹರತವಾದ ಚೂರಿಗಳನ್ನೂ ತೆಂಗಿನ ಕಟಗಳನ್ನೂ ನಡುವಿನಲ್ಲಿ ನೇತುಹಾಕಿಕೊಂಡಿರುವ ಹುಡುಗರ ನೇಕರನ್ನು ನೋಡಬಹುದು. ಮರಗಳಮೇಲೆ ಹತ್ತಿ, ಮರವನ್ನು ಕೊರೆದು ಸುಳಿಗಳನ್ನು ತಿನ್ನುವದುಂಬಿಗಳನ್ನು ಕೊಂದು ಅವುಗಳ ಮೊಟ್ಟೆಗಳನ್ನು ಈಚೆಗೆ ತೆಗೆದ.ಹಾಕುವದೇ ಈಹುಡುಗರಕೆಲಸ

ಮತ್ತೆ ಕೆಲವರು ರೋಗತಗಲಿದ ಮರಗಳ ಕ್ಷೇಮಚಿಂತನೆಯಲ್ಲಿ ನಿಯಮಿತರಾಗಿರುತ್ತಾರೆ. ಒಂದುವಿಧವಾದ ಕೊಡಲಿಯಿಂದ ಮರದ ಬುಡದಲ್ಲಿರುವ ಶತ್ರೆಗಳನ್ನು ತೆಗೆದುಹಾಕಿ ರೋಗಕ್ಕೆ ಕಾರಣವಾದ ಹುಳುಗಳನ್ನು ತೆಗೆದುಹಾಕುವದು ಇವರ ಕೆಲಸ ಈ ಹುಳುಗಳು ಬಿಳ್ಳಗೆ ಸುಮಾರು ೪ ಅಂಗುಲ ಉದ್ದವಿರುತ್ತವೆ ಇದರ ತಲೆಮಾತ್ರ ಕಪ್ಪು. ಈ ಹುಳುಗಳನ್ನು ಕೊಂದು ಅವುಗಳಲ್ಲಿದ್ದ ರಂಧ್ರಗಳನ್ನು ಮಣ್ಣಿನಿಂದ ಮುಚ್ಚಿದಮೇಲೆ ಕೆಲವು ದಿವಸಗಳಲ್ಲಿ ಮರವು ಉಜ್ಜೀವಿಸುವದು.

ಈ ಹುಳುವು ಎಷ್ಟು ಉದ್ದವಿದೆಯೆಂಬುವದನ್ನು ಕಪ್ಪುಹಲಿಗೆಯ ಮೇಲೆ ಚಿತ್ರಮೂಲಕ ಬರೆದು ತೋರಿಸಬೇಕು

ರಾತ್ರಿಕಾಲದಲ್ಲಿ ತೋಟದ ಹೊರಗೆ ದೊಡ್ಡದಾಗಿ ಉರಿಹಾಕಿರುತ್ತಾರೆ. ತೋಟಗಳನ್ನು ಹಾಳುಮಾಡುವ ಮುಳ್ಳುಹಂದಿಗಳನ್ನು ಬಲೆಗಳಿಂದ ಹಿಡಿಯುತ್ತಾರೆ.

ಯಾತಕ್ಕೆ ? ತೆಂಗಿನಮರಗಳನ್ನು ಕೆತ್ತಿಹಾಕುವ ಹಂದಿಗಳನ್ನೂ ಸಸಿಗಳನ್ನು ತಿಳಿದು ಭೀರುಸಹಿತ

2 ಮರದ ಆಕಾರವುಂತಾದದ್ದು.

(a) ಈ ಮರವು ೬೦ ಮೊದಲ್ಗೊಂಡು ೯೦ ಅಡಿ ಉದ್ದವಿರುತ್ತದೆ. ಇದು ಸಾಮಾನ್ಯವಾಗಿ ಸಮುದ್ರದ ದಡದಲ್ಲಯೇ ವಿಶೇಷವಾಗಿ ಬೆಳೆಯುತ್ತದೆ. ಕೆಲವುಕಾಲಗಳಲ್ಲಿ ಸಮುದ್ರದ ಅಲೆಗಳು ಇದರ ಬೇರುಗಳಿಗೆ ಬಡಿಯುವದುಂಟು.

(b) ಈ ಮರವು ಬುಡದಿಂದ ತುದಿಯವರಿವಿಗೂ ಕವಲುಗಳಿಲ್ಲದೆ ನೇರವಾಗಿರುತ್ತದೆ ಹೊಸಹೊಸದಾಗಿ ಸುಳಿಗಳು ಹೊರಟಹಾಗೆಲ್ಲಾ ಹಳೇವೊಟ್ಟೆಗಳು ಉದುರುತ್ತವೆ. ಹೀಗೆ ಉದುರುವದರಿಂದ ಮರದ ಸುತ್ತಲೂ ಅಲ್ಲಲ್ಲಿ ದುಂಡಗೆ ಕಪ್ಪುಗುರುತುಗಳಾಗುವವು. ಇಂತಹ ಗುರುತು ೬ ತಿಂಗಳಿಗೊಂದಾಗುವದರಿಂದ ಮರದ ವಯಸ್ಸನ್ನು ಸುಲಭವಾಗಿ ಗೊತ್ತುಮಾಡಬಹುದು.

ಇದರ ಚಿತ್ರವನ್ನು ಕಪ್ಪು ಹಲಿಗೆಯ ಮೇಲೆ ಬರೆದು ತೋರಿಸಬೇಕು.

(c) ಬೆಳೆಯುತ ಬೆಳೆಯುತ ಹಳದಾದ ವೊಟ್ಟೆಗಳು ಉದುರಿ ತುದಿಯಲ್ಲಿವೊತ್ರ ಸುಮಾರು ೧೪ ವೊಟ್ಟೆಗಳು ಛತ್ರಿಯಂತೆ ಸುತ್ತಲೂ ಕೆದರಿಕೊಂಡಿರುತ್ತವೆ.

(d) ಹೂವು ಬಿಳ್ಪಗೆ ಗೊಂಚಲುಗೊಂಚಲಾಗಿರುತ್ತದೆ ಇಂತಹ ಗೊಂಚಲು ಸುಮಾರು ಒಂದೂವರೆ ತಿಂಗಳಿಗೆ ಒಂದರಂತೆ ಬಿಡುತ್ತದೆ.

(e) ಕಾಯಿ ವೊಟ್ಟೆಗಳ ಕೆಳಗೆ ಕಾಯಿನ ಗೊನೆ ಬಿಡುತ್ತದ ಪ್ರತಿಯೊಂದು ಕಾಯಿಯೂ ಅದರ ಮೇಲಿರುವ ಜುಂಗಿನ ವೊಟ್ಟೆಸಹಿತವಾಗಿ ಸುಮಾರು ೬೦ಪೌಂಡುಗಳತೂಕವಿರುತ್ತದೆ

ಒಳಗಿನ ಕಾಯಿ ಸುಮಾರು ೨ ಪೌಂಡುತೂಕವಿರುವದರಿಂದ ಕಾಯಿಯ ಮೇಲೆ ವೊಟ್ಟೆ ಬಹಳವಿದೆಯೆಂಬುದನ್ನು ಸೂಚಿಸಬೇಕು.

3 ತೋಟವಿರತಕ್ಕ ತರಹ.

ಇಂಡಿಯಾಕ್ಕೆ ಆಗ್ನೇಯದಲ್ಲಿರುವ ಸಿಂಹಳ ದ್ವೀಪದಲ್ಲಿ ತೆಂಗಿನ ತೋಟಗಳು ವಿಶೇಷವಾಗಿವೆ ಇಂತಾ ತೋಟವು ಸುತ್ತಲೂ ಎತ್ತರವಾದ ಬೇಲಿಯಿರುವದಲ್ಲದೆ ಒಂದು ಮೂಲೆಯಲ್ಲಿ ಅಟ್ಟಣೆ ಯಿರುವದು. ಈ ಅಟ್ಟಣೆಯ ಮೇಲೆ ಯಾವಾಗಲೂ ಒಬ್ಬ ಕಾವಲುಗಾರನಿರುತ್ತಾನೆ. ಕಾವಲುಗಾ

ಭೂಪಟದಲ್ಲಿ ತೋರಿಸು. ಈ ದೇಶದಲ್ಲಿರುವ ತೋಟಗಳನ್ನು ನಿದರ್ಶನವಾಗಿ ಬೇಕು.

ನಿಯಮಿಸಲ್ಪಟ್ಟ ಹೊಸ ಉಪಾಧ್ಯಾಯರುಗಳ ಚಾತುರ್ಯದಿಂದ ಕ್ಷಿಪ್ರದಲ್ಲಿಯೇ ಮೊದಲಿನ ಸ್ಥಿತಿಗಿಂತಲೂ ಅಭಿವೃದ್ಧಿಹೊಂದಿತೆಂತಲೂ ಇದಕ್ಕೆ ಸಾಕ್ಷಿಯಾಗಿ ಕಳೆದ ಏಪ್ರೀಲ್ ತಿಂಗಳಲ್ಲಿ ಮೆ॥ ಭಾಭಾಸಾಹೇಬರವರು ಈ ಸ್ಕೂಲಿಗೆ ದಯಮಾಡಿಸಿ ಒಳ್ಳೇ ಅಭಿವೃದ್ಧಿಸ್ಥಿತಿಯಲ್ಲದೆಯೆಂದು ಬರೆದಿದ್ದಾರೆಂತಲೂ ಹಾಲೀ ೧೩೦ ಹುಡುಗಿಯರಿಂದ ಬಾಲಚಂದ್ರನೋಪಾದಿಯಲ್ಲಿ ಅಭಿವೃದ್ಧಿಯನ್ನು ಹೊಂದುತ್ತಿರುವದೆಂದೂ ಹಿಂದಿನ ವರ್ಷ ಈ ಸ್ಕೂಲ್ ಹಾ। ವಾ। ಮು॥ ಟಿ. ಗುರುಬಸ್ಸಪ್ಪಬಸವಯ್ಯನವರಿಂದ ತಯಾರ್ಮಾಡಲ್ಪಟ್ಟ ರೋವರ್‌ಸೆಕಂಡರೀ ಪರೀಕ್ಷೆಗೆ ಹೋಗಿದ್ದ ಮೂರುಮಂದಿಯೂ ತೇರ್ಗಡೆಹೊಂದಿದರೆಂದೂ ಆ ವರ್ಷ ಈ ಡಿ। ನಲ್ಲಿ ಮತ್ತೆ ಯಾವ ಬಾಲಿಕೆಯರನ್ನು ಯಾವ ಸ್ಕೂಲಿನಿಂದಲೂ ಕಳುಹಿಸಿರಲಿಲ್ಲವೆಂದೂ ಈ ವರ್ಷದ ರಿಪೋರ್ಟಿನಲ್ಲಿ ಸ್ಕೂಲಿನ ಸ್ಥಿತಿಯು ಬಹಳ ಸಮರ್ಪಕವಾಗಿದೆಯೆಂದು ತಿಳಿಸಿದರು.

ಅನಂತರ ಅಗ್ರಾಸನಾಧಿಪತಿಗಳು ಎದ್ದು ಈ ಸಂಘದವರು ಸ್ತ್ರೀವಿದ್ಯಾಭ್ಯಾಸಕ್ಕಾಗಿ ಬಹಳ ಶ್ರಮವನ್ನು ವಹಿಸುತ್ತಾರೆಂದೂ ತಿಳಿಸಿದರು. ನಂತರ ಹೈಸ್ಕೂಲ್ ಹೆ। ವಾ। ರವರು ಸ್ತ್ರೀವಿದ್ಯಾಭ್ಯಾಸದಿಂದಾಗುವ ಪ್ರಯೋಜನಗಳನ್ನು ತಿಳಿಸಿದರು. ನಂತರ ತೇರ್ಗಡೆಹೊಂದಿದ ಬಾಲಿಕೆಯರಿಗೆ ಮೆ॥ ಭಾಭಾಸಾಹೇಬರವರಿಂದ ಕಳುಹಿಸಲ್ಪಟ್ಟಿದ್ದ ಸರ್ಟಿಫಿಕೇಟುಗಳೂ ಪುಸ್ತಕಗಳೂ ಅವುಗಳೊಂದಿಗೆ ರಾಗವಾಲು ಹಿತ್ತಾಳೆ ದೊಡ್ಡದೊಡ್ಡ ಗುಂಡಿಗಳೂ ಕೊಡಲ್ಪಟ್ಟವು. ತರುವಾಯ ಉಳಿದ ಪ್ರತಿಯೊಬ್ಬ ಬಾಲಿಕೆಯರಿಗೂ ತಾರತಮ್ಯಾನುಸಾರ ಪಾತ್ರೆಗಳೂ, ಸೀರೆಗಳೂ, ಪೆಟ್ಟಿಗೆಗಳು ಮುಂತಾದವುಗಳು ಕೊಡಲ್ಪಟ್ಟವು. ಬಳಿಕ ಸಭಾಸದರೆಲ್ಲರೂ ಕರತಾಡನವಂ ಮಾಡಿ ಸಂತೋಷಾಂಬುಧಿಯಲ್ಲಿ ಅದ್ದಲ್ಪಟ್ಟು ಗೃಹಂಗಳಿಗೆ ತೆರಳಿದರು.

ಗ್ರ—ಲ್—ಗ್ರ.

ಡಿ. ಸಿ. ಯಲ್ಲಮ್ಮ,
ಅ। ಉಪಾಧ್ಯಾಯಿನಿ.

ಆಲ್‌ಫ್ರೆಡ್.

(ಅಥೆಲ್ನೆಯಲ್ಲಿ)

(೪೪ ನೇ ಪುಟದ ಶೇಷ)

ಗುಬ್ಬಿ:—ಗ್ಯಾಂಡಲಿಕ್ ಇತರವಿಧವಾದ ಯಾವಕಾರ್ಯಕ್ಕೂ ಅವನಿಗೆ ಯೋಗ್ಯತೆಯಿಲ್ಲದ್ದರಿಂದಲೇ, ಅವನು ಅಗಸ್ತ್ಯಶ್ರೀಮಂತನೆಂದು ಊಹಿಸಬಹುದಾಗಿತ್ತು ಕಿ

ವಾಗಿ ಕೇಳುವ ಆಸೆಗಳನ್ನೂ ಅಟ್ಟುವದಕ್ಕೆ.

4. ಉಪಯೋಗಗಳು.

ಸೃಷ್ಟಿಕರ್ತನಾದ ಭಗವಂತನು, ಉಷ್ಣವಲಯದಲ್ಲಿ ವಾಸಿಸುವ ಜನಗಳ ಉಪಯೋಗಕ್ಕಾಗಿಯೇ ಈ ಮರಗಳನ್ನು ನಿರ್ಮಿಸಿದನೆ. ಸಿಂಹಳದ್ವೀಪವಾಸಿಗಳು, ತೆಂಗಿನಮರವಿದ್ದರೆ ಸರ್ವವೂ ಸಿದ್ಧಂತ ಭಾವಿಸುತ್ತಾರೆ.

ತೆಂಗಿನತೊಲೆಗಳಿಂದ ಮನೆಗಳನ್ನೂ ತೆಪ್ಪಗಳನ್ನೂ ಕಟ್ಟುತ್ತಾರೆ.

ಇದರ ಗರಿಗಳಿಂದ ಛತ್ರಿಗಳನ್ನೂ ಚಾಪೆಗಳನ್ನೂ ಮಾಡುವದಲ್ಲದೆ ಮನೆಗಳವೇಲೂ ಹೊದ್ದಿಸುತ್ತಾರೆ.

ಇದರ ಕಾಯಿಯನ್ನು ತಿನ್ನುವದಲ್ಲದೆ, ಪುಷ್ಟಿಕರವಾದ ಇದರ ಹಾಲನ್ನು ಕುಡಿಯುತ್ತಾರೆ.

ಇದರ ಯಣ್ಣೆಯಿಂದ ಪೋಣದಬತ್ತಿಗಳನ್ನು ಮಾಡುವದಲ್ಲದೆ ಚರ್ಮವನ್ನು ದನಗಳಿಗೂ ಕೋಳಿಗೂ ಹಾಕುವದು ಅಥವಾ ಕೊಬ್ಬರಕ್ಕೆ ಹಾಕುವದುಂಟು.

ಇದರ ಚಿಪ್ಪುಗಳಿಂದ ಕುಡಿಯುವ ಬಟ್ಟಲು ಸೌಟು ಮುಂತಾದವುಗಳನ್ನು ಮಾಡುತ್ತಾರೆ.

ಶಿವಮೊಗ್ಗೆಯಲ್ಲಿ ಮಿಸ್ಸಿಯಮ್ಮನವರ ಹೊಸಪೇಟೆ ಬಾಲಿಕಾಪಾಠಶಾಲೆ

ಈ ಪಾಠಶಾಲೆಯು ವಿದ್ಯಾರ್ಥಿನಿಯರಿಗೆ ೧೮೯೪ನೇ ಪೆಬ್ರವರಿ ತಾ॥ ೪ನೇ ಸೋಮವಾರ ಪ್ರಾತಃಕಾಲ ೯ ಘಂಟೆಯಲ್ಲಿ ಹೊಸಪೇಟೆ ಬಾಲಕರಪಾಠಶಾಲೆಯಲ್ಲಿ ಸಹವಾಸನಗಳು ಕೊಡಲ್ಪಟ್ಟವು. ಅಮಲ್ದಾರರವರಾದ ಮೆ॥ ಚನ್ನಪ್ಪಾವ್ಯಪಿಳ್ಳೆಯವರು ಅಗ್ರಾಸನವಂ ಸ್ವೀಕರಿಸಿದ್ದರು. ಸ್ಕೂಲ್ ಹೆ॥ಮಾ॥ರವರು ಮೊದಲೇ ಏರ್ಪಡಿಸಿದ್ದ ಮೇರೆಗೆ ದೇವತಾಸ್ತುತಿ ಮಹಾರಾಜರವರ ಮತ್ತು ಇಂಡಿಯಾಚಕ್ರವರ್ತಿನಿಯವರ ಶ್ರೇಯಃಪ್ರಾರ್ಥನೆ ಮೊದಲಾದವುಗಳು ಬಾಲಕಿಯವರಿಂದ ಹಾಡಲ್ಪಟ್ಟವು. ಪುರುವಾಯ ರೆವರೆಂಡ್ ರೀಸ್‌ಸಾಹೇಬರವರು ಸ್ಕೂಲ್‌ರಿಪೋರ್ಟನ್ನು ಓದಿದರು.

ಅದರ ಮುಖ್ಯಾಂಶವೇನೆಂದರೆ, ಈ ಸ್ಕೂಲನ್ನು ಸ್ಥಾಪಿಸಿ ಈಗ್ಗೆ ೩ ಸಂವರುಷಗಳಾವೆಂತಲೂ ಆಗ್ಗೆ ಈ ಗ್ರಾಮದಲ್ಲಿ ಮತ್ತೆ ಯಾವ ಬಾಲಕಿಯರ ಪಾಠಶಾಲೆಯೂ ಇರಲಿಲ್ಲವೆಂತಲೂ ಆದರೆ ಈಗ್ಗೆ ೪ ವರುಷಗಳ ಕೆಳಗೆ ಈ ಪಾಠಶಾಲೆಯು ಹೆಸರು ಅಣಗಿಹೋಗುವ ಮಟ್ಟಿಗೂ ಸಂಸ್ಥೆಯು ಪಿಸೆ ಹೆಲವು ಕಾರಣಗಳಿಂದ ಬಂದಿತ್ತೆಂತಲೂ ಆದರೆ ಅಲ್ಲಿ

ಪ್ಲಾಸಿಕದನ

ಕ್ರಿ. ಶ. ೧೭೫೭ನೆ ಇಸವಿ ಜೂನ್ ತಿಂಗಳು ಪ್ರಾತಃಕಾಲ ನಡೆದ ಪ್ರಸಿದ್ಧವಾದ ಪ್ಲಾಸಿಕದನದಲ್ಲಿ ಇಂಗ್ಲಿಷ್‌ರ ಸೇನಾಧಿಪತಿಯಾದ ಕ್ಲೈವನು ಮೊಗಲರ ಪ್ರತಿನಿಧಿಯಾಗಿ ಬಂಗಾಳ ಪ್ರಾಂತ್ಯವನ್ನು ಆಳುತ್ತಲಿದ್ದ ಉನ್ಮತ್ತನಾದ ಸಿರಾಜದ್ದೌಲನನ್ನು ಗೆದ್ದು ಇಂಗ್ಲಿಷ್‌ರ ಆಧಿಪತ್ಯವನ್ನು ಬಂಗಾಳದಲ್ಲಿ ಸ್ಥಾಪಿಸಿದನೆಂದು ಹಿಂದೂದೇಶದ ಚರಿತ್ರೆಯನ್ನು ಓದಿರುವವರೆಲ್ಲರೂ ತಿಳಿದಿರುವರು. ಆದರೆ ಕ್ಲೈವನು ಈ ಕದನವನ್ನು ಗೆಲ್ಲುವುದಕ್ಕೆ ಮಾಡಿದ ಸಾಹಸವೂ, ಧೈರ್ಯವೂ ಸ್ತೋತ್ರಾರ್ಹವಾಗಿದೆ.

ನಡುಬೇಸಿಗೆಯಲ್ಲಿ ಇಕ್ಕಟ್ಟಾದ ಕತ್ತಲಗವಿಗೆ ಸಣ್ಣನಿನ ತುದಿಯಿಂದ ತುರಕಲ್ಲಷ್ಟು ಸ್ಥಳಸ್ವಲ್ಪವೂ ಇಲ್ಲದೆ ಗುದ್ದಾಡಿ, ಗಾಳಿಯಿಲ್ಲದೆ ಆ ಬೇಗೆಯಲ್ಲಿ ಬೆಂದು, ನೀರಿಲ್ಲದೆ ಬಾಯಾರಿ, ಆಯಾಸಗೊಂಡು ಒಂದು ರಾತ್ರಿಯಲ್ಲಿಯೆ ಮೃತ್ಯುವಿನ ಬಾಯಿಗೆ ತುತ್ತಾದ ನೂರನಲ್ವತ್ತಾರಹುಂದಿಯಲ್ಲಿ ಕಳೆದುಳಿದು ಜೀವಶ್ರವಗಳಂತೆ ತೆವಳಿಕೊಂಡು ಬಂದ ಇಪ್ಪತ್ತಮೂರ ಮಂದಿಯನ್ನು ಧನಪಿಶಾಚದಂತೆ 'ಹಣವೆಲ್ಲಿ, ತೋರಿಸಿ ಎಲ್ಲಿ ಹೂಳಿಟ್ಟಿರುವರು, ತೋರಿಸಿ, ತೋರಿಸಿದಲ್ಲದೆ ಬಿಡೆನು' ಎಂದು ಬಾರಿಬಾರಿಗೂ ಪೀಡಿಸಿದ ಆ ಕ್ರೂರ, ದಯಾಶೂನ್ಯ, ಪಾಪಿ, ಸಿರಾಜದ್ದೌಲನನ್ನು ಹಲವು ಉಪಾಯದಿಂದ ಆದರೂ ನಿಗ್ರಹಿಸಬೇಕೆಂದು ಕಂಕಣಬದ್ಧರಾದ ಇಂಗ್ಲಿಷ್‌ರ ಮತಾನುಸಾರ ಕ್ಲೈವನು ಆದಿಯಲ್ಲಿ ಸಿರಾಜದ್ದೌಲನೊಡನೆ ಸ್ನೇಹವನ್ನು ಬೆಳೆಯಿಸಿ ಅವನ ಪ್ರಜೆಗಳ ಇಂಗಿತವನ್ನು ಅರಿದು, ಅವನ ದರ್ಬಾರಿನ ಪ್ರಧಾನಪುರುಷರೊಡನೆ ಸಂಧಿಮಾಡಿ ದುರಾಶಾಪರನಾಗಿ ಪ್ರತಿಭಟಿಸಲುದ್ಯುಕ್ತನಾದ ಉಮಿಚಂದನನ್ನು ಮೋಸಗೊಳಿಸಿ, ಸಮಯವರಿತು ಯುದ್ಧಸನ್ನದ್ಧನಾಗಿ ನವಾಬನೊಡನೆ ಮಾಡಿದ ಸಾಹಸವು (ಮೋಸವುಮಾತ್ರ ಶೋಚನೀಯವಾದುದು) ಶ್ಲಾಘ್ಯವೇಸರಿ.

ಯುದ್ಧಕ್ಕೆ ಸಿದ್ಧನಾದ ಕ್ಲೈವನು ೯೦೦ ಮಂದಿ ಸೊಲ್ಜರು (ಇಂಗ್ಲಿಷ್‌ರು) ೨೧೦೦ ಮಂದಿ ಶಿಪಾಯಿಗಳು (ಹಿಂದೂಜನರು) ಸಣ್ಣ ಫಿರಂಗಿಗಳಿಂದ ಒಡಗೂಡಿ ಪ್ಲಾಸಿಯು ಮೈದಾನದ ಉನ್ನತಪ್ರದೇಶದಲ್ಲಿ ಅವಶ್ಯಕವಾದ ಅನುಕೂಲಗಳನ್ನು ಸಿದ್ಧಪಡಿಸಿಕೊಂಡಿದ್ದನು. ಸಿರಾಜದ್ದೌಲನು ಅಪರಿಮಿತವಾದ ತನ್ನ ಸೇನೆಯೊಡನೆ ಇಂಗ್ಲಿಷರ ಸೇನೆಯನ್ನುತ್ತಲೂ ಠಾಣವನ್ನು ಹಾಕಿದನು. ಇವನ ಸೇನೆಯಲ್ಲಿ ೫೫೦೦೦

ಆಲ್‌ಫ್ರೆಡ್:—[ಸ್ವಲ್ಪ ಮುಂದಕ್ಕೆ ಬಂದು] ಈ ಶುಭವರ್ತಮಾನಪ್ರಾಪ್ತಿಗಾಗಿ, ಭಗವಂತನನ್ನು ವಂದಿಸೋಣ. ಗತಾಂಶನಾಗಿದ್ದ ನನಗೆ ಪುನಃ ಆಶೆಯುಂಟಾಗಿದೆ. ಎಲೈ ಮಿತ್ರನೆ! ಪುನಃ ಆಯುಧಪಾಣಿಯಾಗಿ, ಶೂರರಾದ ನಮ್ಮ ಇಂಗ್ಲಿಷ್‌ಜನಗಳಲ್ಲಗ್ರೇಸರನಾಗಿ ಶತ್ರುಗಳನ್ನು ಜಯಿಸುವೆನೆ? ಇದುವರಿಗೆ ತಲೆ ಬಗ್ಗಿಸಿದ್ದ ನಮ್ಮ ಮಿತ್ರರೆಲ್ಲಾ ಇನ್ನು ತಲೆ ಎತ್ತಬೇಕು.

ಎಲ್ಲಾ:—ಏಹುದು: ತವ್ಮೊಡೆಯನಂತೆ ಬೆಟ್ಟಗುಟ್ಟಗಳಲ್ಲಿ ಅಲೆಯುತ್ತಿರುವ ತಮ್ಮ ಮಿತ್ರರನ್ನೇಕರಿರುವರು. ತಾವು ಪುನಃ ಯುದ್ಧಸನ್ನದ್ಧರಾದದ್ದನ್ನು ಕೇಳಿದ ಕೂಡಲೆ ಅವರೆಲ್ಲರೂ ತಮ್ಮ ಸವಿಾಪವನ್ನು ಸೇರುವರು.

ಆಲ್‌ಫ್ರೆಡ್:—ಅವರನ್ನು ಕಾಣುವವರಿಗೂ ನನಗೆ ಚಿತ್ತಸ್ವಾಸ್ಥ್ಯವಿಲ್ಲ. ನಮ್ಮವರಿಗೆ ಶತ್ರುಗಳ ವಿಷಯದಲ್ಲಿರುವ ವಿಶ್ವಾಸರವಂ ತೀರಿಸಿಕೊಳ್ಳಬೇಕು.

ಗುಬ್ಬಾ ಮತ್ತು ಗ್ಯಾಂಡರ್ಲಿ:—[ಧೊರೆಯ ಕಾಲಿಗೆ ನಮಸ್ಕಾರಮಾಡಿ] ಎನ್ನೊಡೆಯನೆ!

ಗ್ಯಾಂಡರ್ಲಿ:—ಮಹಾಪ್ರಭುಗಳಾದ ತಾವು ನಮ್ಮನ್ನು ನಿರಾಯಾಸಮರಣಕ್ಕೆ ಗುರಿಮಾಡುವಿರೆಂದು ಅಪೇಕ್ಷಿಸುತ್ತೇವೆ ಸತ್ಯವಾಗಿ, ತಮ್ಮ ಪದವಿಯನ್ನು ನಾವರಿಯಲಿಲ್ಲ.

ಗುಬ್ಬಾ:—ಮಹಾಪ್ರಭುಗಳು ನನ್ನ ಪತ್ನಿಯ ಕಠಿನೋಕ್ತಿಗಳನ್ನು ಮನ್ನಿಸಬೇಕೆಂದು ಬೇಡುತ್ತೇನೆ. ಅವಳು ದುರಾಲೋಚನೆಯಿಂದಾಡಿದವಳಲ್ಲ. ನಿರಪರಾಧಿ.

ಆಲ್‌ಫ್ರೆಡ್:—ಸಾಯದೇ, ಕ್ಷಮಿಸುವದುಮಾತ್ರವಲ್ಲದೆ ಕೃತಜ್ಞನಾಗಿದ್ದೇನೆ. ಆಪತ್ಕಾಲದಲ್ಲಿ ನನ್ನನ್ನು ಕಾಪಾಡಿದ್ದೀರಿ; ಭಗವತ್ಕೃಪೆಯಿಂದ ಪುನಃ ನನಗೆ ರಾಜ್ಯಪ್ರಾಪ್ತವಾದರೆ, ಮೊದಲು ನಿಮಗೆ ಪ್ರತ್ಯುಪಕಾರ ಮಾಡುವೆನು. ನಿಮ್ಮ ರಕ್ಷಣೆಗಾಗಿಯೇ ಪ್ರಯಾಣಮಾಡುತ್ತೇನೆ. [ಎಂದು 'ಎಲ್ಲ'ನ ಕಡೆಗೆ ತಿರುಗಿ] ನನ್ನ ವಿಶ್ವಾಸಪಾತ್ರನೆ, ಹೊರಡು! ಹೊರಡು! ಆಯುಧಗಳನ್ನು ತೆಗೆದುಕೊ. ಮದಿಸಿರುವ ಡೇನರನ್ನು ಮತ್ತೊಂದಾವರ್ತಿ ಪ್ರತಿಭಟಿಸಬೇಕೆಂಬ ಕುತೂಹಲವು ನನ್ನನ್ನು ಬಹುಜಾಧಿಷುತ್ತದೆ ಈ ದೇಶಕ್ಕೆ, ಮದಿಸಿರುವ ಡೇನರ ಬಾಧೆಯನ್ನು ತಪ್ಪಿಸಿ ನಮ್ಮ ಜನಗಳಿಗೆ ನಿಮ್ಮದಿಯನ್ನು ಕಲ್ಪಿಸುವಪ್ರಯತ್ನವನ್ನು ನಾನೀದೇಶವೀರವವರಿಗೂ ಬಿಡುವದಿಲ್ಲ. ಈ ಅರ್ಥವನ್ನು ಭಗವತ್ಸಾಕ್ಷಿಯಾಗಿ, ಪ್ರತಿಜ್ಞೆಮಾಡಿರುತ್ತೇನೆ.

[ಎಂದು ಹೊರಟುಹೋಗುವರು.]

ಡುವದರಲ್ಲಿ ಅನುಮಾನವಿಲ್ಲ. ಈ ಸೈನ್ಯಕ್ಕೆ ಸಮೀಪದಲ್ಲಿಯೆ ನವಾಬನ ೩೮೦೦೦ ಮಂದಿ ಸೈನಿಕರೂ ಮಧ್ಯದಲ್ಲಿ ತೋಪುಗಳೊಡನೆ ಫ್ರೆಂಚರೂ ಅರ್ಧಚಂದ್ರಾಕಾರವಾಗಿ, ಕಂದಕದಿಂದ ಸುತ್ತಲ್ಪಟ್ಟ ರಕ್ಷಣಾರ್ಥವಾಗಿ ಹಾಕಿದ್ದ ಮಣ್ಣುರಾಸಿಯ ಹಿಂದುಗಡೆ ಒಂದು ಮೂವಿನತೋಪಿನಲ್ಲಿ ಇನ್ನೂ ಮಲಗಿದ್ದ ಇಂಗ್ಲಿಷರ ಸೈನ್ಯವನ್ನು ಆವರಿಸಿಕೊಂಡಿದ್ದರು. ಕ್ಲೈವನು ಹೀಗೆ ನೋಡುತ್ತ ನಿಂತಿದ್ದ ಹಾಗಯೇ ಫ್ರೆಂಚರು ತೋಪನ್ನುಹಾರಿಸಲು ಮೊದಲಗುಂಡಿಗೇನೆ ಕ್ಲೈವನ ಸೈನಿಕರಲ್ಲಿ ಇಬ್ಬರು ಮಡಿದರು. ಇಂಗ್ಲಿಷ್‌ರಸೇನೆಯು ಈ ಗುಂಡಿನಶಬ್ದಕ್ಕೆ ಥಟ್ಟನೆ ಎದ್ದು ಯುದ್ಧಸನ್ನದ್ಧರಾಗುವ ಕೊಲಾಹಲದಲ್ಲಿ ಮೇಲೆಮೇಲೆ ಫ್ರೆಂಚರು ಗುಂಡನ್ನು ಹಾರಿಸತೊಡಗಿದರು. ಒಡನೆಯೇ ಸಿದ್ಧವೂಡಿಕೊಂಡ ಇಂಗ್ಲಿಷರೂ ಪ್ರತಿಯಾಗಿ ಗುಂಡನ್ನು ಉಡಾಯಿಸುತ ಬಂದರು. ಅಪರಿಮಿತವಾದ ಸಿರಾಜನ ಸೈನ್ಯವು ಕ್ಲೈವನ ಮಿತವಾದ ಸೈನಿಕರನ್ನು ಅಗಾಧವಾದ ಭಾಗೀರಥಿಗೆ ತಳ್ಳಬೇಕೆಂದು ಮುಂದರಿಯುತಿದ್ದರು. ಆದರೆ ನದಿಗೂ ಸೇನೆಗೂ ಮಧ್ಯೆ ಮಣ್ಣಿನ ಬಲವಾದ ದಿಣ್ಣೆಯೂ, ಗುಂಡಿನ ಪೆಟ್ಟಿನಿಂದ ಸೇನೆಯು ಘಾಸಿಪಡದಂತೆ ಮೂವಿನತೋಪೂ ಇದ್ದುದರಿಂದ ಸೇನೆಯು ಪ್ರಮೋದಕ್ಕೆ ಈಡಾಗಿರಲಿಲ್ಲ. ಬರುತಬರುತ್ತಾ ಯುದ್ಧವು ಬಹು ಭಯಂಕರವಾಗುತಬಂತು. ಚತುರನಾದ ಕ್ಲೈವನು ತನ್ನ ಸೇನೆಯನ್ನು ಮೂವಿನತೋಪಿನಲ್ಲಿ ನಿಲ್ಲಿಸಿದುದರಿಂದ ಶತ್ರುಗಳು ಏಕಕಾಲದಲ್ಲಿ ಐವತ್ತುಮೂರು ತೋಪುಗಳನ್ನು ಮೇಲೆವೆ.ೀಲೆ ಉಡಾಯಿಸುತಿದ್ದರೂ ಕೆಂಡದಂತೆ ತೀಕ್ಷ್ಣವಾದ ಗುಂಡುಗಳು ಭರಭರನೆ ಧ್ವನಿಮಾಡಿಕೊಂಡು ಬಂದು ತಮ್ಮ ಶಕ್ತಿಯನ್ನೆಲ್ಲಾ ಮೂವಿನಮರದ ಕೊಂಬೆಗಳಮೇಲೆ ವ್ಯರ್ಥಮಾಡುತಿದ್ದವಲ್ಲದೆ ಜನರಿಗೆ ಘಾಸಿಪಡಿಸುವಸಾಮರ್ಥ್ಯವಿಲ್ಲದವುಗಳಾದವು. (ಸಶೇಷ;)

ಸೂಚನೆಗಳು ಮತ್ತು ಸಮಾಚಾರಗಳು

ಬೆಂಗಳೂರು ಹಿಂದೂಸ್ಥಾನಿ 'ಗರ್ಲ್ಸ್‌ಸ್ಕೂಲಿ'ನ ಖರ್ಚು ತಿಂಗಳು ಒಂದಕ್ಕೆ ರೂ. ೯೫—೯—೦

***

ಚೆನ್ನರಾಯಪಟ್ಟಣದ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನಲ್ಲಿ ಅ| ಹೂ ಮು॥ರಾ॥ ವೆಂಕಟರಾಮಯ್ಯನವರಿಗೆ ೫-೩-೬ ಸೆಕ್ಷನ್ ಆಗಿರುತ್ತೆ.

ಮುಂದಿ ಕಾಲಾಳುಗಳೂ, ಕ್ರೂರರಾದ ಯುದ್ಧಾಪೇಕ್ಷಿಗಳಾದ ಪಠಾಸರ ೧೫೦೦೦ ವಂದಿ ರಾಹುತರೂ (ಕುದುರೆಸವಾರರು) ಭಯಂಕರವಾದ ೪೫ ತೋಪುಗಳೂ ಇವು ಗಳಿಗೆ ಸಹಕಾರಿಯಾಗಿ ನಲ್ವತ್ತು ಐವತ್ತು ಮಂದಿ ಫ್ರೆಂಚರೂ, ತುಂಬಿದ್ದರು. ಇದ ರಮೇಲೆ ಮಿತ್ರನೆಂತೆ ಇದ್ದ ಮೀರ್‌ಜಾಫರನೂ ತನ್ನ ಸೇನೆಯೊಡನೆ ಕಾದಿದ್ದನು. ಕ್ಲೈವನು ಮಹತ್ತರವಾದ ಶತ್ರುಸೇನೆಯಮೇಲೆ ಬೀಳುವುದಕ್ಕೆ ಮುಂದೆ ತನ್ನ ಸೇನೆ ಯ ಅಧಿಕಾರಿಗಳನ್ನು ಕರೆದು 'ಈಗ ನಾವಿರತಕ್ಕ ಸ್ಥಿತಿಯಲ್ಲಿ ಅಸಹಾಯರಾಗಿ, ಪ್ರತಿ ಭಟಿಸುತಿರುವ ಸಿರಾಜುದ್ದೌಲನಮೇಲೆ ಯುದ್ಧಮಾಡುವುದು ಉಚಿತವೆ ? ಇಲ್ಲದೆ ಸಹಾ ಯದೊರೆಯುವವರೆಗೂ ಯುದ್ಧವಾಡದೆ ತಟಸ್ಥರಾಗಿರುವುದು ಅನುಕೂಲವೆ ? ಯೋ ಚಿಸಿರೆಂದು ಹೇಳಿ, ಕೊನೆಗೆ ತಾನೇ ಯುದ್ಧವಾಡುವುದು ಉಚಿತವಲ್ಲವೆಂದು ಹೇಳಿದ ವರ ಅಭಿಪ್ರಾಯವನ್ನು ಅಂಗೀಕರಿಸಿದನು. ಏರ್‌ಕೂಟನು ಮತ್ತೆ ಕೆಲವರು ಯುದ್ಧ ಮಾಡುವುದೇ ಉಚಿತವೆಂದು ಅಭಿಪ್ರಾಯಪಟ್ಟರು. ಯುದ್ಧವು ನಿಲ್ಲಿಸಬೇಕೆಂದೇ ನಿಶ್ಚ ಯವಾಯಿತು. ಸಭಿಕರೆಲ್ಲರೂ ಕಾಲೋಚಿತ ತಮ್ಮತಮ್ಮ ಕಾರ್ಯಗೌರವದಮೇಲೆ ಹೊ ರಟರು. ಕ್ಲೈವನಿಗೆ ಮಹಾಯೋಚನೆಯು ಸಂಭವಿಸಿತು. ಆಗ ತಾನೊಬ್ಬನೇ ಹತ್ತಿ ರದಲ್ಲಿಯೆ ಪ್ರವಹಿಸುತಲಿದ್ದ ಭಾಗೀರಥೀನದಿಯ ತೀರಕ್ಕೆ ಹೋಗಿ ದಡದಮೇಲೆ ಗುಂ ಪಾಗಿ ಬೆಳೆದಿದ್ದ ವೃಕ್ಷಗಳ ಕೆಳಗೆ ಕೂತು ಚಿಂತೆಯಲ್ಲಿ ಮಗ್ನನಾಗಿ ಸ್ವಲ್ಪಹೊತ್ತು ಇದ್ದು ಕೊನೆಗೆ ಯುದ್ಧವಾಡುವುದೆ ಸರಿಯೆಂದು ನಿಶ್ಚಯಿಸಿ ಹಿಂದಿರುಗಿ ಬಂದು ಸೇ ನಾಧಿಕಾರಿಗಳನ್ನು ಯುದ್ಧವಾಡಲಿಕ್ಕೆ ಸಿದ್ಧರಾಗುವಂತೆ ನಿಮ್ಮನಿಮ್ಮ ಜನಗಳಿಗೆ (ಪ ಟಾಲಂ-ಬೆಟಾಲಿಯನ್) ಆಜ್ಞಾಪಿಸಿರೆಂದನು.

ಕ್ಲೈವನು ರಾತ್ರೆಯಲ್ಲ ನಿದ್ದೆಇಲ್ಲದೆ ಕಾಲವನ್ನು ಕಳೆದು ಗುಡಿಸಲಿನಿಂದ ಎದ್ದುಬಂದು ಗುಡಿಸಲನ್ನು ಏರಿ ಸುತ್ತಲೂ ನೋಡಿದನು. ಬಲಗಡೆಯಲ್ಲಿ ಡೋ ಲಾಯಮಾನಸ್ಕನಾದ ಸ್ವಾಮಿದ್ರೋಹಿ ಮೀರ್‌ಜಾಫರನ ಸೈನ್ಯವು ಗೆದ್ದವರ ಪಕ್ಷ ವನ್ನು ವಹಿಸಿ ಕೊಳ್ಳೆಯನ್ನು ಹೊಡೆಯಲಿಕ್ಕೆ ಸಿದ್ಧವಾಗಿತ್ತು. ಕ್ಲೈವನು ಈ ಯುದ್ಧದಲ್ಲಿ ಸೋತಿದ್ದರೆ ಮೀರಜಾಫರನು ಅವನ ಕುದುರೆಗಳೂ ಇಂಗ್ಲೀಷರ ಪಾಳ ಯವನ್ನು ಕೊಳ್ಳೆಹೊಡೆದು ಜಯಶ್ರೀಯನ್ನು ಹೊಡೆಯುತಿದ್ದರೆಂಬುದರಲ್ಲಿ ಸಂದೇ ಹವೇ ಇಲ್ಲ ; ಒಂದುವೇಳೆ ಸಿರಾಜದ್ದೌಲನು ಸೋಲುವಪಕ್ಷದಲ್ಲಿ ಇದೇ ಮೀರಜಾಫ ರನ ಸೈನಿಕರು ಇಂಗ್ಲೀಷರ ಪಕ್ಷವನ್ನು ವಹಿಸಿ ನವಾಬನ ಪಾಳಯವನ್ನು ಲೂಟಿಮಾ

ಸಹ ಇಲ್ಲದೆ ಸೊರಗಿಸೊರಗಿ ತಂದೆತಾಯಿಗಳ ತೊಡೆಯಮೇಲೆ ಬೀಳುತಿದ್ದವು. ಹೆತ್ತಮಕ್ಕಳಿಗೆ ಅನ್ನವನ್ನು ಇಕ್ಕಲಾರವೆಂಬ ಸಂಕಟದಿಂದ ಕೆಲವರು ತಾವಾಗಿಯೆ ಸಾಯುತಿದ್ದರು. ತಂದೆತಾಯಿ ಸತ್ತಮಕ್ಕಳು ಮನೆಮನೆ ಬೀದಿಬೀದಿ ಅಲೆಯುತ್ತಾ, ಅಲೆಯುಲಿಕ್ಕೆಕೂಡ ಆಗದೆ ನಿಂತನಿಂತಲ್ಲಿಯೆ ಕೆಳಗೆಬಿದ್ದು ಕೊರಗಿ ಸಾಯುತಿದ್ದವು. ಜನರು ಅನ್ನಕ್ಕೆ ತಿರುಗುತಿದ್ದರೆ ಬಿದರದೆಬ್ಬೆಯಲ್ಲಿ ಮಾಡಿದ ಬೊಂಬೆಗಳಂತೆ ಕಾಣುತಿದ್ದರು. ಕಷ್ಟ! ಕಷ್ಟ! ಕ್ಷಾಮವಮಾತ್ರ ಎಂದಿಗೂ ಬರಬಾರದು. ಕ್ಷಾಮ ಬಂದರೆ ತಿನ್ನುವುದಕ್ಕೆ ಅನ್ನವಿಲ್ಲದೆ ಗೆಡ್ಡೆಗೆಣಸು ಕೊನೆಗೆ ಸತ್ತ ಇಲಿಯನ್ನು ಸಹಿತ ಬಿಡದೆ ಕಿತ್ತು ಕೊಂಡು ತಿನ್ನುವರು. ಕುಡಿಯುವದಕ್ಕೆ ನೀರಿಲ್ಲದೆ ಬಾಯಾರಿಕೆಯಿಂದ ನಾಲಿಗೆ ಒಣಗಿ ಮಾತನಾಡಲಿಕ್ಕೆ ಆಗದೆ ಮೂಗರಂತೆ ಜನರು ಅಲ್ಲಲ್ಲಿಯೇ ಸೊರಗಿ ಬಿದ್ದಿರುವರು. ಈ ಕ್ಷಾಮಕ್ಕೆ ಜೊತೆಗಾರನಂತೆ ಇರುವ ರೋಗವು ಜನಗಳನ್ನು ಕೊಲ್ಲುವುದು. ಕ್ಷಾಮ, ರೋಗ ಇವೆರಡೂ ಪಟ್ಟಣವನ್ನು ಬರೆದುಮಾಡಲಿಕ್ಕೆ ಸಾಕು ಇನ್ನೇನುಬೇಡ. ಇಂಥಾ ಕ್ಷಾಮಕಾಲದಲ್ಲಿ ಹಣವಂತರು ಅನ್ನ ನೀರನ್ನು ಜನರಿಗೆ ಕೊಟ್ಟು ಕಾಪಾಡುವರು. ಅಲ್ಲಲ್ಲಿ ಬಿದ್ದಿದ್ದ ಮಕ್ಕಳನ್ನು ಎತ್ತಿಕೊಂಡು ಬಂದು ಸಾಕುವರು. ಹೀಗೆ ಬಡವರಿಗೆ ಅನ್ನವನ್ನು ಕೊಡುತ್ತಾ ಬಹುಜನರಿಗೆ ಉಪಕಾರಿಯಾಗಿದ್ದ ಸಾಹುಕಾರನೊಬ್ಬನು ದಿನವಹಿ ರೊಟ್ಟಿಯನ್ನು ಮಾಡಿಸಿ ಒಂದು ಬುಟ್ಟಿಯಲ್ಲಿಟ್ಟು ಹುಡುಗರಿಗೆ ಕೊಡಿಸುತಿದ್ದನು. ರೊಟ್ಟಿಯ ಬುಟ್ಟಿಯು ತೆಗಿಸಿಕೊಂಡು ಬಂದೊಡನೆಯೆ, ನಾನು ಮೊದಲು ತಾನು ಮೊದಲು, ನನಗೆ ದೊಡ್ಡದು ತನಗೆ ದೊಡ್ಡದು ಎಂದು ಒಬ್ಬರಮೇಲೊಬ್ಬರು ಬೀಳುತ್ತಾ, ಕೆಳಗೆಬಿದ್ದು ಏಳಲಿಕ್ಕೆ ಕೈಲಾಗದೆ ಸಂಕಟಪಡುತ್ತಾ ಒಂದೊಂದು ರೊಟ್ಟಿಯನ್ನು ಕಸುಕೊಂಡು, ಕೊಡಿಸಿದವನ ಕಡೆಗೆ ತಿರುಗಿಸಹ ನೋಡದೆ ಒಬ್ಬರನೊಬ್ಬರು ಬೈದಾಡಿಕೊಳ್ಳುತ್ತಾ ಹೋಗುತಿದ್ದರು. ಆದರೆ ಅಲ್ಲಿಗೆ ಬರುತಿದ್ದ ಹುಡುಗರಲ್ಲಿ ಒಬ್ಬ ಹುಡುಗನು ಮಾತ್ರ ದೂರವಲ್ಲಿ ನಿಂತಿದ್ದು ಎಲ್ಲರೂ ತೆಗೆದು ಕೊಂಡು ಹೋದಮೇಲೆ ಮಿಕ್ಕ ಒಂದು ಸಣ್ಣರೊಟ್ಟಿಯನ್ನೇ ಸಂತೋಷದಿಂದ ತೆಗೆದು ಕೊಂಡು ಅದನ್ನು ಕೊಡಿಸಿದವನಿಗೆ ಕೈಮುಗಿದು ಹೋಗುತಿದ್ದನು. ಇದನ್ನು ನೋಡಿ ಕೊಂಡಿದ್ದು ಒಂದು ದಿನ ಯಜಮಾನನು ಕೊನೆಗೆಬಂದ ಈ ಹುಡುಗನಿಗೆ ಒಂದು ಸಣ್ಣ ಚೂರು ರೊಟ್ಟಿ (ದಿನವಹಿ ಕೊಡುತಿದ್ದುದಕ್ಕಿಂತ ಸಣ್ಣದಾದ ಒಂದುಚೂರು ರೊಟ್ಟಿ) ಯನ್ನು ಕೊಡಿಸಿದನು. ರೊಟ್ಟಿಯ ಚೂರು ಸಣ್ಣದಾಗಿದ್ದರೂ ಆ ಹುಡುಗನು ಎಂದಿ

ಮು॥ ರಾ॥ ನರಸಿಂಹೈಯ್ಯನವರು ರಾಜೀನಾಮೆ ಕೊಡಲು, ಕೋಲಾರದ ಹೈಸ್ಕೂಲಿನಲ್ಲಿ ಡಿ. ಕ್ಲಾಸ್ ಟರ್ಲಿ ತಿಂಗಳಿಗೆ ೨೭ ರೂ ವೇತನ ಮು॥ ರಾ॥ ವಿ. ಕೃಷ್ಣರಾಯರನ್ನು ಅ। ವೂ। ರನ್ನಾಗಿ ನಿಯಮಿಸಿರುತ್ತಾರೆ.

***

ಮೈಸೂರು ಮ್ಯುನಿಸಿಪಾಲಿಟಿಯವರು, ಇದುವರಿಗೆ ಹೈಸ್ಕೂಲುಗಳಿಗೆ ಕೊಡುತಲಿದ್ದ ೨೬೦ ರೂ ಗ್ರಾಂಟನ್ನು ತಪ್ಪಿಸಿ, ಇದೇ ಹಣವನ್ನು ಪ್ರೈಮರಿಸ್ಕೂಲುಗಳನ್ನು ಪ್ರೋತ್ಸಾಹಪಡಿಸಲು ಉಪಯೋಗಿಸಬೇಕೆಂದು ಮೈಸೂರು ಸರಕಾರದವರು ಅಭಿಪ್ರಾಯಪಟ್ಟಿರುತ್ತಾರೆ.

***

ಮೈಸೂರು ಇಂಡಸ್ಟ್ರಿಯಲ್ ಸ್ಕೂಲು ಆನರೆರಿ ಸೆಕ್ರಟೆರಿಯವರ ವಶಕ್ಕೆ ಕೊಡುತಲಿದ್ದ ಪರಮೆನೆಂಟ್ ಅಡ್ವಾನ್ಸ್ ರೂ ೪೦ ಕ್ಕೆ ಬದಲಾಗಿ ೨೫೦ ರೂಪಾಯನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

***

ಕೋಲಾರದ ಸ್ಟೂಡೆಂಟ್ಸ್‌ಹೋಮಿಗೆ ಕೊಡುತಲಿದ್ದ ಸಹಾಯದ್ರವ್ಯವನ್ನು ರೂ ೨೫ ರಿಂದ ೪೫ ರೂಪಾಯಿಗೆ ಹೆಚ್ಚಿಸಿರುವರು.

***

ಹ। ಆಜಿಮುದ್ದೀ ಸಾ। ರವರನ್ನು ನಾರ್ಮಲ್ ಸ್ಕೂಲಿನಲ್ಲಿ ಹಿಂದೂಸ್ಥಾನಿ ಮ್ಯಾಸ್ಟರ ಕೆಲಸಕ್ಕೆ ರೂ ೨೫ ನಿಂದ ೩೦ ರೂಪಾಯನ ಗ್ರೇಡಿನಲ್ಲಿ ನಿಯಮಿಸಿರುವರು.

***

ಸರಾಜ್ಪುರದ ಗರ್ಲ್ಸ್ ಸ್ಕೂಲು ಹೆಡ್‌ಮಾಸ್ಟರ್ ಮು॥ ರಾ॥ ಶಿವರಾಮೈಯ್ಯನವರು ಗತಿಸಿಹೋದುದರಿಂದ, ಅವರಿಗೆ ಬದುಲಾಗಿ ಇನ್ನೊಬ್ಬರನ್ನು ನಿಯಮಿಸುವುದರಲ್ಲಿ ಕೆಲವು ಬದಲಾವಣೆಗಳು ಆಗುವುವು.

ಕಿಂಡರ್‌ಗಾರ್ಟನ್‌ಕಥೆ

ಫ್ರಾನ್ಸ್‌ದೇಶದಲ್ಲಿ ಒಂದಾನೊಂದು ಕಾಲದಲ್ಲಿ ಕ್ಷಾಮವು ಬಂತು. ಆಗ ಅಲ್ಲಿನ ಜನರು ಬಹಳ ಕಷ್ಟಪಟ್ಟರು. ಒಂದೊಂದುದಿನ ಕೆಲವರಿಗೆ ತಿನ್ನಲಿಕ್ಕೆ ಸ್ವಲ್ಪ ತಿಂಡಿಯಾದರೂ ಶಿಕ್ಕುತ್ತಿರಲಿಲ್ಲ. ಮಕ್ಕಳು ಕಾಡಿಯುವದಕ್ಕೆ ಹಾಲು, ನೀರು

ವಿದ್ಯಾದಾಯಿನಿ.

ಭಾಗ ೬. | ಏಪ್ರಿಲ್ ೧೮೯೮. | [ಸಂಚಿಕೆ ೪

ಎಡಿಟರವರ ನೋಟ್ಸ್.

ಶಿವಮೊಗ್ಗೆಯಲ್ಲಿ ನಡೆದ ಉಪಾಧ್ಯಾಯರ ಸಂಘದ ವಿಷಯವಾಗಿ ಈ ಪತ್ರಿಕೆಯ ಲ್ಲಿ ಪ್ರಕಟಿಸಿರುತ್ತೇವೆ ಅದನ್ನು ಓದೋಣದರಿಂದ ಪ್ರತಿಯೊಂದು ಡಿಸ್ಟ್ರಿಕ್ಟಿನ ಯೂ ಒಂದೊಂದು ಉಪಾಧ್ಯಾಯಸಂಘವನ್ನು ಏರ್ಪಡಿಸಿಕೊಂಡು, ಪೋಧನಾಕ್ರಮ ಪಾಠಕ್ರಮ ವಿಷಯವಾಗಿ, ವಿದ್ಯಾವಂತರಾದ, ಅನುಭವಶಾಲಿಗಳಾದ ಉಪಾಧ್ಯಾಯ ರು ತಮ್ಮ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿ, ಚರ್ಚಿಸಿ ತಿಳಿಯೋಣದರಲ್ಲಿ ವಿಶೇಷ ಫಲವನ್ನು ಪಡೆಯಬಹುದು.

* * * *

ಮೇಲೆ ಸೂಚಿಸಿದ ಉಪಾಧ್ಯಾಯ ಸಂಘದ ಕಾರ್ಯದರ್ಶಿಗಳು, ಸಂಘದಲ್ಲಿ ನಡೆ ಅಂಶಗಳನ್ನು ಸೂಚಿಸುವುದರಲ್ಲಿ ಇಂಥಾ ವಿಷಯವನ್ನು ಉಪನ್ಯಾಸ ಮಾಡಿದರು; ಇ ಥಾ ವಿಷಯವನ್ನು ಚರ್ಚೆಮಾಡಿದರು; ಎಂದು ಸಂಕ್ಷೇಪವಾಗಿ ತಿಳಿಸುವರು. ಹೀ ಮಾಡದೆ ಅನುಭವಶಾಲಿಗಳಾದ, ವಿದ್ಯಾವಂತರಾದ ಉಪಾಧ್ಯಾಯರುಗಳು ತಮ ಅನುಭವಸಿದ್ಧವಾದ ವಿದ್ಯಾವಿಷಯಗಳನ್ನು ಬರೆದು, ಸಂಘದಲ್ಲಿ ಓದಿದ ಪತ್ರಿಕೆಗ ನ್ನೂ ಅವರ ಅಭಿಪ್ರಾಯಗಳನ್ನು ಸಕಾರಣದಿಂದ ಖಂಡಿಸಿದ್ದರೆ ಆಗಲಿ, ಪುಷ್ಟೀಕ ಸಿದ್ದರೇ ಆಗಲಿ, ಅವುಗಳನ್ನೂ ಸಂಪೂರ್ಣವಾಗಿ ಕಳುಹಿಸಿದ್ದರೆ ಈ ಸಂಸ್ಥಾನದ ಇ ರ ಉಪಾಧ್ಯಾಯರುಗಳಿಗೂ ಪ್ರಯೋಜನ ಉಂಟಾಗುತ್ತಿತ್ತು.

ಈ ಸಂಘದಲ್ಲಿ ಚರ್ಚಿಸಿದ ಕೆಲವು ವಿಷಯಗಳು ಶ್ಲಾಘ್ಯವಾಗಿರುವುವು. ಮೈಸ ರಿನಲ್ಲಿ ನಡೆಯುವ ಟ್ರೈನಿಂಗ ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಗಳು, ಬರಹ ಪರೀಕ್ಷೆಯ ಫಲಿತಾಂಶವನ್ನು ತಿಳಿಯುವ ವರೆಗೂ ಮೈಸೂರಲ್ಲಿ ಇರುವುದೇ ಆಗಲಿ, ತಮ್ಮ ತಮ

ನಂತೆ ತಿಳಿದುಕೊಂಡು ಅವನಿಗೆ ಕೈಮುಗಿದು ಸಂತೋಷವಾಗಿಯೇ ಹೊರಟನು. ಈ ಹುಡುಗನು ರೊಟ್ಟಿಯನ್ನು ಬೀದಿಯಲ್ಲಿಯೇ ಮುರಿದುಕೊಂಡು ತಿನ್ನದಂತೆ ಹಸಿವಿನಿಂದ ಏಳಲಾರದೆ ಬಿದ್ದಿರುತಿದ್ದ ತನ್ನ ತಾಯಿಗೆ ಸ್ವಲ್ಪಕೊಟ್ಟು ತಾನು ಸ್ವಲ್ಪ ತಿನ್ನುತಿದ್ದನು. ಆದಿನವೂ ಎಂದಿನಂತೆ ತಾಯಿಯ ಬಳಿಗೆ ಹೋಗಿ ಆ ರೊಟ್ಟಿಯ ಜೂರನ್ನು ಕೊಡಲು, ತಾಯಿಯು ಕಣ್ಣೀರನ್ನು ಬಿಡುತ್ತಾ 'ಅಪ್ಪಾ, ನನ್ನ ಕಂದಾ ನನಗೆ ಆ ಜೂರು ಸಾಲದಲ್ಲ, ನನಗೇನು ಕೊಡುತಿ, ನೀನು ಅದನ್ನು ತಿಂದು ಸ್ವಲ್ಪ ಸುದಾರಿಸಿಕೊಂಡು ಇನ್ನೆಲ್ಲಿಯಾದರೂ ಹೋಗಿ ನನಗೆ ತರುವಂತೆ; ಇದನ್ನು ನೀನು ತಿನ್ನು, ನನ್ನಸಾಮಿ' ಎನ್ನಲು ಆ ಹುಡುಗನು 'ಅಮ್ಮ, ನೀನು ಒಂದು ಜೂರು ತಿನ್ನು, ನಾನು ಸ್ವಲ್ಪ ತಿನ್ನುತ್ತೇನೆ; ನಾನೊಬ್ಬನೇ ತಿನ್ನಲಾರೆ ಹಿಡಿ, ಇದನ್ನು' ಎಂದು ಮುರಿಯಲು ಅದರಿಂದ ಬಂಗಾರದ ಕಾಸುಗಳು ಎಂಟು ಹತ್ತು ಕೆಳಗೆ ಬಿದ್ದವು. ಆಗ ಹಸಿವಿನಿಂದ ಸಾಯುತಲಿದ್ದ ಆ ತಾಯಿಯು ಅದನ್ನು ನೋಡಿ ಅಪ್ಪಾ ಈ ರೊಟ್ಟಿಯನ್ನು ಕೊಡವಾತನು ಭಂಗಾರದ ಕಾಸನ್ನು ಇಟ್ಟಿದ್ದ ಈ ರೊಟ್ಟಿಯನ್ನು ನಿನಗೆ ಕಾಣದೇ ಕೊಟ್ಟಿರಬಹುದು, ಈ ಜೂರು ರೊಟ್ಟಿಯನ್ನು ತಿಂದು ಬೇಗಹೋಗಿ ಇವುಗಳನ್ನು ಕೊಟ್ಟುಬಾ, ಎಂದಳು. ಇವಳು ಎಷ್ಟು ಒಳ್ಳೆಯವಳು; ಆ ಕಷ್ಟಕಾಲದಲ್ಲೂ ತನ್ನ ಕೈಗೆ ಸಿಕ್ಕಿದ್ದ ಹಣವನ್ನು ಹಿಂದಿರುಗಿ ಕಳುಹಿಸಿದಳಲ್ಲಾ? ಆ ಮಗುವು ಆ ಜೂರನ್ನು ತಿಂದು ಹಿಂದಿರುಗಿ ಹೋಗಿ ಆ ಯಜಮಾನನನ್ನು ನೋಡಿ, ನಡೆದುದನ್ನೆಲ್ಲಾ ಹೇಳಿ, ಆ ಭಂಗಾರದ ಕಾಸುಗಳನ್ನು ಹಿಂದಕ್ಕೆ ಕೊಡಲು ಆಗ ಅವನು 'ನಾನು ನಿನ್ನ ಒಳ್ಳೆಗುಣವನ್ನು ನೋಡಿ ನಿನಗೆ ಕೊಡಬೇಕೆಂದೇ ಆ ರೊಟ್ಟಿಯಲ್ಲಿ ಅವುಗಳನ್ನು ಇಟ್ಟಿದ್ದೆನು, ರೊಟ್ಟಿಮಾಡಿಕ್ಕೆ ತಪ್ಪಿ ಪಡುತಿದ್ದಿ ಆದುದರಿಂದ ದೇವರು ನಿನಗೆ ಇದನ್ನು ದೊರಕಿಸಿದನು. ಭಂಗಾರದ ಕಾಸುಗಳು ಸಿಕ್ಕಿದ್ದೆಸಾಕೆಂದು ನೀನು ಅಲ್ಲಿಯೆ ನಿಂತುಕೊಳ್ಳದೆ ಹಿಂದಕ್ಕೆ ತಂದೆಯಾದ್ದರಿಂದ ನನಗೆ ಇನ್ನೂ ಸಂತೋಷ ಉಂಟಾಯಿತು. ನಿನ್ನನ್ನು ಹಡೆದ ತಾಯಿಯು ಬಹಳ ಒಳ್ಳೆಯವಳು; ನಿಮಗೆ ಈ ಕಷ್ಟವು ಹೋಗುವಂತೆ ಇನ್ನು ಕೆಲವುಕಾಲ ನಿಮ್ಮ ಮನೆಗೆ ಬೇಕಾದ್ದನ್ನು ಕಳುಹಿಸುವೆನು ಊಟಮಾಡಿಕೊಂಡು ಸುಖನಾಗಿರಿ ಎಂದನು.

ವಿದ್ಯಾಭ್ಯಾಸದ ಇಲಾಖೆಯಲ್ಲಿ ಮದ್ರಾಸಿನಲ್ಲಿ ಕ್ಯುರೇಟರಾಗಿರುವರು. ಬಹಳ ವರ್ಷಗಳಿಂದಲೂ, ದೇಶಭಾಷೆಯಾದ ತಮಿಳನ್ನು ವೃದ್ಧಿಪಡಿಸುವುದಕ್ಕಾಗಿ ಬಹಳ ಶ್ರಮ ತೆಗೆದುಕೊಂಡರು. ಈಗಲೂ 'ಜನ ವಿನೋದಿನಿ' ಎಂಬ ಒಂದು ಮಾಸ ಪತ್ರಿಕೆಯನ್ನು ತಮಿಳಿನಲ್ಲಿ ಪ್ರಚುರಪಡಿಸುವರು. ಬಾಲಕರಿಗೂ, ಬಾಲಕೀಯರಿಗೂ ಉಪಯೋಗಾರ್ಥವಾಗಿ, ತಮಿಳಿನಲ್ಲಿಯೂ, ತೆಲಗಿನಲ್ಲಿಯೂ 'ಮಹಾರಾಣಿ ಮ್ಯಾಗಜಿನ್' ಎಂಬ ಮಾಸ ಪತ್ರಿಕೆಯನ್ನು ಪ್ರಕಟಿಸುವರು ಅನೇಕರು ಇವರು ಪ್ರಕಟಿಸಿದ ಗ್ರಂಥಗಳನ್ನು ಓದಿ ಆನಂದವನ್ನು ಪಡುತಿರುವರು. ಇವರು ವಿದ್ಯಾಭಿವೃದ್ಧಿಗಾಗಿಯೇ ಇಷ್ಟು ಶ್ರಮ ಪಡುತಿರುವರಾದುದರಿಂದ ಇವರಿಗೆ ಸನ್ಮಾನವನ್ನು ಮಾಡಲು 'ದಿವಾನ್ ಬಹದೂರ್' ಎಂಬ ಬಿರುದನ್ನು ದಯಪಾಲಿಸಿರುವರು.

ಪಾಠಕ್ರಮ.

ಯಾವ ಕೆಲಸದಿಂದಲೇ ಆಗಲಿ ಪೂರ್ಣವಾದ ಫಲವನ್ನು ಪಡೆಯಬೇಕಾದರೆ ಅದನ್ನು ಸರಿಯಾದ ಕ್ರಮದಲ್ಲಿ ಮಾಡುವುದು ಅವಶ್ಯಕವೆಂಬುದನ್ನು ಎಲ್ಲರೂ ಒಪ್ಪುವೆವು. ಇಲ್ಲದಿದ್ದರೆ ಅವಿಚಾರವನ್ನು, ಅಕ್ರಮವನ್ನೂ ಸರಿಯೆಂದು ಹೇಳಿದಂತಾಗುವುದು. ಉಚಿತವಾದ ಮಾರ್ಗದಲ್ಲಿ ಕೆಲಸ ಮಾಡುವುದರಿಂದ ಸಾಮಾನ್ಯರಿಗೆ ಸಹ ಉಂಟಾಗುವ ಫಲಗಳು ಬೇರೆ ಮಾರ್ಗವನ್ನನುಸರಿಸುವ ಬುದ್ಧಿವಂತರಿಗೂ ದೊರೆಯುವದಿಲ್ಲ. ಸರಿಯಾದ ದಾರಿಯಲ್ಲಿ ಹೊರಟವನು ಕುಂಟನಾದರೂ ದಾರಿತಪ್ಪಿ ಓಡುವವನಿಗಿಂತ ಶೀಘ್ರವಾಗಿ ಊರನ್ನು ಸೇರುವನು. ಹೀಗೆಯೇ ವಿದ್ಯಾಭ್ಯಾಸ ಮಾಡಿಸುವಾಗಸಹ ಬಾಲಕರಿಗೆ ಸರಿಯಾದ ಕ್ರಮದಲ್ಲಿ ವಿಷಯಗಳನ್ನು ಬೋಧಿಸುವುದರಿಂದ ವಿಶೇಷವಾದ ಪ್ರಯೋಜನವು ಶೀಘ್ರದಲ್ಲಿಯೇ ಉಂಟಾಗುವುದು.

ಇಂಥ ಕ್ರಮವನ್ನು ಎರಡು ವಿಧವಾಗಿ ಗೊತ್ತು ಮಾಡಬಹುದು. ಇವುಗಳಲ್ಲಿ ಮೊದಲನೇಯದು ಅನುಭವ ಅನೇಕ ಕಾಲ ಬಹುಮಂದಿ ಬಾಲಕರಿಗೆ ಪಾಠ ಹೇಳುವುದರಿಂದ ಯಾವ ಯಾವ ವಿಷಯವನ್ನು ಯಾವ ಯಾವ ಕ್ರಮದಲ್ಲಿ ಬೋಧಿಸಬೇಕೆಂಬುದು ಬಹಳಮಟ್ಟಿಗೆ ಗೊತ್ತಾಗುವುದು. ಅಥವಾ ಬುದ್ಧಿಯ ಸ್ವಭಾವವನ್ನು ತಿಳಿದು ಬೋಧನೆವು ತದನುಗುಣವಾಗಿರುವುದಕ್ಕೆ ಯಾವ ಮಾರ್ಗವನ್ನನುಸರಿಸಬೇಕೆಂದು ಆಲೋಚಿ

ಊರಿಗೆ ಹೋಗಿ ಬರುವುದೇ ಆಗಲಿ ಅನಾನುಕೂಲವೆಂಬ ಭಾಗವು ಯೋಚಿಸತಕ್ಕದ್ದಾಗಿದೆ. ಶಿವಮೊಗ್ಗೆಯಲ್ಲಿ ಬಹಳ ಪರೀಕ್ಷೆಯು ನಡೆದು, ವ್ಯಾವಹಾರಿಕ ಪರೀಕ್ಷೆಗಾಗಿ ಮೈಸೂರಿಗೆ ಬರುವಂತೆ ವಿದ್ಯಾರ್ಥಿಗಳಿಗೆ ಅನುಕೂಲ ಪಡಿಸಿಕೊಡಬೇಕೆಂಬುದು ಉಚಿತವಾಗಿದೆ. * * * * *

ಮೆಟ್ರಿಕ್ಯುಲೇಷನ್, ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರು, ಕನ್ನಡ ಸ್ಕೂಲ್‌ಗಳಿಗೂ, ಆಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳಿಗೂ ಉಪಾಧ್ಯಾಯರಾಗಿ ಬರುತಿರುವುದರಿಂದ, ಇವರನ್ನೂ ಒಂದೊಂದುವರ್ಷ, ಮೈಸೂರು ಟ್ರೈನಿಂಗ್ ಸ್ಕೂಲ್‌ಗಳಲ್ಲಾಗಲಿ, ಮದ್ರಾಸ್ ನಾರ್ಮಲ್ ಸ್ಕೂಲ್‌ನಲ್ಲಿ ಆಗಲಿ, ಟ್ರೈನ್ ಮಾಡಿಸುವುದು ಉತ್ತಮವೆಂದು ಸಂಘದವರು ಅಭಿಪ್ರಾಯಪಟ್ಟದ್ದು ಸಮ್ಮತವಾದುದು. ಇಂಗ್ಲಿಷನ್ನು ಓದಿ ಒಂದೆರಡು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರನ್ನು ನಾರ್ಮಲ್ ಸ್ಕೂಲಿನಲ್ಲಿ ಒಂದು ವರ್ಷವಿಟ್ಟದ್ದು ಉಪಾಧ್ಯಾಯರನ್ನಾಗಿ ಕಳುಹಿಸೋಣದರಲ್ಲಿ ಬಾಲ ವಿದ್ಯಾಭ್ಯಾಸವು ಚೆನ್ನಾಗುವುದೆಂಬುದರಲ್ಲಿ ಸಂದೇಹವಿಲ್ಲವು.

* * * * *

ಪ್ರಸಿದ್ಧವಾದ ರಾಯಲ್ ಏಸಿಯಾಟಿಕ್ ಸೊಸೈಟಿಗೆ ಸೇರಿದ ಮೆಂಬರುಗಳು ಲಂಡನ್ ಪಟ್ಟಣದಲ್ಲಿ ಸಭೆಗೂಡಿದ್ದರು. ಲಾರ್ಡ್ ರೆ ಎಂಬುವರು ಅಗ್ರಾಸನವನ್ನು ಅಲಂಕರಿಸಿದ್ದರು. ಪ್ರಾನ್ಸ್, ಅಸ್ಟ್ರಿಯ, ರಷ್ಯಾ ದೇಶಗಳಲ್ಲಿ ಸ್ಥಾಪಿಸಿರುವಂತೆ ಉರ್ದು, ಪರ್ಶಿಯನ್, ಸಂಸ್ಕೃತ, ದ್ರಾವಿಡ ಭಾಷೆಗಳನ್ನು ಬೋಧಿಸಲು ಪಾಠಶಾಲೆಗಳನ್ನು ಲಂಡನ್ನಲ್ಲಿ, ಇದುವರೆಗೂ ಸ್ಥಾಪಿಸದೆ ಇರುವುದು ಶೋಚನೀಯವಾದ ವಿಷಯವು; ಆದುದರಿಂದ ತಕ್ಕ ಪ್ರಯತ್ನವಾಡಿ ಒಂದು ದೊಡ್ಡ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ಅಭಿಪ್ರಾಯಪಟ್ಟಿರುವರು. ಇವರ ಪ್ರಯತ್ನವು ಕೈಗೂಡಬೇಕೆಂಬುದು ನಮ್ಮ ಕೋರಿಕೆಯು.

* * * *

ವಿದ್ಯಾಸಾಮ್ರಾಜ್ಯಕ್ಕಾಗಿ, ಮದ್ರಾಸ್ ಆಧಿಪತ್ಯದಲ್ಲಿ, ಬಹಳ ಪ್ರಯತ್ನ ಮಾಡುತಲಿರುವ ವ|| ವಿ. ಕೃಷ್ಣಮಾಚಾರ್ಯರಿಗೆ ದಿವಾನ್ ಬಹದೂರ್ ಎಂಬ ಬಿರುದನ್ನು ಬ್ರಿಟಿಷ್ ಸರ್ಕಾರದವರು ದಯಪಾಲಿಸಿರುವರೆಂದು ಈ ಪತ್ರಿಕೆಯನ್ನು ಓದತಕ್ಕವರಿಗೆ ತಿಳಿಸಲು ನಾವು ಸಂತೋಷಪಡುವೆವು. ಇವರು ಸ್ಕೂಲು ಇನ್‌ಸ್ಪೆಕ್ಟರಾಗಿದ್ದು, ಈಗ

ಚೆನ್ನಾಗಿ ಓದುವುದಕ್ಕಾಗಲಿ, ಓದಿದುದನ್ನು ತಿಳಿದುಕೊಳ್ಳುವುದಕ್ಕೇ ಆಗಲಿ ಶಕ್ತಿಯಿಲ್ಲದಿರುವುದರಿಂದ ಆಗ ಅವರು ಯಾವ ಪಾಠ ಪುಸ್ತಕಗಳನ್ನೂ ಉಪಯೋಗಿಸುವುದಕ್ಕಾಗುವುದಿಲ್ಲ. ಸ್ವಲ್ಪ ವಯಸ್ಸಾದ ಬಾಲಕರಿಗೆ ಸಹ ಕಂಡರ್‌ಗಾರ್ಟನ್ ವಸ್ತುಪಾಠ ಮುಂತಾದವುಗಳನ್ನು ಬೋಧಿಸುವಾಗ ಪುಸ್ತಕಗಳು ಉಪಯೋಗಿಸದೇ ಹೋಗುವುವು. ಇಂಥ ಸಂದರ್ಭಗಳಲ್ಲಿ ಉಪಾಧ್ಯಾಯರು ತಾವೇ ವಿಷಯಗಳನ್ನೆಲ್ಲ ಮುಖತಃ ಬೋಧಿಸಬೇಕಾಗುವುದು. ಹೀಗೆ ಬೋಧಿಸುವಾಗ ಬಾಲಕರನ್ನು ಪ್ರಶ್ನೆಮಾಡಿ ಅವರಿಂದಲೇ ಹೇಳಿಸಬಹುದಾದುದನ್ನು ಹೇಳಿಸುತಲು, ತಾವು ಹೇಳಿಕೊಟ್ಟ ಅಂಶಗಳು ಅವರಿಗೆ ತಿಳಿಯಿತೆಂದು ಗೊತ್ತುಮಾಡಿಕೊಳ್ಳುತಲೂ ಇರಬೇಕು. ಬಾಲಕರು ಯಾವ ಪಾಠ ಪುಸ್ತಕಗಳನ್ನೂ ಉಪಯೋಗಿಸದೆ ಉಪಾಧ್ಯಾಯರೇ ಹೀಗೆ ಮುಖತಃ ಬೋಧಿಸುವುದನ್ನು 'ವಾಚನಿಕ ಬೋಧನೆ' ಎಂದು ಕರೆಯೋಣ. ಬಾಲಕರು ಪಾಠ ಪುಸ್ತಕಗಳನ್ನುಪಯೋಗಿಸುವಂತೆಮಾಡಿ ಉಪಾಧ್ಯಾಯರು ವಿಷಯಗಳನ್ನು ಬೋಧಿಸುವುದಕ್ಕೆ 'ಪುಸ್ತಕ ಬೋಧನ' ಎಂದು ಹೇಳೋಣ. ಪುಸ್ತಕ ಬೋಧನೆಯಲ್ಲಿ ಸಹ ಪಾಠ ಪುಸ್ತಕಗಳಲ್ಲಿಲ್ಲದ ಕೆಲವು ವಿಶೇಷಾಂಶಗಳನ್ನು ಉಪಾಧ್ಯಾಯರು ಬಾಲಕರಿಗೆ ತಿಳಿಸಬೇಕಾಗುವುದು. ಆಗ್ಗೆ ವಾಚನಿಕ ಬೋಧನೆಯು ಅವಶ್ಯಕವಾಗಿರುವುದು. ಆದರೂ ಬೋಧಿಸಬೇಕಾದ ಅಂಶಗಳಲ್ಲಿ ಅನೇಕವನ್ನು ಪುಸ್ತಕ ಸಹಾಯದಿಂದ ತಿಳಿಸುವುದರಿಂದ ಇದನ್ನು ಪುಸ್ತಕ ಬೋಧನೆಯೆಂದು ಕರೆಯಬಹುದು. ಪಾಠ ಹೇಳುವಾಗ ಉಪಾಧ್ಯಾಯರು ಮೊದಲು ಕೆಲವು ದಿವಸ ವಾಚನಿಕ ಬೋಧನೆಯನ್ನನುಸರಿಸಬೇಕು. ಅನಂತರದಲ್ಲಿ ಪುಸ್ತಕ ಬೋಧನೆಯನ್ನಿಟ್ಟುಕೊಳ್ಳಬೇಕು ಪುಸ್ತಕ ಬೋಧನೆಯಲ್ಲಿ ಎರಡು ವಿಧವುಂಟು. ಇವುಗಳಲ್ಲಿ ಮೊದಲನೆಯದು ಪುಸ್ತಕವನ್ನು ತರಗತಿಯಲ್ಲಿ ಓದಿಸಿ ಅದರಲ್ಲಿರುವ ಅಂಶಗಳನ್ನು ಸ್ಪಷ್ಟಪಡಿಸಿ ಅವುಗಳನ್ನು ಬಾಲಕರು ಮನೆಯಲ್ಲಿ ಗಟ್ಟಿಮಾಡುವಂತೆ ಹೇಳುವುದು; ಎರಡನೆಯದು ಬಾಲಕರು ಪುಸ್ತಕವನ್ನು ತಾವೇ ಮನೆಯಲ್ಲಿ ಓದಿಕೊಂಡು ಸಾಧ್ಯವಾದಮಟ್ಟಿಗೂ ಅಂಶಗಳನ್ನು ತಿಳಿದುಕೊಂಡು ಬರುವಂತೆ ಹೇಳುವುದು ಹಾಗೆ ಅವರು ನೋಡಿಕೊಂಡು ಬಂದ ಪಾಠದಲ್ಲಿರುವ ಕ್ಲಿಷ್ಟಾಂಶಗಳನ್ನು ಉಪಾಧ್ಯಾಯರು ವಾರದ ದಿನ ತರಗತಿಯಲ್ಲಿ ಸ್ಪಷ್ಟಪಡಿಸಬೇಕು. ಅಂತು ಬೋಧನೆಗೆ ಒಟ್ಟು ಮೂರು ಮಾರ್ಗಗಳಾದವು ಇವುಗಳಲ್ಲಿ ಮೊದಲನೆಯದನ್ನು ಲೋವರ್ ಪ್ರೈಮರಿ ತರಗತಿಗಳಲ್ಲಿ ಓದುವ ಬಾಲಕರಿಗು, ಎರಡನೆಯದನ್ನು

ಸುವುದರಿಂದಲೂ ಈ ಕ್ರಮವನ್ನು ನಿರ್ಣಯಿಸಬಹುದು. ಇವೆರಡು ಮಾರ್ಗಗಳಲ್ಲಿಯೂ ನಿಶ್ಚಯಿಸಿದ ಕ್ರಮವನ್ನು ನುಸರಿಸುವುದು ಇನ್ನೂ ಒಳ್ಳೇದೆಂದು ಹೇಳಬಹುದು. ಅನುಭವದಿಂದ ತಿಳಿದು ಬಂದಿರುವ ಕ್ರಮದಲ್ಲಿ ನ್ಯೂನತೆ ಏನಾದರೂ ಇದ್ದರೆ ಅದನ್ನು ಬುದ್ಧಿಯ ಸ್ವಭಾವವನ್ನು ತಪ್ಪಿಸುವುದರಿಂದಲೂ, ಬುದ್ಧಿಯ ಸ್ವಭಾವ ಜ್ಞಾನದಿಂದ ನಿರ್ಣಯಿಸಿದ ಮಾರ್ಗವು ಅನುಭವದಿಂದ ಸಾಧ್ಯವೆಂದು ತಿಳಿಯುವುದರಿಂದಲೂ ಇವೆರಡಕ್ಕಿಂತಲು ಉತ್ತಮವಾದ ಬೋಧನ ಕ್ರಮವು ನಿಶ್ಚಿತವಾಗುವುದೆಂಬುದರಲ್ಲಿ ಸಂಶಯವಿಲ್ಲ.

ಇದರಿಂದ ಬೋಧಿಸಬೇಕಾದ ವಿಷಯಗಳನ್ನೆಲ್ಲ ಒಂದೇ ಕ್ರಮದಲ್ಲಿ ಬೋಧಿಸಬಹುದೆಂದು ಭಾವಿಸಕೂಡದು. ವಿಷಯಗಳು ಬೇರೆ ಬೇರೆಯಾಗಿರುವಂತೆ ಅವುಗಳನ್ನು ಬೋಧಿಸುವ ಕ್ರಮಗಳೂ ಬೇರೆಯಾಗುವವು. ವ್ಯಾಕರಣವನ್ನು, ಅಂಕಗಣಿತವನ್ನೂ ಒಂದೇ ರೀತಿಯಲ್ಲಿ ಬೋಧಿಸಬೇಕೆಂದು ಯಾರೂ ಹೇಳುವುದಿಲ್ಲ. ಇಷ್ಟೇ ಅಲ್ಲದೆ ಬಾಲಕರ ವಯೋನುಗುಣವಾಗಿ ಸಹ ಬೋಧನಕ್ರಮಗಳಲ್ಲಿ ವ್ಯತ್ಯಾಸಗಳು ಬರುತ್ತವೆ. ಮೊದಲನೇ ತರಗತಿಯ ಬಾಲಕರಿಗು, ಐದನೇ ತರಗತಿಯ ಬಾಲಕರಿಗೂ ಚರಿತ್ರೆಯನ್ನು ಒಂದೇ ವಿಧವಾಗಿ ಬೋಧಿಸುವುದಕ್ಕಾಗುವುದಿಲ್ಲ. ಅಂದರೆ ವಿಷಯಗಳಿಗನುಗುಣವಾಗಿಯು, ಬಾಲಕರ ವಯಸ್ಸಿಗನುಗುಣವಾಗಿಯೂ ಸಹ ಬೋಧನ ಕ್ರಮಗಳು ವ್ಯತ್ಯಾಸಗಳನ್ನು ಹೊಂದುವವು. ಆದರೆ ಬಾಲವಿದ್ಯಾಭ್ಯಾಸ ಮಾಡಿಸುವವರು ಈ ಮುಂದೆ ಹೇಳಿರುವ ಒಂದು ಅಂಶವನ್ನು ಮಾತ್ರ ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ಚಿಕ್ಕಂದಿನಲ್ಲಿ ಉದ್ದೇಶವಿಟ್ಟು ಕೆಲಸ ಮಾಡುವ ಸ್ವಭಾವವಿಲ್ಲದಿರುವುದರಿಂದಲು, ವಿದ್ಯೆಯಲ್ಲಿ ಅಭಿರುಚಿ ಸಾಲದಿರುವುದರಿಂದಲೂ ಬಾಲಕರನ್ನು ಮಧ್ಯೆ ಪ್ರಶ್ನೆಮಾಡಿ ಉಪಾಧ್ಯಾಯರು ತಾವೇ ಉಪನ್ಯಾಸ ಮಾಡುವುದರಿಂದ ಪ್ರಯೋಜನವೇನೂ ಆಗದೇ ಹೋಗುವುದು. ಹಾಗೆ ಉಪನ್ಯಾಸಮಾಡಿದ ವಿಷಯಗಳೆಲ್ಲ ಬೋರಲು ಹಾಕಿದ ಪಾತ್ರೆಯಮೇಲೆ ಸುರಿದ ನೀರಿನಂತೆ ಮಕ್ಕಳ ಮನಸ್ಸಿನಲ್ಲಿ ಸ್ವಲ್ಪವೂ ನಿಲ್ಲದೇ ಹೋಗುವುವು. ಆದುದರಿಂದ ಮಕ್ಕಳಿಗೆ ಪಾಠ ಹೇಳುವಾಗ ಉಪಾಧ್ಯಾಯರು ತಾವು ಹೇಳಿದ ಅಂಶಗಳು ಬಾಲಕರಿಗೆ ಸರಿಯಾಗಿ ತಿಳಿಯಿತೆಂಬುದನ್ನು ಪ್ರಶ್ನೆಮಾಡಿ ತಿಳಿದುಕೊಳ್ಳಬೇಕು, ಅವರಿಂದಲೇ ಹೇಳಿಸಬಹುದಾದ ಅಂಶಗಳನ್ನು ಹೇಳಿಸುತಲೂ ಇರಬೇಕು.

ಬೋಧಿಸುವಾಗ ಬಾಲಕರಿಗು, ಉಪಾಧ್ಯಾಯರಿಗೂ ಸೌಲಭ್ಯವುಂಟಾಗುವುದಕ್ಕಾಗಿ ಪಾಠ ಪುಸ್ತಕಗಳನ್ನುಪಯೋಗಿಸುವುದುಂಟು. ಅದಿಯಲ್ಲಿ ಮಕ್ಕಳಿಗೆ

ಕೆಲವು ದೇಶಗಳಲ್ಲಿ ಬತ್ತದ ವ್ಯವಸಾಯವನ್ನು ವೈರವಿಧವಾಗಿ ಮಾಡುತ್ತಾರೆ. ಮಳೆಗಾಲ ಸಾರಂಭವಾದಕೂಡಲೆ, ಹೊಳೆಗಳನ್ನು ತೋಡಿ ಅವುಗಳಲ್ಲಿ ಭತ್ತದ ಕಾಳುಗಳನ್ನು ಚಲ್ಲುತ್ತಾರೆ. ಹೀಗೆ ಚಲ್ಲಿದ ಕಾಳುಗಳೆಲ್ಲವನ್ನೂ ಪಕ್ಷಿಗಳು ತಿಂದು ಬಿಡುವದುಂಟು.

ಇದನ್ನು ಪರಿಹಾರ ಮಾಡುವುದಕ್ಕೆ, ಒಂದು ಸುರಳಿ ಯಂತ್ರವನ್ನು ಮಾಡಿಟ್ಟು, ಅದಕ್ಕೆ ಹಗ್ಗವನ್ನು ಕಟ್ಟಿ ಹಗ್ಗದ ಒಂದು ತುದಿಯನ್ನು ಒಬ್ಬ ಹುಡುಗನ ಕೈಲಿ ಕೊಟ್ಟು ಕೂಡಿಸಿರುತ್ತಾರೆ. ಈ ಹಗ್ಗವನ್ನು ಎಳೆಯುವುದರಿಂದ ಆ ಯಂತ್ರವು ಅಳ್ಳಾಡಿ, ಪಕ್ಕಿಗಳನ್ನು ಓಡಿಸುತ್ತದೆ. (೬)

(೬) ನಮ್ಮ ದೇಶದಲ್ಲಿ ರೈತರು ಹೊಲಗಳಲ್ಲಿ ಅಟ್ಟಣಿಗಳ ಮೇಲೆ ನಿಂತು ಜಾವಟಿಯನ್ನು ಬೀಸುವುದರಿಂದಲೂ ಕೂಗುವುದರಿಂದಲೂ ಪಕ್ಕಿಗಳನ್ನು ಓಡಿಸುತ್ತಾರೆ.

ವರ್ಷಕ್ಕೆ ಎರಡು ಬೆಳೆಗಳಾಗುತ್ತವೆ. ಮೊದಲನೇದು, ಮೇ ಅಥವಾ ಜೂನ್ ತಿಂಗಳಲ್ಲೂ, ಎರಡನೇದು ಅಕ್ಟೋಬರ್ ಅಥವಾ ನವೆಂಬರ್‌ನಲ್ಲೂ ಆಗುತ್ತದೆ. ಗರ್ಭಸದಂತಿರುವ ಕಾಡು ಗೋಲಿನಿಂದ ಬತ್ತವನ್ನು ಕುಯ್ಯುತ್ತಾರೆ. ಹೀಗೆ ಕುಯ್ದ ಬತ್ತವನ್ನು ಒಂದುಕಡೆ ಜವಾಯಿಸಿ, ಒಂದು ದೊಣ್ಣೆಯಿಂದ ಬಡಿದು ಧಾನ್ಯವನ್ನು ಪ್ರತ್ಯೇಕಿಸಿ, ಈ ಧಾನ್ಯವನ್ನು ವರಳಿನಲ್ಲಿ ಕುಟ್ಟಿ (ಕೇರಿ) ಅಕ್ಕಿ ಮಾಡುತ್ತಾರೆ.

III. ಉಪಯೋಗಗಳು.

(a) ರೊಟ್ಟಿ-ಇದು ಬಹಳ ಗಟ್ಟಿಯಾಗುತ್ತದೆ. ಪೂರ್ವ ದಿಕ್ಕಿನ ಜನರಿಗೆ ಇದು ಮುಖ್ಯವಾದ ಆಹಾರ. ಯೂರೋಪಿಯನರಿಗೆ ಅಕ್ಕಿಗೆ ಮೊಗರ್ವಿಲ್ಲವೆಂದು, ಚೀನಾದವರು ಪಶ್ಚಾತ್ತಾಪ ಪಡುತ್ತಾರೆ. (ಅಪಹಾಸಮಾಡುವರೆಂದು ಅಭಿಪ್ರಾಯ).

(b) ಕಡಬು ಇದು ಬಹಳ ಪುಷ್ಟಿಕಾರಿಯಾದ್ದರಿಂದ ಅಶಕ್ತರಿಗೆ ಕೊಡುವದುಂಟು.

(c) ಪಿಷ್ಟ. ಇದು ಬಹಳ ಉಪಯೋಗಕ್ಕೆ ಬರುತ್ತದೆ.

(d) ಹುಲ್ಲು. ಮನೆಗಳಿಗೆ ಹೊದಿಸುವುದಕ್ಕೂ ಹಗ್ಗಗಳನ್ನು ಹೊಸೆಯುವುದಕ್ಕೂ ಟೊಪ್ಪಿ ಮುಂತಾದವುಗಳನ್ನು ಹೆಣೆಯುವುದಕ್ಕೂ ದನಗಳ ಮೇವಿಗೂ ಉಪಯೋಗವಾಗುತ್ತದೆ.

ವಿಶೇಷ ಸಂಗತಿಗಳು :—

ಅಪ್ಪರ್ ಪ್ರೈಮರಿ ತರಗತಿಗಳಲ್ಲಿ ಓದುವ ಬಾಲಕರಿಗು, ಮೂರನೆಯದನ್ನು ಲೋಅರ ಸೆಕೆಂಡರಿ ತರಗತಿಗಳಲ್ಲಿ ಓದುವ ಬಾಲಕರಿಗೂ ಪಾಠ ಹೇಳುವುದಕ್ಕೆ ಉಪಯೋಗಿಸಿ ಕೊಳ್ಳಬಹುದೆಂದು ಸಾಮಾನ್ಯವಾಗಿ ಹೇಳಬಹುದು. ಹೀಗೆ ಇವುಗಳಲ್ಲಿ ಒಂದಾಗ ತಲು ಮತ್ತೊಂದು ಕ್ರಮವನ್ನನುಸರಿಸಿ ಪಾಠ ಹೇಳುವುದರಿಂದ ಬಾಲಕರಿಗ ಸ್ವತಃ ಕಲಸ ಮಾಡುವ ಶಕ್ತಿಯನ್ನು ಕ್ರಮೇಣ ಉಂಟು ಮಾಡಿದಂತಾಗುವುದು. ಇದರಿಂದ ಮುಂದೆ ವ್ಯವಹಾರಕ್ಕೆ ತಕ್ಕವರನ್ನಾಗಿ ಮಾಡಬೇಕೆಂಬ ವಿದ್ಯಾಭ್ಯಾಸದ ಉದ್ದೇಶವು ಸರಿಯೇರುವುದಕ್ಕೆ ಸಹಾಯವಾಗುವುದು. ಎಂ. ಹಿರಿಯಣ್ಣ

ಭತ್ತದ ಕೈರು.

ವಿಷಯ.	ಬೋಧನ ಕ್ರಮ.
I. ಆಗುವ ಸ್ಥಳ.	ಪ್ರಶ್ನೆಗಳನ್ನು ಯಾವ ರೀತಿಯಿಂದ ಮಾಡುತ್ತಾರೆ? ಉತ್ತರದಿಂದ.
ನಮ್ಮ ಇಂಡಿಯಾ ದೇಶದಲ್ಲೂ, ಚೈನಾದೇಶದಲ್ಲೂ, ದಕ್ಷಿಣ ಅಮೇರಿಕಾದಲ್ಲೂ, ಈಜಿಪ್ಟ್ ದೇಶದ ನೈಲ್ ನದೀತೀರದಲ್ಲೂ ಭತ್ತದ ವ್ಯವಸಾಯ ಮಾಡುತ್ತಾರೆ. (೧)	(೧) ಈ ಸ್ಥಳಗಳನ್ನು ಭೂಪಠದಲ್ಲಿ ತೋರಿಸಬೇಕು.
(೨) ಇಟಲಿ ಸ್ಪೇನ್, ಉತ್ತರ ಅಮೇರಿಕಾದಲ್ಲಿ ದಕ್ಷಿಣ ಕರೋಲಿನಾ ಎಂಬ ಸ್ಥಳಗಳಲ್ಲಿ ಸ್ವಲ್ಪವಾಗಿ ವ್ಯವಸಾಯವಾಗುತ್ತದೆ	
II. ವ್ಯವಸಾಯ ಮತ್ತು ಕಟಾವು	
ಭತ್ತದ ಬೆಳೆಗೆ ಜಾಗುಭೂಮಿ ಅವಶ್ಯಕ. ಗದ್ದೆಗಳಲ್ಲಿ ಆಗಾಗ್ಗೆ ನೀರು ನಿಲ್ಲುವಂತೆ ಮಾಡುತ್ತಾರೆ ಸ್ವಲ್ಪ ಮಳೆ ಆಗುವ ಪ್ರದೇಶಗಳಲ್ಲಿ ಕಾಲುವೆಗಳಮೂಲಕ ನೀರು ಹಾಯಿಸುತ್ತಾರೆ(೨) ಹೀಗೆ ಹಾಯಿಸಿದ ನೀರು ಇಂಗಿದ ಮೇಲೆ ನಿಲ್ಲುವ ಕೆಸರಿನಲ್ಲಿ ಸೈರುಗಳನ್ನು ನಾಟ ಹಾಕುತ್ತಾರೆ.	(೨) ಇದನ್ನು ಉದಾಹರಣೆಯಿಂದ ಸ್ಪಷ್ಟಪಡಿಸಬೇಕು.
ಸೈರುಗಳು ೬—೯ ಅಂಗುಲ ಉದ್ದವಾದಕೂಡಲೆ ಅವುಗಳನ್ನು ಕಿತ್ತು, ತುದಿಗಳನ್ನು ಕತ್ತರಿಸಿ, (೪) ನೀರನ್ನು ತೊಳೆದು ಒಂದೊಂದು ಅಡಿ ದೂರಕ್ಕೆ ಒಂದೊಂದು ಗಿಡದಂತೆ ನೆಡುತ್ತಾರೆ. ಆಗಾಗ್ಗೆ ಸೈರುಗಳ ಮೇಲೆ ಸುಣ್ಣದ ನೀರನ್ನು ಚಿಮುಕಿಸುವುದುಂಟು. (೫) ಇತರ ಗಿಡಗಳ್ಯಾವವೂ ಇವುಗಳಿಗೆ ಕುಂದಕ ಮಾಡದಂತೆ, ಬಹಳ ಶ್ರಮಪಟ್ಟು ಆಗಾಗ್ಗೆ ಕಳೆಯನ್ನು ಕೀಳುತ್ತಾರೆ.	(೩) ಕವಲುಗಳು ಒಡೆಯುವದಕ್ಕೆ (ದೃಷ್ಟಾಂತ ಕೊಡಿ.) (೪) ಹಳು ಹತ್ತದೆ ಇರುವದಕ್ಕೆ

ಗಳಿಗೆ ತಿಳಿಸುವದು, ಈ ಕಾರ್ಯಗಳೆಲ್ಲಾ ಕ್ಲುಪ್ತಕಾಲ ಅಂದರೆ ಅರ್ಧಘಂಟೆ ಒಳಗಾ
ಮುಗಿಯುವಂತಿರಬೇಕು)

(೨) ಬಾಲಕರೆಲ್ಲರೂ ಪರಸ್ಪರಾಭಿಮುಖರಾಗಿ (ಬಬ್ಬರಿದಿಗೊಬ್ಬರು) ನಿಂತುಕೊ
ಳ್ಳುವಂತೆ—ಅಥವಾ ಸಾಕಾದಷ್ಟು ಸ್ಥಳವಿದ್ದಲ್ಲಿ ಬೆಂಚ್ ಇಲ್ಲವೆ ನೆಲದಮೇಲೆ ಕೂತ
ಕೊಳ್ಳುವಂತೆ ಮಾಡಬೇಕು. (ಮುಖ್ಯವಾಗಿ ಉಪಾಧ್ಯಾಯನು ಎಲ್ಲಾ ಬಾಲಕ
ರನ್ನೂ ನೋಡುತ್ತಾ ಒಬ್ಬನ ಬರಹವನ್ನು ಮತ್ತೊಬ್ಬನು ನೋಡಿ ಬರೆಯುದಂ
ನಿರೋಧಿಸತಕ್ಕದ್ದು)

(೩) ಈರೀತಿ ಬಾಲಕರನ್ನು ಕ್ರಮಪಡಿಸಿದನಂತರ ಹೇಳಿ ಬರೆಯಿಸಬೇಕಾದ ಶಬ್ದ
ಮತ್ತು ವಾಕ್ಯಗಳನ್ನು ಸ್ಪಷ್ಟವಾದ ಉಚ್ಚಸ್ವರದಿಂದ ಮಾತನಾಡಿದಂತೆ ವಿದ್ಯಾರ್ಥಿ
ಗಳಿಗೆಲ್ಲಾ ಕೇಳಿಸುವಹಾಗೆ ಹೇಳಬೇಕು. ದೀರ್ಘಾಕ್ಷರಗಳನ್ನು ಪ್ಲುತೋಚ್ಚಾರ
ದಂತೆಹೆಚ್ಚು ದೀರ್ಘವಾಗಿಯೂ, ಮಹಾಪ್ರಾಣಾಕ್ಷರಗಳನ್ನು ಹೆಚ್ಚಾಗಿ ಒತ್ತಿಯೂ
ಹೇಳದೆ ಸಾಮಾನ್ಯಸ್ವರದಿಂದ ಹೇಳಿದರೆ ಶಬ್ದರೂಪಗಳ ನಿಶ್ಚಯಜ್ಞಾನಕ್ಕೆ ಸಹ
ಕಾರಿಯಾಗುವುದು.

(೪) ಪದಗಳನ್ನು ವಿದ್ಯಾರ್ಥಿಗಳು ಬರೆಯುವುದಕ್ಕೆ ಆಗದಷ್ಟು ಬೇಗಬೇಗನೆ ಹೇಳ
ಬಾರದು. ಬಹಳಹೊತ್ತು ಅವಕಾಶವನ್ನೂ ಕೊಡಕೂಡದು. ತಕ್ಕಷ್ಟುಕಾಲ ವಿಚ್ಛಿ
ತ್ತಿಯಿಂದ ಹೇಳಬೇಕು.

(೫) ಹೇಳಿ ಬರೆಯಿಸಿದಬಳಿಕ ಒಬ್ಬನ ಹಲಿಗೆಯನ್ನು ಮತ್ತೊಬ್ಬನಿಗೆ ಕೊಡಿಸಿ
ಉಪಾಧ್ಯಾಯನು ಒಂದೊಂದು ಪದಕ್ಕೆ ವರ್ಣಕ್ರಮವನ್ನು ಹೇಳುತ್ತಾ ಹುಡುಗರಿಂ
ದಲೇ ತಪ್ಪುಗಳಿರುವ ಶಬ್ದದ ಕೆಳಗೆ—ಈರೀತಿ ಗೀಟನ್ನಾಗಲಿ, ಅಥವಾ ತಪ್ಪಿರುವ
ಅಕ್ಷರದ ಮೇಲೆ × ಈರೀತಿ ಕತ್ತರಿಗೀಟನ್ನಾಗಲಿ ಹಾಕಿಸಿ ತಪ್ಪುಗಳಿಸ್ಟೆಂಬುದನ್ನು
ಗೊತ್ತುಮಾಡಿಸಬೇಕು. ಆದರೆ ವಿದ್ಯಾರ್ಥಿಗಳ A ಮತ್ತು B ತರಗತಿಗಳಲ್ಲಿ ಉಪಾಧ್ಯಾ
ಯನೇ ಎಲ್ಲರ ಹಲಿಗೆಯನ್ನು ನೋಡಬೇಕೇಹೊರತು ಈ ಕ್ರಮವನ್ನನುಸರಿಸುವುದು
ತಕ್ಕುದಾಗಿ ತೋರುವುದಿಲ್ಲ.

(೬) ಇಷ್ಟಾದಬಳಿಕ ಬಾಲಕರು ತಪ್ಪುಗಳನ್ನು ಸರಿಯಾಗಿ ಗೊತ್ತುಮಾಡಿದ್ದಾರೆ
ಯೇ ಇಲ್ಲವೇ ಎಂಬುದನ್ನು ಉಪಾಧ್ಯಾಯನೇ ಅಲ್ಲಲ್ಲಿ ೧—೨ ಹಲಿಗೆಗಳನ್ನು ನೋಡಿ
ಅವರವರ ಹಲಿಗೆಗಳನ್ನು ಅವರವರಿಗೆ ಕೊಡಿಸುವುದು.

ಪೂರ್ವದಲ್ಲಿ ಇಂಗ್ಲೆಂಡಿಗೆ ಅಕ್ಕಿಯನ್ನೇ ಕಳುಹಿಸುತ್ತಿದ್ದರು. ಈಗ ಭತ್ತವನ್ನೇ ತರಿಸಿಕೊಂಡು ಯಂತ್ರಸಹಾಯದಿಂದ ಅಲ್ಲಿ ಕುಟ್ಟಿ ಅಕ್ಕಿ ಮಾಡಿಕೊಳ್ಳುತ್ತಾರೆ. ಇದರಿಂದ ಅಕ್ಕಿಯ ರುಚಿಯು ಪೂರ್ವದಂತೆ ಕಮ್ಮಿಯಾಗುವುದಿಲ್ಲ ಪೂರ್ವದೇಶಗಳಲ್ಲಿ ರಾಜರುಕೂಡ ಅನ್ನವನ್ನು ತಿನ್ನುತ್ತಾರೆ. (೭)

(೭)ಉಷ್ಣದೇಶದವರಿಗೆ ಅಕ್ಕಿಯಷ್ಟು ಅನುಕೂಲವಾದ ಆಹಾರ ಇನ್ನು ಯಾವದೂ ಇಲ್ಲ.

ಉಕ್ತಲೇಖನ

ಹೇಳಲ್ಪಟ್ಟ ಶಬ್ದ ಮತ್ತು ವಾಕ್ಯಗಳನ್ನು ಪುಸ್ತಕದಲ್ಲಿ ನೋಡಿಕೊಳ್ಳದೆ ಬರೆಯುವದಕ್ಕೆ "ಉಕ್ತಲೇಖನ" ವೆಂದು ಹೆಸರು. ಇದರಿಂದ ಅಕ್ಷರಗಳ ಜ್ಞಾನವೂ, ಶಬ್ದಗಳ ನಿಶ್ಚಿತ ಸ್ವರೂಪ ಜ್ಞಾನವೂ ಉಂಟಾಗುವುದಲ್ಲದೆ ಗ್ರಹಣ ಶಕ್ತಿಯೂ, ಜ್ಞಾಪಕ ಶಕ್ತಿಯೂ, ಬಲಪಡುವುವು. ಈ ಕೋರಿಕೆಗಳು ನೆರವೇರಬೇಕಾದರೆ ತಕ್ಕ ಕ್ರಮದಿಂದ ಈ ಪಾಠವನ್ನು ನಡೆಯಿಸಬೇಕು. ಇಂಗ್ಲಿಷ್ ಭಾಷೆಯಲ್ಲಿ ಅನೇಕ ಶಬ್ದಗಳಿಗೆ ಅಕ್ಷರ ಸಂಯೋಜನದಂತೆ ಉಚ್ಚಾರವೂ, ಉಚ್ಚಾರದಂತೆ ಅಕ್ಷರ ಸಂಯೋಜನವೂ ಇಲ್ಲದಿರುವುದರಿಂದ ತದ್ಭಾಷಾಭ್ಯಾಸಿಗಳಿಗೆ ಉಕ್ತಲೇಖನಕ್ರಮವು ಅತ್ಯಂತಾವಶ್ಯವಾಗಿದೆ. ಕರ್ಣಾಟಕ ಭಾಷೆಯಲ್ಲಿ ಅಂತಹ ತೊಂದರೆಗಳು ವಿಶೇಷವಾಗಿಲ್ಲದಿದ್ದರೂ ಲೋವರ್‌ಸೆಕೆಂಡರೀ ಪರೀಕ್ಷೆಯಾಗುವವರೆಗೂ ಬಾಲಕರಿಗೆ ಉಕ್ತಲೇಖನವನ್ನು ಬರೆಯಿಸಲೇಬೇಕು. ವ್ಯಾಕರಣದಲ್ಲಿ ವಿದ್ಯಾರ್ಥಿಗಳಿಗೆ ಜ್ಞಾನವುಂಟಾದಬಳಿಕ ಶಬ್ದಗಳ ಪ್ರಕೃತಿಪ್ರತ್ಯಯ ರೂಪಗಳೂ ಅಲ್ಲಲ್ಲಿ ಬರುವ ಆಗಮಾದೇಶಕಾರ್ಯಗಳೂ ಗೊತ್ತಾಗುವುದರಿಂದ ಉಕ್ತಲೇಖನವು ಅಂತವರಿಗೆ ಅವಶ್ಯವಿಲ್ಲ ತರಗತಿಯು ಯೋಗ್ಯತೆಯು ಹೆಚ್ಚುಕಡಮೆಯಿದ್ದಂತೆ ಉಕ್ತಲೇಖನವನ್ನು ಹೇಳುವ ಕ್ರಮದಲ್ಲೂ ಹೆಚ್ಚುಕಡಮೆಗಳನ್ನು ಮಾಡಿಕೊಳ್ಳಬೇಕು.

ಸಾಮಾನ್ಯನಿಯಮಗಳು.

(೧) ಉಪಾಧ್ಯಾಯನು ತರಗತಿಯ ಯೋಗ್ಯತೆಗ ತಕ್ಕಹಾಗೆ ಅವರು ಓದಿರುವ ಪುಸ್ತಕದಲ್ಲಿರುವ ಕೆಲವು ಪದಗಳನ್ನೂ ಕೆಲವು ಸೊಸಪದಗಳನ್ನೂ, ಕೆಲವು ವಾಕ್ಯಗಳನ್ನೂ, ಆರಿಸಿ ಗುರ್ತುಮಾಡಿಕೊಂಡಿರತಕ್ಕದ್ದು. (ಹೇಳಿಬರೆಯಿಸುವುದು, ತಪ್ಪು ತಿದ್ದಿಸುವುದು, ಸರಿಯಾದ ರೂಪಗಳನ್ನು ಕಪ್ಪು ಹಲಿಗೆಯ ಮೇಲೆ ಬರೆದು ವಿದ್ಯಾರ್ಥಿ

ಇಂಗ್ಲಿಷರಮೇಲೆ ಬಿದ್ದು ಒಂದೇ ಏಟಿನಲ್ಲಿ ಇಂಗ್ಲಿಷ್ ತೋಪಸು ಹಾರಿಸುತ್ತಲಿದ್ದವರನ್ನು ಓಡಿಸಬೇಕೆಂದು ಕುದುರೆಗಳನ್ನೆಲ್ಲಾ ತಗದುಕೊಂಡು ತೋಫಿನಮೇಲೆ ನುಗ್ಗಿದನು. ಇದಿರಾಗಿ ಬರುತಿದ್ದ ಗುಂಡಿನಸಪ್ಪಳಕ್ಕೆ ಮೀರ್‌ಮದನನು ಸಕ್ಕಲು ಮಾತ್ರ ಪಟ್ಟನು ಸಿರಾಜದ್ದೌಲನು ಧೈರ್ಯಗೆಟ್ಟು, ದಿಕ್ಕುತೋರದೆ ಸೇನೆಯನ್ನು ಹಿಮ್ಮೆಟ್ಟುವಂತೆ ಆಜ್ಞಾಪಿಸಿದನು. ದೂರದಲ್ಲಿದ್ದ ಮೀರ್‌ಜಾಫರನನ್ನು ಹತ್ತರಕ್ಕೆ ಕರಿಸಿಕೊಂಡು ತನಗೆ ಉಂಟಾದ ನಷ್ಟವನ್ನು ತಿಳಿಸಿ ಬಹು ದುಃಖದಿಂದ ತನ್ನ ತಲೆಯುಮೇಲಿದ್ದ ಪಾಗನ್ನು ತೆಗೆದು ದ್ರೋಹಿಯು ಪಾದದಮೇಲಿಟ್ಟು ಪರದೇಶೀಯರಾದ ಶತ್ರುಗಳಮೇಲೆ ಹೋರಾಡೆಂದು ಕೈಜೋಡಿಸಿ ಬಹಳ ಬೇಡಿಕೊಂಡನು. ಮೀರಜಾಫರನು ತನ್ನ ಸೈನ್ಯವನ್ನು ತೆಗೆದುಕೊಂಡು ಬಂದು ಶತ್ರುಗಳಮೇಲೆ ಬೀಳುವೆನೆಂದೂ, ಸ್ವಾಮಿಯೂದ್ರೋಹಿಯಾದ ನವಾಬನನ್ನು ಕಾಯುವೆನೆಂದೂ ಶಪಥವೂಡಿಕೊಂಡು ತಟಸ್ಥವಾಗಿದ್ದ ತನ್ನ ಸೈನ್ಯವನ್ನು ತೆಗೆದುಕೊಂಡು ಬರುವ ನೆಪದಿಂದ ಹೊರಡಲು, ಕ್ಲೈವನಿಗೆ ಮುಂದೆ ನುಗ್ಗಿಯುದ್ಧವನ್ನು ಪ್ರತಿಜ್ಞೆಮಾಡಿ ಶತ್ರುವಾದ ಸಿರಾಜನನ್ನು ಗೆಲ್ಲುವಂತೆ ಹೇಳಿಕಳುಹಿಸಿದನು. ಇಂಗ್ಲಿಷರು ಅದೇವೇಳೆಗೆ ಸಿರಾಜನಮೇಲೆ ಬಿದ್ದರು; ಆದರೆ ಆಗಾಗ್ಗೆ ಮೋಸಗಾರನಾಗಿದ್ದ ಸ್ವಾಮಿದ್ರೋಹಿಯೂ ವೀರಜಾಫರನ ಸೈನ್ಯದಮೇಲೆ ಒಂದೊಂದು ಗುಂಡನ್ನು ಹಾರಿಸುತ್ತಾ ಅವನ ಸೈನ್ಯವನ್ನು ದೂರದಲ್ಲೇ ಇಟ್ಟಿದ್ದರು. ಸುಮಾರು ಸಾಯಂಕಾಲ ನಿಮಿಷಗಂಟೆಯುಹೊತ್ತಿಗೆ ಸಿರಾಜನ ಸೈನ್ಯವೆಲ್ಲ ಮಾಯವಾಗುತಾಬಂತು. ಅನೇಕರು ರಣರಂಗವನ್ನು ಬಿಟ್ಟುಓಡಿದರು. ಬಹುಮಂದಿ ಮೃತರಾದರು. ಫ್ರೆಂಚರುಮಾತ್ರ ಕೊನೆಯುವರೆಗೂ ಬಹು ಸಾಹಸವೂಡಿದರು. ಕ್ಲೈವನು ತನ್ನ ಸೈನ್ಯವನ್ನು ತೆಗೆದುಕೊಂಡು ಹೋಗಿ ಅವರಮೇಲೆ ಬೀಳುವವರೆಗೂ ಅವರು ಕದಲಲಿಲ್ಲ. ನಲ್ವತ್ತು ಐವತ್ತು ಮಂದಿ ಏನುತಾನೇ ಮಾಡಾರು. ನವಾಬನೂ ಓಡಿದನು. ಸಾಳೆಯದ ಐಶ್ವರ್ಯವೆಲ್ಲಾ ಇಂಗ್ಲಿಷರ ಕೈಸೇರಿತು. ಆನೆ, ಕುದುರೆ, ದನ, ಫಿರಂಗಿ ಗುಂಡು ಇವೆಲ್ಲಾ ಮುಂತಾದವು ಇಂಗ್ಲಿಷರಸಾಲಾಯಿತು.

ಪ್ಲಾಸಿಕದನವು ಪೂರೈಸಿತು. ಬೆಳಿಗ್ಗಿನಿಂದ ಸಾಯಂಕಾಲದವರೆಗೂ ನಡೆದ ಘೋರವಾದ ಈ ಕದನದಲ್ಲಿ ಇಂಗ್ಲಿಷರಕಡೆ ಏಳುಮಂದಿ ಸೋಲ್ಜರುಗಳು, ೧೬ಮಂದಿ ಶಿಪಾಯಿಗಳೂ ಮಡಿದರು. ನವಾಬನ ಕಡೆಯವರು ಐನೂರುಮಂದಿಯವರೆಗೆ ಮಡಿದಿದ್ದರೂ ಸಾವಿರಾರುಮಂದಿ ಇನ್ನೂ ಉಳಿದಿದ್ದರು. ಶಿಕ್ಷಿತರಾದ ಇಂಗ್ಲಿಷ್‌ಸೈನಿಕರ

(೭) ತಮ್ಮತಮ್ಮ ಹಲಿಗೆಯನ್ನು ಸಾವಧಾನರಾಗಿ ನೋಡಿಕೊಳ್ಳುವಂತೆ ಹೇಳಿ ಹೆಚ್ಚು ತಪ್ಪು ಬರೆದವನ ಹಲಿಗೆಯಲ್ಲಿರುವ ತಪ್ಪಾದ ಪದಗಳನ್ನು ಸಾಮಾನ್ಯವಾಗಿ ಎಲ್ಲರೂ ತಪ್ಪಬಹುದಾಗಿರುವ ಪದಗಳನ್ನೂ ಅವನಿಂದಲೂ ಇತರರಿಂದಲೂ ವರ್ಣಕ್ರಮವನ್ನು ಹೇಳಿಸುತ್ತಾ ಶಬ್ದರೂಪಗಳನ್ನು ಕರೀ ಹಲಿಗೆಯ ಮೇಲೆ ಚೆನ್ನಾಗಿ ಬರೆದು ತಾವುತಾವು ಬಂದಿರುವ ತಪ್ಪುಗಳುಳ್ಳ ಶಬ್ದಗಳನ್ನು ಪ್ರತಿಯೊಬ್ಬರು ಸರಿಯಾಗಿ ಬರೆದುಕೊಳ್ಳುವಂತೆ ಅಪ್ಪಣೆ ಕೊಟ್ಟು ಅವರು ಅದರಂತೆ ಬರೆದುಕೊಂಡರೋ ಇಲ್ಲವೋ ಎಂಬುದನ್ನು ಉಪಾಧ್ಯಾಯನು ನೋಡಿ ಬರೆಯಿಸಬೇಕು. ಕಠಿಣ ಪದಗಳನ್ನು ಕರೀ ಹಲಿಗೆಯ ಮೇಲೆ ಬರೆದು ಶುದ್ಧರೂಪಗಳನ್ನು ಹುಡುಗರಿಗೆ ತಿಳಿಸಿದಹೊರತು ಉಕ್ತ ಲೇಖನದ ಪ್ರಯೋಜನವು ಆಗುವದಿಲ್ಲ. ಇದು ಮುಖ್ಯವಿಷಯವಾಗಿದೆ. ಹೀಗೆ ಇಪ್ಪತ್ತೈದಕ್ಕಿಂತ ಕೆಲವು ಪದ್ಯಗಳನ್ನು ಹೇಳಿ ಬರೆಯಿಸಿ ತಪ್ಪುಗಳನ್ನು ನೋಡಿ ಸರಿಬರೆಯಿಸುವುದೂ ಒಂದೇ. ಉಕ್ತಲೇಖನವನ್ನು ಬರೆಯಿಸದಿರುವುದೂ ಒಂದೇ.

ಎಚ್. ಹನುಮಂತರಾವ್,

ಹೆಡ್‌ಮ್ಯಾಸ್ಟರ್ ನೆಲವಂಗಲ.

ಸ್ಪಾನಿಸ್ ಕಾದನ.

(೬೯ನೇ ಪುಟದ ಶೇಷ)

ಇಷ್ಟರಲ್ಲೇ ಮಧ್ಯಾಹ್ನವಾಯಿತು. ನರಾಜನಿಗೆ ಮೃತ್ಯುವಾಗಿ ನಡೆದ ಮಧ್ಯಾಹ್ನದಲ್ಲಿ ಸೂರ್ಯನು ಕರೀಮೋಡದಿಂದ ಮುಚ್ಚಲ್ಪಟ್ಟು ಭಯಂಕರವಾದ ಗಡುಗು ಮಿಂಚಿನಿಂದ ದೊಡ್ಡಮಳೆಯೇ ಬಿದ್ದಿತು. ಈ ಪ್ರಳಯದಲ್ಲಿ ನಿರಾಜನ ಸೈನ್ಯದಲ್ಲಿದ್ದ ಮದ್ದು ಎಲ್ಲಾ ಸಂಪೂರ್ಣವಾಗಿ ಉಪಯೋಗವಿಲ್ಲದಂತೆ ಆಯಿತು. ಕ್ಲೇವನು ತನ್ನಲ್ಲಿದ್ದ ಮದ್ದುಗುಂಡನ್ನು ಬಹುಜೋಪಾನ ಮಾಡಿ ಒಂದು ಹನಿಯೂ ಬೀಳದಂತೆ ಕಾಪಾಡಿಕೊಂಡದ್ದರಿಂದ ಶತ್ರುವಿನ ಮೂಲೋತ್ಪಾಟನವಾಡಲು ಅವನಿಗೆ ಆ ದಿವಸ ಅನುಕೂಲಿಸಿತು. ಇದಲ್ಲವೇ ಸೇನಾಪತಿಯ ಜಾಗರೂಕತೆ.

ಇಂಗ್ಲಿಷರ ತೋಫಿನಪೆಟ್ಟು ಬಲವಾಗಲು ಸಹಿಸಲಾರದೆ ನವಾಬನ ಪಕ್ಷದ ಮಿತ್ರ ದಳಪತಿಯಾದ ವೀರಮದನನು ಸವಾರರೊಡನೆ ಧೈರ್ಯವಾಗಿ

ನಾದ ಯತಿಶ್ರೇಷ್ಠನನ್ನು ಸ್ವೀಕರಿಸಿ ವಿದ್ಯಾರಣ್ಯರೆಂಬ † ಹೆಸರಿನಿಂದ ಶೃಂಗೇರೀ ಮಠದ ಗುರುಪೀಠವನ್ನಲಂಕರಿಸಿದರು. ಇವರು ಕ್ರಿ. ಶ. ೧೩೩೧ ರಲ್ಲಿ ಆ ಮಠದ ಗುರುಪೀಠವನ್ನೇರಿ ಕ್ರಿ. ಶ. ೧೩೮೬ ರಲ್ಲಿ ಪ್ರಾಪ್ತವಾದ ಅವಸಾನಕಾಲಪರಿಯಂತ ಗೌರವವಾದ ಆ ಮಹತ್ಪದವಿಯಲ್ಲೇ ಇದ್ದರೆಂದು ಮಠದ ಇತಿಹಾಸದಿಂದ ತಿಳಿಯುಬರುವದು. ಆದರೆ ಅವರು ಆ ಪದವಿಗೇರಿದಕಾಲದ ವಿಷಯವಾಗಿ ಸ್ವಲ್ಪ ತಪ್ಪಿರಬೇಕೆಂತ ನಂಬುತ್ತೇವೆ; ಯಾಕಂದರೆ? ಮಾಧವಾಚಾರ್ಯರು ವಿಜಯನಗರ ರಾಜ್ಯ ಸ್ಥಾಪನೆಗಾಗಿ ಬುಕ್ಕರಾಯನಿಗೆ ಬಹಳ ಸಹಾಯವೊದಿ ಅನೇಕ ವರ್ಷಗಳ ಪರಿಯಂತ ಆ ರಾಜನ ಮಂತ್ರಿಯಾಗಿದ್ದರೆಂಬುದು ಪ್ರಸಿದ್ಧವಾಗಿದೆ. ಹಾಗೂ ವಿಜಯನಗರಸಂಸ್ಥಾನವು ಸುಮಾರು ಕ್ರಿ. ಶ. ೧೩೩೦ ಅಥವಾ ೧೩೩೬ರಲ್ಲಿ ಸ್ಥಾಪಿತವಾಗಿ ವಿಜಯನಗರವೆಂಬ ರಾಜಧಾನಿಯು ಕ್ರಿ. ಶ. ೧೩೮೮ ರಲ್ಲಿ ಕಟ್ಟಿಲ್ಪಟ್ಟತೆಂದು ತಿಳಿಯುವೆವು. ಆ ಪಟ್ಟಣವು ಮೊದಲಲ್ಲಿ ವಿದ್ಯಾನಗರವೆಂಬ ಮಾಧವಾಚಾರ್ಯರ ಮೈದಿಳ ನಾಮ ಉಳ್ಳದ್ದಾಗಿತ್ತೆಂದು ಇತಿಹಾಸದಿಂದ ತಿಳಿಯುವದು.

ಮಾಧವಾಚಾರ್ಯರು ಈ ರಾಜ್ಯಸ್ಥಾಪಿತವಾದಂದಿನಿಂದ ಬಹುಶಃ ರಾಜಧಾನೀಪಟ್ಟಣವು ಕಟ್ಟಿ ಮುಗಿಯುವವರಿಗೂ ಬುಕ್ಕರಾಜನ ಮಂತ್ರಿಯಾಗಿದ್ದು ಮಾಡಿದ ಉಪಕಾರಸ್ಮರಣೆ * ಯಿಂದ ಅವನು ರಾಜಕೀಯಾಗ್ರಸ್ಥಾನವನ್ನು ಬಿಟ್ಟು ಶೃಂಗೇರೀಮಠದ ಉತ್ತರಪದವಿಗೇರಿದ ತನ್ನ ಮಂತ್ರಿಯ ಹೆಸರಿನಿಂದ ಆ ಪಟ್ಟಣವನ್ನು ಕರೆದನೆಂದು ಊಹಿಸುವದೇ ಈ ತೊಂದರೆಗಳನ್ನು ಪರಿಹರಿಸುವ ಮಾರ್ಗವು.

ನನ್ನ ಊಹೆಯನ್ನು ದೃಢಪಡಿಸುವದನ್ನಾಗಲೀ ಗ್ರಾಹ್ಯವಾದ ವಿವರಣೆಯನ್ನು ಸೂಚಿಸುವದನ್ನಾಗಲೀ ದೂರ ಶೋಧನೆಗೆ ಉಳಿಸಿರುವುದು.

ಮಾಧವಾಚಾರ್ಯರ ಹೆಸರಿನಲ್ಲಿ ಪ್ರಸಿದ್ಧಿಗೊಂಡಿರುವ ೨೯ ಗ್ರಂಥಗಳೂ ಅವರು ಶೃಂಗೇರೀ ಮಠದ ಗುರುಪೀಠಸ್ಥರಾಗಿದ್ದ ಕ್ರಿ. ಶ. ೧೩೩೧ ರಿಂದ ೧೩೮೬ ರವರಗಿನ ೫೫ ವರ್ಷಗಳೊಳಗೆ ೩೦ ವರ್ಷಗಳ ಕಾಲದಲ್ಲಿ ಇತರರ ಸಹಾಯವು ಸಂಪೂರ್ಣವಾಗಿಲ್ಲದೆ ಅವರಿಂದಲೇ ರಚಿಸಲ್ಪಟ್ಟುದೆಂದು ಡಾಕ್ಟರ್ ಬರ್ನೆಲ್ಲರವರು

† ಶೃಂಗೇರಿ ಮಠದ ಗುರುಗಳು ವಿದ್ಯಾರಣ್ಯರಕಾಲದಿಂದಲೂ "ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ" ಎಂಬ ಬಿರುದನ್ನು ವಹಿಸಿರುವದ್ದರಿಂದ ವಿದ್ಯಾರಣ್ಯರೂ ಮಾಧವಾಚಾರ್ಯರೂ ಒಬ್ಬರೇ ಎಂಬುವೆದರಲ್ಲಿ ಸಂದೇಹವಿಲ್ಲ.

ಮೇಲೆ ಕೈವೊಡಲಾರದೆ ಹೋದರು ದೊಹಿಯೂದ ವೀರರಾಜಾಘರನು ಹಿಂದಣ ಒಪ್ಪಂದದವೆರೆ ರಾಜ್ಯವನ್ನು ಪಡೆಯಲು ಇಂಗ್ಲಿಷರ ಪಾಳಯವನ್ನು ಪ್ರವೇಶಿಸಲು, ಇಂಗ್ಲಿಷರು ಮರ್ಯಾದಾಸೂಚಕವಾಗಿ ಕತ್ತಿಯನ್ನು ಹಿರಿಯಲು ಉದ್ಯುಕ್ತರಾದಾಗ ಹೇಡಿಯಂತೆ ನಡುಗತಿದ್ದು ಕ್ಲೈವನು, ಬಂಗಾಳ, ಬಿಹಾರ, ಒರಿಸ್ಸಾ ಈ ಮೂರು ಪ್ರಾಂತ್ಯಗಳ ನವಾಬನಾದ ವೀರ್‌ಜಾಫರನಿಗೆ ಸಲಾಂ ಎಂದು ಮುಜುರೆಮಾಡಲು ಧೈರ್ಯಗೊಂಡು ಸದ್ಯಃ ಸ್ವಸ್ಥಚಿತ್ತನಾದನು

ವಿದ್ಯಾರಣ್ಯರ ಚರಿತ್ರೆಯು.

(೫೯ನೇ ಪುಟದ ಶೇಷ)

ಈ ಗ್ರಂಥದ ಅನೇಕಭಾಗಗಳ ಉಪಸಂಹಾರವಾಕ್ಯಗಳಲ್ಲಿ * ಸಾಯಣಾಚಾರ್ಯವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶೇ-ಎಂದಿರುವದರಿಂದ ಈ ಮಹಾಭಾಷ್ಯವು, ಪ್ರಮಾಣಾಂತರೂ ವಿದ್ವಾಂಸರೂ ಆದ ಮಾಧವಾಚಾರ್ಯರ ಪರಿಶೀಲನೆಯೊಡನೆ ಮುಖ್ಯವಾಗಿ ಸಾಯಣಾಚಾರ್ಯರಿಂದಲೇ ಬರೆಯಲ್ಪಟ್ಟು ಮಾಧವಾಚಾರ್ಯರ ಅಂಕಿತದಿಂದ ಪ್ರಚಾರಗೊಂಡಿರುವದೆಂದು ತಿಳಿಯಬರುತ್ತದೆ ಈ ಮಹತ್ಕಾರ್ಯವು ಬುಕ್ಕರಾಯನ ಆಳ್ವಿಕೆಯಲ್ಲಿ ಮುಗಿಯದೆ ಅವನನ್ನು ಹಿಂಬಾಲಿಸಿದ ಹರಿಹರರಾಯನ ಕಾಲದಲ್ಲಿ ಪೂರೈಸಿದಂತೆ ಕಾಣುವದು. ಯಾಕೆಂದರೆ : ಅಥರ್ವಣವೇದಭಾಷ್ಯದ ಅಂತ್ಯದಲ್ಲಿ ಹರಿಹರರಾಜನ ಸ್ತುತ್ಯವಚನವಿರುವದನ್ನು ಕಾಣುವೆವು. ಆದರೆ ಈ ಗ್ರಂಥವು ಪರಿಸಮಾಪ್ತಿಯಾಗುವದಕ್ಕೆ ಬಹುಕಾಲಕ್ಕೆ ಮುಂಚೆಯೇ ಮಾಧವಾಚಾರ್ಯರು ಪರಿಶುದ್ಧ

---

* ಯತ್ಕಟಾಕ್ಷೋಣತದೂಸಂ ದಧದ್ಬುಕ್ಕಮಹೀಪತಿಂ । ಅದಿಶನ್ಮಾಧವಾಚಾರ್ಯಂ ವೇದಾರ್ಥಸ್ಯಪ್ರಕಾಶನೇ । ದ್ವೇಪೂರ್ವೋತ್ತರವಿಭಾಮಂಸೇ ತೇನವ್ಯಾಖ್ಯಾಯತೀತಿ ಸಂಗ್ರಹಾತ್ । ಕೃಪಾಳುರ್ಮಾಧವಾಚಾರ್ಯಃ । ವೇದಾರ್ಥಂ ವಕ್ತುಮುದ್ಯತಃ ॥

ಡಾಕ್ಟರ ರಾಜೇಂದ್ರವಿತ್ರರು 'ಸಾಯಣಾಚಾರ್ಯಃ' ಎಂದು ಪಾಠವಿರುವದೆಂದು ಹೇಳುವರು. ಇದು ಯಥಾರ್ಥವಾಗಿದ್ದರೆ ಮಾಧವಾಚಾರ್ಯರು ತಮ್ಮ ಸಹೋದರರಾದ ಸಾಯಣಾಚಾರ್ಯರಿಗೆ ಅಂಕಿತವೊಡಿರುವರೆಂದು ತೋರಿಸುವರು.

(೨) ವೇದಾರ್ಥಪ್ರಕಾಶ—ಇದು ಚತುರ್ವೇದಗಳ ಸಮಗ್ರಭಾಷ್ಯವಾಗಿದ್ದು ಅವರಿಂದಲೂ ಸಹೋದರರಾದ ಸಾಯಣಾಚಾರ್ಯರಿಂದಲೂ ಬರೆಯಲ್ಪಟ್ಟಿದ್ದಾಗಿದೆ. ಮತ್ತು ಅವೋಘವಾದ ವಿದ್ಯಾಶೋಧನೆಗಳ ನಿಧಿಯಾಗಿರುವದು.

(೮) ಐತರೇಯ ಮತ್ತು ತಾಂಡ್ಯಬ್ರಾಹ್ಮಣಗಳ ಭಾಷ್ಯವು.

(೩) ಪರಾಶರಸ್ಮೃತಿಯವ್ಯಾಖ್ಯಾನ.

(೪) ನ್ಯಾಯಮೂಲಾವಿಸ್ತಾರ—ಇದು ಪೂರ್ವಮೀಮಾಂಸದ ಆಧಾರದಿಂದ ಬರೆದ ಗ್ರಂಥವು

(೫) ಸರ್ವದರ್ಶನಸಂಗ್ರಹ—ಇದು ಹಿಂದೂಸ್ಥಾನದಲ್ಲಿ ಪ್ರಚಾರವಿರುವ ವಿವಿಧ ಮತಸಿದ್ಧಾಂತಪದ್ಧತಿಗಳ ಸೂಕ್ಷ್ಮಶೋಧವು.

(೬) ದಶೋಪನಿಷದ್ದೀಪಿಕಾ, ಬ್ರಹ್ಮಗೀತಾ, ಪಂಚದಶೀ ಅಪರೋಕ್ಷಾನುಭೂತಿಟೀಕಾ ಮುಂತಾದ ಅದ್ವೈತಮತಸಿದ್ಧಾಂತಗಳ ವ್ಯಾಖ್ಯಾನಗಳ

(೭) ಶಂಕರವಿಜಯ—ಅದ್ವೈತಮತಸ್ಥಾಪಕರಾದ ಶಂಕರಾಚಾರ್ಯರ ಚರಿತ್ರೆಯು.

ಸುಮಾರು ಮುವ್ವತ್ತುನಾಲ್ವತ್ತು ವರ್ಷಗಳ ಕೆಳಗೆ ವೇದಾರ್ಥಪ್ರಕಾಶದ ಯೋಗ್ಯತೆಯು ಮತ್ತು ಅದರ ವೇದಾರ್ಥದಲ್ಲಿರುವ ಭರವಸೆಯು ವಿಷಯದಲ್ಲಿ ಬಹಳ ವಿವಾದವಿತ್ತು. ಹಾಗೂ ಎಮ್. ಲಾಂಗ್‌ಲಾಯ್ ಮುಂತಾದ ಪಂಡಿತರು ಸಾಯಣಾಚಾರ್ಯರ ಅಭಿಪ್ರಾಯವನ್ನು ಸಂಪೂರ್ಣವಾಗಿ ಬಿಟ್ಟು ಸ್ವತಂತ್ರವಾಗಿ ಋಗ್ವೇದಕ್ಕೆ ಅರ್ಥಹೇಳಲುಪಕ್ರಮಿಸಿದರು. ಪ್ರಾಚೀನಕಾಲದಿಂದಲೂ ವೇದಾರ್ಥವನ್ನು ಒಬ್ಬರಿಂದೊಬ್ಬರು ತಿಳಿಯುತ್ತಾ ಬಂದುದರಿಂದ ಮೂಲಾರ್ಥವು ಸಂಪ್ರದಾಯಪರಂಪರೆಗಳಿಂದ ನಿರ್ನಾಮವಾದೀತೆಂದು ಆಲೋಚಿಸಿದರು ಇದೂ ಅಲ್ಲದೆ ಸಾಯಣಾಚಾರ್ಯರೂ ಮಾಧವಾಚಾರ್ಯರೂ ವೇದಭಾಷ್ಯವನ್ನು ಸಾಂಪ್ರದಾಯಿಕವಿಚಾರದಿಂದಲೇ ರಚಿಸಿರುವರಾದ್ದರಿಂದ ವೇದಮಂತ್ರಗಳ ಮೂಲಾರ್ಥಗಳೆಂದು ನಂಬಲು ಯೋಗ್ಯವಲ್ಲವೆಂತ

ಇವರಿಗೂ ವಿಜಯನಗರದ ಅರಸನ ಮಹಾಸಭೆಯಲ್ಲಿ ವಾಗ್ವಾದನಡೆದು, ಕಾಂಚೀಪುರದಲ್ಲಿದ್ದ ಘನವಿದ್ವಾಂಸರೂ ನಿಷ್ಪಕ್ಷಪಾತಿಗಳೂ ವಿಶಿಷ್ಟಾದ್ವೈತಮತಾವಲಂಬಿಗಳೂ ಆಗಿದ್ದ ವೇದಾನ್ತದೇಶಿಕರ ಬಳಿಗೆ ಪರಿಶೀಲನಾರ್ಥವಾಗಿ ಅವಿಷಯಗಳನ್ನು ಬರೆದು ರಾಜನು ಕಳುಹಿಸಿರಲಾಗಿ ಅವರು ಅಸಿನಾತತ್ವಮಸಿನಾಪರಜೀವಪ್ರಭೇದಿನಃ | ವಿದ್ಯಾರಣ್ಯಮಹಾರಣ್ಯಮಕ್ಷೋಭ್ಯಮುನಿರಚ್ಛಿನತ್ ಎಂದು ವಿಮರ್ಶೆಮಾಡಿ ಕಳುಹಿಸಿದರು.

ಮುದ್ರಿಸಲ್ಪಟ್ಟಿರುವ ವಾನಪ್ರಸ್ಥಬ್ರಾಹ್ಮಣರ ಪೀಠಿಕೆಯಲ್ಲಿ ಬರದಿರುವರು.

ಆದರೆ ಕಾಲಗಳನ್ನು ಅವರು ತಿಳಿದಂತೆ ಬರದಿರುವರೆಂಬುದು ಸ್ಪಷ್ಟವು. ದಲ್ಲದೆ ಸಾಯಣಾಚಾರ್ಯರು ಮತ್ತು ಮಾಧವಾಚಾರ್ಯರು ಎಂಬ ಈ ಎರಡು ಹೆಸರು ಳೂ ಒಬ್ಬನನ್ನೇ ಹೇಳುತ್ತೆಂತಲೂ ಸಾಯಣರೇ ಭೋಗನಾಥರು. ಅಥವಾ ಾಧವಾಚಾರ್ಯರ ನಶ್ವರ ಶರೀರವು ಎಂದೂ, ಆತ್ಮವು ಏಷ್ಟು ಬಂದ್ದು ಎಂಬ ಭಿಪ್ರಾಯದಿಂದ ಬರೆದಿರುತ್ತಾರೆ. ಇವರು ಸಹೋದರರಾಶ ಈ ಮೂವರ ಹೆಸ ಗಳನ್ನು ಒಬ ರನ್ನೇ ಹೊಂದಿಸಿ ಹೇಳುವದು ಹಾಸ್ಯಾಸ್ಪದವಾಗಿದೆ. ಹೀಗೆ ಕೆಲವು ೀಳೆಯಲ್ಲಿ ಪಾಶಾ ಚ್ಯ ಪಾಂಡಿತ್ಯವು ವಿವೇಕವನ್ನೂ ಸಂಪ್ರದಾಯವನ್ನೂ ಏಕಪ್ರ ಕಾರವಾಗಿ ಧಿಕ್ಕರಿಸಿ ಅಧಿಕ ಸಾಹಸಕೃತ್ಯಗಳನ್ನು ಅಪಾಯಕರವಾದ ಕಲ್ಪನೆಗಳನ್ನು ಬಿಂಟುಮಾಡಿ ಬಹುಶಃ ನಮ್ಮನ್ನು ಬುದ್ಧಿಶೂನ್ಯರನ್ನಾಗಿ ಕಾಣುವಂತೆ ಮಾಡುವದು.

* ವಿದ್ಯಾರಣ್ಯರು ಆದಿಶಂಕರಾಚಾರ್ಯರಂತೆ ಅದ್ವೈತಸಿದ್ಧಾಂತವನ್ನು ಬೋ ಸುತ್ತಾ ಹೊರಟು ಇತರ ಸಿದ್ಧಾಂತ ವಿಚಾರಕರೊಡನೆ ಬಹುಕಾಲ ವಾದಿಸಿದರು. ಾಂಚೀಪುರದಲ್ಲಿ ವಿಶಿಷ್ಟಾದ್ವೈತಬೋಧಕರಾದ ಅಕ್ಷೋಭ್ಯತೀರ್ಥರೆಂಬ ವೈಷ್ಣವಸ ನ್ಯಾಸಿಗಳು ಇದ್ದರೆಂದು ಅವರೊಡನೆ ಇವರು ಪ್ರತಿಯೊಂದುಪದ್ಧತಿಯ ಪಾತ್ರತೆಯನ್ನು ುರಿತು ಘೋರವಾಗಿ ವಾದಿಸಿ ಕಡೆಗೆ ಜಯಪಡದರೆಂದು ಇತಿಹಾಸವುಂಟು ಈವಿಷಯ ಲ್ಲಿ ಅಕ್ಷೋಭ್ಯಂಕ್ಷೋಭಯೂಪಸವಿದ್ಯಾರಣ್ಯಮಹಾಮುನಿಃ ಎಂದು ಹೇಳಿದೆ. ಆದರೆ ವಿದ್ಯಾರಣ್ಯಮಹಾರಣ್ಯಮಕ್ಷೋಭ್ಯಮುವಿರಚ್ಚಿನತ್ ಎಂದು ವೈಷ್ಣವರ ಪಾಠವಿ ುವದ್ದು

ಇವರಲ್ಲಿ ಯಾರು ಜಯಶಾಲಿಗಳಾಗಿದ್ದರೂ ವಿದ್ಯಾರಣ್ಯರು ಭೋಗಗಳನ್ನ ನುಭವಿಸುತ್ತಾ ಸೋಮಾರಿಗಳಾಗಿ ವ್ಯರ್ಥಕಾಲಕ್ಷೇಪಮಾಡದೆ ಯಥಾರ್ಥಕಾರಣಗಳಿ ಗಾಗಿ ತಮ್ಮ ಅಪಾರವಿದ್ಯಾಸಾಮರ್ಥ್ಯವನ್ನು ವಿನಿಯೋಗಿಸಿದರು ಎಂದು ಈ ಇತಿಹಾ ಸದಿಂದ ಸ್ಪಷ್ಟವಾಗುವದು.

ಕ್ರಿ ಶ. ೧೩೮೬ರಲ್ಲಿ ಇವರಿಗೆ ಪ್ರಾಪ್ತವಾದ ಮರಣದಿಂದ ದೀರ್ಘಕಾಲ ಕಾಶಿಸುತ್ತಲಿದ್ದ ಅವರ ಲೇಖನಗಳಲ್ಲಿ ಮುಖ್ಯವಾದವುಗಳು.

ಮೂಲದಲ್ಲಿ ಹೇಳಿರುವಂತೆ ಅಕ್ಷೋಭ್ಯಮುನಿಗಳು ವಿಶಿಷ್ಟಾದ್ವೈತಮತದವರೂ ವೈಷ್ಣವಸಿದ್ಧಾಂತಿಗಳಾದ ಮಧ್ವಮತಾವಲಂಬಿಗಳು. ಸಾಯಣಾರ್ಯರಿಗೂ

ಶಿವಮೊಗ್ಗಾಡಿಸ್ಟ್ರಿಕ್ಟ್ ಉಪಾಧ್ಯಾಯಸಂಘ.

ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ ಉಪಯುಕ್ತವಾದ ಪಾಠಕ್ರಮ, ಬೋಧನಾಕ್ರಮ ಮುಂತಾದ ವಿದ್ಯಾವಿಷಯಗಳನ್ನು ಚರ್ಚಿಸಿ ತಿಳಿಯಲಪೇಕ್ಷೆಯಿಂದ ಸಾಗರದ ಸ್ಕೂಲ್‌ಗಳ ಉಪಾಧ್ಯಾಯರುಗಳು ಸ೯೧೮ ನೆ ಇಸವಿ ನವಂಬರ್ ತಾರೀಖು ೪ ರಲ್ಲಿ ಒಂದು ಸಂಘವನ್ನು ಏರ್ಪಡಿಸಿದರು. ಈ ಸಂಘದವರು ಪಡೆಯುವ ಪ್ರಯೋಜನವನ್ನು ಅರಿತು ಆದಿಯಲ್ಲಿ ಸಾಗರದ ಸುತ್ತಮುತ್ತಲಿರುವ ಗ್ರಾಮಾಂತರಗಳ ಉಪಾಧ್ಯಾಯರುಗಳೂ ಕ್ರಮೇಣ ಶಿವಮೊಗ್ಗಾಡಿಸ್ಟ್ರಿಕ್ಟಿನಲ್ಲಿರತಕ್ಕ ಉಪಾಧ್ಯಾಯರುಗಳೆಲ್ಲರೂ ವರ್ಷಂಪ್ರತಿಯಲ್ಲಿಯೂ ಶಿವಮೊಗ್ಗೆಯಲ್ಲಿ ಸಭೆಸೇರುತ್ತಲಿರುವರು.

ಆಗ್ಗೆ ಸ್ಕೂಲ್‌ಗಳ ಡಿಪ್ಯೂಟಿ ಇನ್‌ಸ್ಪೆಕ್ಟರವರಾಗಿದ್ದ ಮ॥ ರಾ॥ ಎಂ. ರಾಮಸ್ವಾಮಿಯ್ಯ ಬಿ. ಎ. ಯವರು ಈ ಸಭೆಗೆ ಅಧ್ಯಕ್ಷರಾಗಿರಲು ಸಮ್ಮತಿಸಿ ತಕ್ಕ ಪ್ರೋತ್ಸಾಹವನ್ನು ಕೊಟ್ಟರು. ಇವರ ತರುವಾಯ ಡಿಸ್ಟ್ರಿಕ್ಟಿಗೆ ದಯಮಾಡಿಸಿದ ಮ॥ ರಾ॥ ಎಂ. ಶ್ರೀನಿವಾಸರಾವ್, ಬಿ. ಎ ಯವರು ಬಹಳ ಆದರದಿಂದ ಈ ಸಂಘವನ್ನು ಪೋಷಿಸಿ, ಸಂಘದವರು ತಮ್ಮ ಅವಶ್ಯಕವಾದ ಕರ್ತವ್ಯವನ್ನು ಮರೆತು ವಿದ್ಯಾಭಿವೃದ್ಧಿಗೆ ಸಹಕಾರಿಯಲ್ಲದ ಇತರವಿಷಯಗಳಿಗೆ ಮನಸ್ಸು ಕೊಡದಂತೆ ಕ್ರಮಕ್ಕೆತಂದು ಈ ಸಭೆಯನ್ನು ಸ್ಥಾಪಿಸಿದರು. ಈಗ ದಯಮಾಡಿಸಿರುವ ಸ್ಕೂಲ್ ಡಿಪ್ಯೂಟಿ ಇನ್‌ಸ್ಪೆಕ್ಟರ್ ಮ॥ ರಾ॥ ಎಸ್ ರಂಗಾಚಾರ್ಯರವರೂ ತಕ್ಕ ಸಹಾಯಮಾಡಲು ಅನುಮೋದಿಸಿರುವರು.

ಇದುವರೆಗೂ ನಡೆದ ಸಭೆಗಳಲ್ಲಿ ಅನೇಕ ವಿದ್ಯಾವಿಷಯವನ್ನು ಚರ್ಚಿಸಿ ಪ್ರಯೋಜನವನ್ನು ಪಡೆದರಲ್ಲದೆ ಸಂಸ್ಥಾನದಲ್ಲಿರತಕ್ಕ ಉಪಾಧ್ಯಾಯರೆಲ್ಲರಿಗೂ ಪ್ರಯೋಜನಕಾರಿಯಾದ ಕೆಲವು ವಿಷಯಗಳನ್ನು ಚರ್ಚಿಸಿ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್‌ಜನರಲ್‌ಸಾಹೇಬರವರ ಸನ್ನಿಧಿಗೆ ಡೆಪ್ಯೂಟಿಇನ್‌ಸ್ಪೆಕ್ಟರವರ ಮೂಲಕ ಕಳುಹಿಸಿದೆವು. ನಮ್ಮ ಪ್ರಾರ್ಥನೆಗಳಲ್ಲಿ ಕೆಲವನ್ನು ಒಡನೆಯೆ ಅಂಗೀಕರಿಸಿ ತಕ್ಕ ಏರ್ಪಾಡುಗಳನ್ನು ಮಾಡಿದರಲ್ಲದೆ ಇನ್ನು ಕೆಲವು ಅಂಶಗಳ ವಿಷಯವಾಗಿ ಒಳ್ಳೆ ಅಭಿಪ್ರಾಯವುಳ್ಳವರಾಗಿರುತ್ತಾರೆಂದು ತಿಳಿಯಲು ಸಂತೋಷಿಸುತ್ತೇವೆ.

ಲೂ ಇವರು ಚರಿತ್ರೆ ಮತ್ತು ಭಾಷಾಶಾಸ್ತ್ರಗಳ ಪರಿಚಯವಿಲ್ಲದ ಜನಾಂಗದಲ್ಲಿ ಹುಟ್ಟಿ ಬೆಳೆದವರಾದ್ದರಿಂದ ವೇದಕಾಲದ ಸಂಕ್ಷೇಪಮೂಲಾರ್ಥವನ್ನು ಅರಿಯಲಾರರೆಂದು ಊಹಿಸಿದರು. ಆದರೆ ಸಾಯಣಾಚಾರ್ಯರು ಮತ್ತು ಮಾಧವಾಚಾರ್ಯರು ತಮ್ಮ ಭಾಷ್ಯವನ್ನು ಯಾಸ್ಕನ ಆಧಾರದಿಂದ ಬರೆದಿರುವರು. ಈ ಯಾಸ್ಕನು ಕ್ರಿ. ಶ. ಕ್ಕೆ ಅನೇಕ ಶತಮಾನಗಳ ಹಿಂದೆ ಇದ್ದು ತನ್ನ ಅಭಿಪ್ರಾಯಗಳಿಗೆ ಸಂಹಿತೆಗಳ ಕಾಲಕ್ಕೆ ಅತ್ಯಂತ ಸವಿಾಪವಾದ ಬ್ರಾಹ್ಮಣರ ಆಧಾರಮಾಡಿರುವನು. ಹೀಗಿರುವದರಿಂದ ಅವರು ರಚಿಸಿರುವ ಭಾಷ್ಯವು ಬ್ರಾಹ್ಮಣರು ಮಂತ್ರಾರ್ಥಗಳನ್ನು ಹೇಳಲುಪಕ್ರಮಿಸಿದ ಪ್ರಾಚೀನಕಾಲದಿಂದ ಬಂದ ಮೂಲಾರ್ಥಪ್ರವಾಹವನ್ನು ಅನುಸರಿಸಿರುವದು.

ಸಾಯಣಾಚಾರ್ಯರೂ ಮಾಧವಾಚಾರ್ಯರೂ ಭಾರದ್ವಾಜಋಷಿಯ ಸಂತತಿಯಲ್ಲಿ ಜನಿಸಿ ಬಾಲ್ಯದಿಂದಲೂ ವೇದಮಂತ್ರಗಳನ್ನು ಪಠಿಸುತ್ತಾ ತದರ್ಥಾವಲಂಬಿಗಳಾಗಿದ್ದು ವೇದವಿಚಾರ ಮತ್ತು ವೇದಕರ್ಮಗಳಿಂದ ನಿಬಿಡವಾದ ಪ್ರದೇಶದಲ್ಲಿ ವಸಿಸುತ್ತಿದ್ದ ಯಥಾರ್ಥಯೋಗ್ಯತೆಯುಳ್ಳವರೇ ವೇದಕವಿತಾಗಾನದ ಅರ್ಥವನ್ನು ಹೇಳಲು ಅರ್ಹರಲ್ಲದೇಹೋದರೆ ಸಂಸ್ಕೃತದಲ್ಲಿ ಖಂಡಪಾಂಡಿತ್ಯವುಳ್ಳವರೂ ನಮ್ಮ ಊಹಾಪೋಹಗಳಲ್ಲಿ ರಮಿಸುವವರೂ ಆಗಿ ಶಾಸ್ತ್ರಾನುಸರಣೆಯುಳ್ಳ ಪೂಜ್ಯರಾದ ನಮ್ಮ ವ್ಯವಸ್ಥಾಪಕರಲ್ಲಿ ಹಟಗರ್ವಗಳಿಂದ ತಾತ್ಸಾರಬುದ್ಧಿಯುಳ್ಳ ಪಾಶ್ಚಾತ್ಯವಿದ್ವಾಂಸರ ವೇದಾರ್ಥವಿವರಣವನ್ನು ಸನ್ಮಾರ್ಗದರ್ಶಿಗಳೆಂದು ಎಷ್ಟರಮಟ್ಟಿಗೆ ನಂಬಿನಡಿಯಬಹುದೋ ನಾವರಿಯೆವು. ಪಾಶ್ಚಾತ್ಯಪಂಡಿತರದನೇಕರು ದೃಢನಿಷ್ಠೆಯಿಂದ ಪ್ರಾಚೀನಸಂಸ್ಕೃತ ಗ್ರಂಥಾನ್ವೇಷಣಕ್ಕೆ ಕೃಪಾಕರಿ ಅವುಗಳಲ್ಲಿ ಅನೇಕವನ್ನು ಮಿರವಿನ ರಾಷ್ಟ್ರದಿಂದ ಕಡಹಾಯಿಸಿದರೆಂದು ಹೇಳಲಿಕ್ಕೆ ಕೃತಜ್ಞತೆಯೊಡನೆ ಸಿದ್ಧರಾಗಿದ್ದೇವೆ.

ಆದರೆ ಅವರು ನಮ್ಮ ಗ್ರಂಥಗಳ ರಸಾಸ್ವಾದನಕ್ಕೆ ಪ್ರವರ್ತಿಸದೆ ತಮ್ಮ ಹುರುಡಿಲ್ಲದ ಊಹೆಯಿಂದ ಅಪೂರ್ಣವಾಗಿ ನಿರ್ಣಯಿಸಿದ ವಿಚಾರದೊಡನೆ ಮುಂದರಿದಿರುವಂಥ ಸಂದರ್ಭಗಳಲ್ಲಿ ನಮ್ಮ ಅಭಿಪ್ರಾಯವನ್ನು ನಮ್ರತೆಯಿಂದ ಹೊರಗೆಡವದೆ ಇರಲಾರೆವು.

ವಿ. ನರಸಿಂಹಮೂರ್ತಿ,
ಅಸಿಸ್ಟೆಂಡ್‌ಮಾಸ್ಟರ್
ಗವರ್ನಮೆಂಟ್ ಆಂಗ್ಲೋವರ್ನಾಕ್ಯುಲರ್‌ಸ್ಕೂಲ್
ಟಿ ನರಸೀಪುರ, ಮೈಸೂರ್‌ಡಿಸ್ಟ್ರಿಕ್ಟ್.

ಸ್ಕೂಲ್ ಹೆಡ್ಮಾಸ್ಟರ್ ಮಾ॥ ರಾ॥ಶ್ರೀ॥ ಕೃಷ್ಣಯ್ಯಂಗಾರ್ಯರವರು ಈ ಸಂಘದ ಎರಡನೇಕಾರ್ಯದರ್ಶಿಯರಾದರು. ಮೂರುದಿವಸಗಳು ನಡೆದ ಈ ಸಭೆಯಲ್ಲಿ ಚರ್ಚಿಸಿದ ಮುಖ್ಯವಿಷಯಗಳು.

ವಿದ್ಯಾವಿಷಯಕವಾದವುಗಳು :—

೧ ಕಳೂರುಕಟ್ಟೆ ಸ್ಕೂಲ್ ಹೆಡ್ಮಾಸ್ಟರ್ ಮಾ॥ ರಾ॥ ಶ್ರೀನಿವಾಸರಾಯರವರು ಬಾಲಕರಿಗೆ ಕಿಂಡರ್‌ಗಾರ್ಟನ್ ಮತ್ತು ವಸ್ತುಪಾಠಗಳ ಸಾಧನವು ವಿದ್ಯಾಭಿವೃದ್ಧಿಗೆ ಯಾವ ವಿಧವಾದ ಸಹಾಯವನ್ನುಂಟುಮಾಡುತ್ತೆಂಬ ವಿಷಯವಾಗಿ ಉಪನ್ಯಾಸವಮಾಡಿದರು ಇತರ ಉಪಾಧ್ಯಾಯರುಗಳು ಇದರಮೇಲೆ ತಮ್ಮತಮ್ಮ ಅಭಿಪ್ರಾಯವನ್ನು ಹೇಳಿದರು.

೨ ನಗರ ತಾ॥ ಬ್ರಾಂಚ್ ಗರ್ಲ್ಸ್‌ಸ್ಕೂಲ್ ಮಾಸ್ಟರ್ ಮಾ॥ ರಾ॥ ಶ್ರೀಧರಭಟ್ಟರವರು ತಿದ್ದುವಿಕೆ ಮತ್ತು ಬೋಧನಾಕ್ರಮ ಇವುಗಳ ವಿಷಯವಾಗಿ ಅವರು ಬರೆದಿದ್ದ ದನ್ನು ಓದಿದರು.

೩ ಶಿಕಾರಿಪುರತಾಲ್ಲೂಕ್ ಈಸೂಡು ಹೋಬಳಿಸ್ಕೂಲ್ ಮಾಸ್ಟರ್ ಮಾ॥ ರಾ॥ ತಿಪ್ಪಯ್ಯನವರು ಚರಿತ್ರೆಯನ್ನು ಓದುವುದರಿಂದ ಉಂಟಾಗುವ ಪ್ರಯೋಜನದ ವಿಷಯವಾಗಿ ಉಪನ್ಯಾಸಮಾಡಿದರು. ಮಾ॥ರಾ॥ಶ್ರೀ॥ ಕೆ. ಸುಬ್ರಹ್ಮಣ್ಯಶಾಸ್ತ್ರಿಗಳವರು ಬಹಳ ಚೆನ್ನಾಗಿ ಈ ವಿಷಯವನ್ನು ಕುರಿತು ಚರ್ಚಿಸಿದರು.

೪ ಶಿವಮೊಗ್ಗಾ ಗರ್ಲ್ಸ್‌ಸ್ಕೂಲ್ ಹೆಡ್‌ಮಾಸ್ಟರ್ ಮಾ॥ ರಾ॥ ಕೃಷ್ಣಯ್ಯಂಗಾರ್ಯರವರು ಆರೋಗ್ಯಶಾಸ್ತ್ರವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವಿಶದವಾಗಿ ತಿಳಿಸಿದರು.

೫ ಹಿಂದೂಸ್ಥಾನದ ಪುರಾತನ ವೃತ್ತು ಈಗಿನ ಸ್ಥಿತಿಯ ವಿಷಯವಾಗಿ ಎ. ವಿ. ಸ್ಕೂಲ್ ಅ॥ ಮಾಸ್ಟರ್ ಮಾ॥ ರಾ॥ ರಾಮಚಂದ್ರರಾಯರವರೂ ಭೂಗೋಳ ಪಾಠಕ್ರಮದ ವಿಷಯವಾಗಿ ಅ॥ ಮಾಸ್ಟರ್ ಮಾ॥ ರಾ॥ ರುದ್ರಪ್ಪನವರೂ ವಸ್ತುಪಾಠಕ್ರಮವನ್ನು ಕುರಿತು ಅದೇ ಸ್ಕೂಲ್ ಅ॥ ಮಾಸ್ಟರ್ ಮಾ॥ ರಾ॥ ಬಾಳಾಜಿರಾಯರೂ ಉಪನ್ಯಾಸಮಾಡಿದರು.

ಇತರವಿಷಯಕವಾದವುಗಳು :—

೧ ಹೋಬಳಿಸ್ಕೂಲುಗಳಿರತಕ್ಕ ಅನೇಕ ಗ್ರಾಮಗಳಲ್ಲಿ ಸ್ಕೂಲ್‌ಕಟ್ಟಡಗಳು

ಕಳೆದ ಡಿಶಂಬರ್‌ನಲ್ಲಿ ನಡೆದ ಸಭೆಗೆ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್‌ಗಳಿಂದ ಲೂ ಉಪಾಧ್ಯಾಯರುಗಳು ಬರಬೇಕೆಂಬ ಅಭಿಪ್ರಾಯದಿಂದ, ಅಯಾಯಾ ಡಿಸ್ಟ್ರಿಕ್ಟ್ ಡಿಪ್ಯುಟಿಇನ್‌ಸ್ಪೆಕ್ಟರ್‌ಗಳ ಮೂಲಕ ಪ್ರಾರ್ಥಿಸಿದ್ದೆವು. ಕೆಲವು ಮಂದಿ ಉಪಾಧ್ಯಾಯರು ಸಂಘದಉದ್ದೇಶ್ಯವನ್ನು ತಿಳಿಯದೆಯೂ, ಕೆಲವರು ದೂರವೆಂಬ ವ್ಯಾಜದಿಂದಲೂ ನಿಂತಂತೆ ತೋರುತ್ತೆ. ಉಪಾಧ್ಯಾಯರುಗಳೆಲ್ಲರೂ ಸಭೆಗೂಡಿ ವಿದ್ಯಾವಿಷಯಗಳನ್ನು ಚರ್ಚಿಸುವುದು ಉತ್ತಮವೆಂಬ ಸಂಗತಿಯು ಅವರಿಗೆ ವೇದ್ಯವಾಗುವುದೆಂದು ಕೋರುವೆವು.

ಈ ಸಭೆಗೆ ಈ ಡಿಸ್ಟ್ರಿಕ್ಟಿನ ಸ್ಕೂಲ್‌ಗಳ ಉಪಾಧ್ಯಾಯರಲ್ಲಿ ಕೆಲವರು ಕಾರಣಾಂತರದಿಂದ ಬರದೆ ನಿಲ್ಲಬೇಕಾಗಿಬಂತು. ಹಿಂದಣಸಂವತ್ಸರದಲ್ಲಿ ಸೇರಿದಷ್ಟು ಮಂದಿ ಸೇರದಿದ್ದರೂ ಐವತ್ತುಮಂದಿ ಉಪಾಧ್ಯಾಯರುಗಳು ಸೇರಿದ್ದರು. ಡಿಶಂಬರ್ ತಾ॥ ೨೪-೨೫-೨೦ರಲ್ಲಿ ಶಿವಮೊಗ್ಗಾ ಗೌರ್ನಮೆಂಟ್ ಆಂಗ್ಲೊವರ್ನಾಕ್ಯುಲರ್ ಸ್ಕೂಲ್ ಕಟ್ಟಡದಲ್ಲಿ ಸಭೆಯು ಬಹಳ ಚೆನ್ನಾಗಿ ನಡೆಯಿತು. ಸಭೆಗೂಡಿದ ಮೊದಲನೆಯದಿನ ಬೀರೂರ್ ಆಂಗ್ಲೊವರ್ನಾಕ್ಯುಲರ್‌ಸ್ಕೂಲ್ ಹೆಡ್‌ಮಾಸ್ಟರ್ ಮು॥ರಾ॥ಶ್ರೀ ಕೆ. ನಾರಾಯಣರಾವ್ ಬಿ. ಎ. ಯವರೂ, ಎರಡನೆಯದಿನ ಸಾಯಂಕಾಲ ಮು॥ರಾ॥ ಶ್ರೀ॥ ಎ. ಎಂಕಣ್ಣ ಬಿ. ಎ. ಎಲ್. ಟಿ. ಯವರೂ, ಮೂರನೆಯದಿನ ಪ್ರಾತಃಕಾಲ ಮು॥ರಾ॥ಶ್ರೀ॥ ಸೀತಾರಾಮ್ಮೈಯ ಅಡ್ವೊಕೇಟ್‌ರವರೂ, ಸಾಯಂಕಾಲ ಮು॥ರಾ॥ ಶ್ರೀ॥ ಕೆ. ಮೈಲಾರಿರಾವ್ ಬಿ. ಎ. ಬಿ. ಎಲ್. ರವರೂ ಸಭೆಯ ಅಗ್ರಾಸನವನ್ನು ಅಲಂಕರಿಸಿದ್ದರು.

ಸಭೆಯು ಕೂಡಿದ ಮೊದಲನೆಯ ಪ್ರಾತಃಕಾಲ ಸಂಘದ ಕಾರ್ಯದರ್ಶಿಯರಾದ ಸಾಗರದ ಆಂಗ್ಲೊವರ್ನಾಕ್ಯುಲರ್‌ಸ್ಕೂಲ್ ಹೆಡ್‌ಮಾಸ್ಟರ್ ಮು॥ ರಾ॥ ಶ್ರೀ॥ ಟಿ. ಎಸ್. ನಾಗೇಶರಾಯರವರು ಸಂಘದವರು ನಡೆಸಿದ ಕಾರ್ಯಗಳನ್ನು ಸಂಕ್ಷೇಪವಾಗಿ ಸೂಚಿಸಿದರು. ನಂತರ ಎರಡನೇ ಕಾರ್ಯದರ್ಶಿಯರಾದ ಮು॥ರಾ॥ಶ್ರೀ॥ ಕೆ. ಸುಬ್ರಹ್ಮಣ್ಯಶಾಸ್ತ್ರಿಗಳು ಸಂಘದ ಅಭಿವೃದ್ಧಿಯನ್ನು ಕುರಿತು ಉಪನ್ಯಾಸಮಾಡಿದರು. ತರುವಾಯ ಈ ಸಂಘಕ್ಕೆ ಮುಖಂಡರಾದವರಲ್ಲಿ ಕೆಲವರು ಕಾರ್ಯಗೌರವದವೇಲೆ ಇತರ ಸ್ಥಳಗಳಿಗೆ ಹೋಗುವ ಸಂದರ್ಭವು ಬರಬಹುದಾಗಿದ್ದುದರಿಂದ ಕಾರ್ಯನಿರ್ವಾಹಸಭೆಗೆ ಕೆಲವರನ್ನು ಹೊಸದಾಗಿ ಚುನಾಯಿಸಲಾಯಿತು. ಶಿವಮೊಗ್ಗಾ ಗ॥ ಗರ್ಲ್

ವ್ಯಾವಹಾರಪರೀಕ್ಷೆಗೆವಾತ್ರ ವೈಸೂರಿಗೆ ಬರುವಂತೆ ಅನುಕೂಲಪಡಿಸಿಕೊಡಬೇಕೆಂದು ವೇಲ್ಕಂಡ ವಿಷಯಗಳನ್ನೆಲ್ಲಾ ಚರ್ಚಿಸಿ, ಅನುಕೂಲ ಅನಾನುಕೂಲಗಳನ್ನು ವ್ಯಕ್ತಪಡಿಸಿ, ಸಭೆಯಲ್ಲಿ ಕೊನೆಗೆ ನಿಶ್ಚಿತವಾದ ಅಭಿಪ್ರಾಯಗಳನ್ನು ಡೆಪ್ಯೂಟಿ ಇನ್‌ಸ್ಪೆಕ್ಟರವರ ಮೂಲಕ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರವರ ಜನಾಬಿಗೆ ತಿಳುಹಿಸಬೇಕೆಂದು ಅಭಿಪ್ರಾಯಪಟ್ಟು, ಉಪಾಧ್ಯಾಯರುಗಳು ಮುಂದಣ ವರುಷ ತಾವುಗಳೂ ಮತ್ತು ಸ್ವದೇಶದಲ್ಲಿ ವಿದ್ಯಾಭಿವೃದ್ಧಿಯಾಗಬೇಕೆಂದು ಅಪೇಕ್ಷೆಯುಳ್ಳವರೆಲ್ಲರೂ ಸೇರುವೆವೆಂಬ ಅಭಿಪ್ರಾಯದಿಂದ ದೇವರನ್ನು ಪ್ರಾರ್ಥಿಸಿ ತಮ್ಮ ತಮ್ಮ ಸ್ಥಳಗಳನ್ನು ಸೇರಿದರು.

ಕಿಂಡರ್‌ಗಾರ್ಟನ್‌ಕಥೆ.

ಕುದುರೆಯಕಾಲಿನ ಲಾಳದ ಒಂದುಮಳೆ

ಒಬ್ಬ ವರ್ತಕನು ತಾನು ತೆಗೆದುಕೊಂಡು ಹೋಗಿದ್ದ ಜಿನಸಿಯನ್ನು ಒಂದು ಸಂತೆಯಲ್ಲಿ ಮಾರಿ, ತನಗೆ ಬೇಕಾದ ಪದಾರ್ಥಗಳನ್ನು ತೆಗೆದುಕೊಂಡು ಸಾಯಂಕಾಲ ನಾಲ್ಕು ಘಂಟೆಯ ಹೊತ್ತಿನಲ್ಲಿ, ಜಾಗ್ರತೆಯಾಗಿ ಊರನ್ನು ಸೇರಬೇಕೆಂದು, ಹೊರಟನು. ಇವನು ಬೇಗ ಹೋಗಿ ತಲಪುವದಕ್ಕೆ ಅನುಕೂಲವಾಗಿ ಇವನ ಹತ್ತಿರ ಒಂದು ಒಳ್ಳೆ ಕುದುರೆಯು ಇತ್ತು. ಆ ಕುದುರೆಯಮೇಲೆ ಕಂಟಲೆಯ ಚೀಲವನ್ನು ಹಾಕಿಕೊಂಡು, ಬೇಗಬೇಗನೆ ಓಡಿಸಿಕೊಂಡು ಹೋಗುತಿದ್ದನು. ಹೊತ್ತು ಮುಳುಗುವುದಕ್ಕೆ ಮುಂದಾಗಿ ದಾರಿಯಲ್ಲಿ ಸಿಕ್ಕಿದ ಒಂದು ಸೇತುವೆಯ ಕೆಳಗೆ ಇಳಿದು, ಅಲ್ಲಿ ಸಣ್ಣಗೆ ಚಲಚಲನೆ ಹರಿಯುತಿದ್ದ ಹೊಳೆಯ ದಡದಲ್ಲಿ ಕೂತು ಊಟವನ್ನು ಮಾಡಿ, ಕುದುರೆಗೆ ನೀರು ಕುಡಿಸಿಕೊಂಡು, ಮೇಲಕ್ಕೆ ಬಂದನು. ಅಷ್ಟರಲ್ಲೆ ಆ ಸೇತುವೆಯ ಬಳಿ ಇದ್ದ ಎತ್ತು, ಕುದುರೆಗೆ ಲಾಳವನ್ನು ಕಟ್ಟುವವನು, ಕುದುರೆಯ ಕಾಲನ್ನು ನೋಡಿ, 'ಎಡಗಾಲಿನ ಲಾಳದ ಒಂದು ಮಳೆ ಬಿದ್ದುಹೋಗಿದೆ—ಅದನ್ನು ಹಾಕಿಕೊಡುತ್ತೇನೆ' ಎನ್ನಲು, 'ಏನೂಚಿಂತೆಯಿಲ್ಲ. ಎಷ್ಟುದೂರಹೋಗಬೇಕಾಗಿದೆ. ನಾನು ಅದಲ್ಲದೆ ಬೇಗಹೋಗಿ ಊರನ್ನು ಸೇರಬೇಕು' ಎಂದು ಹೇಳಿ ಕುದುರೆಯನ್ನು ಓಡಿ

ಸಾಮಾನ್ಯವಲ್ಲದೆ ದೇವಸ್ಥಾನ ಚಾವಡಿ ಮುಂತಾದವುಗಳಲ್ಲಿ ಸ್ಕೂಲುಗಳನ್ನಿಟ್ಟರು ವದರಿಂದ ತೊಂದರೆಯು ಬಹಳ. ಸ್ಕೂಲನ್ನು ಅಪೇಕ್ಷಿಸುವ ಗ್ರಾಮಸ್ಥರು ಸ್ಕೂಲಿಗಾಗಿ ನಿರುವಾಧಿಕವಾದ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು.

೨ ಪ್ರತಿಡಿಸ್ಟ್ರಿಕ್ಟಿನಲ್ಲಿ ಎಂಟುಹತ್ತುಮಂದಿ ಟೀಚರ್‌ಗಳು ಕೆಲಸವನ್ನು ಕಲಿಯುತ್ತಾ ಅವಶ್ಯಕವಿದ್ದಾಗ ಅಂದರೆ ಒಬ್ಬರು ರಜಾತೆಗೆದುಕೊಂಡಮೇಲೆ, ಒಂದು ಸ್ಕೂಲಿನಲ್ಲಿ ಒಬ್ಬ ಮ್ಯಾಸ್ಟರಿಂದ ನಿರ್ವಹಿಸಲು ಸಾಧ್ಯವಲ್ಲದಷ್ಟು ಬಾಲಕರ ಸಂಖ್ಯೆಯು ವೃದ್ಧಿಯಾದಮೇಲೆ ಸಿದ್ಧರಾಗಿರತಕ್ಕ ಈ ಪ್ಯೂಪಲ್‌ಟೀಚರ್‌ಗಳು ಸಹಾಯಕರಾಗಿರಬೇಕೆಂದು

೩ ಸೇಕದಾರರು ಮಾಹೆಯಾನ ಸಂಬಳವನ್ನು ಹಳ್ಳಿಯಲ್ಲಿರುವ ಉಪಾಧ್ಯಾಯರಿಗೆ ಸರಿಯಾಗಿ ಸಾವತಿಮಾಡದೆ ಸಾವಕಾಶಮಾಡುತಾರಾದ್ದರಿಂದ ಅದಕ್ಕೆ ತಕ್ಕ ಏರ್ಪಾಡುಮಾಡಬೇಕೆಂದು.

೪ ಹೆಚ್ಚಿಬಳಿ ಸ್ಕೂಲುಗಳಿಗೆ ಸ್ವಲ್ಪಹೆಚ್ಚಾಗಿ ಫರ್ನಿಚರ್ ಅಂದರೆ ಮೇಜು, ಕುರ್ಚಿ, ಬೋರ್ಡು, ಬೆಂಚು ಮೊದಲಾದವುಗಳು ಆಗಬೇಕೆಂದು.

೫ ಹೆಚ್ಚಿಬಳಿಸ್ಕೂಲು ಮಾಸ್ಟರುಗಳ ತಲಬು ೫೦-೬೦ ರೂ|| ಇರುವುದರಿಂದ ಜೀವನಕ್ಕೆ ಸಾಲದೆ ಅನ್ಯಥಾ ಜೀವನೋಪಾಯವನ್ನು ಪಡೆಯಲು ಪ್ರಯತ್ನಪಡುತ್ತಾರಾದುದರಿಂದ ಸಂಬಳವನ್ನು ಹೆಚ್ಚು ಮಾಡಬೇಕೆಂದು.

೬ ಎಲ್ಲಾ ಉಪಾಧ್ಯಾಯರುಗಳಿಗೂ ಪ್ರತಿಸಂವತ್ಸರದಲ್ಲಿಯೂ ಬಡ್ತಿಯಾಗುವಂತೆ ಗ್ರೇಡುಗಳನ್ನು ಸರ್ಕಾರದವರು ನಿರ್ಪಡಿಸಿಕೊಡಬೇಕೆಂದು

೭ ಮೆಟ್ರಿಕ್ಯುಲೇಷನ್, ಎಫ್. ಎ ಪರಿಕ್ಷೆಯಲ್ಲಿ ತೇರ್ಗಡೆಯಾಗಿ ಉಪಾಧ್ಯಾಯರಾಗತಕ್ಕವರಿಗೆ ಒಂದು ಇಂಗ್ಲಿಷ್ ಟ್ರೈನಿಂಗ್‌ಸ್ಕೂಲು ಸ್ಥಾಪಿಸಬೇಕೆಂದು

೮ ಮಲನಾಡುಪ್ರಾಂತ್ಯದಲ್ಲಿರತಕ್ಕ ಮಹಮ್ಮದೀಯರಿಗೆ ಸ್ಕಾಲರ್‌ಷಿಪ್ ಕೊಟ್ಟು ವಿದ್ಯಾಭ್ಯಾಸಮಾಡಲು ಪ್ರೋತ್ಸಾಹಿಸಬೇಕೆಂದು

೯ ಮೈಸೂರು ಟ್ರೇನಿಂಗ್‌ಪರಿಕ್ಷೆಯಲ್ಲಿ ಬರಹಪರೀಕ್ಷೆಯಾದನಂತರ ವ್ಯಾವಹಾರಿಕ ಪರೀಕ್ಷೆನಡೆಯಲು ಸುಮಾರು ಮೂರುನಾಲ್ಕು ವಾರಗಳು ಸಾವಕಾಶವಾಗುವುದರಿಂದ ದೂರದಿಂದ ಬರುವ ಉಪಾಧ್ಯಾಯರಿಗೆ ಮೈಸೂರಲ್ಲಿ ಅಷ್ಟುದಿವಸಗಳು ಇರಲು ಅನಾನುಕೂಲವುಂಟಾಗುವುದರಿಂದ ಬರಹಪರೀಕ್ಷೆಯನ್ನು ಶಿವಮೊಗ್ಗೆಯಲ್ಲಿ ಮಾಡಿ,

ಸೂಚನೆಗಳು ಮತ್ತು ಸಮಾಚಾರಗಳು.

ಮೈಸೂರು ಮಹಾರಾಣಿ ಗರ್ಲ್ಸ್‌ಸ್ಕೂಲಿನಲ್ಲಿ ಕಿಂಡರ್‌ಗಾರ್ಟನ್‌ನ್ನು ಮಕ್ಕಳಿಗೆ ಬೋಧಿಸಲು, ಮುವ್ವತ್ತುರೂಪಾಯಿ ತಲಬಿನಮೇಲೆ ಕೆ ಲಕ್ಷ್ಮೀದೇವಮ್ಮನನ್ನು ಕಿಂಡರ್‌ಗಾರ್ಟನ್ ಮಿಸ್ಟ್ರಸ್‌ಆಗಿ ನಿಯಮಿಸಿರುವರು.

ಮೈಸೂರು ಇಂಡಸ್ಟ್ರಿಯಲ್‌ಸ್ಕೂಲಿನಲ್ಲಿ ಮರಗೆಲಸವನ್ನು ಮಣ್ಣಿನ ಕೆಲಸವನ್ನು ಹೇಳಿಕೊಡುವವರಿಗೆ ೨೦ರಿಂದ ೨೫, ೨೫ರಿಂದ ೩೦ ರೂಪಾಯಿಗೆ ಬಡತಿ ಆಗಿರುವುದು.

ಮದರಾಸಿನಲ್ಲಿ ಅಸಿಸ್ಟೆಂಟ್ ಅಕೌಂಟೆಂಟ್‌ಜನರಲ್‌ರಾಗಿರುವ ಮೇಸ್ತರ್ ಜೆ. ಸಿ. ಮಿತ್ರರೆಂಬುವರು, ದೊಡ್ಡಬಳ್ಳಾಪುರಕ್ಕೆ ಬಂದಿದ್ದಾಗ ಅಲ್ಲಿನ ಆಂಗ್ಲೋವರ್ನಾಕ್ಯುಲರ್ ಸ್ಕೂಲನ್ನು ಪರೀಕ್ಷಿಸಿ, ಎಲ್ಲಾದರಲ್ಲೂ ತೃಪ್ತಿಯನ್ನುಂಟುಮಾಡಿದ ರಾಮಚಂದ್ರರಾಯನೆಂಬ ಒಬ್ಬ ವಿದ್ಯಾರ್ಥಿಗೆ ಒಂದು ಬೆಳ್ಳಿಪದಕ (ಮೆಡಲ್) ವನ್ನು ಬಹುಮಾನವಾಗಿ ಕೊಟ್ಟರೆಂಬ ವಿಷಯವನ್ನು ತಿಳಿಸಲು ಸಂತೋಷಿಸುತ್ತೇವೆ.

ತುಮಕೂರು ಸಂಸ್ಕೃತಪಾಠಶಾಲೆಗೆ ಸಹಾಯದ್ರವ್ಯವಾಗಿ ರೂ| ೧೫೦ನ್ನು ಸರ್ಕಾರದವರು ಕೊಡುವರು.

ಹ| ಎಸ್. ಬಹುದಿನ್ ಎಂಬುವರನ್ನು ಬೌರಿಂಗ್‌ಪೇಟೆ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನಲ್ಲಿ ಸಹಾಯೋಪಾಧ್ಯಾಯರನ್ನಾಗಿ ನಿಯಮಿಸಿರುವರು.

ಮೈಸೂರು ರಾಯಲ್‌ಸ್ಕೂಲಿನಲ್ಲಿ ಓದುತಿದ್ದ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ ರಾ| ಎಂ. ಎಸ್, ರಾಮಚಂದ್ರರಾವ್, ಎಂ. ನರಸಿಂಗರಾವ್‌ಗೆ ಪ್ರತಿತಿಂಗಳಲ್ಲಿಯೂ, ಐದುಐದು ರೂಪಾಯಿ ವಿದ್ಯಾರ್ಥಿವೇತನವು ಕೊಡುವರು.

ಮೈಸೂರು ಮಹಾರಾಣಿ ಗರ್ಲ್ಸ್‌ಸ್ಕೂಲ್ ಲೇಡಿಸೂಪರಿಂಟೆಂಡೆಂಟ್‌ರಾದ ಮಿಸ್ ಕೆ. ಓಕಿನ್ಸ್‌ರವರು ಮೂರುತಿಂಗಳು ಪ್ರಿವಿಲಿಜ್ ರಜತೆಗೆದುಕೊಂಡು ಹೋಗಿರುವುದರಿಂದ ಅವರಿಗೆ ಬದಲಾಗಿ ಮದರ್‌ಫ್ರಾನ್ಸಿಸ್‌ರೆಂಬುವರು ಚಾಲತಿಕೆಲಸವನ್ನು ಮಾಡಬೇಕೆಂತಲು, ಇವರಿಗೆ ಸಹಾಯರಾಗಿ, ಅಸಿಸ್ಟೆಂಟ್‌ಮ್ಯಾಸ್ಟರ್ ಮು|ರಾ| ಡಿ. ವೆಂಕಟರಾಮಯ್ಯ ಬಿ. ಎ. ಎಲ್. ಟಿ. ಯವರು ಇರಬೇಕೆಂತಲೂ, ಸೂಪರಿಂಟೆಂಡೆಂಟ್‌ರು

ವನು ಸಾಗಿಸಿ ಮೂರು ನಾಲ್ಕು ಮೈಲಿ ದೂರ ಹೋಗಲು ಕುದುರೆ ಸ್ವಲ್ಪ ಕುಂಟಲಾರಂಭಿಸಿತು. ಆಗ ದಾರಿಯಲ್ಲಿ ಹೋಗುತಿದ್ದ ಒಬ್ಬನು-ಅಯ್ಯಾ! ನಿನ್ನ ಕುದುರೆಯ ಹಿಂಗಾಲಿನ ಲಾಳದಲ್ಲಿ ಎರಡು ಮಳೆಗಳೂ ಬಿದ್ದುಹೋಗಿವೆ. ಇಲ್ಲಿಗೆ ಹತ್ತಿರದಲ್ಲಿಯೇ ಲಾಳವನ್ನು ಕಟ್ಟುವನು ಇರುತ್ತಾನೆ ಕುದುರೆಯು ಕುಂಟುತಲಿದೆ. ಆದುದರಿಂದ ಅಲ್ಲಿಗೆ ಹೋಗಿ ಲಾಳವನ್ನು ಕಟ್ಟಿಸಿಕೊಂಡು ಹೋಗು' ಎನ್ನಲು, ವರ್ತಕನು ಅಗಲೂ ಲಕ್ಷ್ಯಮಾಡದೆ ' ಇನ್ನೊಂದು ಮೂರುಮೈಲಿಯಲ್ಲೇ ನನ್ನೂರು ಇದೆ. ನನ್ನ ಮನೆಯಲ್ಲಿ ನೆಂಟರು ಕಾದಿರುತ್ತಾರೆ ಸಂತೆಯಿಂದ ಸಾಮಾನು ತೆಗೆದುಕೊಂಡು ಹೋಗುತ್ತಿದ್ದೇನೆ. ನಾನು ಬೇಗ ಹೋಗಿ ಸೇರಬೇಕು. ಸ್ವಲ್ಪತಾನೇ ಕುಂಟುತ್ತೆ. ಏನುಮಾಡೋದು? ಇರಲಿ! ಎಂದು ಕುದುರೆಗೆ ನಾಲ್ಕು ಏಟನ್ನು ಕೊಟ್ಟು ಕಾಲಿನ ಹಿಮ್ಮಡಿಯಿಂದ ತಿವಿದು ಓಡಿಸಿದನು.

ಕುದುರೆಯು ಅಷ್ಟು ದೂರ ಹೋಗುವುದರೊಳಗಾಗಿಯೇ ಎಡವಿತು. ಇನ್ನೊಂದು ಎರಡು ಹೆಜ್ಜೆ ಹೋಗುವುದರಲ್ಲೇ ಮುಗ್ಗರಿಸಿ, ಕಾಲು ಊನವಾಯಿತು. ಕುದುರೆಯು ಎದ್ದು ನಿಲ್ಲದಂತೆ ಆಯಿತು

ಆಗ ವರ್ತಕನು ಕುದುರೆಯನ್ನು ಅಲ್ಲಿಯೇ ಒಂದು ಸಾಲಮರಕ್ಕೆ ಕಟ್ಟಿ ಕಂಟಲೆಯನ್ನು ತಡಿಯನ್ನು ಬಿಚ್ಚಿ ಹೆಗಲಮೇಲೆ ಹಾಕಿಕೊಂಡು, ಭಾರ ಹೊರಲಾರದೆ ಹೆಜ್ಜೆಮೇಲೆ ಹೆಜ್ಜೆ ಯನ್ನಿಟ್ಟು ಊರಿಗೆ ಹೋಗಿ ತಲಪುವುದು ರಾತ್ರಿ ಹನ್ನೆರೆಡು ಘಂಟೆ ಆಯಿತು. ಆಗ ವರ್ತಕನು ಲಾಳದವನು ಸೇತುವೆಯ ಬಳಿ ಬಂದು ಮಳೆಯನ್ನು ಹಾಕಿಸೆಂದು ಹೇಳಿದಾಗ ನಾನು ಸಾಲವಾರಲು ಈ ಕಷ್ಟಕ್ಕೆ ಗುರಿಯಾಗಬೇಕಾಯಿತು ಎಂದುಕೊಂಡನು.

ಪ್ರಶ್ನೆಗಳು—ವರ್ತಕನು ಎಲ್ಲಿಗೆ ಹೋಗಿದ್ದನು? ಕುದುರೆಗೆ ಏನಾಗಿತ್ತು? ಎಲ್ಲಿ ಇಳಿದಿದ್ದನು? ಲಾಳದವನು ಏನುಹೇಳಿದನು? ಅದಕ್ಕೆ ವರ್ತಕನು ಏನುಹೇಳಿದನು? ಕುದುರೆಗೆ ಕೊನೆಗೆ ಏನಾಯಿತು? ವರ್ತಕನು ಮನೆಯನ್ನು ಹೇಗೆ ಹೋಗಿ ಸೇರಿದನು? ಆಗ ಏನೆಂದುಕೊಂಡನು? ಇದರಿಂದ ನಾವು ಏನನ್ನು ಕಲಿಯಬೇಕು?

ವಿದ್ಯಾದಾಯಿನಿ

ಭಾಗ ೬.] ಮೆ ೧೯೨೪. [ಸಂಚಿಕೆ ೫

ಎಡಿಟರವರ ನೋಟ್ಸ್.

ಕಳೆದ ಮೂರ್ಚಿತಿಂಗಳ ಅಂತ್ಯಭಾಗದಲ್ಲಿ ನಡೆದ ಮದ್ರಾಸ್ ಯೂನಿವರ್ಸಿಟಿಯ ಕಾರ್ಯವೋಕೇಷನಲ್ಲಿ ಸರ್ಜನ್ ಲೆಫ್ಟೆನೆಂಟ್ ಕರ್ನಲ್, ಡಬಲ್ಯು ಜಿ. ಕಿಂಗ್ ಸಾಹೇಬರವರು ವಿದ್ವತ್ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಿ (ಡಿಗ್ರಿ) ಮರ್ಯಾದೆಯನ್ನು ಪಡೆಯಲು ಸೇರಿದ್ದವರಿಗೆ, ಪದ್ಧತಿಯ ಮೇರೆ ವಿವೇಕವಾದ ಕೆಲವು ವಿಷಯಗಳನ್ನು ಹೇಳಿದರು.

***

ಲಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರನ್ನು ಕುರಿತು, ನೀವು ಎಷ್ಟು ನ್ಯಾಯಮಾರ್ಗದಲ್ಲಿ ನಿಮ್ಮ ವಿದ್ಯಾಶಕ್ತಿಯನ್ನು ಉಪಯೋಗಿಸುವಿರೊ ಅಷ್ಟು ಜನರಿಗೆ ಸೌಖ್ಯವೂ ರಾಜ್ಯಕ್ಕೆ ಕ್ಷೇಮವೂ ಉಂಟಾಗುವುದು. ಬಡಜನರನ್ನು ಹಿಂಸೆಯಿಂದ ತಪ್ಪಿಸುವುದೂ, ಐಶ್ವರ್ಯವಂತರನ್ನು ದುರಾಶೆಗೆ ಈಡಾಗದಂತೆ ಮಾಡುವುದೂ ನಿಮ್ಮ ಕೆಲಸವಾಗಿರುವುದು. ಮದ್ರಾಸ್ ಆಧಿಪತ್ಯದಲ್ಲಿ ಲಾಯರುಗಳು ಅನೇಕರಿರುವುದರಿಂದ, ಅವರಲ್ಲಿ ಪ್ರಸಿದ್ಧಿಗೊಳ್ಳಲಿಕ್ಕೆ ತಕ್ಕ ಸಾಮರ್ಥ್ಯವನ್ನು ಸಂಪಾದಿಸಲು ವಿಶೇಷ ಮೇಲಾಟ ವಿರುವುದು. ಈ ಮೇಲಾಟದಲ್ಲಿ ನ್ಯಾಯಮಾರ್ಗವನ್ನು ಅವಲಂಬಿಸಿ, ಪ್ರಖ್ಯಾತಿಗೆ ಬರೋಣವು ನಿಮಗೂ, ನಿಮ್ಮ ಯೂನಿವರ್ಸಿಟಿಗೂ, ನಿಮ್ಮ ದೇಶಕ್ಕೂ ಗೌರವವು.

***

ವೈದ್ಯ ಶಾಸ್ತ್ರದಲ್ಲಿ ಪಾಂಡಿತ್ಯವನ್ನು ಸಂಪಾದಿಸಿರುವ ವೈದ್ಯರನ್ನು ಕುರಿತು— ನೀವು ಇಷ್ಟುಕಾಲ ಶ್ರಮಪಟ್ಟು ಪಾಂಡಿತ್ಯವನ್ನು ಸಂಪಾದಿಸಿರೋಣದರಿಂದಲೆ ನಿಮಗೆ ಈ ಶಾಸ್ತ್ರದಲ್ಲಿ ಸ್ವಾಭಾವಿಕವಾದ ಅಭಿರುಚಿ ಇರಬೇಕೆಂಬುದು ವ್ಯಕ್ತವಾಗುತ್ತೆ. ಇದ

ಬರುವವರೆಗೂ ಮೈಸೂರು ಗೌರ್ನಮೆಂಟ್ ನಾರ್ಮಲ್ ಸ್ಕೂಲ್ ಹೆಡ್ ಮಾಸ್ಟರಾದ ಮಾ। ರಾ। ಶ್ರೀ। ಕೆ. ನಾರಾಯಣ್ಯೆಂಗಾರ್ಯರವರು ಪ್ರಾತಃಕಾಲ ಇಂಗ್ಲಿಷ್‌ನ್ನು ಪಾಠಹೇಳಬೇಕೆಂತಲೂ ಗೊತ್ತಾಗಿರುವುದು.

ಗ್ರಂಥವಿಮರ್ಶೆ

ಹೈದರ್‌ನಾಮ..

ಮಾ॥ ರಾ॥ ಶ್ರೀ॥ ಹೆಚ್ ಅಪ್ಪಣ್ಣಶೆಟ್ಟರವರು ನಮ್ಮಲ್ಲಿಗೆ ಕಳುಹಿಸಿರುವ 'ಹೈದರ್‌ನಾಮ' ಎಂಬ ಚರಿತ್ರೆಯನ್ನು ಬಹಳ ಆದರದಿಂದ ಓದಿದೆವು. ಈ ಪುಸ್ತಕವನ್ನು ಸಂಪೂರ್ಣವಾಗಿ ಓದಿನೋಡುವಲ್ಲಿ ಗ್ರಂಥಕರ್ತರು ಬಹಳ ಪ್ರಯತ್ನದಿಂದ ವಿಷಯಗಳನ್ನು ಸಂಗ್ರಹಿಸಿರುವರೆಂಬುದೂ ಸಂಗ್ರಹಿಸಿದ ವಿಷಯಗಳನ್ನು ಪ್ರಕಟಿಸಿರೋಣದರಲ್ಲಿ ಬಹಳ ವಿವೇಕವನ್ನು ತೋರಿಸಿರುವರೆಂಬುದೂ ಸ್ಪಷ್ಟವಾಗಿರುತ್ತೆ. ನಿಜವಾದ ಚರಿತ್ರೆಯ ಬಾಗಕ್ಕೆ ವ್ಯತಿರಿಕ್ತವಾದ ಅಂಶಗಳು ಯಾವದೂ ಕಾಣಬರುವುದಿಲ್ಲ.

ಶೈಲಿಯು ಲಲಿತವಾಗಿಯೂ, ಓದುವರಿಗೆ ಹಿತವಾಗಿಯೂ ಇರುವುದು. ಹೈದರನ ರಾಜ್ಯಭಾರಕ್ರಮವನ್ನು ಅವನ ಗುಣಾತಿಶಯಗಳನ್ನು ಬಹಳ ಚೆನ್ನಾಗಿ ವಿಶದಪಡಿಸಿರುವರು. ಈ ಅಂಶಗಳು ಓದತಕ್ಕವರ ಮನಸ್ಸನ್ನು ಆಕರ್ಷಿಸುವಂತೆ ಇರುವುದು.

ನನ್ನಿಷ್ಟಗಳು ಈಪುಸ್ತಕವನ್ನು ಓದಿ, ಮೈಸೂರು ಸಂಸ್ಥಾನದಲ್ಲಿ ಪ್ರಸಿದ್ಧಿಗೊಂಡ ಹೈದರನ ಚರಿತ್ರೆಯನ್ನು ಬರೆದ ಮಾ॥ ರಾ॥ ಶ್ರೀ॥ ಅಪ್ಪಣ್ಣಶೆಟ್ಟರವರಿಗೆ ಪ್ರೋತ್ಸಾಹವನ್ನು ಹುಟ್ಟಿಸುವರೆಂದು ನಂಬುವೆವು. ಪ್ರೋತ್ಸಹವನ್ನು ಪಡೆಯಲು, ಈ ಪುಸ್ತಕವು ಅರ್ಹವಾಗಿರುವುದು.

ಪುಸ್ತಕದ ಆದಿಯಲ್ಲಿ ಶೆಟ್ಟರತಕ್ಕ ಹೈದರನ ಚಿತ್ರಪಠವು ಒಪ್ಪುವಂತಿರುವುದು.

ಗ್ರಾಜುಯೇಟ್ಸ್ ಅಸೋಸಿಯೇಷನ್ ಪ್ರೆಸ್‌ನವರು ಪುಸ್ತಕವನ್ನು ಅಂದವಾಗಿ ಮುದ್ರಿಸಿರುವರು.

ಈ ಪುಸ್ತಕವನ್ನು ಅಪೇಕ್ಷಿಸುವವರು, ಗ್ರಂಥಕರ್ತರಿಗಾಗಲಿ, ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್‌ಗೆ ಆಗಲಿ ಬರೆದು ಪಡೆಯಬಹುದು. ಕ್ರಯ ೧೦ಅಣೆ.

ನ್ನು ಕುರಿತು ನಿಮ್ಮ ವಿದ್ಯೆಯು ಸಾವಯಾರ್ಥ್ಯದಿಂದ ದೊಡ್ಡ ದೊಡ್ಡ ಸೇತುವೆ, ಅನೇಕ ಟ್ಟು, ಗೋಪುರಗಳನ್ನು ಕಟ್ಟಬಲ್ಲಿರಿ. ಸರ್ಕಾರದ ನೌಕರಿಯಲ್ಲಿ ಹೊಸ ಹೊಸದಾದ ಕೆಲಸವನ್ನು ಮಾಡಲು ಅಸ್ಪದವಿಲ್ಲದಿರಬಹುದು. ಅಲ್ಲದೆ ಸರ್ಕಾರದವರಿಗೆ ಬೇಕಾದ ಷ್ಟು ಇಂಜನಿಯರ್‌ಗಳು ಇದ್ದು ಹೆಚ್ಚಾಮಂದಿ ಅವಶ್ಯವಿಲ್ಲದಿರಬಹುದು; ಅಂಥವರು ತ ಕ್ಕ ಉಪಜೀವಿಕೆ ಇಲ್ಲದೆ, ತಕ್ಕ ವಿದ್ಯಾಸಾಮರ್ಥ್ಯವಿಲ್ಲದೆ ಹಿಂದಾಗಿರುವ ದೊಡ್ಡ ದೊಡ್ಡ ಕಾರ್ಯಗಳನ್ನು ಕೈಗೊಂಡು, ಬಡಬಗ್ಗರಿಗೆ ಜೀವನೋಪಾಯವನ್ನು ಕಲ್ಪಿಸಿ, ಕಸಬು ದಾರರನ್ನು ಪ್ರೋತ್ಸಾಹಗೊಳಿಸಿ ದೇಶಾಭಿವೃದ್ಧಿಯಲ್ಲಿ ಬದ್ಧಕಂಕಣರಾಗಿರಬೇಕೆಂದು ಅನುವಾದ ಮಾಡಿದರು. * * * *

ಮುಖ್ಯ ದೇಶದ ಏಳಿಗೆಗೂ, ಜನರ ಸನ್ಮಾರ್ಗಕ್ಕೂ ವಿದ್ಯಾವಂತರೇ ಕಾರಣರಾದುದರಿಂದ ಅವರು ತಮ್ಮ ಮೇಲಣ ಭಾರವನ್ನು ತಿಳಿದು ಅವಶ್ಯಕವಾದ ಪ್ರಯತ್ನಗಳನ್ನು ಮಾಡುವುದರಲ್ಲಿ ಬದ್ಧರಾಗಿರುವರೆಂದು ಕೋರುತ್ತೇನೆ—ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

ಪಾಠಕ್ರಮ.

ಬಾಲವಿದ್ಯಾಭ್ಯಾಸ ಮಾಡಿಸುವವರು ವಿಷಯಗಳನ್ನು ಬೋಧಿಸುವಾಗ ಜ್ಞಾಪಕದಲ್ಲಿಡಬೇಕಾದ ಕೆಲವು ಅಂಶಗಳು—

೧ ಪ್ರತಿ ಪಾಠದಲ್ಲಿಯೂ ತಿಳಿಸಬೇಕಾದ ವಿಷಯವನ್ನು ಸರಿಯಾಗಿ ವಿಭಾಗಿಸಿಕೊಂಡಿದ್ದು, ಆ ವಿಭಾಗಗಳಲ್ಲಿ ಒಂದಾಗುತಲು ಇನ್ನೊಂದನ್ನು ಕ್ರಮವಾಗಿ ಬೋಧಿಸುತ ಬರಬೇಕು. ವಸ್ತು ಬೋಧಿಸುವಾಗ ಹಿಂದುಮುಂದಿನ ಅಂಶಗಳಿಗೆ ಪರಸ್ಪರ ಸಂಬಂಧವನ್ನು ಸ್ಪಷ್ಟಪಡಿಸಬೇಕು.

೨ ಪ್ರತಿಯೊಂದು ಅಂಶವನ್ನು ತಿಳಿಸುವುದಕ್ಕೂ ಸ್ವಾಭಾವಿಕವಾದ, ಅಂದರೆ ನಾವಾಗಿಯೇ ಅವನ್ನು ಹೊಸದಾಗಿ ಗ್ರಹಿಸಬೇಕಾಗಿ ಇದ್ದರೆ, ಯಾವ ಮಾರ್ಗವನ್ನನುಸರಿಸುತ್ತಿದ್ದೆವೊ ಅದೇ ಮಾರ್ಗವನ್ನು ಅನುಸರಿಸಬೇಕು. ಈಗ ನಾವು ಒಂದು ಹೊಸ ಪದ್ಯವನ್ನು ತಿಳಿದುಕೊಳ್ಳಬೇಕಾದರೆ ಮೊದಲು ಆ ಪದ್ಯವನ್ನು ಎರಡು ಮೂರು ಸಲ ಓದಿಕೊಳ್ಳುವೆವು. ಅನಂತರದಲ್ಲಿ ಪದ್ಯವಿಭಾಗದಲ್ಲಿ ಕಷ್ಟವಾಗಿರುವಂಥಾ ಪದಗಳ

ರಿಂದ ನಿಮ್ಮ ಶಕ್ತಿ, ನಿಮ್ಮ ಬುದ್ಧಿ, ನಿಮ್ಮ ವಿದ್ಯೆಯನ್ನೆಲ್ಲಾ ಉಪಯೋಗಿಸಿ, ಸಂಕಟ ಪಡುವ ರೋಗಿಗೆ ಸುಖವನ್ನೂ ದೇವರ ದಯದಿಂದ ಆರೋಗ್ಯವನ್ನೂ ಉಂಟುಮಾಡುವುದರಲ್ಲಿ ನಿರತರಾಗಿರಬೇಕು. ನಿಮ್ಮ ಸಾಮರ್ಥ್ಯವು ನಿಮ್ಮ ಅನುಭವದಿಂದಲೂ ನೀವು ಮಾಡತಕ್ಕ ಪ್ರಯೋಗಗಳಿಂದಲೂ ವ್ಯಕ್ತ ಪಡಬೇಕೆಂದು ಅಪೇಕ್ಷಿಸಬೇಕೇ ಹೊರತು ನೀವು ಸಂಪಾದಿಸುವ ಹಣದಿಂದಲ್ಲ. ಶ್ರಮ ಪರಿಹಾರಾರ್ಥ ಅವಶ್ಯವಾಗಿ ಬೇಕಾಗುವ ವಿರಾಮವನ್ನು ತ್ಯಜಿಸುವುದೂ, ರೋಗಿಯ ವಿಷಯದಲ್ಲಿ ಅಸಕ್ಯೆಯನ್ನೂ ಕೇವಲ ಸೂಕ್ಷ್ಮ ಸ್ಥಿತಿಯುಳ್ಳಾವಂಗ ಸಹ ಧೈರ್ಯವನ್ನು ಕೊಡುವುದು, ಮನೋಲ್ಲಾಸವನ್ನುಂಟುಮಾಡುವುದೂ, ಬಹಳ ಗಾಬರಿಯಾಗಿದ್ದರೂ, ಪ್ರಾಣಕ್ಕೆ ಅಪಾಯವಾಗಿದ್ದರೂ ಸ್ವಲ್ಪವೂ ಹಂಜರಿಯದೆ, ಎಲ್ಲರಂತೆ ತಾನೂ ಗಾಬರಿಯಾಗದೆ, ಗಾಬರಿಯಾಗಿ ಕೈ ನಡುಗಿ ಶಸ್ತ್ರದಿಂದ ರೋಗಿಗೆ ತತ್‌ಕ್ಷಣವೇ ಅಪಾಯ ಸಂಭವಿಸದಂತೆ ನಿಧಾನವಂಗಿ ಸಮಾಧಾನ ಸ್ಥಿತಿಯಿಂದ ಶಸ್ತ್ರವನ್ನು ಪ್ರಯೋಗಿಸುವುದೂ ಅಲ್ಲದೆ ಸಾಂಕ್ರಾತಿಕ ರೋಗ ವ್ಯಾಪ್ತಿಯಾದ ವೇಳೆಯಲ್ಲಿ ಪ್ರಖ್ಯಾತಿಯನ್ನು ಪಡೆಯತಕ್ಕದ್ದೂ ನಿಮಗೆ ಸ್ವಭಾವವಾಗಿರಬೇಕು. ಇದೇತಾನೆ ವೈದ್ಯರೆನ್ನಿಸಿಕೊಂಡವರು ಎಲ್ಲರೆದರಿಗೂ ದೊಟ್ಟ ಭಾಷೆಯನ್ನು ತಪ್ಪದೆ,— ಹಿಂದಣ ವೈದ್ಯರು ನಡೆದಂತೆ, ಅಚರಿಸೋಣದರಲ್ಲಿ ಎಲ್ಲರಿಗೂ ಕೀರ್ತಿ. * * * * * *

ಈಗಿನ ವೈದ್ಯಸಂಗ್ರಹಗಳು ನಾನಾ ದೇಶದ, ಅನೇಕ ಸಂವತ್ಸರಗಳ ಅನುಭವಸಿದ್ಧವಾದ ವೈದ್ಯರ ಪದ್ಧತಿಗಳನ್ನೂ ಔಷಧ ಮೂಲಿಕೆಗಳನ್ನೂ ಬೋಧಿಸುವುವು. ಆದುದರಿಂದ ನೂತನ ವೈದ್ಯರುಳಗಳು ಹಿಂದೆ ಉಪಯೋಗಿಸುತಲಿದ್ದ ಮೂಲಿಕೆಗಳನ್ನೂ ಪದ್ಧತಿಗಳನ್ನೂ ಧಿಕ್ಕರಿಸದೆ, ಪ್ರಸಿದ್ಧವಾದ ಹಿಂದೂ, ಮುಸಲ್ಮಾನರ ವೈದ್ಯಪುಸ್ತಕಗಳ ಓದಿ, ವಿಶೇಷ ಸಂಗತಿಗಳನ್ನು ಸಂಗ್ರಹಿಸುವುದು ಉತ್ತಮ. ಶಿಡಬು ಹಾಕುವ ಪದ್ಧತಿಯು ಯೂರೋಪ್ಯರಿಗೆ ಹೊಸದಾದರೂ ಹಿಂದೂಸ್ಥಾನದಲ್ಲಿ ಬಹಳ ಪೂರ್ವದಲ್ಲಿಯೆ ಅಚರಣೆಯಲ್ಲಿತ್ತೆಂದು ತಿಳಿದುಬರುತಿದೆ. ಈಗ ಅಲ್ಪ ಸ್ವಲ್ಪ ತಿಳಿದು ಪಂಡಿತರು, ವೈದ್ಯರೆಂದು ಹೇಳಿಕೊಳ್ಳುವವರಿಗೂ, ವೈದ್ಯಶಾಸ್ತ್ರ ಸಂಪನ್ನರಾದ ಪುರಾತನ ವೈದ್ಯಶಿಖಾಮಣಿಗಳಿಗೂ ಸಂಬಂಧವೇ ಇಲ್ಲವೆಂದು ತಿಳಿಸಿದರು.

***

ಶಿಲ್ಪಶಾಸ್ತ್ರದಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ (ಇಂಜಿನಿಯರ್) ವರ

ಶಗಳನ್ನು ಹೇಳುವುದರಿಂದ ಬಾಲಕರಲ್ಲಿ ಆಲೋಚನಾ ಶಕ್ತಿಯು ವೃದ್ಧಿಯಾಗುವುದು ಮಾತ್ರವಲ್ಲದೆ, ಆ ಅಂಶಗಳನ್ನು ಅವರು ಬಹುಕಾಲ ಮರೆಯದಂತೆಯೂ ಆಗುವುದು. ಹೊಸ ಅಂಶಗಳನ್ನು ಬಾಲಕರಿಂದಲೇ ಹೊರಪಡಿಸುವುದರಲ್ಲಿ, ಅವರು ತಪ್ಪಾಗಿ ಹೇಳಿದ ಉತ್ತರಗಳನ್ನು ಅವರೇ ತಿದ್ದಿ ಹೇಳುವಂತೆ ಪ್ರಶ್ನೆ ಮಾಡುವುದರಿಂದಲೂ ಉಪಾಧ್ಯಾಯರಿಗಿರುವ ಶಕ್ತಿಯನ್ನು ನೋಡಿದರೆ ಅವರ ಬೋಧನಾ ಶಕ್ತಿಯನ್ನು ಚೆನ್ನಾಗಿ ಗೊತ್ತು ಮಾಡಬಹುದು.

೫. ಬೋಧಿಸುವಾಗ ಹಿಂದೆ ಹೇಳಿಕೊಟ್ಟಿರುವ ವಿಷಯಗಳಿಗೂ, ಈಗ ಹೇಳಿಕೊಡುತಿರುವ ವಿಷಯಗಳಿಗೂ, ಸಂಬಂಧಿಸಿಕೊಂಡು ಬೋಧಿಸುತಿರಬೇಕು.

೬. ಬೋಧಿಸಿದ ಅಂಶಗಳನ್ನು ಆಗಾಗ್ಗೆ ಆವೃತ್ತಿ ಮಾಡಿಸುತಿರಬೇಕು. ಹೊಸ ಅಂಶಗಳನ್ನು ಹೇಳಿಕೊಡುವಾಗ ಹಿಂದಿನವುಗಳನ್ನು ಜ್ಞಾಪಿಸುವುದರಿಂದಲೂ, ಆಗಾಗ್ಗೆ ಬಾಲಕರ ಪರೀಕ್ಷಿಸುವುದರಿಂದಲೂ ಇದು ನಿರವೇರುವುದು ಎಂ ಹಿಲಿಯಣ್ಣ

ಪೆಸ್ಟಲಾಟ್ಸಿಯವರ ಚರಿತ್ರೆ.

ಯಾರು ವಿದ್ಯಾಭ್ಯಾಸದ ವಿಷಯದಲ್ಲಿ ಪೆಸ್ಟಲಾಟ್ಸಿಯವರು ಚೆನ್ನಾಗಿ ಪರ್ಯಾಲೋಚಿಸಿ ವಿದ್ಯಾಭ್ಯಾಸ ಕ್ರಮವನ್ನು ತಮ್ಮ ಡೈರಿಯಲ್ಲಿ ಬರೆದುಕೊಂಡು ಅದಕ್ಕನುಸಾರವಾಗಿ ವಿದ್ಯಾಭ್ಯಾಸ ಮಾಡಿಸಿದರೋ ಅಂಥಾವರಲ್ಲಿ ಬಹಳ ಪಟುವಾಗಿದ್ದ ಸ್ವಂತ ಮಗನಾದ ಜೇಕಬ್ ಎಂಬುವನು ಪೂರ್ವ ವಯಸ್ಸಿನಲ್ಲಿಯೇ ಕಾಲಾಧೀನನಾದನು. ಈತನಿಗೆ ಅವನು ಕಾಲಾಧೀನನಾಗುವುದಕ್ಕೆ ಪೂರ್ವದಲ್ಲಿರೇ ಬರೆದಿರತಕ್ಕ ಒಂದು ಲೇಖನವು ಅವಲೋಕನೀಯವಾಗಿ ಇದೆ:—

"ಎಲೈ ಮಗುವೇ, ನನಗೆ ಪ್ರಪಂಚದಲ್ಲಿರತಕ್ಕ ಸರ್ವಸ್ವವೂ ನೀನೆ. ನಾನು ಬದುಕಬೇಕೆಂದು ಪ್ರಯತ್ನ ಮಾಡುವವೂ ನಿನಗೋಸ್ಕರವೇ. ನಿನ್ನನ್ನು ಲೋಕೋತ್ತರವಾದ ಸ್ಥಿತಿಗೆ ತಂದು ಕೃತಕೃತ್ಯನಾಗಬೇಕೆಂದು ನಾನು ಅನಿರ್ವಚನೀಯವಾದ ಕಷ್ಟಗಳನ್ನು ಅನುಭವಿಸಿದೇನೆ. ನನ್ನ ಕೆಲಸವೂ ಕೂಡಿದ ಮಟ್ಟಿಗೂ ಮುಗಿಯುತ್ತಲಿದೆ. ಅನ್ಯಾದೃಶನಾದ ವಿದ್ವತ್ತಿನ ಸಂಪ್ರಾಪ್ತಿಗೆ ಬೇಕಾದ ಅಸ್ತಿಭಾರವನ್ನು ಹಾಕಿಯಾಯಿತು. ಈ ಅಸ್ತಿಭಾರದ ಸಹಾಯದಿಂದ ಅದ್ವಿತೀಯವಾದ ಪಾಂಡಿತ್ಯವನ್ನೂ

ನ್ನು ಛೇದಿಸಿಕೊಂಡು, ನಮಗೆ ಇದುವರೆಗೆ ತಿಳಿಯದೆ ಇರುವ ಪದಗಳು ಯಾವುದಾದರೂ ಇದ್ದರೆ ಅವುಗಳ ಅರ್ಥವನ್ನು ಗೊತ್ತುಮಾಡಿಕೊಳ್ಳುವೆವು. ಈಗ ಅನ್ವಯವನ್ನು ಅಥವಾ ಪದ್ಯದ ಪದಗಳಿಗಿರುವ ಸಂಬಂಧವನ್ನು ತಿಳಿದುಕೊಳ್ಳುವೆವು. ಅಮೇಲೆ ಒಟ್ಟು ಅರ್ಥವನ್ನು ಭಾವಿಸಿಕೊಳ್ಳುವೆವು. ಕೊನೆಗೆ ತಾತ್ಪರ್ಯವನ್ನು ಕುರಿತು ಯೋಚಿಸುವೆವು ನಮ್ಮಷ್ಟಕ್ಕೆ ನಾವೇ ತಿಳಿದುಕೊಳ್ಳಬೇಕಾದರೆ ಈ ಮಾರ್ಗವನ್ನು ನಾವು ಸಹಜವಾಗಿ ಅನುಸರಿಸುವೆವು. ಆದುದರಿಂದ ಬಾಲಕರಿಗೆ ಬೋಧಿಸುವಾಗಲೂ ಅದೇ ಮಾರ್ಗವನ್ನನುಸರಿಸಬೇಕು. ಅಂದರೆ ಪದ್ಯವನ್ನು ಮೊದಲು ಇಬ್ಬರು ಮೂವರಿಂದ ಓದಿಸಬೇಕು. ಅನಂತರದಲ್ಲಿ ಪದಚ್ಛೇದ ಮಾಡಿಸಿ, ಕಷ್ಟವಾದ ಪದಗಳಿಗೆ ಅರ್ಥವನ್ನು ತಿಳಿಸಿಕೊಡಬೇಕು. ಕೊನೆಗೆ ಪದ್ಯದ ತಾತ್ಪರ್ಯ ವಿಷಯವಾಗಿ ಪ್ರಶ್ನೆ ಮಾಡಬೇಕು ಬೋಧನಕ್ರಮವು ಸರಿಯಾಗಿದೆಯೆಂದು ಗೊತ್ತು ಮಾಡುವುದಕ್ಕೆ ಅದು ಸ್ವಭಾವಿಕವಾಗಿದೆಯೋ, ಇಲ್ಲವೇ ಎಂಬುದು ಒಂದು ದೊಡ್ಡ ಗುರುತು.

೩. ಬೋಧಿಸುವಾಗ ಎಷ್ಟೆಷ್ಟು ಇಂದ್ರಿಯಗಳನ್ನು ಉಪಯೋಗಿಸಿಕೊಳ್ಳಬಹುದೊ, ಅಷ್ಟು ಇಂದ್ರಿಯಗಳ ಮೂಲಕವಾಗಿಯೂ ಅಂಶಗಳನ್ನು ಬಾಲಕರ ಬುದ್ಧಿಗೆ ಗೋಚರ ಮಾಡಿಸಬೇಕು. ಪಾಠ ಹೇಳುವಾಗ ಅಂಶಗಳು ಸಾಮಾನ್ಯವಾಗಿ ಶ್ರೋತ್ರೇಂದ್ರಿಯದ ಮಾರ್ಗವಾಗಿ ಬಾಲಕರ ಬುದ್ಧಿಯನ್ನು ಸೇರುವುವು. ಇದರ ಜತೆಗೆ ಆ ಅಂಶಗಳಲ್ಲಿ ಮುಖ್ಯವಾದವುಗಳನ್ನೂ ಹಲಗೆಯ ಮೇಲೆ ಬರೆಯುವುದರಿಂದಲೂ, ನೇತ್ರೇಂದ್ರಿಯದ ಮೂಲಕವಾಗಿಯು, ಸಾಧ್ಯವಾದರೆ ಇದರಂತೆ ಇತರ ಇಂದ್ರಿಯಗಳ ಮೂಲಕವಾಗಿಯೂ ಜ್ಞಾನವನ್ನುಂಟುಮಾಡಬೇಕು. ಇದರಿಂದ ಬೋಧಿಸಿದ ವಿಷಯದಲ್ಲಿ ಸರಿಯಾದ ಜ್ಞಾನ ವುಂಟಾಗುವದಲ್ಲದೆ, ಆ ವಿಷಯವು ಬಾಲಕರ ಮನಸ್ಸಿನಲ್ಲಿ ಬಹುಕಾಲ ನಿಲ್ಲುವಂತೆಯೂ ಆಗುವುದು.

೪. ಹೇಳಿಕೊಡಬೇಕಾದ ಅಂಶಗಳನ್ನೆಲ್ಲ ಉಪಾಧ್ಯಾಯರು ತಾವೇ ಹೇಳಿಬಿಡುವುದಕ್ಕೆ ಬದಲಾಗಿ, ಅವು ಬಾಲಕರಿಗೇ ತೋರುವಂತೆ ಮಾಡಿ, ಅವರಿಂದಲೇ ಹೇಳಿಸಬಹುದಾದುದನ್ನು ಹೇಳಿಸಬೇಕು. ಬೋಧನೆಯಿಂದ ವಿಷಯವು ತಿಳಿಯುವುದು ಮಾತ್ರವಲ್ಲದೆ, ಬಾಲಕರ ಬುದ್ಧಿಗೆ ಸಂಸ್ಕಾರವೂ ಆಗಬೇಕಾದುದರಿಂದ ಹೀಗೆ ಮಾಡುವುದು ಆವಶ್ಯಕ. ಇದರಿಂದ ಬಾಲಕರು ಸ್ವತಃ ಯೋಚಿಸಿ ಹೊಸ ವಿಷಯಗಳನ್ನು ಕಂಡು ಹಿಡಿಯಬೇಕಾಗುವುದು. ಇದು ಬಹಳ ಪ್ರಯೋಜನಕರ. ತಾವೇ ಯೋಚಿಸಿ ಅಂ

ಳಾಗಿ ಬಂದವರಲ್ಲಿ ಪುತ್ರನಿರ್ವಿಶೇಷವಾದ ವಾತ್ಸಲ್ಯವನ್ನಿಟ್ಟು ಅವರನ್ನು ಪೋಷಿಸುತ್ತಲೂ ಬಂದರು. ನಿಸ್ಪೃಹರಾದ ಪೋಷಕರು ಸಿಕ್ಕಿದರೆ ಅನಾಥರು ಲೆಕ್ಕವಿಲ್ಲದೇ ಸಿಕ್ಕುವದು ಗೊತ್ತಾಗಿಯೇ ಇದೆ ವಿದ್ಯಾಭ್ಯಾಸದ ಮೇಲೆ ಇಷ್ಟವಿಲ್ಲದಿದ್ದಾಗ್ಯೂ ಅನ್ನವಸ್ತ್ರಗಳು ಸಿಕ್ಕುತ್ತವೆ ಎಂಬ ಯೋಚನೆಯಿಂದ ಅನೇಕ ವಿದ್ಯಾರ್ಥಿಗಳು ಇವರನ್ನು ಸೇರಿದರು. ಖರ್ಚು ಜಾಸ್ತಿಯಾಯಿತು. ಆಯಿತಿಯು ಕಡಮೆಯಾಗಿತ್ತು. ಅದಕ್ಕಾಗಿ ಇವರ ಮಿತ್ರರಾದ ಕೆಲವರು ಉಪಪನ್ನರಾದವರಲ್ಲಿ ಈ ಕೆಲಸಕ್ಕಾಗಿ ಯೋಚನೆಮಾಡುವದಕ್ಕುಪಕ್ರಮಿಸಿದರು. ಐಸ್‌ಲಿ ಎಂಬ ಬಹಳ ಪ್ರಬಲನಾದ ಒಬ್ಬ ವರ್ತಮಾನಪತ್ರಿಕಾಕರ್ತನು ಸಕಲಧರ್ಮಗಳಿಗಿಂತಲೂ ಪೆಸ್ತಲಾಟ್ಸಿಯವರು ಅನಾಥರಿಗೆ ಮಾಡುತ್ತಲಿರುವ ವಿದ್ಯಾದಾನಕ್ಕೆ ಸಹಾಯವಾಡುವದು ಪರಮಧರ್ಮವೆಂದು ತನ್ನ ಪತ್ರಿಕೆಯಲ್ಲಿ ಬರೆದನು. ಇದರಿಂದ ಪೆಸ್ತಲಾಟ್ಸಿಯವರ ಔದಾರ್ಯಕ್ಕೂ ಫಲಾಭಿಸಂಧಿ ಇಲ್ಲದೆ ಮಾಡುತ್ತಲಿದ್ದ ಅನ್ಯಾದೃಶವಾದ ಮಿಹನತ್ತಿಗೂ ಅನುರೂಪವಾದ ಸಹಾಯವು ಬರುವಸಕ್ಕುಪಕ್ರಮವಾಯಿತು.

ಎಂ. ವೆಂಕಟಕೃಷ್ಣಯ್ಯ.

ವ್ಯವಸಾಯ

೧ 'ಉತ್ತಮೆಂಕೃಷಿಜೀವನಂ' ಎಂಬ ವಾಕ್ಯದಿಂದ ನಮ್ಮ ಪೂರ್ವಿಕರು ವ್ಯವಸಾಯವನ್ನು ಸರ್ವೋತ್ಕೃಷ್ಟವಾದ ಕಸಬೆಂದು ಎಣಿಸಿದ್ದರೆಂದು ತಿಳಿದುಬರುವುದು. ಈಚೆಗೆ ಅಂಥಾ ಅಭಿಪ್ರಾಯವು ದಿನೇದಿನೆ ಕಡಮೆಯಾಗುತ್ತಾ ಬರುತ್ತಿದೆ. ಯಾಕಂದರೆ— ವಿದ್ಯಾಪ್ರಚುರತೆಯಿಂದ ನಮ್ಮ ಜನಗಳು ಹಳ್ಳಿನಾಸವನ್ನ ಪ್ರಾಯಶಃ ನಿಕೃಷ್ಟಿಸಿ ಪಟ್ಟಣವಾಸವನ್ನು ಬಯಸುತ್ತಾರೆ ಮತ್ತು ಶೂದ್ರರು ಆಚರಿಸುವ ಈ ವ್ಯವಸಾಯದ ಕಸಬನ್ನು ನಾಗರಿಕರಾದ ಉತ್ತಮರು ಅವಲಂಬಿಸುವದಕ್ಕೆ ಶಂಕಿಸುವ ಹಾಗೆ ತೋರುತ್ತೆ. ಇವೇ ಮೊದಲಾದ ಕಾರಣಗಳಿಂದ ಪೂರ್ವದಲ್ಲಿ ಕೊಡುತ್ತಾ ಇದ್ದ ಗಮನವನ್ನ ಈ ಜನಗಳು ವ್ಯವಸಾಯಕ್ಕೆ ಕೊಡುವದಿಲ್ಲವಾಗಿ ಪ್ರಕೃತ ಹೀನಸ್ಥಿತಿಯನ್ನು ಹೊಂದಿದೆ.

೨ ನಮ್ಮ ದೇಶದಲ್ಲಿ ವ್ಯವಸಾಯವು ಬಹಳ ಉನ್ನತಸ್ಥಿತಿಯಲ್ಲಿ ಇದ್ದು ಈಗ

ಸಂಪತ್ತನ್ನು ಸಂಪಾದಿಸಿ ಇಹ ಪರಗಳನ್ನು ಸಾಧಿಸುವದು ಬಹಳ ಸುಲಭ. ಹೀಗೆ ಮಾಡಬೇಕಾದರೆ ನೀನು ಅರ್ಜಿಸಿರುವ ವಿದ್ಯಾಬಲದಿಂದ ಸಕಲ ಶಾಸ್ತ್ರ ವಿಶಾರದನಾಗಬೇಕಲ್ಲದೆ ಶಾಸ್ತ್ರೋಕ್ತಗಳಾದ ಧರ್ಮಾನುಷ್ಠಾನ ಪರಾಯಣನಾಗಿಯೂ ಇರಬೇಕು. ಧರ್ಮಾಧರ್ಮ ವಿಚಕ್ಷಣರಾಗುವದು ಮಾತ್ರವೇ ಇಹ ಪರ ಸಾಧನೆಗಳಿಗೆ ಸಾಲದು. ಧರ್ಮಜ್ಞರಾಗಿ ಅದನ್ನು ಅನುಷ್ಠಿಸದೇ ಇರತಕ್ಕವರಿಗಿಂತಲೂ ಇದು ಧರ್ಮವೆಂದು ತಿಳಿಯದೇ ಇದ್ದಾಗ್ಯೂ ಅದನ್ನು ಅನುಷ್ಠಾನ ಮಾಡತಕ್ಕವರು ಪೂಜನೀಯರು. ಆದ್ದರಿಂದ ಧರ್ಮಜ್ಞನಾಗಿಯೂ ಧರ್ಮಾನುಷ್ಠಾನೈಕಪರಾಯಣನಾಗಿಯೂ ಇದ್ದುಕೊಂಡು ಯಶೋವಂತನಾಗಿ ನೀನು ಬದುಕಿದರೆ ನಾನು ಪಟ್ಟ ಕಷ್ಟಗಳೆಲ್ಲಾ ಫಲವುಳ್ಳವುಗಳಾಯಿತೆಂದು ನಾನು ಭಾವಿಸುತ್ತೇನೆ. ಧರ್ಮಿಷ್ಠರಾಗಬೇಕೆಂಬ ಸಂಕಲ್ಪವುಳ್ಳವರಿಗೆ ವಿದ್ಯೆಗಿಂತಲೂ ಅರಿಷಡ್ವರ್ಗಗಳ ಉಚ್ಛೃಂಖಲಪ್ರವರ್ತನೆಗೆ ಅಧೀನನಾಗದೆ ಜಿತೇಂದ್ರಿಯನಾಗಿರುವದು ಬಹಳ ಸಾಧಕನಾದದ್ದು. ಈ ಅಂಶವನ್ನು ಪ್ರತಿನಿತ್ಯದಲ್ಲಿಯೂ ಪ್ರತಿಯಿಂದು ನಿಮಿಷದಲ್ಲಿಯೂ ನಿನಗೆ ಅಭಿಮುಖವಾಗಿರುವಂತೆ ಮಾಡಿಕೋ. ಬುದ್ಧಿಶಾಲಿಯಾದವರಿಗೆ ವಿಶೇಷವಾಗಿ ಹೇಳತಕ್ಕದ್ದೇನೂ ಇರುವದಿಲ್ಲ. ''

ಇಂಥಾ ಬುದ್ಧಿವಾದಗಳನ್ನು ಹೊಂದಿದ ಜೇಕಬ್ಬನು ೧೮೦೦ ನೇ ಇಸವಿಯಲ್ಲಿ ಅಕಾಲಮರಣವನ್ನು ಹೊಂದಿದನು. ಈತನು ಬದುಕಿದ್ದರೆ ಪೆಸ್ಟಲಾಟ್ಸಿಯವರ ಬುದ್ಧಿವಾದದ ಪರಿಣಾಮವು ಯಾವರೀತಿಯಲ್ಲಾಗುತ್ತಿತ್ತೊ ಅದು ಗೊತ್ತಾಗಬಹುದಾಗಿತ್ತು. ಜೇಕಬ್ಬನಿಗೆ ಅಕಾಲಮರಣವು ಪ್ರಾಪ್ತವಾದಾಗ್ಯೂ ಪೆಸ್ಟಲಾಟ್ಸಿಯವರ ಶಿಕ್ಷೆಯ ಪ್ರಯೋಜನವು ಜೇಕಬ್ಬನ ಜೀವಮಾನದಲ್ಲಿ ಪ್ರತಿಫಲಿಸದೇ ಇದ್ದಾಗ್ಯೂ ಈ ಲೇಖನದಲ್ಲಿ ಕಂಡ ಉಪದೇಶವು ನಿಷ್ಪ್ರಯೋಜನವಾಗಲಿಲ್ಲ. ಈಗಲೂ ಪೆಸ್ಟಲಾಟ್ಸಿಯವರ ಗ್ರಂಥಗಳನ್ನು ಲಕ್ಷಾಂತರ ಜನಗಳು ಓದಿ ಅವರ ಉಪದೇಶಕ್ಕನುಸಾರವಾಗಿ ತಮ್ಮ ನಡೆನುಡಿಗಳನ್ನು ವಿಘಡಿಸಿಕೊಂಡು ಧರ್ಮಿಷ್ಠರಾಗುತಲಿದಾರೆ. ಜೇಕಬ್ಬರವರ ಮರಣದಿಂದ ಪೆಸ್ಟಲಾಟ್ಸಿಯವರಿಗೆ ಉಂಟಾದ ಶೋಕಾವೇಗವು ಅನಿರ್ವಚನೀಯವಾದದ್ದು. ಕ್ರಮಕ್ರಮವಾಗಿ ಪೆಸ್ಟಲಾಟ್ಸಿಯವರು ಈ ಪುತ್ರಶೋಕಕ್ಕೆ ಅಧೀನರಾಗುವದು ಪಾಮರವ್ಯಾಪಾರವೆಂದು ನಿಶ್ಚೈಸಿಮಾಡಿ ಔರಸಪುತ್ರರಿಗಿಂತಲೂ ವಿದ್ಯಾದಾನವನ್ನು ಹೊಂದಿ ಪುತ್ರಪ್ರಾಯರಾದವರು ಯಾವವಿಧದಲ್ಲಿಯೂ ಕಡಮೆ ಇಲ್ಲವೆಂಬ ಭಾವನೆಯನ್ನು ಹೊಂದಿ ಅನ್ನವಸ್ತ್ರಗಳಿಗಿಲ್ಲದೆ ಅನಾಥರಾಗಿ ವಿದ್ಯಾರ್ಥಿಗ

ತ್ತೀರಿಸುವಾ ಅಂದರೆ ಪೊಡಿಯನು ಒಪ್ಪುವದಿಲ್ಲ. ಕೊಟ್ಟುಹೋಗೆಂದು ಜೋರುಮಾಡುತ್ತಾನೆ, ಹೊಡೆಯುತ್ತಾನೆ, ನನಗೆ ದಿಕ್ಕಿಲ್ಲಯೆಂದೂನೂ ಮತ್ತೊಬ್ಬನು ನಾನು ಹಾರವರ ಜವಿಾನನ್ನ ಪಿಕ್ಕಿಗೆ ತೆಗೆದುಕೊಂಡು ವಾರ (ಕೋರು) ಪಾಲು ಮಾಡುವದರಿಂದ ಏನೂ ಲಾಭ ಇಲ್ಲ, ನಾವು ಗೇದು ಅವರಿಗೆ ಸಮುಕೋರು ಕೊಡುವದಲ್ಲದ ಅವರ ಮನೆ ಬಿಟ್ಟು ಕೆಲಸ ಸಹ ಮಾಡಬೇಕಾಗಿದೆ. ಪಟ್ಟೇದಾರನ ಬೇಸಾಯಕ್ಕೆ ಬೇಕಾದ ಸಾಮಗ್ರಿಗಳನ್ನು ನಮ್ಮ ಜವಿರ್ಾದಾರ್ರು ಒದಗಿಸಿ ಕೊಡದೆ ಇದ್ದರೂ ಗೊಬ್ಬರಾಗೋಡಿಗಾಗಬೇಕಾದ ಹಣ ಕಾಸು ಸಹ ಕೊಡುವದಿಲ್ಲ. ಒಂದುವೇಳೆ ನಾವೇಕೊಟ್ಟು ಚನ್ನಾಗಿ ಪೈರು ಮಾಡಿದರೆ ಸುಗ್ಗೀಕಾಲದಲ್ಲಿ ಅಳತೆಗೆ ಮಟ್ಟಿಗೆ ಹಲಹ ರಾಗುವರು. ವರ್ಗದಾರನುಬಂದು ಕೋರು ಸರಿಯಾಗಿ ಕೊಡು. ನಾನು ಗೊಬ್ಬರಾಗೋಡಿಗೆ ಹಣಕೊಡತಕ್ಕವನಲ್ಲ. ಎಲ್ಲಾ ನನ್ನದೇ, ಕೊಡದಿದ್ದರೆ ಮುಂದೆ ನೀನು ನನ್ನ ಜವಿರ್ಾ ಸಾಗುವಳಿ ಮಾಡಬೇಡ, ಎಂದು ಬೆದರಿಸಿ ಸಮಭಾಗ ಹಿಸ್ಸೆ ತೆಗೆದುಕೊಂಡು ಹೋಗುತ್ತಾನೆಯೇ ಹೊರ್ತು ಮತ್ತೇನೂ ತನ್ನ ಭೂಮಿಯ ಅಭಿವೃದ್ಧಿ ವಿಷಯವಾಗಿ ಯಾವದೊಂದು ಅನುಕೂಲ ಮಾಡುವದಿಲ್ಲ.

೪ ಈ ಕಾರಣಗಳಿಂದ ಬಹುಕಾಲಾರಭ್ಯ ವ್ಯವಸಾಯದ ಕಸಬು ಮಾಡುತ್ತಾ ಅದರ ಮರ್ಮಗಳೆಲ್ಲಾ ತಿಳಿದ ರೈತನು ಪಿಕ್ಕಿಎಲ್ಲ ಸಾಗುವಳಿ ಮಾಡಲು ಒಡಂಬಡದೆ ಹರಹುನ್ನರು ಪಟ್ಟೇಜವಿಾನನ್ನೇ ಮಾಡಿಕೊಳ್ಳಲು ಪ್ರಯತ್ನಪಡುತ್ತಾ ಇರುತ್ತಾನೆ. ಸಾಧ್ಯವಾದಮಟ್ಟಿಗೆ ಪಿಕ್ಕಿಸಾಗುವಳಿಯನ್ನು ಕಮ್ಮಿಮಾಡುತ್ತಾ ಬರುತ್ತಾನೆ. ಒಂದು ವೇಳೆ ಬಲಾತ್ಕಾರದಿಂದ ಜವಿರ್ಾದಾರನು ರೈತನಿಗೆ ಪಿಕ್ಕಿಯಾಗಿ ಕೊರಿಗೆ ಜವಿರ್ಾ ಕೊಟ್ಟಲ್ಲಿ ಜವಿಾನನ್ನು ಅರೂಪುಮಾಡಿ ಜವಿರ್ಾದಾರನು ತನ್ನ ಜವಿಾನನ್ನು ತಾವೇ ಕೊಟ್ಟುಬಿಡುವಂತೆ ಮಾಡುತ್ತಾನೆ. ಇಲ್ಲವಾದರೆ ಅವನು ಸರಕಾರಕ್ಕೆ ತೆರತಕ್ಕ ಕಂದಾಯಕ್ಕೆ ಸರಿಯಾಗಿ "ಹಾರವರ ಹೊಲಕ್ಕೆ ಹಾರಕ ಹುರಳಿ" ಎಂಬರೀತಿ ಅರಬೆಳೆ ಬೆಳೆದು ಕೋಲು ಮುರಿಯಬಾರದು ಹಾವು ಸಾಯಬಾರದೆಂಬಂತೆ ಮಾಡುತ್ತಾನೆ. ಹೀಗೆ ಅನೇಕ ಜವಿರ್ಾದಾರರು ಸ್ವಂತವಾಗಿ ಮಾಡದೆ ಪಿಕ್ಕಿಗೆ ಕೊಟ್ಟು ಭೂಮಿಯಲ್ಲಿ ಬೆಳೆಯುತಕ್ಕ ಫಸಲಿಗೆ ಕಾಲುಭಾಗವಾದರೂ ಉತ್ಪತ್ತಿಯಾಗದಂತೆ ಮಾಡಿಕೊಳ್ಳುತ್ತಾರೆ. ಹೀಗಾಗುವದರಿಂದ ಒಟ್ಟನಲ್ಲಿ ಜನಾಂಗಕ್ಕೆ ಬಹಳ ನಷ್ಟ ಉಂಟಾಗುತ್ತೆ. ವಿಶೇಷವಾಗಿ ಸ್ವಂತಸಾಗುವಳಿ ಮಾಡದೇ ಇರುವ ಕುಷ್ಣಬಾಷೆ ಜವಿರ್ಾದಾರ್ರುಗಳು

ದಿನೇದಿನೇ ಕ್ಷೀಣಗತಿಯನ್ನು ಹೊಂದುತ್ತಾ ಇದೆ, ಎಂಬುದಕ್ಕೆ ಸಂದೇಹವೇನೂ ಇಲ್ಲ. ಇದು ೫೦ ವರುಷಗಳ ಕೆಳಗೆ ಇದ್ದ ದನಕರಗಳ ಸ್ಥಿತಿ ಮತ್ತು ಭೂಮಿಯಲ್ಲಿ ಹಾಕಿದ ಪೈರುಗಳ ಬೆಳವಳಿಕೆಯ ಸ್ಥಿತಿಗಳನ್ನೂ ಈ ಕಾಲದ ದನಗಳ ಸ್ಥಿತಿಗೂ ಹೋಲಿಸಿದರೆ ಅರ್ಥಾರ್ಥಕ್ಕೆ ಸಂಬಂಧವಿಲ್ಲ. ಬಲವತ್ತಾದ ದನವೂ ದುರ್ಬಲಗುಣ್ಣದ್ದಾಗಿಯೂ ಪೂರಾ ಬೆಳೆಯತಕ್ಕ ಭೂಮಿಯು ಅರ್ಧಬೆಳೆ ಕೊಡತಕ್ಕದ್ದಾಗಿಯೂ ಇರುತ್ತದೆಂದು ಯಾರೊಬ್ಬರೂ ಹೇಳದಿರಲಾರರು. ಇದು ದೇಶಾಭಿವೃದ್ಧಿಗೆ ಬಹಳ ಕುಂದಕವಾದ್ದು. ಇಂಥಾ ಅನಿಷ್ಟವನ್ನ ನಿವಾರಣೆಮಾಡಲು ದೇಶಾಭಿಮಾನಿಗಳು ವ್ಯವಸಾಯಾಭಿಮಾನಿಗಳಿಲ್ಲರೂ ಒಗ್ಗಟ್ಟಾಗಿ ಸೇರಿ ಒಂದು ಖಂಡಿಗ ಬೆಳೆಯುತಕ್ಕ ಪ್ರದೇಶದಲ್ಲಿ ಎರಡುಖಂಡಿಗ ಬೆಳೆಸತಕ್ಕ ಏರ್ಪಾಡುಮಾಡತಕ್ಕದ್ದು ಸುಲಭಸಾಧ್ಯವಾಗಿದೆ.

ನಮ್ಮ ದೇಶದಲ್ಲಿ ಪೂರ್ವದಲ್ಲಿದ್ದ ಹಿಡುವಳಿ ಜವಿರ್ಾಗಳಿಗಿಂತ ರೈತರು ಜಾಸ್ತಿ ಜವಿರ್ಾ ಹಿಡಿದಿರುತ್ತಾರೆಂಬುವದರಲ್ಲಿ ಸಂಶಯವಿಲ್ಲ. ಹಾಗಿದ್ದಾಗ್ಯೂ ಪೂರ್ವದಲ್ಲಿ ರೈತನು ಬೆಳೆಯುತ್ತಿದ್ದ ದವಸಧಾನ್ಯಗಳಲ್ಲಿ ಅರ್ಧಪಾಲು ಹುಲಸಾಗಿಯೂ ಬೆಳೆಯುವದೇ ಇರುತ್ತಾನೆ ಗಾ್ರಮಾಂತರಹೋಗಿ ಯಾವ ರೈತನನ್ನಾದರೂ ಇದು ಯಾತಕ್ಕೆ ಎಂದು ಕೇಳಿದರೆ ಒಬ್ಬನು 'ಬುದ್ಧಿ ! ನಾನೇನುಮಾಡೋದು ಭೂಮಿ ಅರೂಪಾಯಿತು ಬೆಳೆ ಕಡಮೆಯಾಯಿತು. ದನಾಕಿರದಾಯಿತು. ರೈತರು ಬಡವರಾದರು. ಸಾಹುಕಾರ್ರು ಬಲತುಹೋದರು ಮಳೆಮೋಸಮಾಡಿತು. ಕೆರೆ ಹೂತುಹೋಯಿತು. ಕಾಳು ಕೈಸೇರದು' ಎಂದೂನೂ ಮತ್ತೊಬ್ಬನ 'ನಾನು ಕಷ್ಟಪಟ್ಟು ಬೆಳೆದರೆ ತಾನೆ ಯೇನುಪ್ರಯೋಜನ ನನ್ನ ಒಡಿಯುಂದ್ರಿಗೆ ಬೊಜ್ಜು ಬೆಳೆಯುತ್ತೆ, ನನಗೆ ವರುಷ ಒಂದಕ್ಕೆ ಬರತಕ್ಕ ೫ ರೂಪಾಯಿ, ೬ ಪಲ್ಲಾದವಸ ೧ ಕಂಬಳಿ ಹೊತರ್ು ಮತ್ತು ಬೇರೆ ಯೇನಾದರೂ ಪ್ರಯೋಜನವನ್ನೆಕಾಣೆ ನನ್ನ ಒಡಿಯ ನನಗೆ ಕೊಡತಕ್ಕ ಕಾಳು ಕಂಬಳಕ್ಕೆ ನೆಲಕೆರದು ಬಿತ್ತದರೂ ಬರುತ್ತೆ' ಎಂದೂನೂ, ಇನ್ನೊಬ್ಬನು 'ನನ್ನ ತಾತ ನೂರೊಂದೊಡೆಯ ಅಜ್ಜನಕ್ಕಳಿ ೧೦ ವರಹಾ ಅವನ ಮದುವೆಗೋಸ್ಕರ ಸಾಲಾತೆಗದುಕೊಂಡಿದಾನಂತೆ. ಆ ಸಾಲಾತೀರಿಸುವವರಿಗೂ ಅವರ ಮನೇಲಿ ತಲೆತಲೆಗೂ ಜೀತಾ ಮಾಡುತ್ತೇನೆಂದು ಒಪ್ಪಕೂಡಿದ್ದನಂತೆ. ಈಗ ಎರಡುತಲೆ ಕಳೆದರೂ ಸಾಲಾತೀರುವದಕ್ಕೆ ಮಾರ್ಗವಿಲ್ಲ. ಒಡಯಂದ್ರು ಕೊಡತಕ್ಕ ದವಸಾ ಕಂಬಳಿ ಉಪ್ಪುಮೆಣಸಿನಕಾಯಿನ ವೆಚ್ಚ ನನ್ನಮನೆ ಜನಕ್ಕೆ ಸಾಕಾಗುವದಿಲ್ಲ. ಆದ್ದರಿಂದ ಕಾಪಿತೋಟಕ್ಕಾದರೂ ಹೋಗಿ ಗೇದು ಸಾಲಾ

ಯೂ, ಸ್ವಲ್ಪವೂ ಗದ್ದಲವೂಡದಂತೆಯೂ ತಂತಮ್ಮ ಪಾಠಪುಸ್ತಕಗಳನ್ನು ಓದಿಕೊ ಳ್ಳುತಿರುವಂತೆ ಮಾಡಬೇಕು. ಉಪಾಧ್ಯಾಯನು ಯಾವ ವಿದ್ಯಾರ್ಥಿಯ ಹಲಿಗೆಯನ್ನು ತಿದ್ದುವನೋ ಆ ಹುಡುಗನನ್ನು ತನ್ನಬಳಿ ನಿಲ್ಲಿಸಿಕೊಂಡು ಅವನವನು ಮಾಡಿರುವ ವಿಶೇಷವಾದ ತಪ್ಪುಗಳನ್ನು ಅವನಿಗೆ ತೋರಿಸಿ ಸರಿಯಾದ ಕ್ರಮವನ್ನು ತಿಳಿಸುತ್ತಾ ಹೀಗೆಯೇ ಎಲ್ಲರ ಹಲಿಗೆಗಳನ್ನೂ ಶೋಧಿಸಿದನಂತರ ಸಾಮಾನ್ಯವಾದ ತಪ್ಪುಗಳನ್ನು ಕರಿಯ ಹಲಿಗೆಯಮೇಲೆ ಬರೆದು ತೋರಿಸುವದೂ ಉತ್ತಮವಾಗಿದೆ ಕಡೆಗೆ ಕ್ಲಪ್ತಿ ಯೊಂದುಪದದ ಅಕ್ಷರಕೂಟವನ್ನೂ ಹುಡುಗರಿಂದ ಹೇಳಿಸಬೇಕು. ೧ನೆಯ ತರಗತಿ ಯವರ ಹಲಿಗೆಗಳನ್ನು ಹಿಂದೆ ಹೇಳಿರುವಂತೆ ವಿದ್ಯಾರ್ಥಿಗಳಿಂದಲೇ ತಿದ್ದಿಸಬಹುದು. ಆದರೆ ಉಪಾಧ್ಯಾಯನು ಪ್ರತಿ ಒಬ್ಬರೂ ಯಾವರೀತಿ ತಿದ್ದುವರೆಂಬುದನ್ನು ಚಟವಟಿಕೆ ಯಿಂದ ನೋಡಿ ಸರಿಯಾಗಿ ತಿದ್ದಿಸಬೇಕು. ಬಳಿಕ ಗೊತ್ತಾಗಿರುವ ೨೦ ನಂಬರಿನಲ್ಲಿ ತಪ್ಪಿಗೊಂದರಂತೆ ಕಳೆದುಳಿದ ನಂಬರನ್ನು ವಿದ್ಯಾರ್ಥಿಗಳಿಗೆ ಕೊಡಬೇಕು.

ಅಪ್ಪರ್‌ಪ್ರೈಮರಿ ೨-೩ನೆಯ ತರಗತಿಗಳಿಗೆ ನಂಬರು ೨೦

ಕೆಲವು ವಾಕ್ಯಗಳು ಮತ್ತು ಸಮಾಸಪದಗಳನ್ನು ಉಪಾಧ್ಯಾಯನು ಮೊದ ಲು ಒಂದುಬಾರಿ ಓದಬೇಕು. ಆ ಸಮಯದಲ್ಲಿ ವಿದ್ಯಾರ್ಥಿಗಳೆಲ್ಲರೂ ಅದನ್ನು ಸುಮ್ಮ ನೆ ಕೇಳುತ್ತಿರಬೇಕು. ಆಮೇಲೆ ಉಪಾಧ್ಯಾಯನು ಸಂದರ್ಭೋಚಿತವಾಗಿ ೧-೨-೩ ಪದಗಳನ್ನು ಒಂದೊಂದುಸಾರಿ ಹೇಳುತ್ತಾ ಬರೆಯಿಸಿ ಬರೆದದ್ದಾದ ಬಳಿಕ ಮತ್ತೊಂ ದಾವರ್ತಿ ಓದಬೇಕು. ಆ ಕಾಲದಲ್ಲಿ ಹುಡುಗರು ತಮ್ಮ ಬರವಣಿಗೆಯಲ್ಲಿರತಕ್ಕ ತಪ್ಪು ಗಳನ್ನು ತಿದ್ದಿಕೊಳ್ಳಬಹುದು. ಇಷ್ಟಾದಮೇಲೆ ತಪ್ಪುಗಳನ್ನು ವಿದ್ಯಾರ್ಥಿಗಳಿಂದ ತಿದ್ದಿಸಿ ತಪ್ಪು ೧ಕ್ಕೆ ೧½ಯಂತೆ ನಂಬರ್ ಕಳೆದು ಉಳಿದ ನಂಬರನ್ನು ವಿದ್ಯಾರ್ಥಿಗಳಿಗೆ ಕೊಡತಕ್ಕದ್ದು.

ಲೋಯರ್‌ಸೆಕೆಂಡರೀ ೪-೫ನೇ ತರಗತಿಗಳಿಗೆ ನಂಬರ್ ೧೦

ಲೋಯರ್‌ಸೆಕೆಂಡರೀ ಪರೀಕ್ಷೆಗೆ ನಿಯಮಿಸುವ ಕನ್ನಡ ಗದ್ಯಕಾವ್ಯದ ಸರ ಣಿಗೆ ಸಮಾನವಾದ ಯಾವುದಾದರೂ ವಚನಕಾವ್ಯದಲ್ಲೇ ಆರಿಸಿದ ಕೆಲವು ವಾಕ್ಯಗಳ ನ್ನೂ ಸ್ವಲ್ಪ ಕಠಿನವಾದ ಸಂಸ್ಕೃತ ಸಮಸ್ತಪದಗಳನ್ನೂ ಸರ್ಕಾರಿ ಬರವಣಿಗೆಯಲ್ಲಿ ಉಪಯೋಗಿಸಬೇಕಾಗಿರುವ ಕೆಲವು ಇಂಗ್ಲಿಷ್, ಹಿಂದೂಸ್ಥಾನಿ ಪದಗಳನ್ನೂ ೨-೩ ನೆ ತರಗತಿಗೆ ಹೇಳಿರುವ ನಿಯಮಗಳಂತೆ ಹೇಳಿ ಬರೆಯಿಸಿ ತಿದ್ದಿಸಬೇಕು. ಆನಂತರ

ಒಳ್ಳೇ ಜವಿರ್ಣಿಗಳನ್ನೆ ಹಿಡಿದುಕೊಂಡಿರುತ್ತಾರೆ. ಇದರಲ್ಲಿ ಸರಿಯೂದ ವ್ಯವಸಾಯ ಮಾಡಿ ಪೂರಾಬೆಳೆ ತೆಗೆದರೆ ಒಟ್ಟಾಮಲ್ಲೀಲಿ ಬಹಳನಾಗಿ ದವಸಧಾನ್ಯಗಳು ಹೆಚ್ಚಾಗಿ ಬಹುದು. [ಸಶೇಷ]

ಕೆ. ಶಾಮ್ಯೆಂಗಾರ್,
ಅಸಿಸ್ಟೆಂಟ್‌ಕನ್‌ಸರ್ವೆಟರ್.

ಉಕ್ತಲೇಖನ.

ವಿಶೇಷನಿಯಮಗಳು

ಲೋಯರ್‌ಪ್ರೈಮರಿ A B & Iನೇ ಕ್ಲಾಸಿಗೆ ನಂಬರ್ (ಪೂರ್ಣಾಂಕ) 20

೧ ಮಕ್ಕಳ A ತರಗತಿಗೆ ಸಾಮಾನ್ಯವಾದ ೨೦ ಪದಗಳನ್ನೂ, B ತರಗತಿಗೆ ಸ್ವಲ್ಪ ಕಠಿನವಾದ ೩೦ ಪದ್ಯಗಳನ್ನೂ ೧ನೇ ತರಗತಿಗೆ ಕಠಿನವಾದ ೧೦ ಪದ್ಯಗಳು ಮತ್ತು ೬ ಚಿಕ್ಕವಾಕ್ಯಗಳನ್ನೂ ಆರಿಸಿ ಹೇಳಬೇಕು. ಒಂದೊಂದು ಪದವನ್ನು ಒಂದೊಂದು ಸಾರಿ ಹೇಳಬೇಕೇ ವಿನಾ ಅನೇಕಾವರ್ತಿ ಹೇಳಕೂಡದು. ಕೆಲಹುಡುಗರು ಹೇಳಿದ ಪದದಲ್ಲಿ ಅರ್ಧಭಾಗವನ್ನು ಬರೆದು ಉಳಿದುದನ್ನು ಪುನಃ ಏನೆಂದು ಕೇಳುವರು. ಮತ್ತೆ ಕೆಲವರು ಮೊದಲು ಹೇಳಿದಾಗ ಲಕ್ಷ್ಯವಿಟ್ಟು ಕೇಳದೆ " ಅದೇನು ಸಾರ್ " ಎಂದು ಕೇಳುವರು. ಇವುಗಳನ್ನು ತಪ್ಪಿಸುವುದಕ್ಕೆ ತಕ್ಕಷ್ಟುಕಾಲ ವಿರಾಮದಿಂದ ಪದಗಳನ್ನು ಎಲ್ಲರಿಗೂ ಕೇಳಿಸುವಂತೆ ಸ್ಪಷ್ಟವಾಗಿ ಒಂದೇಸಾರಿ ಹೇಳಬೇಕು. ಹುಡುಗರು ಮತ್ತೆ ಕೇಳಿದರೆ ಹೇಳಲಾಗದು. ಉಪಾಧ್ಯಾಯರು ಅನೇಕಾವೃತ್ತಿ ಹೇಳರೆಂಬುದನ್ನು ವಿದ್ಯಾರ್ಥಿಗಳು ಮನಗಂಡರೆ ಮೊದಲು ಹೇಳುವಾಗಲೇ ಗಮನ ವಿಟ್ಟು ಕೇಳುವರು.

೨ ಹೇಳಿ ಬರೆಯಿಸಿದ ಬಳಿಕ ಎಲ್ಲರ ಹಲಿಗೆಗಳನ್ನು ಒಬ್ಬ ವಿದ್ಯಾರ್ಥಿಯಿಂದಲೇ ಉಪಾಧ್ಯಾಯನು ತನ್ನ ಹತ್ತಿರಕ್ಕೆ ತರಿಸಿಕೊಂಡು ತಾನೇ ತಪ್ಪುಗಳನ್ನು ತಿದ್ದಬೇಕು. ೩ ಕಾಲದಲ್ಲಿ ವಿದ್ಯಾರ್ಥಿಗಳು ಪರಸ್ಪರ ಮಾತನಾಡದಂತೆಯೂ, ಜೇಷ್ಟೆಮಾಡದಂತೆ

ಚಿಯುಳ್ಳ ಮಕ್ಕಳೇ ಹೆಚ್ಚು. ಆಟವಾಡುವುದರಲ್ಲಿ ಇಷ್ಟವಿಲ್ಲದಿರುವ ಮಗು ಕಥೆಯನ್ನು ಕೇಳುವದರಲ್ಲಿ ಆಸಕ್ತಿಯನ್ನು ತೋರಿಸದಮಗುವನ್ನೂ ಮಕ್ಕಳ ಸ್ವಭಾವಕ್ಕೆ ಹೊರತಾಗಿ ಭಾವಿಸಬೇಕು.

ಊಹಾಶಕ್ತಿಯೆ ಮಕ್ಕಳಲ್ಲಿ ಮುಂದಾದ ಶಕ್ತಿಯಂದೇ ಭಾವಿಸೋಣ ಹೀಗೆ ಭಾವಿಸೋಣದರಿಂದ ಮಕ್ಕಳ ಊಹಾಶಕ್ತಿಯಲ್ಲಿ ಒಂದೇತೆರನಾಗಿ ಒಂದೇವಾರ್ಗದಲ್ಲಿ ಪರಿಣಮಿಸುವುದೇ ಎಂಬ ಭಾವವನ್ನು ಯೋಚಿಸತಕ್ಕದ್ದು ಉಚಿತವು. ಚೆನ್ನಾಗಿ ನೋಡೋಣವರಲ್ಲಿ ಮಕ್ಕಳು ಊಹಾಶಕ್ತಿಯು ನಾನಾತೆರನಾಗಿರುವುದೆಂದು ಕಾಣಬರುವುದು. ಕೆಲವು ಮಕ್ಕಳಿಗೆ ನಾನಾಬಣ್ಣಗಳನ್ನು ನೋಡಿಸಲು ಸಂತೋಷ ಉಂಟಾಗುವುದು. ಸುತ್ತಲಿರುವುದೆಲ್ಲ ಬಣ್ಣಮಯವಾಗಿದ್ದರೆ ಎಷ್ಟೋಚನ್ನಾಗಿದ್ದೀತೆಂದು ಕೆಲವು ಮಕ್ಕಳ ಮನಸ್ಸು. ಆ ಮಕ್ಕಳು ಬಣ್ಣವನ್ನೇ ನೋಡಿ ಆನಂದಪಡುವವು. ಕೆಲವು ಮಕ್ಕಳಿಗೆ ಧ್ವನಿಮಾಡೋಣದರಲ್ಲಿ ಸಂತೋಷವು. ಗಂಟೆಯನ್ನು ಬಾರಿಸೋಣದರಲ್ಲಿ, ತಂಬೂರಿ, ಪಿಟೀಲು ಮೊದಲಾದ ವಾದ್ಯವಿಶೇಷಗಳ ಮಧುರಧ್ವನಿಯನ್ನು ಲಾಲಿಸೋಣದರಲ್ಲಿ ಆನಂದವು. ನಾದಪೂರ್ಣವಾದ ಪ್ರಪಂಚದಲ್ಲಿ ಹಿತವು. ಈರೀತಿಯಲ್ಲಿ ಕೆಲ ಕೆಲ ಮಕ್ಕಳಿಗೆ ಕೆಲ ಕೆಲರಲ್ಲಿ ಹಿತವು. ಮತ್ತೆಕೆಲವು ಮಕ್ಕಳಿಗೆ ಪುರಾಣೇತಿಹಾಸಗಳನ್ನು ಕೇಳೋಣದರಲ್ಲಿ ಸಂತೋಷವು. ಭಾರತ, ರಾಮಾಯಣಗಳಲ್ಲಿ ಬರುವ ಯುದ್ಧಸಂದರ್ಭಗಳೂ, ಕಥಾಭಾಗಗಳೂ ಅವರ ಮನಸ್ಸಿಗೆ ಎಷ್ಟೋಉಲ್ಲಾಸವನ್ನುಂಟುಮಾಡುವವು.

ಈ ಭೇದಗಳಿಲ್ಲದೆ ಇದರಲ್ಲಿಯೆ ಸ್ವಲ್ಪ ಭೇದವುಂಟು. ಊಹಾಶಕ್ತಿಯೇ ವಿಶೇಷವಾಗಿರುವ ಮಕ್ಕಳಲ್ಲಿಯೆ, ಕೆಲವರಿಗೆ ವ್ಯಸನಕರವಾದ, ದಃಖಮಯವಾದ, ಕ್ರೂರ ಕೃತ್ಯಗಳ ಸಂಬಂಧವಾದವುಗಳನ್ನು ಕುರಿತು ಯೋಚಿಸೋಣದರಲ್ಲಿಯೇ ಅಭಿರುಚಿಯು. ಮತ್ತೆಕೆಲವರಿಗೆ, ಸಂತೋಷಕರವಾದ, ಹಿತವನ್ನುಂಟುಮಾಡುವ, ಶೋಭಾಯಮಾನವಾದ ಸಂಗತಿಗಳನ್ನೂ ಕೇಳಿ, ಅವುಗಳನ್ನು ಗ್ರಹಿಸಿ ಅವುಗಳಮೇಲೆ ಸ್ವೇಚ್ಛೆಯೂಗಿ ಮನಸ್ಸಿನಲ್ಲೇ ವಿಶೇಷವಾಗಿ ವೃದ್ಧಿಗೊಳಿಸಿ ಆನಂದ ಪಡುವುದರಲ್ಲಿಯೇ ಇಷ್ಟವು. ಮಕ್ಕಳ ನಡೆನುಡಿಯನ್ನು ಅರಿಯತಕ್ಕವರು ಈ ವಿಷಯಗಳನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟು ವಿಚಿತ್ರವಾದ, ಮನೋಹರನಾದ ಬಾಲ್ಯಾಭ್ಯಾಸವನ್ನು ಪರೀಕ್ಷಿಸಬೇಕಾದ್ದು ಉಚಿತವು.

ಗತಪ್ಪಿಗೆ ೧ ನಂಬರ್ ನಂತೆ ಕಳೆದುಳಿದ ನಂಬರನ್ನು ವಿದ್ಯಾರ್ಥಿಗಳಿಗೆ ಕೊಡಬೇಕು. ಮುಖ್ಯವಾದಿ ಪ್ರತಿತರಗತಿಯಲ್ಲಿಯೂ ಗೊತ್ತುಪಡಿಸಿರುವ ನಂಬರಿನಲ್ಲಿ ಅರ್ಧಭಾಗಕ್ಕೆ ಕಡಮೆಯಿಲ್ಲದಂತೆ ಪಡೆದ ಹೊರತು ವಿದ್ಯಾರ್ಥಿಗಳು ಈ ಭಾಗದಲ್ಲಿ ಉತ್ತೀರ್ಣರಾದಂತೆ ಭಾವಿಸಲಾಗದು.

ಮೇಲೆ ವಿವರಿಸಿರುವ ಕ್ರಮಗಳಂತೆ ತರಗತಿಯಲ್ಲಿ ಈ ಪಾಠವನ್ನು ನಡೆಯಿಸುತ್ತಾ ಬಂದರೆ ಉಕ್ತಲೇಖನದ ಉದ್ದೇಶವು ತಕ್ಕಮಟ್ಟಿಗೆ ನೆರವೇರಿದಂತಾಗುವದು. ಈ ಉಕ್ತಲೇಖನದ ವಿಷಯದಲ್ಲಿ ಇನ್ನೂ ಮುಖ್ಯವಾದ ನಿಯಮಗಳಿದ್ದರೂ ಈಗ ಬರೆದಿರುವುದರಲ್ಲಿ ಯಾವುದಾದರೂ ಅಭಿಪ್ರಾಯವು ತಪ್ಪಾಗಿದ್ದರೂ ಪ್ರಾಜ್ಞರಾದವರು ದಯವಿಟ್ಟು ಪ್ರಕಟಿಸಬೇಕೆಂದು ಪ್ರಾರ್ಥಿಸುವ,

ತಾರೀಖು ೨೩-೩-೯೫ ಎಚ್. ಹನುಮಂತರಾವ್ ಕರ್ಣಾಟಕಪಂಡಿತ
ಹೆಡ್ಮಾಸ್ಟರ್ ಗಾ॥ ಎ. ವಿ. ಸ್ಕೂಲ್ ನೆಲವಂಗಲ

ಮಕ್ಕಳ ಸ್ವಭಾವ.

ಬಾಲ್ಯಾವಸ್ಥೆಯಲ್ಲಿ ಊಹಾಶಕ್ತಿಯೇ ವಿಶೇಷವಾಗಿರುವುದೆಂದು ಮಕ್ಕಳ ಸ್ವಭಾವದಿಂದ ಚನ್ನಾಗಿ ವ್ಯಕ್ತವಾಗುವದು ಬಾಲ್ಯಾವಸ್ಥೆಯಲ್ಲಿ ಸ್ವಪ್ನಾವಸ್ಥೆಯಂತೆ ಮನಸ್ಸು ಸ್ವೇಚ್ಛೆಯಾಗಿ ವಿಹರಿಸುವದು; ಇದು ಇಲ್ಲದ ಸೌಖ್ಯವನ್ನು ಕಲ್ಪಿಸಿಕೊಂಡು ಆನಂದವನ್ನು ಅನುಭವಿಸುವ ಕಾಲವು. ಆದರೆ ಈ ಅವಸ್ಥೆಯಲ್ಲಿಯೂ ಮಕ್ಕಳ ಸ್ವಭಾವವು ಒಂದೇತೆರನಾಗಿರುವುದೆಂದು ಹೇಳಲು ಸಾಧ್ಯವೆಲ್ಲವು. ಮಕ್ಕಳಿಗೆ ಸ್ವಭಾವನಾಗಿರುವ ಊಹಾಶಕ್ತಿಯಲ್ಲಿಯೂ ವ್ಯತ್ಯಾಸವಿರುವದುಂಟು. ಕೆಲವು ಮಕ್ಕಳು ಮನಸ್ಸಿನಲ್ಲಿಯೆ ಸ್ವೇಚ್ಛೆಯಾಗಿ ಇಲ್ಲದಿರುವುದನ್ನು ಕಲ್ಪಿಸಿಕೊಂಡು ಆಟ ಪಾಟಗಳಲ್ಲಿಯೂ ಸಂತೋಷಪಡುವ ಶಕ್ತಿ ಇಲ್ಲದೆ ನಿಶ್ಚಯಜ್ಞಾನದಲ್ಲಿ ಅಸಕ್ತಿಯುಳ್ಳವರಾಗಿರುವುದೂ ಉಂಟು. ಪ್ರಸಿದ್ಧರಾದ ಕೆಲವರು ತಮ್ಮ ಬಾಲ್ಯಾವಸ್ಥೆಯನ್ನು ಜ್ಞಾಪಿಸಿಕೊಂಡು ಅನುಭವವನ್ನು ತಿಳಿಸುವುದರಲ್ಲಿ ತಮಗೆ ಸೊಗಸಾದಕಥೆಗಳನ್ನು ಹೇಳೋಣವರಲ್ಲೇ ಆಗಲಿ ಕೇಳೋಣದವರಲ್ಲೇ ಆಗಲಿ ಆಸಕ್ತಿ ಇರಲಿಲ್ಲವೆಂದು ಹೇಳುವರು.

ಇಂಥವರು ಬಹಳ ವಿರಳ. ಊಹಾಶಕ್ತಿಯುಳ್ಳ, ಕಲ್ಪನಾ ಪ್ರಪಂಚದಲ್ಲಿ ಅಭಿರು

ಬಾಲಕರಿದುರಿಗೆ ತರಗತಿಯಲ್ಲೇ ಬರೆಯುವುದು ಒಳ್ಳೇದು. ಪಾಠಶಾಲೆಯ ಉದ್ದಗಲ ಇವುಗಳನ್ನು ಕ್ರಮವಾಗಿ ಅಳದು, 'ಇಷ್ಟು ಅಡಿಗೆ, ಬದಲಾಗಿ ನಕ್ಷೆಯಲ್ಲಿ ಇಷ್ಟು ಅಂಗುಲಗಳ ರೇಖೆಯನ್ನು ಬರೆಯೋಣ' ವೆಂದು ಹೇಳಬೇಕು. ಇದರಿಂದ ದೊಡ್ಡ ವಸ್ತುಗಳನ್ನು ಸಣ್ಣದಾಗಿ ಬರೆದು ತೋರಿಸಬಹುದೆಂಬುದು ಬಾಲಕರಿಗೆ ಗೊತ್ತಾಗುವುದು. ವಿಸ್ತಾರವಾದ ಒಂದು ಭೂಭಾಗದ ನಕ್ಷೆಯನ್ನು ಚಿಕ್ಕದಾಗಿ ಬರೆದರೆ ಭೂಪಠವೆನಿಸಿಕೊಳ್ಳುವುದೆಂದು ಹೇಳಬೇಕು. ಬಾಲಕರನ್ನು ಪ್ರಶ್ನೆ ಮಾಡಿ, ಪಾಠಶಾಲೆಯಲ್ಲಿರುವ ವಸ್ತುಗಳನ್ನು, ಬರೆದಿರುವ ನಕ್ಷೆಯಲ್ಲಿ ಆಯಾ ಸ್ಥಳಗಳಲ್ಲಿ ಅವರಿಂದ ಗುರುತು ಮಾಡಿಸಬೇಕು. ಇದರಂತೆಯೇ ಭೂಪಠದಲ್ಲಿ ದೇಶದಲ್ಲಿರುವ ಪಟ್ಟಣ, ನದಿ, ಪರ್ವತ ಮುಂತಾದವುಗಳನ್ನೂ ಗುರುತುಮಾಡಿರುವರೆಂದು ಒಂದು ಭೂಪಠವನ್ನು ತೋರಿಸಬೇಕು. ಪಾಠಶಾಲೆಯಿರುವ ಗ್ರಾಮದ ನಕ್ಷೆಯನ್ನು ತೋರಿಸಿ, ಅದರಲ್ಲಿ ಬಳಿಕೆಯಾಗಿರುವ ಸ್ಥಳಗಳನ್ನು ಬಾಲಕರಿಂದ ಗುರುತು ಮಾಡಿಸುವುದೂ ಇದನ್ನು ಸ್ಪಷ್ಟಪಡಿಸುವುದರಲ್ಲಿ ಸಹಾಯಕವಾಗುವುದು

ಭೂಪಠದ ವಿಷಯವಾಗಿ ಇಷ್ಟುಮಟ್ಟಿನ ಜ್ಞಾನವು ಬಾಲಕರಿಗೆ ಬಂದ ಮೇಲೆ, ಆ ಪಠಗಳಲ್ಲಿ ದಿಕ್ಕು ಗೊತ್ತುಮಾಡುವುದನ್ನು ತಿಳಿಸಬೇಕು. ಇದಕ್ಕಾಗಿ ಮೊದಲು 'ಪೂರ್ವ,' 'ದಕ್ಷಿಣ,' 'ಪಶ್ಚಿಮ,' 'ಉತ್ತರ' ಇವುಗಳ ಜ್ಞಾನವನ್ನು ಸೂರ್ಯೋದಯವನ್ನು ಕಡೆಯನ್ನು ಜ್ಞಾಪಿಸಿ ತಿಳಿಸಬೇಕು. ಅನಂತರದಲ್ಲಿ ನೆಲದಮೇಲೆ ಕಪ್ಪುಹಲಗೆಯನ್ನು ಇಟ್ಟು ಅದರಮೇಲೆ ನಾಲ್ಕು ದಿಕ್ಕುಗಳ ಹೆಸರನ್ನೂ ಸರಿಯಾದ ಕಡೆಗಳಲ್ಲಿ ಬರೆಯಿಸಬೇಕು. ಅಮೇಲೆ ಆ ಹಲಗೆಯನ್ನು ಹಾಗೆಯೇ ತೆಗೆದು ಉತ್ತರದಿಕ್ಕಿನ ಗೋಡೆಗೆ ಒರಗಿಸಿ ನಿಲ್ಲಿಸಬೇಕು. ಈಗ ನಾಲ್ಕು ದಿಕ್ಕುಗಳನ್ನೂ ಹಲಗೆಯಮೇಲೆ ತೋರಿಸುವಂತೆ ಹೇಳುವುದರಿಂದ ಬಾಲಕರಿಗೆ ಭೂಪಠದ ಮೇಲಿನಭಾಗವು ಉತ್ತರವೆಂತಲೂ, ಕೆಳಭಾಗವು ದಕ್ಷಿಣವೆಂತಲೂ ತಿಳಿಸಬೇಕು. ಭೂಪಠವನ್ನು ಅದೇ ಗೋಡೆಗೆ ತಗಲುಹಾಕಿ, ಅದರಲ್ಲಿ ದಿಕ್ಕುಗಳನ್ನು ಬಾಲಕರಿಂದ ತೋರಿಸಬೇಕು ಉತ್ತರದ ಗೋಡೆಯಲ್ಲದೆ ಇತರ ಗೋಡೆಗಳಿಗೆ ತಗಲುಹಾಕಿದರೂ ಮೇಲಿನಭಾಗವು ಉತ್ತರ, ಕೆಳಭಾಗವು ದಕ್ಷಿಣವೆಂದು ತಿಳಿಯಬೇಕೆಂದು ಹೇಳಬೇಕು.

ಭೂಪಠಗಳ ವಿಷಯವಾಗಿ ಇಷ್ಟನ್ನು ತಿಳಿಸಿದಮೇಲೆ ಒಟ್ಟು ಭೂಮಿಯ ವಿಷಯವಾಗಿ ಕೆಲವು ಅಂಶಗಳನ್ನು ತಿಳಿಸಬೇಕು. ಇದಕ್ಕಾಗಿ ಗೋಳವೊಂದನ್ನು ಅವ

ಭೂವಿವರಣೆ.

ಸರಿಯಾದ ಕ್ರಮದಲ್ಲಿ ಬೋಧಿಸಿದರೆ ಭೂವಿವರಣೆಯು ಪಾಠದಷ್ಟು ಬಾಲಕರಿಗೆ ಉಲ್ಲಾಸವನ್ನುಂಟುಮಾಡುವುದು ಮತ್ತಾವುದೂ ಇಲ್ಲ. ಪಟ್ಟಣ, ನದಿ, ಪರ್ವತ ಇವುಗಳಹೆಸರು ಜನಸಂಖ್ಯೆ, ದೇಶಗಳ ವಿಸ್ತೀರ್ಣ ಇಂಥವುಗಳನ್ನು ಮಾತ್ರವೇತಿಳಿಸುವುದರಿಂದ ಬಾಲಕರಿಗೆ ಈ ಪಾಠದಲ್ಲಿ ಆದರವು ಬಹಳವಾಗಿ ಕಡಮೆಯಾಗುವುದು. ಇವುಗಳನ್ನೆಲ್ಲ ಮಾತ್ರ ತಿಳಿಸುವುದರಿಂದ ಬಾಲಕರ ಸ್ಮೃತಿಶಕ್ತಿಗೆ ವಿಶೇಷವಾಗಿ ಕೆಲಸ ಕೊಟ್ಟಂತಾಗುವುದರಿಂದ ಅವರಿಗೆ ಪಾಠದಲ್ಲಿ ಬೇಜಾರು ಹುಟ್ಟುವುದು ಆಶ್ಚರ್ಯವೇನೂ ಅಲ್ಲ.

ಭೂವಿವರಣೆಯಲ್ಲಿ ಆದಿಭಾಗವನ್ನು ತಿಳಿಸುವುದು ಮುಖ್ಯವಾಗಿ ಕಷ್ಟ. ಇದಕ್ಕಾಗಿ ಈಗ ಭೂವಿವರಣೆಪುಸ್ತಕಗಳಲ್ಲಿ ಮೊದಲು ಕೊಟ್ಟಿರುವ 'ಅರ್ಥವಿವರಣೆ' ಯನ್ನು ಗಟ್ಟಿಮಾಡಿಸುವರು. ಪುಸ್ತಕಗಳಲ್ಲಿ ಕೊಟ್ಟಿರುವ ಕ್ರಮದಲ್ಲಿ ಈ ಅರ್ಥವಿವರಣೆಯನ್ನು ಗಟ್ಟಿಮಾಡಿಸಿದಮಾತ್ರಕ್ಕೆ ಬಾಲಕರಿಗೆ ಆ ಅಭಿಪ್ರಾಯಗಳು ಚೆನ್ನಾಗಿ ತಿಳಿಯುವವೆಂದು ಹೇಳುವುದಕ್ಕಾಗುವದಿಲ್ಲ. ಅಭಿಪ್ರಾಯಗಳನ್ನು ಮುಖ್ಯವಾಗಿ ಮೊದಲು ಬಾಲಕರಿಗೆ ತಿಳಿಸಬೇಕು. ಅನಂತರದಲ್ಲಿ ಆ ಅಭಿಪ್ರಾಯಗಳು ಅವರ ಮನಸ್ಸಿನಲ್ಲಿ ಸ್ಥಾಯಿಯಾಗಿ ನಿಲ್ಲುವದಕ್ಕೆ ಪುಸ್ತಕಗಳಲ್ಲಿರುವ ಅರ್ಥವಿವರಣೆಯುನ್ನು ಗಟ್ಟಿಮಾಡಿಸಬೇಕು. ಈ ಅಭಿಪ್ರಾಯಗಳನ್ನು ತಿಳಿಸುವದಕ್ಕೆ ಬಾಲಕರಿಗೆ ಬಳಕೆಯಾಗಿರುವ ವಿಷಯಗಳನ್ನು ನಿದರ್ಶನವಾಗಿ ಹೇಳಬೇಕು. ತಿಳಿದ ಅಂಶಗಳಿಂದ ಉಪಕ್ರಮಿಸಿ ಹೊಸ ಅಂಶಗಳನ್ನು ತಿಳಿಸಬೇಕೆಂಬ ಸಾಮಾನ್ಯ ನಿಯಮವು ಭೂವಿವರಣೆಯು ಪಾಠದಲ್ಲಿ ಮುಖ್ಯವಾಗಿ ಬೇಕಾಗುವುದು. ಭೂಗೋಳ, ಭೂಪಠಗಳು ಮುಂತಾದ ಉಪಕರಣಗಳನ್ನೂ ವಿಶೇಷವಾಗಿ ಉಪಯೋಗಿಸಬೇಕು. ಇದರಿಂದ ಬಾಲಕರಿಗೆ ವಿಷಯವು ಸ್ಪಷ್ಟವಾಗಿ ತಿಳಿಯುವುದು.

ಭೂವಿವರಣೆಯನ್ನು ಕಲಿಯಬೇಕೆಂದಿರುವವರಿಗೆ ಭೂಪಠಗಳ ಸಹಾಯವು ಬೇಕಾದದರಿಂದ ಬಾಲಕರಿಗೆ ಮೊದಲು ಭೂಪಠವೆಂದರೆ ಅರ್ಥವನ್ನು ತಿಳಿಸಬೇಕು. ಭೂಪಠವೆಂದರೆ ಒಟ್ಟು ಭೂಮಿಯು ಅಥವಾ ಭೂಮಿಯ ಒಂದುಭಾಗದ ನಕ್ಷೆಯೆಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ ಪಾಠಶಾಲೆಯ ನಕ್ಷೆಯನ್ನು ಬರೆಯಬೇಕು. ಇದನ್ನು

ಊಹಿಸಬಹುದಾದ ಕೆಲವು ಅಂಶಗಳನ್ನು ಮುಂದೆ ಬರೆಯುವೆವು :—

(i) ದೇಶ ಪರ್ವತಮಯವಾಗಿದ್ದರೆ ಅಲ್ಲಿನ ಜನರು ಸಾಮಾನ್ಯವಾಗಿ ದೃಢಕಾಯರಾಗಿಯೂ, ಕಷ್ಟಸಹಿಷ್ಣು ಕೆಲಸಮಾಡುವ ಸ್ವಭಾವವುಳ್ಳವರಾಗಿಯೂ, ಸ್ವಾತಂತ್ರ್ಯವನ್ನು ವಿಶೇಷವಾಗಿ ಅಪೇಕ್ಷಿಸುವವರಾಗಿಯೂ ಇರುವರು. ಈ ಕಾರಣಿಗಳಿಂದ ಅಂಥಾ ದೇಶಗಳಲ್ಲಿ ನಿರಂಕುಶಪ್ರಭುತ್ವವಿರುವುದು ಅಪೂರ್ವ ಇಂಥಾ ದೇಶಕ್ಕೆ ಸ್ವಿಟ್ಸರ್ಲೆಂಡ್‌ನ್ನು ಉದಾಹರಣೆಯಾಗಿ ಹೇಳಬಹುದು.

(ii) ಫಲವತ್ತಾದ ದೇಶಗಳಲ್ಲಿರುವವರು ಸಾಮಾನ್ಯವಾಗಿ ವ್ಯವಸಾಯವನ್ನೂ ಮತ್ತು ಪಶುಪಾಲನೆಯನ್ನೂ ತಮ್ಮ ಮುಖ್ಯೋದ್ದೇಶವನ್ನಾಗಿಟ್ಟುಕೊಂಡಿರುವರು. ಜನರ ಸ್ವಭಾವವು ಸ್ವಲ್ಪಮಟ್ಟಿಗೆ ಕೃದುವಾಗಿರುವುದು. ಅಂಥಾ ದೇಶಗಳಲ್ಲಿ ನಿರಂಕುಶಪ್ರಭುತ್ವವಿರಬಹುದು.

(iii) ದೇಶದಲ್ಲಿ ಉದ್ದವಾದ ಮತ್ತು ವಕ್ರವಾದ ನದಿಗಳಿದ್ದರೆ ಅದು ಮಟ್ಟಿಗಾಗಿರುವುದು, ಅಥವಾ ಸ್ವಲ್ಪಮಾತ್ರವೇ ಇಳಿಜಾರಾಗಿದೆ ಎಂದು ಊಹಿಸಬಹುದು.

(iv) ದೇಶವು ಯಾವ ವಲಯದಲ್ಲಿದೆ, ಸಮುದ್ರಕ್ಕೆ ಎಷ್ಟುದೂರದಲ್ಲಿದೆ, ಸಮುದ್ರದ ಮಟ್ಟಕ್ಕೆ ಎಷ್ಟು ಮೇಲಿದೆ, ಇಂಥಾ ಅಂಶಗಳನ್ನು ಗೊತ್ತುಮಾಡುವುದರಿಂದ ಅಲ್ಲಿನ ಹವಾ ಗುಣವನ್ನು ನಿಷ್ಕರ್ಷಿಸಬಹುದು

ಈ ಉದಾಹರಣೆಗಳಿಂದ ಯಾವವಿಧವಾಗಿ ಬಾಲಕರಿಂದಲೇ ಅಂಶಗಳನ್ನು ಕಂಡುಹಿಡಿಸಬೇಕೆಂಬುದು ಗೊತ್ತಾಗುವುದು. ಇಂಥಾ ಮಾರ್ಗವನ್ನನುಸರಿಸುವುದರಿಂದ ಬಾಲಕರ ಊಹಾಶಕ್ತಿಗೂ ಕೆಲಸ ಕೊಟ್ಟು ಪಾಠದಲ್ಲಿ ಆದರವನ್ನು ಹೆಚ್ಚಿಸಬೇಕು.

ಎಂ. ಹಿರಿಯಣ್ಣ.

ಸಾಧಕ.

ಹಗುರಾದ 'ಡಂಬಿಲ್' ಸಾಧಕ.

ಎರಡು, ಮೂರು, ನಾಲ್ಕು ಪೌಂಡು ತೂಕವುಳ್ಳ ಎರಡೆರಡು ಕಬ್ಬಿಣದ ಗುಂಡುಗಳನ್ನು, ಆರು ಅಂಗುಲ ಉದ್ದವುಳ್ಳ ಕಬ್ಬಿಣದ ಹಿಡಿಗೆ ಜೊತೆದಿರುವ ಸಾಧನೆಯ ಪದಾರ್ಥಕ್ಕೆ, ಕಬ್ಬಿಣದ 'ಡಂಬೆಲ್' ಎಂದು ಹೆಸರು. ಇದರ ಸಾಧಕವನ್ನು ಮಾಡತಕ್ಕ

ರಿಗೆ ತೋರಿಸಿ ಭೂಮಿಯ ಆಕಾರ ಮತ್ತು ಗಾತ್ರವನ್ನು ತಿಳಿಸಬೇಕು ವಿಸ್ತಾರವಾದ ಭೂಭಾಗವೆನ್ನು ಚಿಕ್ಕದಾಗಿ ನಕ್ಷೆ ಬರೆಯುವಂತೆ ದೊಡ್ಡದಾದ ಭೂಮಿಯನ್ನು ಸಣ್ಣಗೋಳದಲ್ಲಿ ತೋರಿಸುವುದೆಂದು ಹೇಳಬೇಕು. ಅನಂತರದಲ್ಲಿ ಭೂಮಿಗೆ ಇರುವ ಚಲನೆಗಳನ್ನು ತಿಳಿಸಬೇಕು ಭೂಮಿಯು ತನ್ನ ಸುತ್ತಲು ಸುತ್ತುತ್ತ ಸೂರ್ಯನ ಸುತ್ತವು ತಿರುಗುವುದನ್ನು ಸ್ಪಷ್ಟಪಡಿಸಬೇಕು. ಆಮೇಲೆ ಇವುಗಳಲ್ಲಿ ಮೊದಲನೆಯದಾದ ಚಲನೆಯಿಂದ ನಮಗೆ ಹಗಲು ರಾತ್ರಿಗಳಾಗುವುದನ್ನು, ಎರಡನೆಯ ಚಲನೆಯಿಂದ ಋತುಭೇದಗಳಾಗುವುದನ್ನೂ ವಿವರಿಸಬೇಕು ಋತುಭೇದಗಳಿಗೆ ಕಾರಣವನ್ನೆನ್ನೂ ಮಕ್ಕಳಿಗೆ ತಿಳಿಸುವುದಕ್ಕಾಗುವುದಿಲ್ಲವೆಂದು ಉಪಾಧ್ಯಾಯರು ಯೋಚಿಸಬಹುದು. ಚಿಕ್ಕ ವಯಸ್ಸಿನಲ್ಲಿ ಇಂಥಾ ಅಂಶಗಳನ್ನು ಸ್ಥೂಲವಾಗಿ ಮಾತ್ರ ತಿಳಿಸಿದರೆ ಸಾಕು. ಬರುತ ಬರುತ ಸೂಕ್ಷ್ಮಾಂಶಗಳನ್ನು ಹೇಳಿಕೊಡಬಹುದು. ಇಷ್ಟರ ಜತೆಗೆ 'ವಿಷುವದ್ರೇಖೆ,' 'ಧ್ರುವಗಳು' ಮುಂತಾದವುಗಳ ಅರ್ಥವನ್ನೂ ಗೋಳದ ಸಹಾಯದಿಂದ ತಿಳಿಸಬೇಕು.

ಅನಂತರದಲ್ಲಿ ಭೂಮಿಯ ಮೇಲಿರುವ ಭೂಭಾಗ ಜಲಭಾಗಗಳನ್ನು ತಿಳಿಸಿ ಅವುಗಳಲ್ಲಿ ಮುಖ್ಯವಾದವುಗಳ ಹೆಸರುಗಳನ್ನು ಹೇಳಿಕೊಡಬೇಕು. ಬಾಲಕರೇ ನೋಡಿರುವ ದೃಷ್ಟಾಂತಗಳನ್ನು ಹೇಳಿ, 'ಭೂಮುಖ,' 'ಜಲಸಂಧಿ,' ಮುಂತಾದವುಗಳ ಅರ್ಥವನ್ನು ವಿವರಿಸಬೇಕು.

ಇಷ್ಟಾದಮೇಲೆ ಸ್ವದೇಶದ ವಿವರಣೆಯನ್ನು ತಿಳಿಸುವುದಕ್ಕೆ ಪ್ರಾರಂಭಿಸಬೇಕು. ಇದಕ್ಕಾಗಿ ಮೊದಲು ಮೊದಲು ಬಾಲಕರು ಯಾವಪುಸ್ತಕವನ್ನೂ ಓದಬೇಕಾದ ಅವಶ್ಯಕವಿಲ್ಲ. ಭೂಪಠದ ಸಹಾಯದಿಂದ ಉಪಾಧ್ಯಾಯರು ಸಾಮಾನ್ಯವಾಗಿ ಬೋಧನೆಯಾಗಬೇಕಾದ ವಿಷಯಗಳನ್ನು ತಿಳಿಸಬಹುದು. ಕೆಲವುಕಾಲದಮೇಲೆ ಯಾವುದಾದರೊಂದು ಪಾಠಪುಸ್ತಕವನ್ನು ಇಟ್ಟುಕೊಂಡು ಅದನ್ನನುಸರಿಸಿ ವಿಷಯಗಳನ್ನು ಬೋಧಿಸುತ್ತ ಬರಬೇಕು.

ಇತರ ಪಾಠಗಳಂತೆ ಭೂವಿವರಣೆಯು ಪಾಠದಲ್ಲೂ ಮುಖ್ಯವಾಗಿ ಬಾಲಕರ ಅನುಭವಕ್ಕೆ ಬಂದಿರುವ ನಿದರ್ಶನಗಳನ್ನು ಕೊಡುವುದರಿಂದ ವಿಷಯಗಳನ್ನು ಅವರೇ ಊಹಿಸಿ ಹೇಳುವಂತೆ ಮಾಡಬೇಕೆಂಬುದನ್ನು ಉಪಾಧ್ಯಾಯರು ಜ್ಞಾಪಕವಿಡಬೇಕು. ಇದು ಈ ಪಾಠದಲ್ಲಿ ಹೇಗೆ ಸಾಧ್ಯವೆಂಬುದನ್ನು ತೋರಿಸುವುದಕ್ಕೆ ಭೂಸ್ವಭಾವದಿಂದ

3. 7, 8, 6, ಇವುಗಳನ್ನು ಕೂಡಿಸಿ ಬಂದ ಸಂಖ್ಯೆಯಲ್ಲಿ 9ನ್ನು ಕಳೆಯಿರಿ 12.

4. 4 ಆಣೆ, 2 ಆಣೆ, 3 ಆಣೆ ಒಟ್ಟು ಎಷ್ಟು ಹೇಳಿ ... 9 ಆಣೆ.

5. 23 ರಲ್ಲಿ 15 ನ್ನು ಕಳೆಯಿರಿ 8

6. ಒಂದೊಂದು ಬಾಳೆಹಣ್ಣಿಗೆ $\frac{1}{4}$ ಆಣೆಯಾದರೆ 4 ಬಾಳೆಹಣ್ಣಿಗೆಷ್ಟು? 1 ಆಣೆ.

7. 24 ರಲ್ಲಿ 8, 2, 5 ಇವುಗಳನ್ನು ಕಳೆಯಿರಿ .. 9

8. ಒಂದು ಕಿತ್ತಲೆಹಣ್ಣಿಗೆ $\frac{1}{2}$ ಆಣೆಯಾದರೆ 9 ಹಣ್ಣುಗಳಿಗೆಷ್ಟು? $4\frac{1}{2}$ ಆಣೆ.

9. $2\frac{1}{2}$ ಆಣೆ + $3\frac{1}{2}$ ಆಣೆ + 4 ಆಣೆ ಕೂಡಿರಿ? .. 10 ಆಣೆ

10. 11 + 7 + 6 + 4 + 10 ಕೂಡಿರಿ 38

11. ಒಂದು ಲೆಡ್‌ಪೆನ್ಸಿಲ್‌ಗೆ $\frac{1}{4}$ ಆಣೆಯಾದರೆ 7 ಕ್ಕೆ ಎಷ್ಟು? $1\frac{3}{4}$ ಆಣೆ

12. 23 ರಲ್ಲಿ 14 ನ್ನು ಕಳೆಯಿರಿ? 9

ಸೂಚನೆಗಳು ಮತ್ತು ಸಮಾಚಾರಗಳು.

ಗತಿಸಿದ ಹಾ॥ ಸೈದ್ ಮಹಮ್ಮದ್ ಸಾಹೇಬರವರಿಗೆ ಬದುಲಾಗಿ ಹಾ॥ ಮಹಮ್ಮದ್ ಸೈಯದ್ ತಾಜ್ ಪೀರ್ಸಾ ಬಿ. ಎ. ಯವರನ್ನು ಮಾಹೇಯಾನಾ ನೂರು ರೂಪಾಯಿ ತಲಬಿನ ಮೇಲೆ, ಮೈಸೂರು ಸಂಸ್ಥಾನದ ಹಿಂದೂಸ್ಥಾನಿ ಸ್ಕೂಲುಗಳ ಡೆಪ್ಯುಟಿಇನ್‌ಸ್ಪೆಕ್ಟರ್ ರವರನ್ನಾಗಿ ನಿಯಮಿಸಿರುತ್ತಾರೆ.

* * *

ಹಿಂದೂಸ್ಥಾನಿ ಸ್ಕೂಲ್‌ಗಳ ಪಶ್ಚಿಮಸರ್ಕಲ್ ಅಸಿಸ್ಟೆಂಟ್ ಡಿಪ್ಯುಟಿ ಇನ್‌ಸ್ಪೆಕ್ಟರ್ ಹಾ। ಖಾಜಾ ಮಹಮದ್ ಸಾ॥ ರವರನ್ನು ಪೆನ್‌ಷನ್‌ಗೆ ತೆಗೆದುದರಿಂದ ಅವರ ಬದಲು ಪೂರ್ವಸರ್ಕಲ್ ಆಕ್ಟಿಂಗ್ ಅಸಿಸ್ಟೆಂಟ್ ಡಿಪ್ಯುಟಿ ಇನ್‌ಸ್ಪೆಕ್ಟರ್ ಹಾ॥ ಇಸ್‌ಮಾಯಿಲ್ ಷರೀಫ್ ರವರಿಗೆ ಖಾಯಂಆಯಿತು. ಮೈಸೂರು ಗೌರ್ನಮೆಂಟ್ ಹಿಂದೂಸ್ಥಾನಿ ಸ್ಕೂಲ್ ಹೆಡ್‌ಮಾಸ್ಟರವರಿಗೆ ಮಾಹೇಯಾನ ರೂ ೪೦ರಿಂದ ೬೫ರ ಗ್ರೇಡ್ (ಐದುವರ್ಷದಲ್ಲಿ) ಅವರು ನೋಡುತಲಿರುವ ಕೆಲಸವು ಖಾಯಂ ಆಯಿತ್ತು.

ಪ್ರತಿಯೊಬ್ಬನು ಸಮತೂಕ ಉಳ್ಳ ಒಂದು ಜೊತೆ ಡಂಬೆಲ್‌ಗಳನ್ನು ಇಟ್ಟುಕೊಳ್ಳ ಬೇಕು ಮುಂದೆ ಹೇಳುವಂತೆ ಕ್ರಮವಾಗಿ ಇವುಗಳನ್ನು ತೆಗೆದುಕೊಂಡು ಸಾಧಕ ನಾಡುತ್ತ ಬಂದರೆ ರಟ್ಟೆಗಳು ಎದೆಭಾವವು ಅಂದವಾಗುತ್ತ ಬರುವುವು. ಹಗುರಾದ ಡಂಬೆಲ್‌ಗಳನ್ನೇ ಉಪಯೋಗಿಸಬೇಕು ಕಬ್ಬಿಣದಕ್ಕಿಂತ ಮರದಲ್ಲಿ ಮಾಡಿಸಿ ಉಪಯೋಗಿಸುವುದು ಉತ್ತಮ

ಮೊದಲನೆಯ ಸಾಧಕ.

ಸರಿಯಾಗಿ ನಿಲ್ಲುವುದು—ಡಂಬೆಲ್‌ಗಳನ್ನು ತಿರುಗಿಸುವುದು.

ಮೊದಲನೆಯ ಕ್ರಮ:—ಸರಿಯಾಗಿ ನಿಲ್ಲುವುದಕ್ಕೆ 'ಅಟೆಂಷನ್' ಎನ್ನುವರು. ಸರಿಯಾಗಿ ನಿಲ್ಲುವುದೆಂದರೆ ಎರಡು ಹಿಮ್ಮಡಿಗಳನ್ನು ಜೋಡಿಸಿಕೊಂಡು, ಎರಡು ಹೆಬ್ಬೆಟ್ಟುಗಳನ್ನು ಅನುಕೂಲವಾದಷ್ಟು ದೂರವಾಗಿರುವಂತೆ ಹಿಮ್ಮಡಿಯು ಸೇರಿರುವಹಾಗೆಯೇ ವಿಸ್ತರಿಸುವುದು : ತಲೆಯನ್ನು, ಭುಜವನ್ನು ಹಿಂದಕ್ಕೆ ಎಳೆದುಕೊಳ್ಳುವುದು ಎರಡು ಕೈಗಳನ್ನು ನೀಳವಾಗಿ ಪಕ್ಕೆಗಳಿಗೆ ತಗಲಿಕೊಂಡಿರುವಂತೆ ಬಿಡುವುದು ; ಎದೆಯನ್ನು ಅಗಲಿಸಿ, ಮುಂದೆ ಚಾಚಿ ಶರೀರವನ್ನು ನೆಟ್ಟಗೆ ನಿಲ್ಲಿಸುವುದು.

'ಡಂಬೆಲ್‌ಗಳನ್ನು ತಿರುಗಿಸು'—ಎಂದರೆ ನಮ್ಮ ಕಾಲಿನ ಮುಂದುಗಡೆ ಇಟ್ಟಿರುವ ಡಂಬೆಲ್‌ಗಳನ್ನು, ನಿಂತ ಸ್ಥಳ ಬಿಟ್ಟು ಚಲಿಸಿದಂತೆ, ಮೊಳಕಾಲನ್ನು ಬಗ್ಗಿಸದಂತೆ, ಒಂದೊಂದು ಕೈಯಲ್ಲಿ, ಒಂದೊಂದನ್ನು ಏಕಕಾಲದಲ್ಲಿ ತೆಗೆದುಕೊಂಡು, ನಮ್ಮ ತೊಡೆಗಳಿಗೆ ತಗಲುವಷ್ಟು ಹತ್ತಿರದಲ್ಲಿಯೇ ಒಂದಾವರ್ತಿ ಎರಡು ಕೈಯಲ್ಲಿಯೂ ಇರುವ ಡಂಬೆಲ್‌ಗಳನ್ನು ಒಳಭಾಗಕ್ಕೂ, ಇನ್ನೊಂದಾವರ್ತಿ ಹೊರಭಾಗಕ್ಕೂ, ಹೀಗೆ ಐದಾವರ್ತಿ, ಎಂಟಾವರ್ತಿ, ಹನ್ನೆರಡಾವರ್ತಿ ಯೋಗ್ಯತಾನುಸಾರ ತಿರುಗಿಸುವುದು. ಹೀಗೆ ತಿರುಗಿಸೋಣದರಲ್ಲಿ ಕೈಯಲ್ಲಿರುವ ಸ್ನಾಯು (ಮಾಂಸಖಂಡ) ಗಳಿಗೆಲ್ಲಾ ಸಾಧಕವಾಗುವುದು

ಮನೋರಂಜಿತ

ಶುಕ್ಲಳ ತರಗತಿ.

ಲೆಕ್ಕ.	ಉತ್ತರ.
1. 13, 5, 10, 7, 6 ಇವುಗಳನ್ನು ಕೂಡಿರಿ.	41
2. 3×2, 4×3, 3×5, ಇವರ ಉತ್ತರವನ್ನು ಬೇರೆಬೇರೆಯಾಗಿ ಹೇಳಿರಿ.	6, 12, 15.

3.	7, 8, 6, ಇವುಗಳನ್ನು ಕೂಡಿಸಿ ಬಂದ ಸಂಖ್ಯೆಯಲ್ಲಿ 9ನ್ನು ಕಳೆಯಿರಿ.	12.
4.	4 ಆಣೆ, 2 ಆಣೆ, 3 ಆಣೆ ಒಟ್ಟು ಎಷ್ಟು ಹೇಳಿ ...	9 ಆಣೆ.
5.	23 ರಲ್ಲಿ 15 ನ್ನು ಕಳೆಯಿರಿ	8
6.	ಒಂದೊಂದು ಬಾಳೆಹಣ್ಣಿಗೆ $\frac{1}{4}$ ಆಣೆಯಾದರೆ 4 ಬಾಳೆಹಣ್ಣಿಗೆಷ್ಟು?	1 ಆಣೆ.
7.	24 ರಲ್ಲಿ 8, 2, 5 ಇವುಗಳನ್ನು ಕಳೆಯಿರಿ ..	9
8.	ಒಂದು ಕಿತ್ತಲೆಹಣ್ಣಿಗೆ $\frac{1}{2}$ ಆಣೆಯಾದರೆ 9 ಹಣ್ಣುಗಳಿಗೆಷ್ಟು?	$4\frac{1}{2}$ ಆಣೆ.
9.	$2\frac{1}{2}$ ಆಣೆ + $3\frac{1}{2}$ ಆಣೆ + 4 ಆಣೆ ಕೂಡಿರಿ? ..	10 ಆಣೆ
10.	11 + 7 + 6 + 4 + 10 ಕೂಡಿರಿ	38
11.	ಒಂದು ಲೆಡ್‌ಪೆನ್ಸಿಲ್‌ಗೆ $\frac{1}{4}$ ಆಣೆಯಾದರೆ 7 ಕ್ಕೆ ಎಷ್ಟು?	1
12.	23 ರಲ್ಲಿ 14 ನ್ನು ಕಳೆಯಿರಿ?	

ಸೂಚನೆಗಳು ಮತ್ತು ಸಮಾಚಾರಗಳು.

ಗತಿಸಿದ ಹಾ॥ ಸೈದ್ ಮಹಮ್ಮದ್ ಸಾಹೇಬರವರಿಗೆ ಬದಲಾಗಿ ಹಾ॥ ಮಹಮ್ಮದ್ ಸೈಯದ್ ತಾಜ್ ಪೀರ್‌ರ್ಖ ಬಿ. ಎ. ಯವರನ್ನು ಮಾಹೇಯಾನಾ ನೂರು ರೂಪಾಯಿ ತಲಬಿನ ಮೇಲೆ, ಮೈಸೂರು ಸಂಸ್ಥಾನದ ಹಿಂದೂಸ್ಥಾನಿ ಸ್ಕೂಲುಗಳ ಡೆಪ್ಯುಟಿಇನ್‌ಸ್ಪೆಕ್ಟರ್ ರವರನ್ನಾಗಿ ನಿಯಮಿಸಿರುತ್ತಾರೆ.

* * *

ಹಿಂದೂಸ್ಥಾನಿ ಸ್ಕೂಲ್‌ಗಳ ಪಚ್ಚಿಮಸರ್ಕಲ್ ಅಸಿಸ್ಟೆಂಟ ಡಿಪ್ಯುಟಿ ಇನ್‌ಸ್ಪೆಕ್ಟರ್ ಹಾ। ಖಾಜಾ ಮಹಮದ್ ಸಾ॥ ರವರನ್ನು ಪೆರ್ಷಿಯಾಗೆ ತೆಗೆದುದರಿಂದ ಅವರ ಬದಲು ಪೂರ್ವಸರ್ಕಲ್ ಆಕ್ಟಿಂಗ್ ಅಸಿಸ್ಟೆಂಟ್ ಡಿಪ್ಯುಟಿ ಇನ್‌ಸ್ಪೆಕ್ಟರ್ ಹಾ॥ ಇಸ್‌ಮಾಯಿಲ್ ಷರೀಫ್ ರವರಿಗೆ ಖಾಯಮಾಗಿಯಿತು. ಮೈಸೂರು ಗೌರ್ನಮೆಂಟ್ ಹಿಂದೂಸ್ಥಾನಿ ಸ್ಕೂಲ್ ಹೆಡ್‌ಮಾಸ್ಟರವರಿಗೆ ಮಾಹೇಯಾನ ರೂ ೫೦ರಿಂದ ೬೫ರ ಗ್ರೇಡ್ (ಐದುವರ್ಷದಲ್ಲಿ) ಅವರು ನೋಡುತಲಿರುವ ಕೆಲಸವು ಖಾಯಮಾ ಆಯಿತು.

ಪ್ರತಿಯೊಬ್ಬನು ಸಮತೂಕ ಉಳ್ಳ ಒಂದು ಜೊತೆ ಡಂಬೆಲ್‌ಗಳನ್ನು ಇಟ್ಟುಕೊಳ್ಳ ಬೇಕು. ಮುಂದೆ ಹೇಳುವಂತ ಕ್ರಮವಾಗಿ ಇವುಗಳನ್ನು ತೆಗೆದುಕೊಂಡು ಸಾಧಕ ಮಾಡುತ ಬಂದರ ರಟ್ಟೆಗಳು, ಎದೆಭಾವವು ಅಂದವಾಗುತ ಬರುವುವು. ಹಗುರಾದ ಡಂಬೆಲ್‌ಗಳನ್ನೇ ಉಪಯೋಗಿಸಬೇಕು ಕಬ್ಬಿಣದಸಿ ಂತ ಮರದಲ್ಲಿ ಮಾಡಿಸಿ ಉಪ ಯೋಗಿಸುವುದು ಉತ್ತಮ.

ಮೊದಲನೆಯ ಸಾಧಕ.

ಸರಿಯಾಗಿ ನಿಲ್ಲುವುದು—ಡಂಬೆಲ್‌ಗಳನ್ನು ತಿರುಗಿಸುವುದು.

ಮಾಡತಕ್ಕ ಕ್ರಮ:—ಸರಿಯಾಗಿ ನಿಲ್ಲುವುದಕ್ಕೆ 'ಅಟೆಂಷ್' ಎನ್ನುವರು. ಸರಿಯಾಗಿ ನಿಲ್ಲುವುದೆಂದರೆ ಎರಡು ಹಿಮ್ಮಡಿಗಳನ್ನು ಜೋಡಿಸಿಕೊಂಡು, ಎರಡು ಹೆಬ್ಬೆ ಟ್ಟುಗಳನ್ನು ಅನುಕೂಲವಾದಷ್ಟು ದೂರವಾಗಿರುವಂತೆ ಹಿಮ್ಮಡಿಯು ಸೇರಿರುವಹಾ ಗೆಯೇ ವಿಸ್ತರಿಸುವುದು; ತಲೆಯನ್ನು, ಭುಜವನ್ನು ಹಿಂದಕ್ಕೆ ಎಳೆದುಕೊಳ್ಳುವುದು; ಎರಡು ಕೈಗಳನ್ನು ನೀಳವಾಗಿ ಪಕ್ಕೆಗಳಿಗೆ ತಗಲಿಕೊಂಡಿರುವಂತೆ ಬಿಡುವುದು; ಎದೆ ಯನ್ನು ಅಗಲಿಸಿ, ಮುಂದೆ ಚಾಚಿ ಶರೀರವನ್ನು ನೆಟ್ಟಗೆ ನಿಲ್ಲಿಸುವುದು.

'ಡಂಬೆಲ್‌ಗಳನ್ನು ತಿರುಗಿಸು'—ಎಂದರೆ ನಮ್ಮ ಕಾಲಿನ ಮುಂದುಗಡೆ ಇಟ್ಟಿರುವ ಡಂಬೆಲ್‌ಗಳನ್ನು, ನಿಂತ ಸ್ಥಳ ಬಿಟ್ಟು ಚಲಿಸಿದಂತೆ, ಮೊಳಕಾಲನ್ನು ಬಗ್ಗಿ ಸದಂತೆ, ಒಂದೊಂದು ಕೈಯಲ್ಲಿ, ಒಂದೊಂದನ್ನು ಏಕಕಾಲದಲ್ಲಿ ತೆಗೆದುಕೊಂಡು, ನಮ್ಮ ತೊಡೆಗಳಿಗೆ ತಗಲುವಷ್ಟು ಹತ್ತಿರದಲ್ಲಿಯೇ ಒಂದಾವರ್ತಿ ಎರಡು ಕೈಯಲ್ಲಿಯೂ ಇರುವ ಡಂಬೆಲ್‌ಗಳನ್ನು ಒಳಭಾಗಕ್ಕೂ, ಇನ್ನೊಂದಾವರ್ತಿ ಹೊರಭಾಗಕ್ಕೂ, ಹೀಗೆ ಏಳಾವರ್ತಿ, ಎಂಟಾವರ್ತಿ, ಹನ್ನೆರಡಾವರ್ತಿ ಯೋಗ್ಯತಾನುಸಾರ ತಿರುಗಿಸುವುದು. ಹೀಗೆ ತಿರುಗಿಸೋಣದರಲ್ಲಿ ಕೈಯಲ್ಲಿರುವ ಸ್ನಾಯು (ಮಾಂಸಖಂಡ) ಗಳಿಗೆಲ್ಲಾ ಸಾಧ ಕವಾಗುವುದು.

ಮನೋರಂಜನೆ.

ಮಕ್ಕಳ ತರಗತಿ.

ಲೆಕ್ಕ.	ಉತ್ತರ.
1. 13, 5, 10, 7, 6 ಇವುಗಳನ್ನು ಕೂಡಿರಿ.	41
2. 3×2, 4×3, 3×5, ಇವರ ಉತ್ತರವನ್ನು ಬೇರೆಬೇರೆಯಾಗಿ ಹೇಳಿರಿ.	6, 12, 15.

ನ ಮೇಲೆ ಹೆಡ್ ಮಿಸ್ಟ್ರೆಸ್ಸಾಗಿಯೂ, ಅದೇ ಸ್ಕೂಲ್‌ನಲ್ಲಿ ಸಹಾಯೋಪಾಧ್ಯಾಯರಾಗಿರುವಂತೆ ೧೫ ರೂ, ತಲಬಿನ ಮೇಲೆ ಅವರ ಯಜಮಾನರು ಮಾ॥ ನರಸಿಂಹಶಾಸ್ತ್ರಿಗಳನ್ನೂ ನಿಯಮಿಸಿರುತ್ತಾರೆ.

***

ಮೈಸೂರು ವಿದ್ಯಾಭ್ಯಾಸದ ಇಲಾಖೆಯಲ್ಲಿರುವ ಎಲ್ಲಾ ಜುಜುವಿ ನೌಕರರು ಅಂದರೆ ಜಾಡಮಾಲಿರು, ಜವಾನರ ತಲಬು ಹೆಚ್ಚಿಸಿರುತ್ತೆ

***

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರವನ್ನೂ, ಭೂಗರ್ಭಶಾಸ್ತ್ರವನ್ನೂ ಬೋಧಿಸುತ್ತಲಿರುವ ಡಾಕ್ಟರ್ ಶ್ರೀನಿವಾಸರಾವ್, ಎಂ. ಎ. ಎಂ.ಬಿ. ಸಿ. ಎಂ. ಬಿ ಎಸ್. ಸಿ. ಯವರಿಗೆ ಮೊಹೆಯಾನ ೬೦೦ ರೂಪಾಯಿ ಅಲೊವೆನ್ಸ್ ಸ್ಯಾಂಕ್ಷನ್ ಆಗಿರುತ್ತೆ.

ಗ್ರಂಥವಿಮರ್ಶೆ.

ವಿದ್ಯಾಭ್ಯಾಸಕ್ರಮ ; ಪಾಠಕ್ರಮ.

ಮೈಸೂರು ಗೌ॥ ನಾರ್ಮಲ್‌ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್, ಎಂ. ಹಯಣ್ಣ, ಬಿ. ಎ ; ಎಲ್. ಟಿ ಯವರು ನಮ್ಮಲ್ಲಿಗೆ ವಿಶ್ವಾಸವಿಟ್ಟು ಕಳುಹಿಸಿರುವ 'ವಿದ್ಯಾಭ್ಯಾಸಕ್ರಮ ;' 'ಪಾಠಕ್ರಮ,' ಎಂಬ ಎರಡು ಪುಸ್ತಕಗಳನ್ನೂ ಬಹಳ ಆದರದಿಂದ ಓದಿನೋಡಿದೆವು ಈ ಪುಸ್ತಕಗಳನ್ನು ಇವರು ರಚಿಸಿದ್ದರಿಂದ ಉಪಾಧ್ಯಾಯರಿಗೆ ಅವಶ್ಯಕವಾಗಿ ಬೇಕಾದುದನ್ನು ಕಲ್ಪಿಸಿಕೊಟ್ಟು ಬಹುಕಾಲದಿಂದಲೂ ಇದ್ದ ಕೊರತೆಯನ್ನು ಹೋಗಲಾಡಿಸಿದಂತಾಯಿತು. ವಿದ್ಯಾಭ್ಯಾಸದ ವಿಷಯದಲ್ಲಿ ಯಾರೂ ಸಾಕಾದಷ್ಟು ಲಕ್ಷ್ಯವನ್ನು ಕೊಡದೆ ಇದ್ದುದರಿಂದ ದೇಶದ ಪುರೋಭಿವೃದ್ಧಿಗೆ ದೊಡ್ಡ ಅಡಚಣೆಯಾಗಿತ್ತು. ಉಪಾಧ್ಯಾಯರಲ್ಲಿ ಬಹುಮಂದಿ ತಮ್ಮ ಕೆಲಸದ ಸ್ವರೂಪವನ್ನೂ, ಪರಿಣಾಮವನ್ನೂ ಸರಿಯಾಗಿ ತಿಳಿದಿರಲಿಲ್ಲ.

ಈ ಎರಡು ಪುಸ್ತಕಗಳಲ್ಲಿ, ಮೊದಲನೆಯದು—ವಿದ್ಯಾಭ್ಯಾಸ ಮಾಡಿಸುವ

ಹಿಂದೂಸ್ಥಾನಿ ಸ್ಕೂಲ್‌ಗಳ ಡಿಪ್ಯುಟಿ ಇನ್‌ಸ್ಪೆಕ್ಟರ್‌ರವರ ಆಫೀಸಿಗೆ ಈ ಸಬ್ಬಂದಿಗಳನ್ನು ಸ್ಯಾಂಕ್ಷನ್ ಮಾಡಿರುವರು. ಮಾಹೇಯಾನ ೭೦ ರೂಪಾಯಿ ತಲಬಿನ ಮೇಲೆ ಒಬ್ಬ ಕ್ಲರ್ಕ್, ೧೫ ರೂಪಾಯಿನ ಒಬ್ಬ ಗುಮಾಸ್ತ, ೧೫ ರೂಪಾಯಿನ ಒಬ್ಬ ಡಪ್ಯುಟಿ ಗುಮಾಸ್ತ, ೩ ರೂಪಾಯಿನ ಒಬ್ಬ ದಫೇದಾರ್, ೬ ರೂಪಾಯಿನ ಮೀರೆ ಇಬ್ಬರು ಜವಾನರು. ಈ ಆಫೀಸಿಗೆ ಕಂಟಿಜೆಂಸಿ ಮಾಹೇಯಾನ ೪ ರೂಪಾಯಿಯೂ ಸ್ಯಾಂಕ್ಷನ್ ಆಗಿರುತ್ತೆ.

***

ಮೈಸೂರು ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇನ್‌ಸ್ಪೆಕ್ಷನ್‌ಬಗ್ಗೆ ಸರ್ಕಿಟ್ ದಯಮಾಡಿಸಿರುತ್ತಾರೆ.

***

ಹಾಸನದ ಹೈಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಮ॥ ರಾ॥ ತಮ್ಮಯ್ಯನವರಿಗೆ ೫೦ರೂಪಾಯಿ ತಲಬಿನಿಂದ ಡಿ. ಕ್ಲಾಸ್ ೧ಕ್ಕೆ ಪ್ರಮೋಷನ್ ಮಾಡಿರುತ್ತಾರೆ.

***

ನಾಗಮಂಗಲದ ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಹೆಡ್‌ಮ್ಯಾಸ್ಟರ್ ಮ॥ ರಾ॥ ಎಂ. ಲಕ್ಷ್ಮೀನರಸಿಂಹಯ್ಯ ಬಿ. ಎ. ಯವರನ್ನು ಪ್ರಮೋಷನ್ನಿನಿಂದ ಹಾಸನದ ಹೈಸ್ಕೂಲ್ ಅಸಿಸ್ಟೆಂಟ್ ಮ್ಯಾಸ್ಟರನ್ನಾಗಿ ನಿರ್ಣಯಿಸಿರುತ್ತಾರೆ.

***

ಕೋಲಾರದ ನಾರ್ಮಲ್ ಸ್ಕೂಲ್ ಕನ್ನಡ ಅಸಿಸ್ಟೆಂಟ್ ಮ್ಯಾಸ್ಟರ್ ಮ॥ ರಾ॥ ಜೆ ನರಸಿಂಹಮೂರ್ತಿಗಳಿಗೂ, ಅದೇ ಸ್ಕೂಲ್ ಹಿಂದೂಸ್ಥಾನಿ ಅಸಿಸ್ಟೆಂಟ್ ಸೈ॥ ಅಬ್ದುಲ್ ಗಫರ್ ಸಾ॥ ರವರಿಗೂ, ಸವಿಶೇಷವಾಗಿ ಗೌರ್ನಮೆಂಟ್ ನಾರ್ಮಲ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಮ॥ ರಾ॥ ಸುಬ್ಬರಾಯರವರಿಗೂ ೭೦ ರೂಪಾಯಿ ತಲಬಿನಿಂದ ೮೫ ರೂ॥ ತಲಬಿಗೆ, ಪೂರ್ವದಲ್ಲಿ ಸ್ಯಾಂಕ್ಷನ್ ಆಗಿದ್ದರಮೇಲೆ, ಪ್ರಮೋಷನ್ ಕೊಟ್ಟಿರುತ್ತೆ.

ತುಮಕೂರಿನಲ್ಲಿರುವ ಎಂಪ್ರೆಸ್ ಗೌರ್ನಮೆಂಟ್ ಸ್ಕೂಲ್ ಹೆಡ್‌ಮಾಸ್ಟರ್ ಮ॥ ರಾ॥ ರಾಮಚಂದ್ರಯ್ಯನವರನ್ನು ಸೆಕ್ಷನ್‌ಮೇಲೆ ತೆಗೆದು ಅವರಬದಲಿ, ಮೈಸೂರು ಮಹಾರಾಣಿ ಗರ್ಲ್ಸ್‌ಸ್ಕೂಲ್‌ನಲ್ಲಿದ್ದ ಡಿ. ಸುಬ್ಬಮ್ಮನವರನ್ನು ೭೦ ರೂ, ತಲಬಿ

ರುವುದು, ಇದಲ್ಲದೆ ಶುದ್ಧವಾಗಿರುವುದು. ವಿಷಯವು ಕನ್ನಡಿಗರಿಗೆ ಸಾಮಾನ್ಯವಲ್ಲದ್ದ ರಿಂದ ಪದಶೈಲಿಯೂ ಕ್ಲಿಷ್ಟವಾಗದಿರಲು ಸಾಧ್ಯವಲ್ಲವು.

'ಪಾಠಕ್ರಮ' ದ ಶೈಲಿಯು, ವಿಷಯವನ್ನು ಬೋಧಿಸತಕ್ಕ ರೀತಿಯೂ ಬಹಳ ಚೆನ್ನಾಗಿರುವುದು.

ವೆಸ್ಲ್ಯನ್ ಮಿಷನ್ ಪ್ರೆಸ್ಸಿನವರು ಪುಸ್ತಕಗಳನ್ನು * ಬಹಳ ಚೆನ್ನಾಗಿ ಅಚ್ಚುಹಾಕಿ, ಬೈಂಡ್ ಮಾಡಿರುವರು

ಕಿಂಡರ್‌ಗಾರ್ಟ್ನ್ ಕಥೆ.

ಮೈನ.

ಒಂದು ದೊಡ್ಡದಾದ ಕೋಡುಗಲ್ಲಿನ ತುದಿಯಲ್ಲಿ ಒಂದು ಮೈನವು ಗೂಡುಕಟ್ಟಿ ಕೊಂಡು ವಾಸನಾಗಿತ್ತು. ಕಲ್ಲ ಕಟಿಗರು ಬಂದು ಆ ಕೋಡುಗಲ್ಲಿನ ಸುತ್ತಲಿರುವ ಕಲ್ಲುಬಂಡೆಯಿಂದ ಚಪ್ಪಡಿಗಳನ್ನು ಎಬ್ಬಿಸಿ, ತೆಗೆದುಕೊಂಡು ಹೋಗುತಿದ್ದರು. ಅವರು ಬಂದಮೇಲೆಯಲ್ಲಿ ಸುರಂಗಗಳನ್ನು ಹಾಕಿ ಕಲ್ಲನ್ನು ಎಬ್ಬಿಸುತಿದ್ದರು. ಹೀಗೆ ಸುರಂಗಹಾಕುತಿದ್ದ ಕಲ್ಲಿನ ಚೂರುಗಳು ಹಾರಿ ಅನೇಕಾವರ್ತಿ ಇದರಗೂಡಿಗೂ ತಗಲಿ, ತೊಂದರೆಯನ್ನುಂಟುಮಾಡುತಿದ್ದವು. ಸುರಂಗಹಾಕುವದಕ್ಕೆ ಮುಂದಾಗಿ ಸೀಟಿಯನ್ನು ಹಾಕುವ ಅಥವ ಕೊಂಬನ್ನು ಊದುವಪದ್ಧತಿಯುಂಟು. ಇದೂದಿದೊಡನೆಯೇ

* ವಿದ್ಯಾಭ್ಯಾಸಕ್ರಮ :—ಕ್ರಯ ೬ ಆಣೆ.

ಪಾಠಕ್ರಮ :—ಕ್ರಯ ೪ ಆಣೆ

ಗ್ರಂಥಕರ್ತರಲ್ಲಿಯೂ, ಗಾ ಜುಯೇಟ್ಸ್ ಟ್ರೇಡಿಂಗ್ ಆಸೋಸಿಯೇಷನ್ನಿನಲ್ಲಿಯೂ, ಮೆಸರ್ಸ್ ಕೆ. ನರಸಿಹ್ಮಯ್ಯ ಅಂಡ್—ಕಂಪೆನಿಯವರಲ್ಲಿಯೂ ಈ ಪುಸ್ತಕಗಳು ಕ್ರಯಕ್ಕೆ ದೊರೆಯುವುವು.

ಕರು ಅನುಸರಿಸಬೇಕಾದ ನಿಯಮಗಳನ್ನು ಆ ನಿಯಮಗಳ ಮೂಲತತ್ವಗಳನ್ನೂ ಕೂಡಿದಮಟ್ಟಿಗೆ ಚೆನ್ನಾಗಿ ತಿಳಿಸುವುದು ; ಬಾಲಕರನ್ನು ಕ್ರಮಮಾರ್ಗದಲ್ಲಿ ಶಿಕ್ಷಿಸಿ ಲೋಕವ್ಯವಹಾರಕ್ಕೆ ತಕ್ಕವರನ್ನಾಗಿ ಮಾಡಲು ಅನುಸರಿಸಬೇಕಾದ ಪದ್ಧತಿಗಳನ್ನು ವಿಶದಮಾಡುವುದು ; ಇಂದ್ರಿಯ ಸ್ವಭಾವವನ್ನೂ ಇಂದ್ರಿಯ ಪಾಟವಕ್ರಮವನ್ನೂ ಬೋಧಿಸುವುದು ; ದೇಹದಾರ್ಢ್ಯದ ವಿಷಯವಾಗಿ ಈ ಪುಸ್ತಕದಲ್ಲಿ ಬರೆದಿರುವುದು ಗ್ರಾಹ್ಯವಾಗಿರುವುದು.

ಈ ಪುಸ್ತಕಕ್ಕೆ ಸಹಕಾರಿಯಾಗಿ ಸಾಮಾನ್ಯ ನಿಯಮಗಳನ್ನು ತಿಳಿದಬಳಿಕ, ಉಪಾಧ್ಯಾಯರ ಪರಿಶ್ರಮವು ಫಲವಾಗುವಂತೆಯೂ ವಿದ್ಯಾರ್ಥಿಗಳಿಗೆ ವಿದ್ಯೆಯು ಸುಲಭಸಾಧ್ಯವಾಗಿ ಅವರಿಗೆ ಅದರಲ್ಲಿ ಅಭಿರುಚಿಯು, ಉತ್ಸಾಹವು ಸಹ ಹೆಚ್ಚುವಂತೆಯೂ ಪ್ರವಚನ ಮಾಡತಕ್ಕ ಕ್ರಮವನ್ನು 'ಪಾಠಕ್ರಮ' ದಲ್ಲಿ ವಿವರಿಸಿದೆ. ಈ ಪುಸ್ತಕದಲ್ಲಿ ಓದಿಸುವುದು, ಬರೆಸುವುದು, ಮೊದಲಾದವುಗಳನ್ನು ಯಥೋಚಿತವಾಗಿ ತಿಳಿಸಿರುವದಲ್ಲದೆ ಬಹಳ ಕಠಿನವೆಂದು ಅನೇಕರು ಭಾವಿಸಿರುವ ಅಂಕಗಣಿತ ಪಾಠನಕ್ರಮವನ್ನೂ ವಿಶೇಷವಾಗಿ ವಿವರಿಸಿರುವರು. ಗ್ರಂಥಕರ್ತರು ಗಣಿತಶಾಸ್ತ್ರದಲ್ಲಿ ಬಿ. ಎ. ಡಿಗ್ರಿಯನ್ನುಪಡೆದು, ಗಣಿತ ಪಾಠನಕ್ರಮದಲ್ಲಿ ಅನುಭವಶಾಲಿಗಳಾದುದರಿಂದ ಗಣಿತ ಶಾಸ್ತ್ರವನ್ನು ಕ್ರಮವರಿತು ಹೇಳಿಕೊಡೋಣದರಲ್ಲಿ ಬಾಲಕರಿಗೆ ಈ ಶಾಸ್ತ್ರವು ಸುಲಭವಾಗಿ ತಿಳಿಯುವುದಲ್ಲದೆ ಬುದ್ಧಿಶಕ್ತಿಗೆ ಬಹಳ ಉತ್ತೇಜಕವಾಗಿರುವುದೆಂದು ಎಣಿಸಿ ಈ ಪ್ರಕರಣವನ್ನು ವಿಶದವಾಗಿ ಬರೆದಿರುವರು. ಈ ಎರಡು ಪುಸ್ತಕಗಳೂ ಉಪಾಧ್ಯಾಯರಿಗೆ ಅತ್ಯಂತ ಅವಶ್ಯವು. ವಿದ್ಯಾಭ್ಯಾಸದಲ್ಲಿ ಅಭಿರುಚಿಯುಳ್ಳವರು ಈ ಪುಸ್ತಕಗಳನ್ನು ಓದೋಣದರಿಂದ ವಿಶೇಷ ಫಲವನ್ನು ಪಡೆಯುವರೆಂಬುದರಲ್ಲಿ ಸಂದೇಹವಿಲ್ಲ.

ಈ ಗ್ರಂಥಕರ್ತರ ಶೈಲಿಯು ಶ್ಲಾಘ್ಯವಾಗಿರುವುದು. ಸಂಸ್ಕೃತಶಬ್ದಗಳನ್ನು ಕನ್ನಡ ಗ್ರಂಥಗಳಲ್ಲಿ ವ್ಯಾಕರಣವಿರುದ್ಧವಿಲ್ಲದಂತೆ ಶುದ್ಧವಾಗಿ ಉಪಯೋಗಿಸುವುದು, ಎಲ್ಲಗ್ರಂಥಕರ್ತರಿಗೂ ಸುಲಭವೆಂದು ಭಾವಿಸಲಾಗದು. ಈ ಪುಸ್ತಕಗಳನ್ನು ರಚಿಸಿರುವರು ಸಂಸ್ಕೃತಶಬ್ದಗಳನ್ನು ನಿರ್ದೋಷವಾಗಿ ಉಪಯೋಗಿಸಿರುವದರಿಂದಲೂ, ಇಂದ್ರಿಯಗಳ ವಿಷಯವಾಗಿ ಬರೆದಿರುವುದರಲ್ಲಿ ಉಪಯೋಗಿಸಿರುವ ಸಂಸ್ಕೃತಪದಗಳು ಅನುಗುಣವಾಗಿರುವುದರಿಂದಲೂ ಈ ಪುಸ್ತಕಗಳು ಗ್ರಾಹ್ಯವಾಗಿರುವುವು.

'ವಿದ್ಯಾಭ್ಯಾಸಕ್ರಮ' ದಲ್ಲಿ ಶೈಲಿಯು ಕ್ಲಿಷ್ಟವಾಗಿದ್ದರೂ ಸಹಜವಾಗಿ

ವಿದ್ಯಾದಾಯಿನಿ

ಭಾಗ ೬.] ಜೂನ್ ೧೮೯೪. [ಸಂಚಿಕೆ ೬.

ಎಡಿಟರವರ ನೋಟ್ಸ್.

ಪ್ರಖ್ಯಾತರಾದ ಮೆ॥ ಗ್ಲಾಡ್‌ಸ್ಟನ್ ಸಾಹೇಬರವರು ಮೇ. ೧೯ನೇ ಗರುವಾರ ಪ್ರಾತಃಕಾಲ ೫ ಘಂಟೆ ಸಮಯದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ

***

ಇವರು ೧೮೦೯ನೇ ಇಸವಿ ಡಿಶಂಬರ್ ೨೯ನೇ ತಾರೀಖಿನಲ್ಲಿ ಜನಿಸಿದರು. ಬಾಲ್ಯದಲ್ಲಿ ಪ್ರಸಿದ್ಧವಾದ ಈಟನ್ ಸ್ಕೂಲಿನಲ್ಲಿ ವಿದ್ಯಾಭ್ಯಾಸಮಾಡಿರು. ೧೮೩೧ರವರೆಗೆ ಆಕ್ಸ್‌ಫರ್ಡ್ ವಿದ್ಯಾಶಾಲೆಗಳಲ್ಲಿ ಓದಿ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಅನಂತರ ಯೂರೋಪ್ ಖಂಡದಲ್ಲಿ ಸಂಚರಿಸಿ ಪ್ರಪಂಚದ ಜ್ಞಾನ ನಡವಳಿಕೆಗಳನ್ನು ಅರಿತು ತಮ್ಮ ದೇಶಕ್ಕೆ ಹಿಂದಿರುಗಿದರು.

***

೧೮೩೫ರಲ್ಲಿ ಮೊದಲು ಇವರು ಪಾರ್ಲ್‌ಮೆಂಟಿಗೆ ಚುನಾಯಿಸಲ್ಪಟ್ಟರು. ಆದರೆ ೧೮೩೩ರಲ್ಲಿ ಲಾ ಪರೀಕ್ಷೆಗೆ ಓದಲು ಆರಂಭಿಸಿ, ಇವರು ಆದರಲ್ಲಿ ಪಾಂಡಿತ್ಯವನ್ನು ಪಡೆದು, ನ್ಯಾಯಾಲಯದ ವಿಷಯವನ್ನೂ, ರಾಜ್ಯಭಾರಕ್ರಮವನ್ನೂ ಚೆನ್ನಾಗಿ ಅರಿತು ಪ್ರಸಿದ್ಧಿಗೊಂಡರು.

***

ಅಲ್ಲಿ ಕೆಲಸವಮಾಡುತಲಿರ್ವ ಜನರೆಲ್ಲರೂ ಕೆಲಸವನ್ನು ಬಿಟ್ಟು ದೂರದಲ್ಲಿ ಹೋಗಿ ನಿಲ್ಲುತಿರ್ದರ. ಈಹಕ್ಕಿಯು ಇವನ್ನುನೋಡಿಕೊಂಡಿದ್ದು, ಕೊಂಬು ಊದಿದೊಡನೆ ತನ್ನಮರಿಗಳೊಡನೆ ತಾನೂಹೋಗಿ, ಜನರಂತೆ ದೂರದಲ್ಲಿದ್ದು ಸುರಂಗವು ಚನ್ನಾಗಿಹಾರಿ ಜನರೆಲ್ಲರೂ ಕೆಲಸಕ್ಕೆ ಹಿಂದಿರುಗಿದವೇಲೆ ತಾನೂ ಹಿಂದಿರುಗತಿತ್ತು. ಇವರ ಬುದ್ಧಿಯನ್ನು ಅಲ್ಲಿ ಕೆಲಸವಮಾಡುತಲಿದ್ದವರೆಲ್ಲರೂ ನೋಡಿದ್ದರು. ಯಾರಾದರೂ ಹೊಸಬರುಬಂದರೆ ಈ ಹಕ್ಕಿಯು ಮಾಡುವುದನ್ನು ಹೇಳಿ, ಅವರಿಗೆ ತೋರಿಸುವುದಕಾಗಿ ಸುಮ್ಮಸುಮ್ಮನೆ ಕೊಂಬನ್ನು ಊದಿ ಹಕ್ಕಿಯು ಗೂಡನ್ನು ಬಿಟ್ಟು ಹೊರಡುತಿದ್ದುದನ್ನು ತೋರಿಸಿ ಸಂತೋಷಪಡಿಸುತಿದ್ದರು. ಗೂಡುಬಿಟ್ಟು ಹೊರಟು ಹೋದ ಹಕ್ಕಿಯು ಸುರಂಗವು ಹಾರಿದಶಬ್ದವನ್ನು ಕೇಳದೆ ಒಂದುಗಳಿಗೆ, ದೂರದಲ್ಲಿಯೆ ಹಾರಾಡುತಲಿದ್ದು ಆಮೇಲೆ ಗೂಡನ್ನು ಸೇರುತಿತ್ತು. ಇದರಿಂದ ಮೊಟ್ಟೆಯಮೇಲೆ ಕೂತಿರತಿದ್ದ ಈ ಹಕ್ಕಿಗೆ ತೊಂದರೆಯುಂಟಾಗುತಿತ್ತು. ಇದಕ್ಕೆ ಆ ಹಕ್ಕಿಮಾಡಿದ ಉಪಾಯವನ್ನು ನೋಡಿ ಕೊಂಬುಊದಿದಾಗ ಹಕ್ಕಿಯು ಗೂಡಿನಿಂದ ತಲೆಹಾಕಿ ಇಣಕಿನೋಡಿ ಜನರು ಹೊರಡದಿದ್ದರೆ ಅಲ್ಲಿಯೇ ಇದ್ದು, ಜನರು ಹೊರಟರೆ ತಾನೂಹೊರಡುವ ಪದ್ಧತಿಯನ್ನಿಟ್ಟತು. ಇದು ಎಂಥಾಬುದ್ಧಿವಂತಿಕೆ!

ಇದರಮೇಲೆ ಕೇಳತಕ್ಕ ಪ್ರಶ್ನೆಗಳು:—

ಮೈನವು ಎಲ್ಲಿ ವಾಸನಾಗಿತ್ತು? ಅಲ್ಲಿ ಏನಿತ್ತು? ಯಾರು ಕೆಲಸ ಮಾಡುತಿದ್ದರು? ಸುರಂಗ ಹಾಕುವುದು ಯಾತಕ್ಕೆ? ಸುರಂಗ ಹಾಕುವುದು ಹ್ಯಾಗೆ? ಆಗ ಮೈನ ಏನುಮಾಡುತಿತ್ತು? ಕೆಲಸಗಾರರು ಇದಕ್ಕೆ ಹ್ಯಾಗೆತೊಂದರೆ ಮಾಡುತಿದ್ದರು? ಅದಕ್ಕೆ ಇದು ಏನು ಉಪಾಯ ಮಾಡಿಕೊಂಡಿತ್ತು? ಇದರಿಂದ ನಾವು ಏನು ತಿಳದುಕೊಳ್ಳಬಹುದು?

ಘನಪಂಡಿತರಾದ ಜಗದೀಶ ಚಂದ್ರಬೋಸ್
ಎಂ. ಏ. ಡಿ. ಎಸ್. ಸಿ. ಯವರು.

ಪ್ರಕೃತಿಶಾಸ್ತ್ರದಲ್ಲಿ ಪಾರಂಗತರಾಗಿ ದೀರ್ಘಶೋಧನೆಯಿಂದ ಹೊಸಹೊಸ ಸಂಗತಿಗಳನ್ನು ಕಂಡು ಹಿಡಿದು ತತ್ಕಾಲದ ನವ ನಾಗರಿಕತೆಗೆ ಕಾರಣಭೂತರಾಗಿರುವ ಪಾಶ್ಚಾತ್ಯರು ಸರ್ವರಿಂದಲೂ ಅಗ್ರಗಣ್ಯರೆಂದು ಹೊಗಳಿಸಿಕೊಳ್ಳುತ್ತ ಕೀರ್ತಿಲಕ್ಷ್ಮಿಯ ಕಟಾಕ್ಷಕ್ಕೆ ಪಾತ್ರರಾಗಿರುವ ಅಂಶವು ಸರ್ವರಿಗೂ ಜ್ಞೇಯವಾಗಿರುವ ವಿಷಯವೇ. ಆದರೆ ಆ ಕೀರ್ತಿಲಕ್ಷ್ಮಿಯು ತನ್ನ ತೌರುವೆನಿಯಾದ ಭರತಖಂಡವನ್ನು ಬಿಟ್ಟು ಬಹುಕಾಲ ದೇಶಾಂತರಗಳಲ್ಲಿ ಸಂಚರಿಸಿ ಪುನಃ ತನ್ನ ಜನ್ಮಭೂಮಿಯನ್ನು ಬಯಸಿ ಬಂದಿರುವಳೋ ಎಂಬಂತೆ ಈ ಕೆಳಗೆ ವಿವರಿಸುವ ವಿಷಯದಿಂದ ತೋರುವುದು.

ಹಿಂದೂಜನರು ಬಹುಕಾಲ ಮಹನ್ಮದಿಯರ ಆಳ್ವಿಕೆಗೊಳಗಾಗಿ ತಮ್ಮ ತನು ಮನ ಧನಗಳನ್ನು ಅವರಿಗೊಪ್ಪಿಸಿದ್ದರಷ್ಟೆ. ಇಂಗ್ಲೀಷಿನವರು ಈ ರಾಜ್ಯವನ್ನು ಕೈವಶಮಾಡಿಕೊಂಡನಂತರ ಕೆಲವುಕಾಲ ಹಿಂದೂಜನರನ್ನು ದೊಡ್ಡ ದೊಡ್ಡ ಅಧಿಕಾರಕ್ಕೆ ನಿಯಮಿಸುತ್ತಿರಲಿಲ್ಲ. ಆದರೆ ಕರುಣಾಪೂರ್ಣರಾದ ಲಾರ್ಡ್ ವಿಲಿಯಂ ಬೆಂಟಿಕ್‌ರವರು ತಮ್ಮ ಆಧಿಪತ್ಯದಲ್ಲಿ ಹಿಂದುಗಳಿಗೆ ಇಂಗ್ಲೀಷು ಮೊದಲಾದ ಪಾಶ್ಚಾತ್ಯ ವಿದ್ಯೆಯನ್ನು ಕಲಿತುಕೊಳ್ಳುವುದಕ್ಕೆ ಸಲಕರಣೆಗಳನ್ನುಂಟುಮಾಡಿದ್ದು ಮಾತ್ರವಲ್ಲದೆ ಹಿಂದುಗಳ ಮನಃಪೂರ್ವಕವಾದ ಸಹಾಯವು ತಮಗೆ ದೊರೆಯದೆ ಹೋದರೆ ತಮ್ಮ ರಾಜ್ಯದ ನೆಲಗಟ್ಟು ಭದ್ರವಾಗದೆಂದೆಣಿಸಿ ಹಿಂದುಗಳಲ್ಲಿ ಯೋಗ್ಯರಾದವರಿಗೆ ದೊಡ್ಡ ಅಧಿಕಾರವನ್ನೂ ಕೊಡುತ್ತಬಂದರು ಅಂದಿನಾರಭ್ಯ ಹಿಂದುಗಳು ಸರ್ವಕಾರ್ಯವನ್ನು ನಿರ್ವಹಿಸುವದಕ್ಕೆ ಯೋಗ್ಯರೆಂದೂ, ಅವರನ್ನು ನಂಬಿ ಅಧಿಕಾರವನ್ನು ಕೊಟ್ಟ ಇಂಗ್ಲೀಷರಿಗೆ ಕೃತಜ್ಞತೆಯಿಂದ ತೃಪ್ತಿಕರವಾಗಿ ಕೆಲಸ ಮಾಡಿರುವರೆಂದೂ ಘಂಟಾಘೋಷವಾಗಿ ಹೊಗಳಿಸಿಕೊಳ್ಳುತ್ತಿರುವದು ಮಾತ್ರವಲ್ಲದೆ ಕೆಲವು ಸಂದರ್ಭದಲ್ಲಿ ಹಿಂದುಗಳು ಪಾಶ್ಚಾತ್ಯರಿಗಿಂತಲೂ ಮೇಧಾವಿಗಳೆನ್ನಿಸಿಕೊಂಡಿರುವರು.

ಭಾರತಭೂಮಿಯಲ್ಲಿ ರಾಮಗೋಪಾಲಗೋಸ್, ಕೇಶಬ್‌ಚಂದ್ರಸೇನ್ ರಂಥವಾಗ್ಮಿಗಳೂ, ದ್ವಾರಕನಾಥಮಿತ್ರ, ಕಾಶೀನಾಥತ್ರಿಂಬಕ್‌ಟಿಲಂಗ್, ಸರ್. ಟಿ.

ಪಾರ್ಲಿಮೆಂಟ್‌ನ್ನು ಪ್ರವೇಶಿಸಿದೊಡನೆಯೇ ಅನೇಕ ವಿಷಯಗಳನ್ನು ಗ್ರಹಿಸಿ, ಚರ್ಚಿಸುವುದರಲ್ಲಿ ಸಮರ್ಥರಾಗಿ ವಿದ್ವಜ್ಜನಕ್ಕೂ ಪಾಮರ ಜನಕ್ಕೂ ಸಮರ್ಪಕವಾದ ತಮ್ಮ ಅಭಿಪ್ರಾಯಗಳನ್ನು ಸ್ಥಾಪಿಸುತ ರಾಜಕಾರ್ಯ ನಿರ್ವಾಹದಲ್ಲಿ ಮುಂದಾಳಾಗಿ ನಿಲ್ಲುತಿದ್ದುದರಿಂದ ೧೮೬೫ ರಲ್ಲಿ ವೊದಲು ಮಂತ್ರಿಶ್ರೇಷ್ಠರಾದರು ೧೮೭೮ ರವರೆಗೂ ರಾಜ್ಯಭಾರವನ್ನು ನಿರ್ವಹಿಸಿದರು. ಆಗ ಆ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಪುನಃ ೧೮೮೦ ರಲ್ಲಿ ಆ ಪದವಿಗೆ ಬಂದರು. ಈ ಆವರ್ತಿ ಐದು ವರ್ಷ ಮಂತ್ರಿಶ್ರೇಷ್ಠರಾಗಿದ್ದು ಪುನಃ ಕೆಲಸದಿಂದ ನಿವೃತ್ತರಾಗಿದ್ದು, ೧೮೮೫ ರಿಂದ ೮೬ ರವರೆಗೂ, ೧೮೯೫ ರಿಂದ ೯೪ ರವರೆಗೂ ವಿಹಿತವಾದ ಬ್ರಿಟಿಷ್ ರಾಜ್ಯದ ಆಡಳಿತಗಳನ್ನು ನಡೆಸಿದರು.

***

ನಾಲ್ಕುವೇಳೆ ಮಹಾರಾಜ್ಞಿ ವಿಕ್ಟೋರಿಯಾರವರ ಪ್ರಧಾನಮಂತ್ರಿಯವರಾಗಿದ್ದಾಗ ಬಹಳ ಚತುರತೆಯಿಂದ ರಾಜ್ಯದಾಡಳಿತಗಳನ್ನು ನಿರಪೇಕ್ಷಿಸಿ, ಪ್ರಜೆಗಳ ಅಭಿವೃದ್ಧಿಗೆ ಸಹಾಯವಾಗುವಂಥಾ ಅನೇಕ ಕಾನೂನುಗಳನ್ನು ಆಚರಣೆಗೆ ತಂದರು. ದೇಶದ ವ್ಯಾಪಾರಾಭಿವೃದ್ಧಿಗೂ, ಪ್ರಜೆಗಳ ವಿದ್ಯಾಭಿವೃದ್ಧಿಗೂ ಬಹಳವಾಗಿ ಪ್ರೋತ್ಸಾಹವನ್ನು ಕೊಟ್ಟರು.

***

ಈ ಮಹನೀಯರು ಬಹಳ ಕ್ಲುಪ್ತವಾದ ಕಟ್ಟಳೆಗಳನ್ನು ನಿತ್ಯವೂ ಲೋಪ ಬಾರದಂತೆ ಆಚರಿಸುತ್ತಿದ್ದರು. ದೇಹದಲ್ಲಿ ಶಕ್ತಿಗುಂದುವವರೆಗೂ ಕ್ರಮವಾಗಿ ವ್ಯಾಯಾಮ ಮಾಡುವಂತೆ ಮರಗಳನ್ನು ಕೆಡಹಿ, ಸೌದೆಯನ್ನು ಒಡೆಯುತ್ತಿದ್ದರು. ರಾಜಕಾರ್ಯ ಗೌರವ ಎಷ್ಟಿದ್ದರೂ, ಎಂಥಾದ್ದು ಆಗಿದ್ದರೂ ಹೊಸಹೊಸ ಪುಸ್ತಕಗಳನ್ನು ಓದುವುದಕ್ಕೂ, ವಿಷಯಗಳನ್ನು ಚರ್ಚಿಸುವುದಕ್ಕೂ ಅವುಗಳಮೇಲೆ ತಮ್ಮ ಅಭಿಪ್ರಾಯವನ್ನು ಪ್ರಕಟಿಸುವುದಕ್ಕೂ ಇವರು ಅವಕಾಶ ಮಾಡಿಕೊಳ್ಳುತ್ತಿದ್ದರು. ಮುಖ್ಯವಾಗಿ ಇವರು ರಾಜಕೀಯ ವಿಷಯಗಳನ್ನು ತಿಳಿದಿರುವುದರಲ್ಲೂ, ವಿದ್ಯಾಪಾಂಡಿತ್ಯದಲ್ಲೂ, ಜ್ಞಾನದಲ್ಲೂ, ಉಪನ್ಯಾಸ ಮಾಡುವುದರಲ್ಲೂ, ಪರೋಪಕಾರ ಬುದ್ಧಿಯಲ್ಲೂ ಅಸಮಾನರೆನಿಸಿಕೊಂಡಿದ್ದರು.

ಮಹಾಶಕ್ತರಾದ ಪಂಡಿತರಲ್ಲಿ ಶಾಸ್ತ್ರಾಭ್ಯಾಸಮಾಡಿದರು ತರುವಾಯ ಲಂಡನ್ ಯೂನಿವರ್ಸಿಟಿ ಬಿ ಎಸ್. ಸಿ ಬಿರುದನ್ನು ಪಡೆಯುತ್ತಲೇ ಸ್ವದೇಶಕ್ಕೆ ೧೮೮೫ನೇ ಇಸವಿಯಲ್ಲಿ ತೆರಳಿದರು. ಇಂಗ್ಲೆಂಡಿನಿಂದ ಇವರು ಬರುವಾಗ ತನ್ನ ಶಾಸ್ತ್ರ ಸಾಮರ್ಥ್ಯವನ್ನು ವ್ಯಕ್ತಪಡಿಸುವ ಅನೇಕ ಯೋಗ್ಯತಾಪತ್ರಗಳನ್ನು ಬಹುವಂದಿ ವಿದ್ವಾಂಸರಿಂದ ಪಡೆದಿದ್ದು ಕಲ್ಕತ್ತಾದಲ್ಲಿರುವ ಪ್ರೆಸಿಡೆನ್ಸಿ ಕಾಲೇಜಿಂಬುವ ವಿದ್ಯಾಲಯದಲ್ಲಿ ಪ್ರಕೃತಿಶಾಸ್ತ್ರ ಪಂಡಿತರಾಗಿ ನಿಯುಕ್ತವಾದದ್ದಕ್ಕೆ ಸಹಕಾರಿಯಾಯಿತು. ಬಂಗಾಳ ಸರ್ಕಾರದವರು, ಆ ವಿದ್ಯಾಶಾಲೆಯಲ್ಲಿ ಪ್ರಕೃತಿಶಾಸ್ತ್ರವನ್ನು ಉತ್ತಮರೀತಿಯಿಂದ ಬೋಧಿಸುವದಕ್ಕಾಗಿ ಬಹು ಸಲಕರಣೆಯನ್ನು ಮಾಡಿಕೊಟ್ಟು ಉಪಕರಣಗಳಿಗಾಗಿ ಬಹು ದ್ರವ್ಯವನ್ನು ವ್ಯಯಮಾಡಿರವರು. ಆ ವಿದ್ಯಾಲಯದಲ್ಲಿಯೇ ಪಂಡಿತ ಬೋಸರವರಿಗೆ ಉದ್ಯೋಗವಿರುವದರಿಂದ ಇವರು ವಿದ್ಯಾರ್ಥಿಗಳಿಗೆ ಬೋಧಿಸುತ್ತ ದಿನದಿನಕ್ಕೆ ಬಹು ಅನುಭವಶಾಲಿಗಳಾದರು. ಇದಲ್ಲದೆ ಇವರು ತಮ್ಮ ಕರ್ತವ್ಯವಾದ ಉಪನ್ಯಾಸವನ್ನು ಮಾಡಿದನಂತರ ಬಹುಹೊತ್ತಿನವರೆಗೆ ಉಪಕರಣಶಾಲೆಯಲ್ಲಿ ಕೆಲಸ ಮಾಡುತ್ತಲೂ ಇದ್ದು ತಮ್ಮ ಇಷ್ಟದೇವತಾರೂಪವಾದ ಪ್ರಕೃತಿಶಾಸ್ತ್ರದ ಪರಿಶೀಲನೆಯಲ್ಲಿಯೇ ಕಾಲವನ್ನು ಕಳೆಯುವರು. ಇದಲ್ಲದೆ ಸರ್ಕಾರದ ರಜಾ ದಿವಸಗಳಲ್ಲಿಯೂ ಕೂಡ ವಿದ್ಯಾನಿಲಯದಲ್ಲಿ ಕಲ್ಕತ್ತದ ಮಹಾಜನಗಳಿಗಾಗಿ ಉಪನ್ಯಾಸಮಾಡುತ್ತಲೂ ಇದ್ದರು. ಇವರು ಗತಸಂವತ್ಸರದಲ್ಲಿ ತಮ್ಮ ಶೋಧನೆಯ ಫಲವಾದ ವಿದ್ಯುಚ್ಛಕ್ತಿಯು ಅಲೆಗಳ ವಿಷಯವನ್ನು ಪ್ರಚಾರಪಡಿಸಿದರು. ಅದರಿಂದಲೂ ಆ ಸಂಬಂಧದಿಂದ ಇವರು ಕಲ್ಪಿಸಿರುವ ಉಪಕರಣದಿಂದಲೂ ಇವರ ಕೀರ್ತಿಯು ಈ ಪ್ರಪಂಚದ ಪ್ರಕೃತಿಶಾಸ್ತ್ರಜ್ಞರ ಮಂಡಲಿಯಲ್ಲೆಲ್ಲ ಪ್ರಕಾಶಿಸುತ್ತಿರುವದು.

ಇವರು ಬ್ರಾಮೊ (Brahmo) ಮತದ ಸಾಧಾರಣ ಸಮಾಜಕ್ಕೆ ಸೇರಿದವರು. ಪಂಡಿತ ಬೋಸರವರು ಆಕಾರದಲ್ಲಿ ಗಿಡ್ಡಾಗಿಯೂ, ಸ್ವರೂಪಿಗಳಾಗಿಯೂ ವರ್ಚಸ್ವಿಗಳಾಗಿಯೂ ಇರುವರು. ಈಗ ಇವರು ಬಾಬುದುರ್ಗಾಮೋಹನದಾಸರೆಂಬ ಬಂಗಾಳದ ಹೈಕೋರ್ಟು ವಕೀಲರ ದ್ವಿತೀಯಪುತ್ರಿಯಾದ ವಿದ್ಯಾವತಿಯನ್ನು ಮದುವೆಯಾಗಿ ಕಲ್ಕತ್ತಾನಗರದ ಯಂಟಲ್ಲಿ (Entall Quarter) ಎಂಬ ಭಾಗದಲ್ಲಿ ವಾಸಮಾಡುತ್ತಿರುವರು ಈಗ ಇಂಗ್ಲೆಂಡಿನಲ್ಲಿ ವಿದ್ಯಾವಂತರಾಗಿ ಸ್ವದೇಶಕ್ಕೆ ಬಂದವರಂತೆ ಸ್ವಭಾಷೆಯನ್ನೂ, ಸ್ವದೇಶದ ಉಡಿಗೆ ತೊಡಿಗೆಗಳನ್ನೂ

ಮುತ್ತುಸಾಮೈಯ್ಯರ್ ಅಂಥ ನ್ಯಾಯಾಧೀಶರೂ, ಪ್ರಖ್ಯಾತರಾದ ಡಾಕ್ಟರ ಭಾರ್ದಾಜಿ, ಮತ್ತು ರಾಜಾರಾಜೇಂದ್ರ ಲಾಲಮಿತ್ರರಂಥ ವಿದ್ವಾಂಸರೂ, ಮಾಂಡಲಿಕ ಮತ್ತು ಮನೋಮೋಹನ ಘೋಸರಂಥ ನ್ಯಾಯಶಾಸ್ತ್ರ ಪ್ರವೀಣರೂ ಆಜಂದಾ ಕರ್ಷವಾಗಿ ತಮ್ಮ ಹೆಸರನ್ನು ನೆನಸುವಂಥ ಮೇಲುಹಬ್ಬ್ಯಯನ್ನು ಹಾಕಿ ತಮ್ಮ ಜನ್ಮ ಭೂಮಿಗೆ ತಿಲಕಪ್ರಾಯರೆಂದು ಹೊಗಳಿಸಿಕೊಳ್ಳುವರು. ಆದರೆ ಪ್ರಕೃತಿ ಶಾಸ್ತ್ರದಲ್ಲಿ ಜಗದೀಶಚಂದ್ರಬೋಸರಂತೆ ಯಾರೂ ಪಾರುಗತನೆನ್ನಿಸಿಕೊಳ್ಳಲಿಲ್ಲ. ಇವರು ತಮ್ಮ ಶೋಧನೆಯುಲ್ಲಿ ಪಾಶ್ಚಾತ್ಯರನ್ನೂ ವಿಾರಿಸಿರುತ್ತಾರೆ.

ಪಂಡಿತ ಬೋಸರವರು ತರುಣರಾಗಿರುವದ್ದರಿಂದ ಇನ್ನೂ ಶೋಧನೆಗಳನ್ನು ಮಾಡಿ ನವೀನವಾದ ಅಂಶಗಳನ್ನು ಕಂಡುಹಿಡಿದು ಪ್ರಖ್ಯಾತಿಯ ಗೋಪುರಕ್ಕೆ ಕಳಶ ದಂತೆ ಹೊಳೆಯುವ ಕಾಲವು ಪ್ರಾಪ್ತನಾದೀತೆಂದು ನಂಬುತ್ತೇವೆ.

ಬಂಗಾಳದ ಸರ್ಕಾರದವರು, ಕಲ್ಕತ್ತಾದಲ್ಲಿನ ಪ್ರೆಸಿಡೆನ್ಸಿ ಕಾಲೇಜಿಂಬ ವಿದ್ಯಾಲಯದಲ್ಲಿ ಹೊಸದಾದ ಮತ್ತು ಸುಧಾರಿಸಿದ ಶಾಸ್ತ್ರಕ್ರಮವನ್ನು ನೆಲೆಗೊಳಿಸ ಬೇಕೆಂಬ ಕೋರಿಕೆಯಿಂದ ಇವರನ್ನು ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ಯೂರೊ ಪ್‌ಖಂಡದಲ್ಲಿರುವಂಥ ಪ್ರಕೃತಿಶಾಸ್ತ್ರ ವಿದ್ಯಾಲಯಗಳಲ್ಲಿ ಅಭ್ಯಾಸೆಮಾಡುವದಕ್ಕಾಗಿ ಕಳುಹಿಸಿದರು. ಅವರು ಈ ಕಾರ್ಯಕ್ಕೆ ಹೋಗಿದ್ದಾಗ ಇಂಗ್ಲೆಂಡಿನಲ್ಲಿನ ಪ್ರಕೃತಿಶಾ ಸ್ತ್ರಜ್ಞರಿಂದ ಸನ್ಮಾನಿತರಾದದ್ದು ಮಾತ್ರವಲ್ಲದೆ ಇವರು ರಾಯಲ್ ಸೊಸೈಟಿಯೆಂಬ ಪ್ರೌಢಪಂಡಿತಮಂಡಲಿಯಲ್ಲಿಯೂ ಉಪನ್ಯಾಸ ಮಾಡಿ ಖ್ಯಾತಿಗೊಂಡರು

ಪಂಡಿತ ಜಗದೀಶಚಂದ್ರಬೋಸ್‌ರವರು ಕಲ್ಕತ್ತಾದಲ್ಲಿ ವಿದ್ಯಾಭ್ಯಾಸ ಮಾಡಿ ಕಲ್ಕತ್ತಾ ಯೂನಿವರ್ಸಿಟಿಯ ಪ್ರವೇಶಪರೀಕ್ಷೆ (Entrance Examination) ಯಲ್ಲಿ ಉತ್ತೀರ್ಣರಾಗಿ 'ಸೆಂಟ್‌ಜಾವ್ಯೆಯರ್ಸ್ ಕಾಲೇಜ್' ಎಂಬ ಪ್ರೌಢ ವಿದ್ಯಾಶಾಲೆಯಲ್ಲಿ ಓದುತ್ತ ತಾವು ಪ್ರಖ್ಯಾತಿ ಪಡೆದಿರುವ ಪ್ರಕೃತಿಶಾಸ್ತ್ರದ ಪ್ರಾರಂ ಭದ ಶಿಕ್ಷಣವನ್ನು ಬಹು ಪ್ರವೀಣನೆಂದೆನ್ನಿಸಿಕೊಂಡ ಫಾದರ್‌ಲ್ಯಾಫಾಂಟ್ ಯವರಲ್ಲಿ ಹೊಂದಿದರು. ಅವರ ಶಿಕ್ಷಣದ ಅಂಕುರದಿಂದಲೇ ಇಷ್ಟು ಅದ್ಭುತವಾದ ಯಶೋ ವೃಕ್ಷವು ಈ ಭರತಖಂಡದಲ್ಲಿ ಬೆಳೆದು ತನ್ನ ಮಕರಂದವನ್ನು ವಿಶ್ವನ್ಮಂಡಲಿಯೆಂಬ ಭ್ರಮರಜ್ಞಿಗೆ ಹರವುತ್ತಿರುವುದು. ಇವರು ಬಿ. ಎಂ ಪರೀಕ್ಷೆಯುಲ್ಲಿ ತೇರ್ಗಡೆಯಾದ ಕೂಡಲೇ ಇಂಗ್ಲೆಂಡಿಗೆ ಹೊರಟು ಅಲ್ಲಿ ಕೇಂಬ್ರಿಡ್ಜ್‌ದ ಸರ್ವವಿದ್ಯಾನಿಲಯದಲ್ಲಿನ

ಚರಿತ್ರೆಯನ್ನು ಬೋಧಿಸುವ ಉಪಾಧ್ಯಾಯರಲ್ಲಿರಬೇಕಾದ ವಿಶೇಷಗುಣಗಳು-

೧ ಇವರಿಗೆ ಕಲ್ಪನಾಶಕ್ತಿಯು ವಿಶೇಷವಾಗಿರಬೇಕು. ಬಾಲಕರ ಕಣ್ಣ ದುರಿಗೆ ಇದ್ದಂತೆ ಆಗುವಹಾಗೆ ವಿಷಯಗಳನ್ನು ವಿವರಿಸುವುದು ಬರಬೇಕು

೨ ಬಹುಶ್ರುತರಾಗಿರಬೇಕು. ಮತ್ತು ಬೋಧಿಸುವ ವಿಷಯದಲ್ಲಿ ನಿಷ್ಕೃಷ್ಟವಾದ ಜ್ಞಾನವಿರಬೇಕು.

೩ ಪಾಠಕ್ಕೆ ವಿಷಯವಾದ ದೇಶದ ಸ್ಥಿತಿಯು ಈಗ ಹೇಗಿದೆಯೆಂಬುದು ಇವರಿಗೆ ಚೆನ್ನಾಗಿ ತಿಳಿದಿರಬೇಕು. ಇದು ತಿಳಿದಿದ್ದರೆ ಪೂರ್ವಕಾಲದ ವಿಷಯಗಳನ್ನು ಸರಿಯಾಗಿ ಬೋಧಿಸುವುದರಲ್ಲಿ ಅನುಕೂಲ ಹೆಚ್ಚುವುದು.

೪ ಬಾಲಕರಂತೆ ವಿಲೋಚಿಸುವ ಅಭ್ಯಾಸವೂ ಇವರಿಗೆ ಇರಬೇಕು. ಇಲ್ಲದಿದ್ದರೆ ಅವರಿಗೆ ಹುಟ್ಟುವ ಸಂಶಯಗಳನ್ನು ಪೂರ್ವಭಾವಿಯಾಗಿಯೇ ಕುರಿತು ವಿಲೋಚಿಸಿ ಅಂಥ ಸಂಶಯಗಳು ಬಾರದಂತೆ ಪಾಠ ಹೇಳುವುದಕ್ಕಾಗುವುದಿಲ್ಲ.

ಚರಿತ್ರೆಯನ್ನು ಬೋಧಿಸುವಾಗೆಲ್ಲ ಉಪಾಧ್ಯಾಯರು ಈ ಎರಡು ಅಂಶಗಳನ್ನು ಮುಖ್ಯವಾಗಿ ಜ್ಞಾಪಕವಿಟ್ಟಿರಬೇಕು.

೧ ಚರಿತ್ರೆಯಿಂದ ಬಾಲಕರಿಗೆ ವಿಷಯಗಳು ತಿಳಿಯಬೇಕೆಂಬುದು. ಚರಿತ್ರೆಯ ವಿಷಯಗಳನ್ನು ಕ್ರಮವಾಗಿ ವಿಂಗಡಿಸಿ ಬಾಲಕರಿಗೆ ಬೋಧಿಸಬೇಕು. ಪರಿಷ್ಕೃತವಲ್ಲದ ವಿಷಯಗಳನ್ನು ತಿಳಿಸಿದರಿಂದ ಅವರಿಗೆ ಸರಿಯಾದ ಜ್ಞಾನವು ಉಂಟಾಗುವುದಿಲ್ಲ.

೨ ಚರಿತ್ರೆಯು ಪಾಠದಿಂದ ಬಾಲಕರ ಬುದ್ಧಿಶಕ್ತಿಗಳು ಬೆಳೆಯಬೇಕೆಂಬುದು. ಇದಕ್ಕಾಗಿ ಉಪಾಧ್ಯಾಯರು ಚರಿತ್ರೆಯಲ್ಲಿರುವ ಅಂಶಗಳನ್ನು ಕುರಿತು ಬಾಲಕರು ತಾವೇ ವಿಲೋಚಿಸುವಂತೆ ಮಾಡಿ, ಸಾಧ್ಯವಾದಷ್ಟು ಅವರಿಂದ ಸಾಮಾನ್ಯ ನಿಯಮಗಳನ್ನು ಕಂಡು ಹಿಡಿಯುವಂತೆ ಮಾಡಬೇಕು. ಸಮಯದೊರೆತಾಗೆಲ್ಲ ಚರಿತ್ರೆಯಲ್ಲಿ ಹೇಳಿರುವ ಕಾರ್ಯಗಳ ಗುಣದೋಷಗಳ ವಿಷಯವಾಗಿ ಪ್ರಶ್ನೆಮಾಡುವುದರಿಂದ ಬಾಲಕರಿಗೆ ಯುಕ್ತಾಯುಕ್ತವಿವೇಚನೆ ಮಾಡುವ ಅಭ್ಯಾಸವನ್ನು ಸ್ವಲ್ಪಮಟ್ಟಿಗೆ ಉಂಟು ಮಾಡಿಕೊಡಬೇಕು. ಹೀಗೆ ಬಾಲಕರ ಬುದ್ಧಿಯಿಂದ ವಿಶೇಷವಾಗಿ ಕೆಲಸ ಮಾಡಿಸದೆ ಯುದ್ಧಗಳ ಮತ್ತು ದೊರೆಗಳ ಹೆಸರುಗಳನ್ನು, ಇಸವಿಗಳನ್ನುಮಾತ್ರ ತಿಳಿಸಿದರೆ ಚರಿತ್ರೆಯು ಪಾಠದಿಂದ ಪ್ರಯೋಜನವು ಬಹಳಮಟ್ಟಿಗೆ ಕಡಮೆಯಾಗುವುದು.

ಚರಿತ್ರೆಯನ್ನು ಬಾಲಕರಿಗೆ ಎರಡುಕ್ರಮದಲ್ಲಿ ಬೋಧಿಸಬಹುದು.

ಬಿಟ್ಟುಬಿಡದೆ ಇಂಗ್ಲೀಷ್‌ಭಾಷೆಯನ್ನು ಅತ್ಯವಶ್ಯಕವಾದ ಸಂದರ್ಭಗಳಲ್ಲಿ ಹೊರ್ತು ಉಳಿದಕಾಲದಲ್ಲಿ ಬಂಗಾಳೀ ಭಾಷೆಯನ್ನು ಆಡುತ್ತ, ಹಿಂದೂಗಳಂತೆ ಉಡಿಗೆಗಳನ್ನು ಧರಿಸುತ್ತಾರೆ. ಇವರನ್ನು ಕಲ್ಕತ್ತಾದ ಸರ್ವವಿದ್ಯಾನಿಲಯದವರು ಕೆಲವು ವರ್ಷಗಳಿಂದ ಸಭಾಸದರನ್ನಾಗಿ ನೇಮಿಸಿರುವರು. ಇವರಿಗೆ ಕೆಂಬ್ರಿಡ್ಜ್ ಯೂನಿವರ್ಸಿಟಿಯು ಎಂ. ಏ ಪದವಿಯೂ, ಲಂಡನ್ ಯೂನಿವರ್ಸಿಟಿ ಡಿ. ಎಸ್. ಸಿ. ಎಂಬ ಬಿರುದೂ ಬಂದಿರುವುದು. ಇವರು ತಮ್ಮ ಶಿಷ್ಯರಿಗೆ ಪ್ರೀತಿಭಾವದಿಂದ ಬೋಧಿಸುತ್ತ ಪ್ರಕೃತಿಶಾಸ್ತ್ರದಲ್ಲಿ ಆಸಕ್ತಿಯಿಟ್ಟು ಕಲಿತುಕೊಳ್ಳುವಂತೆ ಹುರುಪಿನಿಂದ ಉಪನ್ಯಾಸಮಾಡುವರು. ಇವರಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡುವಷ್ಟು ಅದೃಷ್ಟವುಳ್ಳ ವಿದ್ಯಾರ್ಥಿಗಳು ಆಸಕ್ತಿಯಿಂದ ಅಭ್ಯಾಸಮಾಡಿ ತಮ್ಮ ಗುರುಗಳ ಹೆಸರಿಗೆ ತಕ್ಕ ಶಿಷ್ಯರೆಂದೆನ್ನಿಸಿಕೊಂಡು ಈ ದೇಶಕ್ಕೂ ಜನಾಂಗಕ್ಕೂ ಗೌರವ ಕೊಟ್ಟಾರೆಂದು ಹಾರೈಸುತ್ತೇವೆ

ವಿ. ನರಸಿಂಹಮೂರ್ತಿ.

ಅಸಿಸ್ಟೆಂಟ್ ಮಾಸ್ಟರ್, ಆಂಗ್ಲ ವರ್ನಾಕ್ಯುಲರ್ ಸ್ಕೂಲ್,

ಚಾಮರಾಜನಗರ.

ಚರಿತ್ರೆ.

ಚರಿತ್ರೆಯನ್ನು ಬಾಲಕರಿಗೆ ಬೋಧಿಸುವುದರಿಂದಾಗುವ ಪ್ರಯೋಜನಗಳು—

೧ ಲೋಕವ್ಯವಹಾರದಲ್ಲಿ ಉಪಯೋಗಿಸುವ ಕೆಲವು ಅಂಶಗಳು ಬಾಲಕರಿಗೆ ಇದರಿಂದತಿಳಿಯುವುವು.

೨ ಬಾಲಕರ ಕಲ್ಪನಾಶಕ್ತಿ, ಸ್ಮೃತಿಶಕ್ತಿಗಳು ಈ ಪಾಠದಿಂದ ವೃದ್ಧಿಹೊಂದುವುವು.

೩. ಪಾಠಶಾಲೆಯಲ್ಲಿ ನಡೆಯಬೇಕಾದ ನೀತ್ಯನುಶಾಸನಕ್ಕೆ ಈ ಪಾಠದಿಂದ ಸಹಾಯವಾಗುವುದು ಗುಣವಂತರಾದವರನ್ನೇಕರ ವಿಷಯವಾಗಿ ಬಾಲಕರು ಓದುವುದರಿಂದಲವರಿಗೆ ಒಳ್ಳೇನಡತೆಗೆ ನಿದರ್ಶನಗಳು ದೊರೆಯುವುವು. ಬಾಲಕರಿಗೆ ಸ್ವದೇಶಾಭಿಮಾನವು ಈ ಪಾಠದಿಂದ ಹೆಚ್ಚುವುದು.

(i) ಕಥೆ ಹೇಳುವುದು—ಕಥೆ ಕೇಳುವುದರಲ್ಲಿ ಬಾಲಕರಿಗೆ ಸಾಮಾನ್ಯವಾಗಿ ಕುತೂಹಲವು ಬಹಳವಾಗಿರುವುದು. ಆದುದರಿಂದ ಈ ವಯಸ್ಸಿನಲ್ಲಿ ಕಥೆಗಳ ಮೂಲಕ ಚರಿತ್ರೆಯ ಅಂಶಗಳನ್ನು ತಿಳಿಸುತಬರಬೇಕು. ಬಾಲಕರಿಗೆ ತಿಳಿದಿರುವ ಅಂಶಗಳನ್ನು ಜ್ಞಾಪಿಸಿ ಹೊಸ ಅಂಶಗಳನ್ನು ಹೇಳಿಕೊಡುವುದರಿಂದ ಪಾಠವಲ್ಲಿ ಆದರವನ್ನು ಹೆಚ್ಚಿಸಬೇಕು.

(ii) ಪೂರ್ವಕಾಲವಲ್ಲಿ ಪ್ರಸಿದ್ಧರಾಗಿದ್ದ ಜನರ ಜೀವಮಾನವನ್ನು ಬಾಲಕರಿಗೆ ತಿಳಿಸುವುದು. ಇದರಿಂದ ಬಾಲಕರಿಗೆ ಅಂಥವರ ಚರಿತ್ರೆಯು ಗೊತ್ತಾಗುವುದು ಮಾತ್ರವಲ್ಲದೆ ಆಯಾಕಾಲವಲ್ಲಿನ ದೇಶದ ಸ್ಥಿತಿಯು ಮತ್ತು ಉಂಟಾದ ಬದಲಾವಣೆಯು ಸಹ ಗೊತ್ತಾಗುವುದು.

೨. ಅನಂತರವಲ್ಲಿ ಚರಿತ್ರೆಯನ್ನು ಪುಸ್ತಕಗಳ ಮೂಲಕ ಬಾಲಕರಿಗೆ ತಿಳಿಸಬೇಕಾಗುವುದು. ಮೊದಲು ಮೊದಲು ಚರಿತ್ರೆಯ ಪುಸ್ತಕದ ಒಂದು ಭಾಗವನ್ನು ತರಗತಿಯಲ್ಲಿ ಓದಿಸಿ ಅರ್ಥವನ್ನು ವಿವರಿಸಿ, ಬಾಲಕರು ಆ ಭಾಗವನ್ನು ಮನೆಯಲ್ಲಿ ಗಟ್ಟಿಮಾಡಿಕೊಂಡು ಬರುವಂತೆ ಹೇಳಬೇಕು. ಅವರು ಹಾಗೆ ಗಟ್ಟಿಮಾಡಿಕೊಂಡು ಬಂದಿರುವರೆಂಬುದನ್ನು ಪರೀಕ್ಷಿಸಿ ಮುಂದಿನ ಪಾಠವನ್ನೂ ಅದೇರೀತಿಯಾಗಿ ವಿವರಿಸಬೇಕು. ಕೆಲವು ಕಾಲದವೆರೆಗೆ ಬಾಲಕರು ತಾವೇ ಪುಸ್ತಕದಲ್ಲಿನ ಪಾಠವನ್ನು ಮನೆಯಲ್ಲಿ ಓದಿ ಕೊಡಿದಮಟ್ಟಿಗೂ ವಿಷಯಗಳನ್ನು ತಿಳಿದುಕೊಂಡು ಬರುವಂತೆ ಹೇಳಬೇಕು. ಆ ಪಾಠವನ್ನು ಆಮೇಲೆ ತರಗತಿಯಲ್ಲಿ ಕೇಳಿ ಕ್ಲಿಷ್ಟಾಂಶಗಳನ್ನು ವಿವರಿಸಿ, ವಿಶೇಷಾಂಶಗಳನ್ನು ಹೇಳುವುದಿದ್ದರೆ ಹೇಳಿ, ಮುಂದಿನ ಪಾಠವನ್ನು ಕೊಡಬೇಕು

೩. ಆವೇಲೆ ಚರಿತ್ರೆಯ ಪೌರ್ವಾಪರ್ಯಭಾಗಗಳನ್ನು ತಿಳಿಸಬೇಕು. ಆದರೆ ಲೋವರ್ ಸೆಕೆಂಡರಿ ತರಗತಿಯವರೆಗೂ ಈ ವಿಷಯಗಳನ್ನು ತಿಳಿಸಬೇಕಾದುದಿಲ್ಲ. ಆದುದರಿಂದ ಈ ವಿಷಯವಾಗಿ ಇಲ್ಲಿ ವಿಶೇಷವಾಗಿ ಬರೆಯುವುದು ಅನಾವಶ್ಯಕ.

ಚರಿತ್ರೆಯ ಬೋಧನೆಗಾಗಿರಬೇಕಾದ ಉಪಕರಣಗಳು ;—

೧. ಯುದ್ಧರಂಗಗಳ ನಕ್ಷೆಗಳು-ಬೇರೆ ಬೇರೆ ಕಾಲದೇಶಗಳಲ್ಲಿ ಜನಗಳ ಆಕೃತಿ, ಉಡುಪು ಮುಂತಾದವುಗಳನ್ನು ತೋರಿಸುವ ಪಠಗಳು.

೨. ಬೇರೆ ಬೇರೆ ಕಾಲದೇಶಗಳ ಆಯುಧಗಳು, ಕೋಟೆಗಳು ಮುಂತಾದವುಗಳ ಮಾದರಿಗಳು.

೧ ಆದಿಯಿಂದ ಪ್ರಾರಂಭಿಸಿ ಈಗಿನವರೆಗೂ ದೇಶದ ಚರಿತ್ರೆಯನ್ನು ಕ್ರಮವಾಗಿ ತಿಳಿಸುತ ಬರುವುದು. ಇದರಿಂದಲೇ ಬಹು ಕ್ರಮೇಣ ಈಗಿನ ಸ್ಥಿತಿಗೆ ಹೇಗೆ ಬಂತೆಂಬುದು ಸ್ಪಷ್ಟವಾಗುವುದು.

೨ ಈಗ ದೇಶವಿರುವ ಸ್ಥಿತಿಯನ್ನು ತಿಳಿಸಿ ಅನಂತರದಲ್ಲಿ ಹಿಂದೆಹಿಂದೆ ದೇಶವು ಇದ್ದ ಸ್ಥಿತಿಯನ್ನು ತಿಳಿಸುತ ಹೋಗುವುದು. ಕೊನೆಗೆ ದೇಶವು ಆದಿಯಲ್ಲಿದ್ದ ಸ್ಥಿತಿಯನ್ನು ತಿಳಿಸುವುದು.

ಪುಸ್ತಕ ಬರೆಯುವವರೆಲ್ಲ ಮೊದಲನೇಕ್ರಮವನ್ನನುಸರಿಸಿಯೇ ಬರೆದಿರುವರು. ಅದೇ ಸ್ವಾಭಾವಿಕವಾದ ಮಾರ್ಗ. ಆದರೆ ಚಿಕ್ಕಂದಿನಲ್ಲಿ ದೇಶದ ಮೊದಲಿನ ಸ್ಥಿತಿಯನ್ನು ತಿಳಿಸುವುದಕ್ಕೆ ಪ್ರಯತ್ನಪಟ್ಟರೆ ಬಾಲಕರಿಗೆ ಪಾಠದಲ್ಲಿ ಹೆಚ್ಚಾಗಿ ಆದರವಿರುವುದಿಲ್ಲವೆಂದು ಎರಡನೇಕ್ರಮವನ್ನು ಅನುಸರಿಸುವುದು ಒಳ್ಳೆಯದೆಂದು ಕೆಲವರು ಹೇಳುವರು. ಈಗಿನ ಸ್ಥಿತಿಯು ಬಾಲಕರಿಗೆ ಸ್ವಲ್ಪಮಟ್ಟಿಗೆ ಪರಿಚಿತವಾಗಿರುವುದರಿಂದಲೂ ಸನ್ನಿಹಿತವಾಗಿರುವುದರಿಂದಲೂ, ಅವನ್ನೇ ಮೊದಲು ತಿಳಿಸಿದರೆ, ಅದರಲ್ಲಿ ಬಾಲಕರಿಗೆ ಅಭಿರುಚಿ ಹೆಚ್ಚುವುದು. ಇವೆರಡುಕ್ರಮಗಳಲ್ಲಿ ಯಾವುದೊಂದನ್ನೂ ಪೂರ್ತಿಯಾಗಿ ಅನುಸರಿಸದೆ ಎರಡನ್ನು ಬೆರಕೆಮಾಡಿಕೊಂಡು ಚರಿತ್ರೆಯನ್ನು ಬೋಧಿಸುವುದು ಒಳ್ಳೆಯದಾಗಿ ತೋರುತ್ತೆ. ಅಂದರೆ ಮೊದಲು ದೇಶವ ಈಗಿನ ಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಬಾಲಕರಿಗೆ ಹೇಳಿ, ಅದರಿಂದ ಅವರಿಗೆ ದೊರೆ, ರಾಜ್ಯ, ರಾಜ್ಯಭಾರ ಕ್ರಮ ಮುಂತಾದ ವಿಷಯಗಳನ್ನು ಸ್ಪಷ್ಟಪಡಿಸಿ ಅನಂತರದಲ್ಲಿ ಆದಿಯಿಂದ ಪ್ರಾರಂಭಿಸಿ ದೇಶವೃದ್ಧಿಕ್ರಮವನ್ನು ಪುಸ್ತಕಗಳಲ್ಲಿರುವಂತೆ ತಿಳಿಸುತ ಬರುವುದು. ಮೊದಲು ಸ್ವದೇಶವ ಚರಿತ್ರೆಯನ್ನೇ ಪಾಠ ಹೇಳಬೇಕೆಂಬುದು ಸ್ಪಷ್ಟವಾಗಿದೆ

ಈವಿಧವಾಗಿ ಚರಿತ್ರೆಯನ್ನು ಬೋಧಿಸುವ ಕ್ರಮವನ್ನು ಮೂರು ಭಾಗವಿಂಗಡಿಸಿಕೊಂಡು ಮುಂದೆ ಬರೆಯುವೆನು.

(i) ಮೊದಲು ಬಾಲಕರು ಪುಸ್ತಕಗಳನ್ನು ಉಪಯೋಗಿಸಬೇಕಾದುದಿಲ್ಲ. ಉಪಾಧ್ಯಾಯರು ತಾವು ಪಾಠದ ವಿಷಯವನ್ನುಕುರಿತು ಆಲೋಚಿಸಿಕೊಂಡು ಬಂದಿದ್ದು, ಬಾಲಕರಿಗೆ ಆ ವಿಷಯವನ್ನು ವಾಚನಿಕ ಬೋಧನೆಯು ಕ್ರಮದಿಂದ ತಿಳಿಸಬೇಕು. ವಿಷಯಗಳು ಸುಲಭವಾದವುಗಳಾಗಿರಬೇಕು. ಇದಕ್ಕಾಗಿ ಉಪಾಧ್ಯಾಯರು ಈ ಮುಂದೆ ಹೇಳುವಂತೆ ಪಾಠ ಹೇಳುವುದು ಒಳ್ಳೆಯದು.

ಪ್ರಾಚೀನ ಪಂಡಿತರು ಕೆಲವರು ಇದರ ವಿಚಾರದಲ್ಲಿ ಪ್ರವರ್ತಿಸಿ ತಮ್ಮ ಅಭಿವ್ಯಾಯಗಳನ್ನು ಪ್ರಚುರಗೊಳಿಸಿ ಲೋಕದಲ್ಲಿ ಅದು ಶಾಶ್ವತವಾಗಿ ನಿಲ್ಲಿಸುವದಕ್ಕೋಸ್ಕರಲೂ, ದೇಶಾಂತರದಲ್ಲಿ ಪ್ರಸಿದ್ಧಿಪಡಿಸುವದಕ್ಕೋಸ್ಕರಲೂ, ಕಾಲದೇಶಭೇದಗಳಿಂದ ಸಂಸ್ಕೃತಕ್ಕೆ ಮಾತ್ರ ಅನೇಕ ಲಿಪಿಗಳನ್ನು ಕಲ್ಪಿಸಿ ಅಯಾಯ ರೇಖೆಗಳಿಗೆ ಅಕಾರಾದಿ ವರ್ಣಗಳ ಹೆಸರನ್ನೇ ಇಟ್ಟು ವ್ಯವಹರಿಸುತ್ತಾ ಬಂದರು. ಹೀಗೆಯೇ ಇನ್ನೂ ಕೆಲವು ದೇಶ ಭಾಷಾವಿಶಾರದರು, ತಮ್ಮ ತಮ್ಮ ಭಾಷೆಗಳಿಗೂ ಸರಿಯಾದ ಲಿಪಿಯನ್ನು ಕಲ್ಪಿಸಿ ಕೊಂಡರು. ಆದರೆ ಎಲ್ಲಾ ಭಾಷೆಗಳಲ್ಲೂ ವರ್ಣಗಳ ಉಚ್ಚಾರಣೆಯು ಸ್ವಲ್ಪ ಹೆಚ್ಚು ಕಡಮೆಯಾಗಿ ಒಂದೇವಿಧವಾಗಿದ್ದರೂ ವರ್ಣಗಳ ಸಂಖ್ಯೆಗಳು ಮಾತ್ರ ಬಹಳ ಹೆಚ್ಚು ಕಡಮೆಯಾಗಿರುವವು. ಹ್ಯಾಗಂದರೆ :—

ಸಂಸ್ಕೃತದಲ್ಲಿ ೯ ಸ್ವರಗಳು, ೩೩ ವ್ಯಂಜನಗಳು, ಎಂದು ಸಾಮಾನ್ಯವಾಗಿ ೪೦ ವರ್ಣಗಳಿರುವವು. ಅನುಸ್ವಾರವು ಮಕಾರ ನಕಾರಗಳ ಸ್ಥಾನಗಳಲ್ಲೂ, ವಿಸರ್ಗವು ರೇಫಸ್ಥಾನದಲ್ಲೂ ಬರುವದರಿಂದ ಇವುಗಳನ್ನು ವರ್ಣಾಂತರಗಳೆಂದು ಭಾವಿಸಕೂಡದು. ಹೀಗೆಯೇ ಸ್ವರಗಳಲ್ಲಿ ಉಚ್ಚಾರಣಕಾಲಭೇದದಿಂದಲೂ, ಗುಣಭೇದದಿಂದಲೂ ಅನೇಕ ಭೇದಗಳಿರುವವು. ಆದರೂ ಸ್ವರಗಳ ಜಾತಿಯು ಒಂಬತ್ತೇ ವಿಧವೆಂದು ತಿಳಿಯಬೇಕು. ಕನ್ನಡದಲ್ಲಿ ಸಂಸ್ಕೃತದಂತೆ ಸ್ವರಗಳೆಲ್ಲಾ ಉಂಟು. ಆದರೆ ಉದಾತ್ತಾದಿ ಭೇದಗಳು ಮಾತ್ರ ಇಲ್ಲ. ವ್ಯಂಜನಗಳಲ್ಲಿ ಮಹಾಪ್ರಾಣಾಕ್ಷರಗಳು ಇಲ್ಲ. ಹೀಗೆ ತಮಿಳುಭಾಷೆಯಲ್ಲಿ ವರ್ಗದಲ್ಲಿ ಪ್ರಥಮ ಪಂಚಮ ವರ್ಣಗಳು ಮಾತ್ರ ವಿರುವವು. ಹೀಗೆಯೇ ಇನ್ನೂ ಕೆಲವು ದೇಶಭಾಷೆಗಳಲ್ಲಿ ಸಂಸ್ಕೃತದಲ್ಲಿರುವ ವರ್ಣಮಾಲೆಗಳಿಗಿಂತಲೂ ಉಚ್ಚಾರಣೆಯಲ್ಲೂ ಸಂಖ್ಯೆಯಲ್ಲೂ ಹೆಚ್ಚು ಕಡಮೆಯಾಗಿ ಅಯಾಯ ಭಾಷೆಗೆ ಅನುಕೂಲಿಸುವಂತೆ ವರ್ಣಮಾಲೆಗಳನ್ನು ಕಲ್ಪಿಸಿರುವರು. ಆದರೂ ಯಾವಯಾವ ಭಾಷೆಯಲ್ಲಿ ಯಾರು ಯಾರು ಹ್ಯಾಗೆ ಹ್ಯಾಗೆ ವರ್ಣಮಾಲೆಗಳನ್ನು ಕಲ್ಪಿಸಿದ್ದರೂ ಉಚ್ಚಾರಣೆಯಲ್ಲಿ ಸಂಸ್ಕೃತ ವ್ಯಾಕರಣ ಶಾಸ್ತ್ರಜ್ಞರು ಕಲ್ಪಿಸಿರುವ ವರ್ಣೋಚ್ಚಾರಣೆಗೆ ಪ್ರಾಯಶಃ ಬಹು ವ್ಯತ್ಯಾಸಬರಲಾರದು. ಇವುಗಳು ಹುಟ್ಟುವ ಸ್ಥಾನಗಳಲ್ಲೂ ವ್ಯತ್ಯಾಸಬರುವದಿಲ್ಲ. ಮತ್ತು ವರ್ಣಗಳನ್ನುಚ್ಚರಿಸಬೇಕಾದರೆ ಮೊದಲು ಶರೀರದಲ್ಲಿ ಕೆಲವು ಪ್ರಯತ್ನಗಳು ನಡೆಯುವುವೆಂದು ಪಾಣಿನೀಯ ಶಿಕ್ಷೆಯಲ್ಲಿ ಹೇಳಿರುವ್ವದ್ದು. ಅದನ್ನು ವ್ಯಾಕರಣದಲ್ಲಿ ಆಭ್ಯಂತರಯತ್ನ, ಬಾಹ್ಯಯತ್ನ

೩. ಭೂಪಠಗಳು, ಯುದ್ಧಕ್ರಮ ಮುಂತಾದ ವಿಷಯವನ್ನು ತಿಳಿಸುವ ಪಠಗಳು.

೪ ವಂಶವೃಕ್ಷ, ಇಸವಿಗಳು, ಇವುಗಳ ಪಟ್ಟಿ ಇವನ್ನು ಪಾಠಶಾಲೆಯಲ್ಲಿ ಎಲ್ಲರೂ ನೋಡುವಂಥ ಸ್ಥಳದಲ್ಲಿ ತಗುಲುಹಾಕಿದ್ದರೆ ಒಳ್ಳೇದು. ಬಾಲಕರು ಪದೇ ಪದೇ ಅವುಗಳನ್ನು ನೋಡುವುದರಿಂದ ಅವರಿಗೆ ಅಂಶಗಳು ಚೆನ್ನಾಗಿ ಜ್ಞಾಪಕನಿಲ್ಲುವವು.

ಎಂ. ಹಿರಿಯಣ್ಣ.

ವ್ಯಾಕರಣದ ಪ್ರಯೋಜನ.

ಲೋಕದಲ್ಲಿ ಮನುಷ್ಯರಿಗೆ, ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಇತರರಿಗೆ ತಿಳಿಸುವುದಕ್ಕೂ, ಇತರರ ಅಭಿಪ್ರಾಯವನ್ನು ತಾವು ತಿಳಿದುಕೊಳ್ಳುವುದಕ್ಕೂ ಶಬ್ದಗಳೇ ಮುಖ್ಯಸಾಧಕನಾಗಿರುವುವು. ಆ ಶಬ್ದಗಳು ವಾಯುವಿನ ಸಹಾಯದಿಂದ ಹುಟ್ಟುವುವು. ಇವು ವರ್ಣಾತ್ಮಕಗಳೆಂದೂ, ಧ್ವನ್ಯಾತ್ಮಕಗಳೆಂದೂ ಎರಡು ವಿಧನಾಗಿರುವುವು. ಇವುಗಳಲ್ಲಿ ವರ್ಣಾತ್ಮಕಗಳೆಂಬ ಶಬ್ದವು ನಮ್ಮ ಶರೀರದಲ್ಲಿರುವ ವಾಯುವಿನ ಸಹಾಯದಿಂದ ಕಂಠ, ತಾಲು, ಶಿರಸ್ಸು, ದಂತ, ಓಷ್ಠ, ಜಿಹ್ವೆ, ನಾಸಿಕೆ, ಮೊದಲಾದ ಸ್ಥಾನಗಳಲ್ಲಿ ಹುಟ್ಟುವುದು. ಇದನ್ನೇ ವೈಯಾಕರಣರು ಅಕ್ಷರವೆಂದು ವ್ಯವಹರಿಸುವರು. ಭೇರಿ, ಮೇಘ, ಮೃಗ, ಮೊದಲಾದವುಗಳಿಂದುಂಟಾದ ಶಬ್ದಗಳನ್ನೇ ಕೇವಲ ಧ್ವನ್ಯಾತ್ಮಕವೆಂದು ವ್ಯವಹರಿಸುತ್ತಾರೆ. ಈ ಧ್ವನ್ಯಾತ್ಮಕ ಶಬ್ದಗಳಲ್ಲಿ ಪ್ರತಿಯೊಂದನ್ನೂ ವಿಭಾಗಿಸಿ ತಿಳಿದುಕೊಳ್ಳುವುದು ಲೋಕವ್ಯವಹಾರಕ್ಕೂ, ಶಾಸ್ತ್ರವ್ಯವಹಾರಕ್ಕೂ ಅತ್ಯಂತ ಉಪಯುಕ್ತವಲ್ಲದೆ ಇರುವುದರಿಂದಲೂ, ಅಂಥಾ ಶಬ್ದಗಳು ಬಹುವಿಧನಾಗಿರುವುದರಿಂದ ಬಾಲಕರಿಗೆ ಬೋಧಿಸಲಸಾಧ್ಯವಾದುದರಿಂದಲೂ, ಇವುಗಳ ವಿಷಯವನ್ನು ಚರ್ಚಿಸುವದು ಅನಾವಶ್ಯಕವು. ವರ್ಣಾತ್ಮಕ ಶಬ್ದಗಳು ಒಂದು ನಿಯಮಕ್ಕೆ ಒಳಪಡುವುದರಿಂದ, ಎಲ್ಲಾ ಗ್ರಂಥಗಳಲ್ಲೂ ದೇಶಭಾಷೆಗಳಲ್ಲೂ ಪ್ರಸಿದ್ಧನಾಗಿಯೂ ವ್ಯವಹರಿಸುವುದಕ್ಕುಪಯುಕ್ತವಾಗಿಯೂ ಇರುವುದರಿಂದಲೂ, ಎಲ್ಲರಿಗೂ ತಿಳಿಯಬೇಕಾದ್ದು ಅತ್ಯಾವಶ್ಯಕವೇಸರಿ; ಆದುದರಿಂದ ನಮ್ಮ ಪರಮ

ಗಳು ಅನೇಕ ಭೇದವುಳ್ಳವುಗಳಾಗುತ್ತವೆ. ಆದರೆ ಪ್ರಸಿದ್ಧವಾಗಿ ಎಲ್ಲರೂ ಸಾಮಾನ್ಯವಾಗಿ ಅ, ಇ, ಉ, ಋ, ಎ, ಒ ವರ್ಣಗಳಲ್ಲಿ ಹ್ರಸ್ವದೀರ್ಘಪ್ಲುತಭೇದಗಳಿಂದ ೧೮ ವರ್ಣದಲ್ಲಿ ದೀರ್ಘವಿಲ್ಲದ್ದರಿಂದ ಹ್ರಸ್ವಪ್ಲುತಭೇದಗಳಿಂದ ಐ ಔ ವರ್ಣಗಳಲ್ಲಿ ದೀರ್ಘಪ್ಲುತಗಳಿಂದ ನಾಲ್ಕೂ ಒಟ್ಟು ಸ್ವರಗಳು ೬೪ ವ್ಯಂಜನಗಳು ೩೬. ಯೋಗವಾಹಗಳು ೪ ಅಂತು ೬೦, ಒಟ್ಟು ಮೂಲವರ್ಣಗಳು ೬೪ ಉಪಯೋಗದಲ್ಲವೆ. ಕನ್ನಡಭಾಷೆಯುಲ್ಲಿ ರಳ, ಕುಳ, ಕ್ಷಳ ವೆಂದು ಲಕಾರವನ್ನೇ ಸ್ಥಾನಭೇದದಿಂದ ವ್ಯವಹರಿಸುವರಾದ್ದರಿಂದ ಇದು ವರ್ಣಾಂತರವಲ್ಲ

ಸಂಯುಕ್ತವರ್ಣಗಳು ಅನೇಕವಿರುವದರಿಂದ ಪರಿಗಣಿಸಲು ಅಸಾಧ್ಯವೆಂದು ಎಲ್ಲಾ ವೈಯಾಕರಣರೂ ಇದರ ವಿಚಾರವನ್ನು ಬಿಟ್ಟಿರುವರು.

ಇಂಥಾ ವರ್ಣಗಳಿಂದ ಕೂಡಿರುವದೇ ಶಬ್ದಗಳೆಂದು ಶಾಸ್ತ್ರದಲ್ಲಿ ವ್ಯವಹರಿಸಲ್ಪಡುವದು. ಇಂಥಾ ಶಬ್ದಗಳು ಬಹು ಕಾಲದಿಂದಲೂ ಲೋಕವ್ಯವಹಾರಕ್ಕೆ ಬಂದು ಸಂಸ್ಕೃತ, ಪ್ರಾಕೃತ, ಕರ್ಣಾಟಕ, ಆಂಧ್ರ, ಮಗಧ, ಮಾಳವ, ದ್ರವಿಡ, ಕೇರಳ, ವೆಂದಲಾದ ಅನೇಕ ದೇಶಭಾಷೆಗಳಲ್ಲಿ ಪ್ರಸಿದ್ಧವಾಗಿರುವವು. ಆದುದರಿಂದ ಎಲ್ಲರಿಗೂ ವ್ಯವಹರಿಸುವದಕ್ಕಾಗಿ ಶಬ್ದಗಳನ್ನೂ ಅರ್ಥಗಳನ್ನೂ ತಿಳಿದುಕೊಳ್ಳುವದು ಅತ್ಯಾವಶ್ಯಕವಾಗಿರುವುದು. ಆದರೆ ಲೋಕದಲ್ಲಿ ಶಬ್ದಗಳು ಇಷ್ಟೇ ಇರುವವೆಂದು ನಿರ್ಧರಿಸಿ ಬಾಲಕರಿಗೆ ಪ್ರತಿಯೊಂದು ಶಬ್ದವನ್ನೂ ಹೇಳಿತಿಳಿಸುವದು ಯಾರಿಂದಲೂ ಆಗಲಾದು, ಎಂದು ಪರಮದಯಾಳುಗಳಾದ ಕೆಲವರು ಪ್ರಾಚೀನ ಸಂಸ್ಕೃತಪಂಡಿತರು ವೇದಪುರಾಣಸ್ಮೃತ್ಯಾದಿಗಳಲ್ಲಿರುವ ಶಬ್ದಗಳನ್ನು ಚನ್ನಾಗಿ ಪರಿಶೀಲಿಸಿ ಬೇರೆಬೇರೆ ಜಾತಿಗಳಾಗಿ ವಿಂಗಡಿಸಿಕೊಂಡು ಅದಕ್ಕೆ ತಕ್ಕಂತೆ ಸೂತ್ರಗಳನ್ನು ಕಲ್ಪಿಸಿ ಇನ್ನೂ ಕೆಲವು ಸಾಮಾನ್ಯ ಸೂತ್ರಗಳಿಗೆ ವಿಷಯವಾಗದೆ ಒಂದೊಂದು ಶಬ್ದ ಒಂದೊಂದು ಜಾತಿಯಾಗಿದ್ದುದನ್ನು ನೋಡಿ ಗಣರೂಪವಾಗಿಯೂ ಅಂಥಾ ವಿಜಾತಿಯವಾದ ಶಬ್ದಗಳು ಒಂದೆರಡೇ ಇದ್ದರೆ ನಿಪಾತನರೂಪವಾಗಿಯೂ ಹೇಳಿ, ವ್ಯಾಕರಣವನ್ನು ಬರೆದಿಟ್ಟರು. ಆದುದರಿಂದಲೆ ಆರ್ಯರ ಭಾಷೆಗೆ, ವ್ಯಾಕರಣದಿಂದ ಸಂಸ್ಕರಿಸಲ್ಪಡುವದರಿಂದ ಸಂಸ್ಕೃತಭಾಷೆಯೆಂದು ಹೆಸರು ಬಂದಿರುವುದು, ಮೊದಲು ವ್ಯಾಕರಣವನ್ನು ಬರೆದವರು ತಮ್ಮ ಕಾಲದಲ್ಲಿ ಇದ್ದ ಶಬ್ದಗಳಿಗೆ ಮಾತ್ರ ವ್ಯಾಕರಣವನ್ನು ಬರೆದರೇ ಹೊರ್ತು ಮಾತನಾಡುವಾಗ ದೇಶಕಾಲಭೇದಗಳಿಂದ ಸ್ವಭಾವವಾಗಿ ವ್ಯತ್ಯಾಸವಾಗುವ ಶಬ್ದಗಳಿಗೆ ವಾಕರಣವನ್ನು ಬರೆಯು

ಎಂದೆನ್ನುವರು. ಅಭ್ಯಂತರಯತ್ನವೆಂದರೆ ವರ್ಣೋಚ್ಚಾರಣೆಗೆ ಮುಂಚೆ ಶರೀರದೊಳಗೆ ನಡೆಯುವ ವರ್ಣೋಚ್ಚಾರಣಾನುಕೂಲವ್ಯಾಪಾರವು. ಉಚ್ಚಾರಣಕಾಲದಲ್ಲಿ ತಾಲ್ವಾದಿಗಳ ಚಲನೆಯುಂದುಂಟಾಗುವದೇ ಬಾಹ್ಯಯತ್ನವು. ಇಂಥಾ ಪ್ರಯತ್ನಗಳಿಂದ ಕಾಲು, ಕಂಠ ಜಿಹ್ವಾ, ದಂತ ಓಷ್ಠ, ನಾಸಿಕ, ಮೊದಲಾದ ಸ್ಥಾನಗಳಲ್ಲಿ ನಾಯುವಿನ ಸ್ಪರ್ಶದಿಂದ ಆಯಾಯ ವರ್ಣಗಳು ಅಭಿವ್ಯಕ್ತವಾಗುವವು. ಹೀಗೆ ಅಭಿವ್ಯಕ್ತವಾಗುವ ವರ್ಣಗಳು— ಮೂಲವರ್ಣಗಳು, ಸಂಯುಕ್ತವರ್ಣಗಳು ಎಂದು ಎರಡುವಿಧವು. ಅವುಗಳಲಿ ಮೂಲವರ್ಣಗಳು ಸಾಮಾನ್ಯವಾಗಿ ಸ್ವರವೆಂತಲೂ, ವ್ಯಂಜನವೆಂತಲೂ ಯೋಗವಾಹಗಳೆಂತಲೂ ಮೂರುವಿಧವಾಗಿರುವವು. ಇವುಗಳಲ್ಲಿ ಸ್ವರಗಳು, ಅ ಇ, ಉ, ಋ, ಳ ಎಂಬ ಐದು ಹ್ರಸ್ವಗಳೂ, ಎ, ಐ, ಓ, ಔ, ಎಂಬ ನಾಲ್ಕು ಸಂಧ್ಯಕ್ಷರಗಳೂ ಎಂದು ಸಂಕ್ಷೇಪವಾಗಿ ಒಂಬತ್ತು ಇರುವವು. ಕೆಲವರು ಮೊದಲು ಐದು ಸ್ವರಗಳಿಗೆ ಹ್ರಸ್ವ, ದೀರ್ಘ ಭೇದಗಳಿಂದ ಹದಿನಾಲ್ಕು ಸ್ವರಗಳೆಂದು ಹೇಳುವರು. ಇನ್ನೂ ಕೆಲವರು ಮೇಲೆಹೇಳಿದ ಒಂಬತ್ತು ಸ್ವರಗಳಿಗೂ ಹ್ರಸ್ವದೀರ್ಘಪ್ಲುತ ಭೇದಗಳನ್ನು ಅಂಗೀಕರಿಸಿ ಇಪ್ಪತ್ತೇಳು ಸ್ವರಗಳೆಂದು ಹೇಳುವರು. ಮತ್ತೆ ಕೆಲವರು ಉದಾತ್ತಾನುದಾತ್ತಸ್ವರಿತಭೇದಗಳಿಂದಲೂ, ಅನುನಾಸಿಕಾನನುನಾಸಿಕಭೇದಗಳಿಂದಲೂ ನೂರರವತ್ತೆರಡು ಭೇದವುಳ್ಳವುಗಳೆಂದು ಹೇಳುತ್ತಾರೆ. ಆದರೆ ಈ ಭೇದಗಳು ವೇದಗಳಲ್ಲೂ, ಮಂತ್ರಶಾಸ್ತ್ರದಲ್ಲೂ ಪ್ರಸಿದ್ಧವಾಗಿರುವದೇ ಹೊರ್ತು ಲೌಕಿಕಭಾಷಾದಿಗಳಲ್ಲಿ ಪ್ರಸಿದ್ಧವಾಗಿಲ್ಲ. ವ್ಯಂಜನಗಳಾದರೋ ಇಪ್ಪತ್ತೈದು ವರ್ಗಾಕ್ಷರಗಳೆಂದೂ, ಎಂಟು ಅವರ್ಗಾಕ್ಷರಗಳೆಂದೂ ಮೂವತ್ತಮೂರಿರುವವು. ಅವುಗಳಲ್ಲಿ ಯ, ವ, ಲ, ಗಳು ಮಾತ್ರ ಅನುನಾಸಿಕಗಳೆಂತಲೂ, ಅನನುನಾಸಿಕಗಳೆಂತಲೂ ಎರಡುವಿಧವಾಗಿರುವವು. ಯೋಗವಾಹಗಳು, ಅನುಸ್ವಾರ, ವಿಸರ್ಗ ಜಿಹ್ವಾಮೂಲೀಯ, ಉಪಧ್ಮಾನೀಯಗಳೆಂದು ನಾಲ್ಕು ಇರುವವು. ಎಲ್ಲಾ ಸೇರಿ ಪ್ರಥಮಪಕ್ಷದಲ್ಲಿ ನಾಲ್ವತ್ತೊಂಬತ್ತೂ, ದ್ವಿತೀಯಪಕ್ಷದಲ್ಲಿ ಐವತ್ತನಾಲ್ಕೂ, ಮೂರನೆಯ ಪಕ್ಷದಲ್ಲಿ ಅರವತ್ತೇಳೂ, ಹೀಗೆ ಮತಭೇದಗಳಿಂದ ಮೂಲವರ್ಣ

(೧) ವರ್ಣಾಂತರಗಳ ಸಹಾಯವಿಲ್ಲದೆ ಬೇರೆ ಬೇರೆ ಉಚ್ಚರಿಸುವ ವರ್ಣಗಳು (ಉ) ಅ, ಇ, ಉ, ಕ್ಖ್, ಗ್ ಇತ್ಯಾದಿ, (೨) ಇತರ ವರ್ಣಗಳನ್ನು ಸೇರಿಸಿ ಉಚ್ಚರಿಸುವ ವರ್ಣಗಳು(ಉ) ಕ, ಗ, ಗಿ, ಗು, ಪ್ತ, ಸ್ಕ, ಇತ್ಯಾದಿ

ಯಾಗಿದ್ದರೂ ಎಲ್ಲಾ ವ್ಯಾಕರಣಜ್ಞರೂ ಸಾಧಿಸುವ ಶಬ್ದಗಳು ಒಂದೇ ಜಾತಿಯಾಗಿರುವುವು. ಈ ವಿಷಯದಲ್ಲಿ ಬೊಪ್ಪದೇವನೆಂಬ ವೈಯಾಕರಣನು " ಉಪೇಯಪ್ರತಿಪತ್ತ್ಯರ್ಥಂಉಪಾಯಾಶ್ರಿತ್ಯವ್ಯವಸ್ಥಿತಾಃ " ಎಂದು ಹೇಳಿರುವನು. ಆದುದರಿಂದ ಸಾಧು ಶಬ್ದಗಳನ್ನು ತಿಳಿದುಕೊಳ್ಳುವದಕ್ಕೆ ಪ್ರಾಚೀನರು ಒಂದೇವಿಧವಾದ ಉಪಾಯವನ್ನು ಹೇಳದಿದ್ದರೂ ಉದಾಹರಣೆಗಳನ್ನು ವ್ಯತ್ಯಾಸವಾಡದೆ ಬಿಟ್ಟ ಶಬ್ದಗಳನ್ನು ಮಾತ್ರ ಸೇರಿಸಿ ವ್ಯಾಕರಣವನ್ನು ಬರೆಯುತ್ತಾ ಬಂದಿದಾರೆ.

ಹೀಗೆಯೇ ಭಾಷೆಗಳಿಗೂ ವ್ಯಾಕರಣವನ್ನು ಬರೆಯಬೇಕೆಂದು ಕೆಲವು ಪಂಡಿತರು ಸಂಸ್ಕೃತವ್ಯಾಕರಣಮಾರ್ಗವನ್ನೇ ಅನುಸರಿಸಿ ವ್ಯಾಕರಣಗಳನ್ನು ಬರೆಯುತ್ತಾ ಬಂದರು. ಭಾಷೆಗಳು ಸಂಸ್ಕೃತದಂತೆ ಒಂದೇರೀತಿಯಾಗಿ ನಿಲ್ಲದೆ ಪ್ರತಿಕ್ಷಣದಲ್ಲೂ ದೇಶಾಂತರದವರ ಮೇಳನದಿಂದಲೂ, ಜನಗಳ ಸ್ವಭಾವದಿಂದಲೂ ವ್ಯತ್ಯಾಸವನ್ನು ಹೊಂದುತ್ತಿರುವದರಿಂದ ಭಾಷಾವ್ಯಾಕರಣಗಳನ್ನೂ ಒಂದು ಕಟ್ಟಿಗೆ ನಿಲ್ಲಿಸಿ ಪ್ರಯೋಗಗಳನ್ನು ನಿರೋಧಿಸವದಕ್ಕೆ ಆಗದೆಹೋಯಿತು. ಒಂದುವೇಳೆ ಹಾಗೆ ನಾವು ನಿರ್ಬಂಧಿಸಿದರೂ ಭಾಷೆಯು ಸ್ವಭಾವನಾಗಿ ವ್ಯತ್ಯಾಸವಾಗದೆ ಇರಲಾರದು. ಆದುದರಿಂದ ಭಾಷೆಹುಟ್ಟುವಹಾಗೆಲ್ಲಾ ಒಂದು ವ್ಯವಸ್ಥಿತನಾದ ನಿಯಮಗಳನ್ನು ಕಲ್ಪಿಸಿ ಕವಿಗಳು ಸ್ವೇಚ್ಛೆಯಾಗಿ ಪ್ರಯೋಗಿಸದೆ ಒಂದೇರೀತಿಯಾಗಿ ಪ್ರಯೋಗಿಸಿದರೆ ಬಾಲಕರಿಗೆ ಅನುಕೂಲವಾಗುವುದು. ಇಲ್ಲದಿದ್ದರೆ ವ್ಯಾಕರಣವು ಏನೂ ಉಪಯೋಗಕ್ಕೆ ಬರುವದಿಲ್ಲ. ಬಾಲಕರಿಗೆ ಸರಿಯಾದ ಶಬ್ದಜ್ಞಾನವೂ ಉಂಟಾಗುವದಿಲ್ಲ. ಈ ಅಭಿಪ್ರಾಯದಿಂದಲೇ ನಮ್ಮ ಪ್ರಾಚೀನರು ವ್ಯಾಕರಣಗಳನ್ನು ಬರೆದು ಅವುಗಳಿಂದ ನಿಷ್ಪನ್ನವಾಗಿಯೂ ಸರ್ವರಿಂದಲೂ ವಾಡಿಕೆಯಾಗಿ ಪ್ರಯೋಗಿಸತಕ್ಕದ್ದಾಗಿಯೂ ಇರುವ ಶಬ್ದಗಳನ್ನೇ ಉಪಯೋಗಿಸುತ್ತಾ ಬರಬೇಕೆಂದು ಅಭಿಪ್ರಾಯಪಡುವರು. ಕೆಲವು ಈಗಿನ ಪಂಡಿತರು ಪ್ರಾಚೀನರ ಅಭಿಪ್ರಾಯವನ್ನು ಚನ್ನಾಗಿ ಪರಿಶೀಲಿಸದೆ ತಾವೇ ಯೇನೋ ಒಂದು ಕಾರಣವನ್ನು ಕಲ್ಪಿಸಿಕೊಂಡು, ವ್ಯಾಕರಣಕ್ಕೆ ಈ ಶಬ್ದವು ವಿರುದ್ಧವಾದುದು, ಇದು ಸರಿಯಾಗಿರುವುದು, ಎಂದು ಹಠದಿಂದ ಲೋಕದಲ್ಲಿ ಬಳಕೆಯಿಲ್ಲದ ಶಬ್ದಗಳನ್ನೇ ಪ್ರಯೋಗಿಸುತ್ತಲೂ ಕಠಿನವಾಗಿರುವ ಶಬ್ದಗಳನ್ನುಪಯೋಗಿಸುವದು ತಮ್ಮ ಪಾಂಡಿತ್ಯಕ್ಕೆ ಗೌರವಾಸಾಧಕವೆಂತಲೂ, ತಿಳಿದು ಬಾಲಕರಿಗೆ ಅತ್ಯಂತ ಶ್ರಮವನ್ನುಂಟುಮಾಡುತ್ತಿರುವರು ಆದರೆ ವ್ಯಾಕರಣವನ್ನು ಮಾಡಿದ ಪ್ರಾಚೀನಪಂಡಿತರಿಗೆ

ಲಿಲ್ಲ. ಈ ನ್ಯೂನತೆಯನ್ನು ನೋಡಿಯೇ ಪ್ರಾಚೀನವ್ಯಾಕರಣಕ್ಕೆ ವಿಷಯವಾಗದೆ ವ್ಯವಹಾರದಲ್ಲಿ ಮಾತ್ರ ಸೇರಿರುವ ಶಬ್ದಗಳಿಗೂ ಸಂಗ್ರಹಬಗುವಂತೆ ಪಾಣಿನಿ ಮೊದಲಾದ ವ್ಯಾಕರಣ ಶಾಸ್ತ್ರಜ್ಞರು ಹೊಸಹೊಸದಾಗಿ ಸೂತ್ರಗಳನ್ನು ಕಲ್ಪಿಸಿ ಹೊಸಶಬ್ದಗಳನ್ನು ಉಪಯೋಗಿಸುವದಕ್ಕೂ ದಾರಿಯನ್ನು ತೋರಿಸಿರುವರು. ಆದರೆ ಈ ಸಂಸ್ಕೃತಭಾಷೆಯು ಗ್ರಂಥಗಳಲ್ಲಿ ಮಾತ್ರ ನಿಂತು ಮಾತನಾಡುವದಕ್ಕೆ ಬಾರದ್ದರಿಂದ ದೇಶಭಾಷೆಗಳಂತೆ ವ್ಯತ್ಯಾಸವಾಗದೆ ಇದ್ದಂತೆಯೇ ಇರುವ್ದದು ಆದುದರಿಂದಲೇ ಹೊಸಹೊಸದಾಗಿ ಸಂಸ್ಕೃತವ್ಯಾಕರಣವೂ ಈಚಿಗೆ ಹುಟ್ಟಲಿಲ್ಲ.

ವ್ಯಾಕರಣವೆಂದರೆ ಇಂಥ ಶಬ್ದಗಳು ಸಾಧುಗಳು, ಇಂಥವುಗಳು ಅಸಾಧುಗಳು ಎಂದು ಬೋಧಿಸುವ ಗ್ರಂಥವು. ಇವುಗಳಲ್ಲಿ ಸಾಧುಗಳೆಂಬುವುದು ದೊಡ್ಡವರಿಂದ ಪ್ರಚುರವಾಗಿ ಉಪಯೋಗಿಸಲ್ಪಡುವ ಶಬ್ದಗಳು. ಈ ಶಬ್ದಗಳು ಲೋಕದಲ್ಲಿ ಅನಂತವಾಗಿರುವದರಿಂದ ಎಲ್ಲರಿಗೂ ಎಲ್ಲಾ ಶಬ್ದಗಳೂ ತಿಳಿಯುವುದು ಅಸಾಧ್ಯವೆಂದು ಪ್ರಯೋಗದಲ್ಲಿರುವ ಶಬ್ದಗಳಿಗೆ ಧಾತುಪ್ರತ್ಯಯಗಳನ್ನು ಕಲ್ಪಿಸಿ ಅವುಗಳ ಸಂಬಂಧದಿಂದ ಉಂಟಾಗುವ ವಿಕಾರಗಳಿಗೆ ಕಗಿಯಾದ ಆಗಮ, ಪ್ರತ್ಯಯ, ಆದೇಶಗಳೆಂದು ಮೂರು ವಿಧವಾದ ವಿಧಿಗಳನ್ನು ಕಲ್ಪಿಸಿ ಪೂರ್ವವೈಯಾಕರಣರು ವ್ಯಾಕರಣಶಾಸ್ತ್ರವನ್ನು ಬರೆದಿರುವರು. ಆದರೆ ಈ ವ್ಯಾಕರಣಶಾಸ್ತ್ರದಿಂದ ಈಗಿನ ಪ್ರಯೋಗದಲ್ಲಿರುವ ಒಂದು ಶಬ್ದವನ್ನೂ ಬಿಡದೆ ಎಲ್ಲಕ್ಕೂ ಸಾಧುತ್ವವನ್ನು ಹೇಳುವದಕ್ಕಾಗುವದಿಲ್ಲ. ಮತ್ತು ವ್ಯಾಕರಣದಲ್ಲಿ ಹೇಳಿರುವ ನಿಯಮಗಳಿಂದ ಸಿದ್ಧವಾದ ಶಬ್ದಗಳನ್ನೆಲ್ಲ ಪ್ರಯೋಗಿಸುವದಕ್ಕೂ ಆಗುವದಿಲ್ಲ. ಏಕಕ್ಕೆಂದರೆ,—

ಶಬ್ದಗಳು ಪ್ರತಿಕ್ಷಣದಲ್ಲೂ ವ್ಯವಹಾರವಶದಿಂದ ಕ್ರಮಕ್ರಮವಾಗಿ ವ್ಯತ್ಯಾಸವನ್ನು ಹೊಂದುತ್ತಿರುವುದು ಸ್ವಭಾವಸಿದ್ಧವಾದುದರಿಂದಲೂ, ಪೂರ್ವದಲ್ಲಿ ವ್ಯಾಕರಣವನ್ನು ಮಾಡಿದವರು ಲೋಕದಲ್ಲಿರುವ ಎಲ್ಲಾ ಶಬ್ದಗಳನ್ನೂ ತಿಳಿದಿದ್ದರೆಂದು ಹೇಳುವದಕ್ಕೆ ಸರಿಯಾದ ಕಾರಣವಿಲ್ಲದ್ದರಿಂದಲೂ, ಒಂದೇ ವ್ಯಾಕರಣದಿಂದ ಎಲ್ಲಾ ಶಬ್ದಗಳಿಗೂ ಸಾಧುತ್ವವನ್ನು ಹೇಳುವದಕ್ಕೆ ಆಗದೆ ಇದ್ದದ್ದರಿಂದ ಕೆಲವು ಪಂಡಿತರು ಹೊಸಹೊಸದಾಗಿ ಹುಟ್ಟುವ ಶಬ್ದಗಳಿಗೂ ಪ್ರಾಚೀನವ್ಯಾಕರಣಕಾರರು ಬಿಟ್ಟಿದ್ದ ಶಬ್ದಗಳಿಗೆ ಲಕ್ಷಣವನ್ನು ಕಲ್ಪಿಸಿ ವ್ಯಾಕರಣವನ್ನು ವಿಸ್ತರಿಸುತ್ತ ಬಂದರು. ಆದರೆ ಸಾಧುಶಬ್ದಗಳನ್ನು ಬೋಧಿಸಲು ವ್ಯಾಕರಣಗಳಲ್ಲಿ ಹೇಳಿರು ಉಪಾಯಗಳು ಬೇರೆಬೇರೆ

ಯೆಂತಲೂ, ಇದರಂತೆಯೇ ಕಾಫೀ, ಟೀ, ಹಾಲು ಮುಂತಾದವು ಬಾಯಾರಿಕೆಯನ್ನು ಡಗಿಸುತ್ತವೆಂಬುವವನ್ನೂ ಆದರೆ ಅವುಗಳು ನೀರಿನಷ್ಟು ಸುಲಭಸಾಧ್ಯವೆಂಬ ವಿಷಯವನ್ನೂ ಮನುಷ್ಯರಿಗೆ ಮಾತ್ರವಲ್ಲದೆ ಪಶುಗಳಿಗೂ ನೀರು ಅವಶ್ಯಕವೆಂಬುದನ್ನೂ ಬಾಲಕರಿಂದ ಹೇಳಿಸಬೇಕು.

2. (b) ಒಂದು ಕೊಳೇಬಟ್ಟೆಯ ಜೂರನ್ನೂ, ಒಂದು ಬಿಳೀಬಟ್ಟೆಯ ಜೂರನ್ನೂ ತೋರಿಸಿ, ಅವೆರಡಕ್ಕೂ ವ್ಯತ್ಯಾಸವೇನೆಂದು ಪ್ರಶ್ನೆಮಾಡಿ, 'ಒಂದು ಕೊಳೆಯಾಗಿದೆ; ಇನ್ನೊಂದು ಬೆಳ್ಳಗಿದೆ;' ಎಂದು ಹೇಳಿಸಬೇಕು.

(c) ನೀರು ಕೊಳೆಯಾಗುವದಕ್ಕೆ ಕಾರಣವೇನೆಂದು ಕೇಳಿ, ಬಟ್ಟೆಯಕೊಳೆ ನೀರಿಗೆ ಬಂತೆಂಬುವದನ್ನು ಹೇಳಿಸಬೇಕು. ಬಟ್ಟೆ ಮುಂತಾದ ಸಾಮಾನುಗಳಿಗೆ ಮಾರ್ದವಹನ್ನುಂಟುಮಾಡಿ, ಅವುಗಳಲ್ಲಿರುವ ಕೊಳೆಯನ್ನು ತೆಗೆಯುವ ಶಕ್ತಿ ನೀರಿಗೆ ಇದೆಯೆಂಬುವವನ್ನು ಹೇಳಿಸಬೇಕು.

3. (d) ಬೆಂಕಿಯು ಸಮೀಪದಲ್ಲಿರುವ ಪದಾರ್ಥವನ್ನು ಒಣಗಿಸುತ್ತೆಂದು ವಿವರಿಸುವದು. ಇದರಂತೆ ಬಿಸಲು ನೆಲವನ್ನೂ ಸಸ್ಯಗಳನ್ನೂ ಒಣಗಿಸುತ್ತೆಂಬುವದನ್ನು ಹೇಳಿಸಬೇಕು. ಗಿಡಗಳು ನೀರಿಲ್ಲದೆ ಬಹಳ ದಿವಸ ಬಿಸಲಿನಲ್ಲಿದ್ದರೆ, ಒಣಗಿಹೋಗುವದ್ದರಿಂದ ನೀರು ಅವಶ್ಯಕವೆಂಬವದನ್ನು ಹೇಳಿಸುವದು.

(e) ಪ್ರಾಣಿಗಳ ಪಶು ಸಸ್ಯಾದಿಗಳ ಪ್ರಯೋಜನಕ್ಕೋಸ್ಕರ ಮಳೆಯಾಗುತ್ತೆಂಬುವದನ್ನು ವ್ಯಕ್ತಪಡಿಸಬೇಕು

(c) ಬಿಳೀ ಬಟ್ಟೆಯನ್ನು ನೀರಿನಲ್ಲಿ ಅದ್ದಿದರೆ, ನೀರು ಇದ್ದಹಾಗೆ ಇರುತ್ತದೆ. ಕೊಳೆ ಒಟ್ಟೆಯನ್ನದ್ದಿದರೆ ನೀರು ಕೊಳೆಯಾಗುತ್ತೆ.

(d) ಜನಗಳು, ಮಳೆಗಾಲದಲ್ಲಿ ಒದ್ದೆ ಬಟ್ಟೆಗಳನ್ನು ಬೆಂಕಿಯ ಮುಂದೆ ಒಣಗಿಸುವದನ್ನು ಸೂಚಿಸಬೇಕು.

(e) ತೋಟಗಾರರು ಬೇಸಗೆಯಲ್ಲಿ ಗಿಡಗಳಿಗೆ ನೀರುಹಾಕುವದನ್ನು ಸೂಚಿಸುವದು.

ಎಂದಿಗೂ ಇದು ಅಭಿಮತುವಲ್ಲ. ಶಬ್ದಗಳನ್ನು ಪ್ರಯೋಗಿಸುವದು ತಮ್ಮ ಅಭಿಪ್ರಾಯವನ್ನು ಹೊರಪಡಿಸಿ ಲೋಕದಲ್ಲಿ ಪ್ರಚಾರಗೊಳಿಸುವದಕ್ಕೇ ಹೊರತು ಒಬ್ಬರಿಗೂ ತಿಳಿಯಬಾರದೆಂಬ ಉದ್ದೇಶ್ಯದಿಂದಲ್ಲ. ಹಾಗಿದ್ದರೆ ಶಬ್ದಗಳನ್ನೇ ಉಚ್ಚರಿಸದಿರಬಹುದು. ಇದರಿಂದ ಅವರ ಪಾಂಡಿತ್ಯವು ಅಭಿವ್ಯಕ್ತವಾಗುವದಿಲ್ಲ. ಲೋಕಪ್ರಯೋಗವನ್ನನುಸರಿಸಿಯೇ ಪ್ರಯೋಗಿಸಬೇಕೆಂದು ಹೇಳಿದರೆ ವ್ಯಾಕರಣ ವ್ಯರ್ಥವೆಂದು ಕೇಳಬಹುದು, ಆದರೆ ಲೋಕದಲ್ಲಿರುವ ಶಬ್ದಗಳನ್ನೆಲ್ಲಾ ನಾವು ತಿಳಿಯುವದು ಅಸಾಧ್ಯವಾದುದರಿಂದ ಅವುಗಳನ್ನು ತಿಳಿದುಕೊಳ್ಳುವದಕ್ಕೆ ಇದೊಂದು ಉಪಾಯವೆಂದು ಹೇಳಬೇಕು. ಇಷ್ಟುಮಾತ್ರಕ್ಕೆ ವ್ಯಾಕರಣದಿಂದ ನಿಷ್ಪನ್ನವಾಗುವ ಶಬ್ದಗಳನ್ನೆಲ್ಲ ಪ್ರಯೋಗಿಸಬೇಕೆಂದಾಗಲಿ ಲೋಕದಲ್ಲಿರುವ ಶಬ್ದಗಳಿಗೆಲ್ಲಾ ಈಗಿರುವ ವ್ಯಾಕರಣವು ಸಾಕು ಎಂದಾಗಲಿ ಹೇಳಲಾಗದು. ಆದುದರಿಂದಲೆ ಪತಂಜಲಿಯೂ ಕೂಡ ಸಂಸ್ಕೃತದಲ್ಲಿ ವ್ಯಾಕರಣದಿಂದ ವಜಂತಿ ಎಂದು ನಿಷ್ಪನ್ನವಾದರೂ ಪ್ರಯೋಗಿಸಕೂಡದೆಂದು ಹೇಳಿರುವನು. ಕುಂಡಲಗಿರಿಆಚಾರ್ಯರು.

ನೀರಿನ ಉಪಯೋಗಗಳು

ಬೋಧನಕ್ರಮ.

ಪೀಠಿಕೆ:—	ನಿದರ್ಶನ.
ಒಂದು ಗಾಜಿನಪಾತ್ರೆಯಲ್ಲಿ ನೀರನ್ನು ತಂದಿಟ್ಟುಕೊಂಡಿದ್ದು, ಅದನ್ನು ಬಾಲಕರಿಗೆ ತೋರಿಸಿ 'ಗಾಜಿನಪಾತ್ರೆಯಲ್ಲಿ ಏನಿದೆ?' ಎಂದು ಪ್ರಶ್ನೆಮಾಡಿ ಅವರಿಂದ 'ನೀರು' ಎಂದು ಹೇಳಿಸಬೇಕು.	
1 (a) 'ಜನಗಳು ನೀರನ್ನು ಯಾತಕ್ಕೆ ಕುಡಿಯುತ್ತಾರೆ?' ಎಂದು ಪ್ರಶ್ನೆಮಾಡಿ, 'ಬಾಯಾರಿಕೆಯನ್ನಡಗಿಸುವದಕ್ಕೊಸ್ಕರ' ಎಂಬ ಉತ್ತರವನ್ನು ಬಾಲಕರಿಂದ ಹೇಳಿಸಬೇಕು. ಆದ್ದರಿಂದ ನೀರಿನಲ್ಲಿ ಬಾಯಾರಿಕೆಯನ್ನಡಗಿಸುವ ಗುಣವಿದೆ	(a) ಬೇಸಿಗೆಯಲ್ಲಿ ಬಾಲಕ ಬಾಲೆಯರು ಆಡುತ್ತಾಯಿದ್ದು ಬಾಯಾರಿದಕೂಡಲೇ ನೀರು ಕುಡಿಯುವದಕ್ಕೆ ಓಡಿಹೋಗುವ ಸಂಗತಿಯನ್ನು ಸೂಚಿಸಬೇಕು.

7. (2) ಗೋಡೆ ಹಾಕುವದಕ್ಕೆ ಮಣ್ಣು, ಗಾರೆ ಮುಂತಾದವುಗಳನ್ನು ಕಲಿಸುವದಕ್ಕೆ ನೀರು ಹಾಕುವದನ್ನು ಸೂಚಿಸಿ ನೀರು ಕಠಿನ ಪದಾರ್ಥಗಳನ್ನು ಮೆತ್ತಗ ಮಾಡುತ್ತದೆಂಬುವದನ್ನು ವ್ಯಕ್ತಪಡಿಸು.

8. ಅನೇಕ ಭೋಜನ ಪದಾರ್ಥಗಳನ್ನು ಬೆಯಿಸುವದಕ್ಕೆ ನೀರು ಅವಶ್ಯಕವೆಂಬುದನ್ನು ಸೂಚಿಸು.

(2) ಉರಿಯುವ ಮೇಣಬತ್ತಿಯು ನ್ನಾಗಲೀ ಕೊಳ್ಳಿಯನ್ನಾಗಲೀ ನೀರಿನಲ್ಲಿ ಅದ್ದಿ, ನಿದರ್ಶನ ಮಾಡು.

ಸರ್ಪಗಳು.

ಇಂಡಿಯಾದೇಶದ ಪ್ರತಿಒಂದು ಭಾಗದಲ್ಲಿಯೂ ಅನೇಕ ವಿಧವಾದ ಹಾವುಗಳಿರುತ್ತವೆ. ಇವುಗಳಲ್ಲಿ ಕೆಲವು ಬಹಳ ವಿಷಉಳ್ಳವುಗಳು. ಈಜ್ಯೆಕಿ ನಾಗರಹಾವು ಅತ್ಯಂತ ವಿಷವುಳ್ಳದ್ದು. ಇಂಡಿಯಾ ದೇಶದಲ್ಲಿ ಹಾವುಗಳಿಂದ ಕಡಿಯಲ್ಪಟ್ಟು ಪ್ರತಿ ವರ್ಷವೂ ಇಪ್ಪತ್ತುಸಾವಿರ ಜನಗಳಿಗಿಂತಲೂ ಹೆಚ್ಚಾಗಿ ಸಾಯುತ್ತಾರೆ. ಮದರಾಸ್ ಸಂಸ್ಥಾನ ಒಂದರಲ್ಲಿಯೇ ಪ್ರತಿವರ್ಷವೂ ಎರಡುಸಾವಿರ ಜನಗಳವರಿವಿಗೂ ಸಾಯುವರು. ಹಾವುಗಳ ತಂಟೆಗೆ ಹೋಗದೇ ಇದ್ದರೆ ಅವುಗಳು ಜನಗಳನ್ನು ಕಡಿಯುವದಿಲ್ಲವೆಂದು ಒಂದು ಪ್ರವಾದ ಉಂಟು. ಹೀಗೆ ಇರುವದು ಅಪೂರ್ವ. ಇವುಗಳಿಂದ ಸಾಯುತಕ್ಕವರಲ್ಲಿ ಅನೇಕರು ರಾತ್ರಿನೇಳೆಯಲ್ಲಿ ನಿದ್ದೆಮಾಡುವಾಗ ಕಡಿಯಲ್ಪಟ್ಟವರಾಗಿರುತ್ತಾರೆ. ಪಾಯಿಕವಾಗಿ ಕಡಿಯಲ್ಪಡತಕ್ಕ ಭಾಗಗಳು ಕೈಕಾಲುಬೆರಳುಗಳಾಗಿಯೂ, ಪಾದಗಳಾಗಿಯೂ ಇರುವವು. ನಿದ್ದೆಮಾಡುತ್ತಾಯಿರುವ ಜನರು ಕಡಿಯಲ್ಪಟ್ಟಕೂಡಲೇ ಯಾತನೆಯಿಂದ ಎಚ್ಚರವನ್ನು ಹೊಂದುತ್ತಾರೆ. ಪ್ರಥಮತಃ ನೋವೂ ಹೆಚ್ಚಾಗಿರುವದಿಲ್ಲ ಕ್ರಮಕ್ರಮವಾಗಿ ಯಾತನೆಯು ಹೆಚ್ಚುವದಲ್ಲದೆ ಮೂರ್ಛೆಯು ಬರುವದು, ದೇಹವು ಚಿವರುವದು, ಎದೆಯೆಲ್ಲಾ ಬಿಗಿದಂತಾಗುವದು, ಉಸುರು ಬಿಡುವದು ಕಷ್ಟವಾಗುವದು, ಪ್ರಜ್ಞೆಯು ತಪ್ಪುವದು, ಹಾಗೆಯೇ ಮರಣವು ಬರುವದು. ಹಾವು ಕಚ್ಚಿದ ಒಂದು ಘಂಟೆಯಿಂದ ಆರು ಘಂಟೆಗಳ ಒಳಗಾಗಿ

4. ನಾವು ಭೋಜನಕಾಲದಲ್ಲಿ ಹಾಕಿಕೊಳ್ಳುವ ದ್ರವಪದಾರ್ಥಗಳ ಹೆಸರನ್ನು ಕೇಳಿ, ಅವುಗಳಲ್ಲಿ ಜಲಾಂಶವೇ ಹೆಚ್ಚಾಗಿರುವದನ್ನು ವಿವರಿಸಿ. ನೀರಿಲ್ಲದಿದ್ದರೆ, ಸಾರು, ಕಾಫೀ, ಟೀ ಮುಂತಾದವುಗಳನ್ನು ಮಾಡುವದಕ್ಕಾಗುತ್ತಿರಲಿಲ್ಲವೆಂಬುವದನ್ನು ಸ್ಪಷ್ಟಪಡಿಸಬೇಕು.

(I) ಒಂದು ದೊಡ್ಡ ಶಾಯಿಯನ್ನು ತೋರಿಸಿ, ಅದರ ಹೆಸರನ್ನು ಹೇಳಿಸಿ. ಶಾಯಿಯಲ್ಲಿ ಜಲಭಾಗ ಹೆಚ್ಚಾಗಿರುವದನ್ನು ವಿವರಿಸಿ, ಶಾಯಿಯನ್ನು ಯಾರೂ ಕುಡಿಯುವದಿಲ್ಲವೆಂಬುವದನ್ನು ವ್ಯಕ್ತಪಡಿಸುವುದು ಅನೇಕವಿಧವಾದ ಪರಿಮಳದ್ರವ್ಯಗಳು, ಔಷಧಗಳು, ಶಾಯಿ ಇವುಗಳನ್ನೆಲ್ಲಾ ತಯಾರು ಮಾಡುವದಕ್ಕೆ ನೀರು ಅವಶ್ಯಕವೆಂದು ಸ್ಪಷ್ಟಪಡಿಸು.

5. (I) ಎಂಜಿನ್ ನಡೆಯುವಂತೆ ಮಾಡುವದಾವುದೆಂಬುದನ್ನು ಕೇಳಿ, 'ಆವಿ' ಎಂಬ ಉತ್ತರವನ್ನು ಬಾಲಕರಿಂದ ಹೊರಡಿಸಬೇಕು.

(2) ಯಾತರಿಂದ ಆವಿಯಾಗುತ್ತೆಂದು ಪ್ರಶ್ನೆ ಮಾಡು (ನೀರಿನಿಂದ) ನೀರಿಲ್ಲದಿದ್ದರೆ, ಆವಿಯಶಕ್ತಿಯಿಂದ ನಡೆಯುವ ಯಂತ್ರಗಳೆಲ್ಲಾ ನಿಷ್ಪ್ರಯೋಜನವಾಗುತ್ತಿದ್ದವೆಂಬದನ್ನು ವ್ಯಕ್ತಪಡಿಸು.

6. (1) ಜನಗಳು ಇಂಥಾ ಬೆಂಕಿಯನ್ನು ಹ್ಯಾಗೆ ಆರಿಸುತ್ತಾರೆಂದು ಕೇಳು. (ನೀರು ಸುರಿಯುವದರಿಂದ) ಆದ್ದರಿಂದ ದೊಡ್ಡ ದೊಡ್ಡ ಬೆಂಕಿಯನ್ನು ಆರಿಸುವದಕ್ಕೆ ನೀರು ಉಪಯೋಗಿಸುತ್ತೆಂಬುವದನ್ನು ವ್ಯಕ್ತಪಡಿಸು.

(I) ರೈಲ್ವೆ ಎಂಜಿನನ್ನು ಚಿತ್ರ ಮೂಲಕ ವರ್ಣಿಸು.

(2) ಪಾತ್ರೆಗಳಲ್ಲಿ ನೀರನ್ನು ಕಾಯಿಸುವಾಗ, ಅವುಗಳಿಂದ ಮೇಲಕ್ಕೆ ಹೊಗೆಯಹಾಗೆ ಆವಿ ಹೊರಡುವದನ್ನು ಸೂಚಿಸು.

(1) ಮನೆ ಮಠಗಳಿಗೆ ಬೆಂಕಿ ಬಿದ್ದು ಸುಟ್ಟುಹೋಗುವದನ್ನು ಸೂಚಿಸು.

3 ಒಂದು ಚೀಟಿನಾಯಿಯು ತನಗಿಂತ 40 ಗಜ ಮುಂದೆ ಇರುವ ಒಂದು ಪೊಲವನ್ನು 10 ಸಕಂಡ್‌ಗಳವರಿಗೂ ಕಾಣುವುದಿಲ್ಲ. ಪೊಲವು ಘಂಟೆಯೊಂದಕ್ಕೆ 12 ಮೈಲಿಗಳಂತೆಯೂ ನಾಯಿಯು 15 ಮೈಲಿಗಳಂತೆಯೂ ಓಡಿದರೆ ನಾಯಿಯು ಪೊಲವನ್ನು ಎಷ್ಟುಹೊತ್ತಿಗೆ ಹಿಡಿಯುತ್ತದೆ? ನಾಯಿ ಯು ಎಷ್ಟುದೂರ ಓಡಿರುತ್ತದೆ?

4 ಒಂದು ಸಂಖ್ಯೆಗೆ 3 ನ್ನು ಸೇರಿಸಿ, ಲಬ್ಧದ $\frac{1}{10}$ ಅಂಶಕ್ಕೆ 5 ನ್ನು ಸೇರಿಸಿ, $\frac{1}{15}$ ಅಂಶವನ್ನು ತೆಗೆದುಕೊಂಡರೆ $1\frac{1}{2}$ ಆಗುತ್ತೆ. ಆ ಸಂಖ್ಯೆ ಯಾವುದು?

ಗೌ॥ ನಾರ್ಮಲ್ ಸ್ಕೂಲ್ ಮೈಸೂರು ತರಗತಿ VII.

ತಾ॥ 14—4—98 ಕಾಲ 2—40

ಶಬ್ದಮಣಿದರ್ಪಣ.

1 ನೇ ಭಾಗ

1 (1) ದೇಶೀಯಾಕ್ಷರಗಳು, ಯೋಗವಾಹಗಳು, ಸಂಧ್ಯಕ್ಷರಗಳು, ತದ್ಭವದಲ್ಲಿ ರ ಳ ವಾಗುವ ಅಕ್ಷರಗಳು ಇವಾವವು (2) ಪಿರಿದುಂದ್ವಿತ್ವ ಬಹುತ್ವಂ। ಬರೆಗಳ್‌ಕಳ್ಗುಂಟಿರಾಗಮಂ ಬಹುವಚನ ॥ ಸ್ಫುರಿತಕ್ರಿಯೆಗೇಕತೆನಿಜ। ಪರಿಣತಿಮೀಣ್ ಧಾತುಗೇಕವಚನಗೊಳತ್ವಂ ॥ ಈ ಸೂತ್ರಾರ್ಥವನ್ನು ಉದಾಹರಣೆಯೊಡನೆ ಸ್ಪಷ್ಟವಾಗಿ ಹೇಳುವದು.

2 (1) ಕೇಶಿರಾಜನ ಕಾಲದಲ್ಲಿ ಹೊಸಗನ್ನಡವು ಪ್ರಚಾರವಾಗಿತ್ತೆಂದು ಈ ಗ್ರಂಥದಿಂದ ತಿಳಿವುದು ಹೇಗೆ?

(2) ಕ್ರಿಯಾಪದದಲ್ಲಿ ದ್ವಿತ್ವಶೈಥಿಲ್ಯವು ಬರುವದಕ್ಕೆ ವಿಧಿಯೇನು? (3) ಅಮದಿರಗು ತೃತೀಯತ್ವಂ ಸಮಾಸವದಾಭವವಾದ ತಾಣದೊಳ್-ಗುರು

ಜನರು ಸಾಯುವರು. ಇದಕ್ಕೆ ಅನೇಕರು ಅನೇಕ ಔಷಧಗಳನ್ನು ಮಾಡುವರು. ಕೆಲವರು ಮಂತ್ರತಂತ್ರಗಳಿಂದ ಇದನ್ನು ನಿಗ್ರಹಿಸುವದಾಗಿ ಹೇಳುವರು. ಸಾಮಾನ್ಯವಾದ ಹಾವುಗಳು ಕಡಿದರೆ ಔಷಧಗಳೇ ಅವಶ್ಯಕವಿಲ್ಲ ಅಂಥಾ ಸಂದರ್ಭಗಳಲ್ಲಿಯೂ ಭಯದಿಂದ ಅನೇಕರು ತೊಂದರೆಗೆ ಗುರಿಯಾಗುವರು. ಅಂಥಾ ಸಂದರ್ಭಗಳಲ್ಲಿ ಮಂತ್ರತಂತ್ರಗಳು ಪ್ರಯೋಜನಕಾರಿಗಳಾಗುತ್ತವೆ. ಆದರೆ ನಾಗಂಹಾವೇ ಮೊದಲಾದ ವಿಷಪೂರ್ಣ ಹಾವುಗಳು ಕಡಿದರೆ ಆ ಘಾಯದ ಮೇಲುಗಡೆ ಕೆಲವು ಅಂಗುಲಗಳಲ್ಲಿ ಬಿಗಿಯಾಗಿ ಒಂದು ಬ್ಯಾಂಡೇಜು ಹಾಕಿ ಆ ಕಡಿಯಲ್ಪಟ್ಟ ಸ್ಥಳವನ್ನು ಸುತ್ತಲೂ ಕತ್ತರಿಸಿ ಚಾಕು ಮೊದಲಾದ ಯಾವದಾದರೂ ಒಂದು ಕಬ್ಬಿಣದ ತುಂಡನ್ನು ಕೆಂಪಗೆ ಕಾಯಿಸಿ ಅದರಿಂದ ಸುತ್ತಲೂ ಸುಡಬೇಕು ರಕ್ತಬಂದರೆ ಭಯಪಡಕೂಡದು. ಹೆಚ್ಚಾಗಿ ರಕ್ತಬಂದರೆ ಹೆಬ್ಬೆರಳಿನಲ್ಲಿ ಒತ್ತಿ ಹಿಡಿದುಕೊಂಡರೆ ಕಡಮೆಯಾಗುವದು. ಕಡಿಯಲ್ಪಟ್ಟ ಭಾಗಕ್ಕೆ ಕಾದ ಕಬ್ಬಿಣವನ್ನಾಗಲೀ ಅಥವಾ ನೈಟ್ರಿಕ್ ಅಥವಾ ಕಾರ್ಬಾನಿಲಿಕ್ ಧೃತಿಯನ್ನಾಗಲೀ ಹಾಕಿದರೂ ವಿಷವು ಪರಿಹರಿಸಲ್ಪಡುವದು ಬಾಯಿನಲ್ಲಿ ಘಾಯವಿಲ್ಲದೇ ಇರತಕ್ಕವರು ಸವಿಯಾಪದಲ್ಲಿದ್ದರೆ ಹಾವು ಕಡಿದ ಸ್ಥಳಕ್ಕೆ ಬಾಯಿಯನ್ನಿಟ್ಟು ರಕ್ತವನ್ನೂ ವಿಷವನ್ನೂ ಹೀರಿ ಉಗುಳಿಬಿಡುವದುಂಟು. ಹೀಗೆ ಹೀರಲ್ಪಟ್ಟ ವಿಷವು ಬಾಯಿನಲ್ಲಿ ಘಾಯವಿರುವವರಿಗೆ ಕೇಡನ್ನುಂಟುಮಾಡುವುದು. ವಿಷ ಹೀರುವುದಕ್ಕೂ ಅನುಭವವಿರಬೇಕು.

ಅಂಕಗಣಿತ.

1 ಒಂದು ಸಂಖ್ಯೆಯು $\frac{13}{18}$ ಅಂಶವು, ಅದರ ಅರ್ಧದ $\frac{5}{6}$ ಅಂಶಕ್ಕಿಂತ $40\frac{1}{3}$ ಹೆಚ್ಚಾಗಿದ್ದರೆ, ಆ ಸಂಖ್ಯೆ ಯಾವುದು ?

2 ಧ್ವನಿಯು ಸಕೆಂಡ್ 1 ಕ್ಕೆ 1110 ಅಡಿಯ ದೂರ ಹೋಗುತ್ತದೆ. ಅದರೆ ಘಂಟೆಯೊಂದಕ್ಕೆ 10 ಮೈಲಿ ಹೋಗುವ ಒಂದು ಹಡಗಿನಲ್ಲಿ ಪಿರಂಗಿಯನ್ನು ಹಾರಿಸಿ ಆ ಸದ್ದು $14\frac{1}{4}$ ಮೈಲಿ ದೂರದಲ್ಲಿ ಕೇಳುವ ಹೊತ್ತಿಗೆ, ಹಡಗು ಎಷ್ಟುದೂರ ಹೋಗಿರುವುದು ?

ವ್ಯಾಯಾಮಶಾಸ್ತ್ರ

II. ಡಂಬೆಲ್ ಸಾಧಕ.

ಡ್ರಿಲ್ ಇನ್‌ಸ್ಟ್ರಕ್ಟರವರು 'ಛೇಂಜ್' (ಬದಲಾಯಿಸು) ಎಂದು ಹೇಳಿದೊಡನೆಯೆ, ಸ್ವಲ್ಪ ಬಲಕ್ಕೆ ತಿರುಗಿ, ಬಲಮುಖನಾಗಿ ನಿಂತು, ಮೊಳಕೈಗಳೆರಡನ್ನೂ ಪಕ್ಕಕ್ಕೆ ತೆಗೆದುಕೊಂಡು, ಅಡ್ಡಲಾಗಿ ನಿಲ್ಲಿಸಿ, ಕೈಲಿರುವ ಡಂಬೆಲ್‌ಗಳನ್ನು ಮೊದಲನೆಯ ಸಾಧಕದಲ್ಲಿ ಹೇಳಿರುವಂತೆ ತಿರುಗಿಸಲಾರಂಭಿಸುವುದು. ನಾಲ್ಕು ಆವರ್ತಿ, ಆರು ಆವರ್ತಿ, ಅಥವಾ ಎಂಟು ಆವರ್ತಿ ಯೋಗ್ಯತಾನುಸಾರ ತಿರುಗಿಸಬಹುದು. ಮೊಳಕೈಗಳನ್ನು ಪಕ್ಕಗಳಿಗೆ ಬಲವಾಗಿ ಎತ್ತಿರಬೇಕು, ಮುಂಗೈಗಳುಮಾತ್ರ ಆಡುತಿರಬೇಕು. ಶರೀರದ ಇತರ ಅವಯವಗಳೆಲ್ಲವೂ, ಅಲ್ಲಾಡದಂತೆ ಕಟ್ಟಿಗೆಯಂತೆ ನಿಂತಿರಬೇಕು.

III

ಈ ಸಾಧಕವನ್ನು ಎಂಟು ಆವರ್ತಿ ಮಾಡಿದ ಮೇಲೆ 'ಛೇಂಜ್' ಎಂಗು ಹೇಳಿದರೆ, ಪುನಃ ಬಲಭಾಗಕ್ಕೆ ತಿರುಗಿ (ರೈಟ್ ಟರ್ನ್) (ಪೂರ್ವದಲ್ಲಿನಿಂತಭಾಗಕ್ಕೆ ಸಂಪೂರ್ಣವಾಗಿ ಹಿಂತಿರುಗುವುದಾಗುವುದು) ಎರಡು ಕೈಗಳನ್ನು ಹೊರಭಾಗದಲ್ಲಿಯೇ ಅಡ್ಡಲಾಗಿ (ಅಗಲಿಸಿ) ಚಾಚಬೇಕು. ಹೀಗೆ ಚಾಚಿದರೆ ಎರಡು ಭುಜಗಳೂ, ಕೈಗಳೂ ಒಂದೇ ಸಮನಾಗಿ ನಿಲ್ಲುವುದು. ಹಾಗೆ ಎರಡು ಕೈಗಳನ್ನೂ ನಿಲ್ಲಿಸಿ ಡಂಬೆಲ್‌ಗಳನ್ನು ತಿರುಗಿಸಲು ಆರಂಭಿಸಬೇಕು. ಹೀಗೆ ಡಂಬೆಲ್‌ಗಳನ್ನು ತಿರುಗಿಸುವಾಗ ಕೈಗಳುಮಾತ್ರ ಚಲಿಸಬೇಕು. ಶರೀರವೆಲ್ಲ ಚಲಿಸಲಾಗದು.

IV

'ಛೇಂಜ್' ಎಂದೊಡನೆಯೆ ಪುನಃ ಬಲಭಾಗಕ್ಕೆ ತಿರುಗಿ, ಎರಡು ಕೈಗಳನ್ನೂ ತಲೆಯ ಮೇಲಕ್ಕೆ ಎತ್ತಿ, ನೀಳವಾಗಿ, ಎರಡು ಪಂಜ್ರಿಯಂತೆ ಒಂದೇ ಸಮನಾಗಿ ನಿಲ್ಲಿಸಿ, ಡಂಬೆಲ್‌ಗಳನ್ನು ನೋಡುತ್ತ ತಿರುಗಿಸಲಾರಂಭಿಸಬೇಕು. ಹಿಂದೆ ಹೇಳಿದಂತೆ, ನಾಲ್ಕು ಆವರ್ತಿ, ಆರು ಆವರ್ತಿ, ಎಂಟು ಆವರ್ತಿ ತಿರುಗಿಸಬಹುದು.

ತುಮ್ಮಾಡಿರುವ ಪದಾರ್ಥದ ವಿವರಣದೊಡನೆ ಇದರ ಅರ್ಥವನ್ನು ಉದಾಹರಣೆಯೊಡನೆ ಹೇಳುವುದು.

(1) ಪಿತೃ, ಕರ್ತೃ, ಸಖಿ. ಮನಸ್, ಉಪಕ್ರಮ್ಯಾ, ಮಾ, ರಾಜ್ಞ್, ಅಧ್ವನ್, ಇವು ಕನ್ನಡಕ್ಕೆ ಲಿಂಗವಾಗುವಾಗ ಯಾವಯಾವ ರೂಪಗಳಾಗುವುವು?

(2) ಪೊಳಗುಶಬ್ದಕ್ಕೆ ನಪುಂಸಕೈಕವಚನದಲ್ಲೂ, ಅನಿತುಶಬ್ದಕ್ಕೆ ಪುಲ್ಲಿಂಗ ಬಹುವಚನದಲ್ಲು ಎಲ್ಲಾ ವಿಭಕ್ತಿರೂಪಗಳನ್ನು ಬರೆವುದು.

(3) ಣಕಾರದಿಂ ಪರದೊಳ್ ಸಂಧಿಸಿದ ನಕಾರಣತ್ವಂ ಪ್ರಸಿದ್ಧಂ. ಏಕತೆಯೆತನಗೆ ಬಹುತೆಯು । ನಾಕರಿಸದುಜಾತಿ—ಈ ವಿಧಿಗಳು ಯಾವ ಸಂದರ್ಭಗಳಲ್ಲಿ ಪ್ರವರ್ತಿಸುವುವು? ಉದಾಹರಣೆಯೊಡನೆ ವಿವರಿಸಿ.

4 (1) ಸಂಧಿಯಲ್ಲಿ ಗ, ದ, ಬ, ವ, ಕಾರಗಳ ಆದೇಶಕ್ಕೆ ಪ್ರತಿಷೇಧವೇನು?

(2) ತೃತೀಯಾ ಚತುರ್ಥೀ ಪಂಚಮ್ಯರ್ಥದ ದ್ವಿತೀಯೆಗಳು, ಅನ್ವಯಸ್ವತಂತ್ರಾಸ್ವತಂತ್ರಗಳಾದ ಸರ್ವನಾಮಗಳು—ಇವುಗಳುಳ್ಳ ಒಂದೊಂದು ವಾಕ್ಯವನ್ನು ಬರೆವುದು.

(3) ಮ, ನ, ಕಾರಗಳಿಗೆ ಬಿಂದು ಬರುವುದಕ್ಕೆ ಬಿಂದು ವಿಗೆ ಮ, ನ, ಕಾರಗಳು ಬರುವುದಕ್ಕೂ ವಿಧಿಯೇನು?

(4) ಜಗದೊಳ್‌ತೊದಳ್ಳಿಲ್ಲದೆನುಡಿದು ಪ್ರರೂಢನಗೆಯಾನ್ನದೆ? ಇಯ್ಯುದಂಬಳ್ಬಾಗಿಯೆ? ಈ ಕಾವ್ಯದಲ್ಲಿ ತಪ್ಪಿದ್ದರೆ ಸಕಾರಣವಾಗಿ ತಿದ್ದುವುದು.

(1) ಗುರು, ಯತಿ, ಪ್ರಾಸ, ಇವುಗಳ ಲಕ್ಷಣವೇನು?

(2) 9, 12, 13, I5, I6, 20, 22, 26, ನೆಯ ಛಂದಸ್ಸುಗಳಾವುವು?

(3) ಷಟ್ಪ್ರಾಸಗಳ ಲಕ್ಷಣವನ್ನು ಅವುಗಳಲ್ಲಿ ಯಾವುದಾದರೂ ಯೆರಡಕ್ಕೆ ಉದಾಹರಣೆಯನ್ನು ಹೇಳುವುದು.

(4) ವರ್ಣಗಳಾವುವು ಯಾವ ಛಂದಸ್ಸಿನೆಲ್ಲಿ ಹುಟ್ಟುವುದು?